ಜುಲೈ ೨೦೦೦ ಬೆಲೆ : ರೂ. ೧೦



ಹೊಸತು

ನೆಮ್ಮದಿಯ ನಾಳೆ ನಮ್ಮದು







ಜಲಕ್ಷಾಮ, ಅಣೆಕಟ್ಟು - ಆತಂಕಗಳು
ಅಂಡಮಾನಿನ ಕಡಲಗರ್ಭದೊಳಗೆ
ಜಾಗತೀಕರಣದ ಕೆಡಕುಗಳು
ಮೌನಸುಂದರಿ (ಕತೆ)
ಎಡ್ವರ್ಡ್ ಸಯಿದ್
ದೇಗುಲ ಸಂಸ್ಕೃತಿ
ಇತ್ಯಾದಿ



ಹೊಸತು

ಒಳಗೇನಿದೆ.....

ಚಿತ್ರಗಳು : ರವಿಕುಮಾರ್ ಅಜ್ಜೀಪುರ, ಹರಿಣಿ
ಛಾಯಾಚಿತ್ರ : ಕೆ.ಪಿ. ಸ್ವಾಮಿ
ವಿನ್ಯಾಸ : ನವಕರ್ನಾಟಕ ವಿನ್ಯಾಸ ಕಚೇರಿ ಸಹಕಾರ : ಜಿ. ವಿ. ತೇಜೋವತಿ

ಈ ತಿಂಗಳು

ನಮ್ಮ ರಾಜ್ಯದಲ್ಲಿ ಕೃಷಿ ಉತ್ಪಾದನೆಯು ಕಳೆದ ಮೂರು-ನಾಲ್ಕು ವರ್ಷಗಳಲ್ಲಿ ಶೇಕಡ ೧೫ರಷ್ಟು ಕಡಿಮೆಯಾಗಿದೆಯೆಂದು ಮುಖ್ಯಮಂತ್ರಿ ಕೃಷ್ಣ ಹೇಳಿದ್ದಾರೆ. ಅವರು ಸೂಚಿಸಿದ ಪರಿಹಾರವೆಂದರೆ ಆಧುನಿಕ ತಂತ್ರಜ್ಞಾನದ ಮತ್ತು ಒಳ್ಳೆಯ ರಸಗೊಬ್ಬರಗಳ ಬಳಕೆ. ಅವರು ಹಾಕಿಕೊಳ್ಳಲು ಬಯಸದ ಒಂದು ಪ್ರಶ್ನೆ ಇದೆ: ಇದೇ ಅವಧಿಯಲ್ಲಿ ಕೃಷಿ ಭೂಮಿಯು ಕೃಷಿಯೇತರ ಭೂಮಿಯಾಗಿ ಪರಿವರ್ತನೆಗೊಂಡಿರುವುದು ಎಷ್ಟು? ನಗರಗಳ ಮತ್ತು ಪಟ್ಟಣಗಳ ಸುತ್ತಮುತ್ತ ಮಾತ್ರವಲ್ಲದೆ ಚಿಕ್ಕ ಚಿಕ್ಕ ಹಳ್ಳಿಗಳ ಬಳಿಯೂ ಕೃಷಿ ಭೂಮಿಯನ್ನು ಕೃಷಿಗೆ ಭಿನ್ನವಾದ ಉದ್ದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಲಾಗುತ್ತಿದೆ. ಕೃಷಿಗೆ ಬಳಕೆಯಾದಾಗ ಸಹ ಆಹಾರೇತರ ಉತ್ಪಾದನೆಗೆ ಆದ್ಯತೆ ನೀಡುವುದು ಹೆಚ್ಚುತ್ತಿದೆ. ಕೃಷಿ ಭೂಮಿಯ ಪರಿವರ್ತನೆ ಬಗ್ಗೆ ಈಚಿನ ಮಾರಕ ಶಾಸನಗಳು ನಮ್ಮ ಮುಖ್ಯಮಂತ್ರಿಗಳಿಗೆ ತಿಳಿದಿಲ್ಲವೆಂದರೆ ಒಪ್ಪುವ ಮಾತೆ?

ಯಾರೋ ಒಬ್ಬ ಜಾನಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಕಟ್ಟಿಸಿ ಹಳ್ಳಿಗಳ ಉದ್ಧಾರ ಮಾಡಲು ಒಂದಷ್ಟು ಎಕರೆ ಭೂಮಿಯನ್ನು ಕೊಳ್ಳುತ್ತಾನೆ. ಅದೂ ಬೆಂಗಳೂರಿನಿಂದ ಕೇವಲ ಮೂವತ್ತು ಕಿ.ಮೀ. ದೂರದಲ್ಲಿ. ಕಾಲೇಜಿಗಾಗಿ ಭೂಮಿ ಕೊಳ್ಳಲು ಮತ್ತು ಕಟ್ಟಡ ಕಟ್ಟಲು ಪರವಾನಗಿ ಕೊಡಿಸಿದ ಮಹನೀಯ ಯಾವ ರಾಜಕೀಯ ಪಕ್ಷದವನು ಮತ್ತು ಎಷ್ಟು ಲಂಚ ಪಡೆದ ಎಂಬುದು ಸಣ್ಣ ವಿಷಯವಲ್ಲ; ಆದರೂ ಅದು ಒತ್ತಟ್ಟಿಗಿರಲಿ. ಈ ಜಾನಿಗೆ ತಿಪ್ಪಗೊಂಡನಹಳ್ಳಿ ಜಲಾಶಯದ ಮೇಲ್ಮುಖದಲ್ಲಿ ಅಷ್ಟು ಭೂಮಿ ಸಿಕ್ಕಿತೆಂದರೆ ಕೃಷಿ ಉತ್ಪಾದನೆಗೆ ಅಷ್ಟು ಭೂಮಿ ಕಡಿಮೆಯಾಯಿತೆಂದರ್ಥ. ಬೆಂಗಳೂರಿನ ವಿಜಯನಗರದಲ್ಲೇ ಕಟ್ಟಡ ಕಟ್ಟಬಹುದಾಗಿತ್ತು; ಆದರೆ ಆಗ ಹಳ್ಳಿಗಳ ಉದ್ಧಾರ ಮಾಡುವ ಸೋಗು ಹಾಕಿಕೊಳ್ಳಲಾಗುವುದಿಲ್ಲ ಮತ್ತು ಕಡಿಮೆ ಬೆಲೆಗೆ ಭೂಮಿ ಸಿಕ್ಕುವುದಿಲ್ಲ. ಹಳ್ಳಿಯ ಬಳಿ ಕಾಲೇಜು ಮಾಡಿ ಹತ್ತು ಬಸ್ಸುಗಳನ್ನು ಕೊಂಡರೆ ಜಾನಿಗೇನೂ ನಷ್ಟವಿಲ್ಲ. ಅಂತಹ ಬುದ್ಧಿವಂತ ಕೂಟದ ಪಾತಕವು ಮುಖ್ಯಮಂತ್ರಿಗಳಿಗೆ ತಿಳಿದರೂ ಅವರು ಮಗುಮ್ಮಾಗಿರುವುದರ ಅರ್ಥ ತಿಳಿಯುವುದಿಲ್ಲ.

ಹಾಗೆಯೇ ಬೆಂಗಳೂರು-ಮೈಸೂರು ಹೆದ್ದಾರಿಗಾಗಿ ಇಪ್ಪತ್ತು ಸಾವಿರ ಎಕರೆ ಫಲವತ್ತಾದ ಭೂಮಿ ನಷ್ಟವಾಗುತ್ತದೆ. ದಾರಿಯುದ್ದಕ್ಕೂ ನರಕ ಕೂಪಗಳಿಗಾಗಿ (ಜೂಜಾಟದ ತಾಣಗಳು, ಹೆಂಡದಂಗಡಿಗಳು, ರೆಸಾರ್ಟ್‌ಗಳು, ಪಂಚತಾರಾ ಹೋಟೆಲ್‌ಗಳು) ಇನ್ನಷ್ಟು ಭೂಮಿ. ಕೃಷಿ ಉತ್ಪಾದನೆ ಕಡಿಮೆಯಾಗದೆ ಇನ್ನೇನಾಗುತ್ತದೆ? ಈ ಹಿನ್ನೆಲೆಯಲ್ಲಿ ಜೂನ್ ೫ ಮತ್ತು ೬ರಂದು ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿ ಅದ್ದೂರಿಯಾಗಿ ನಡೆಸಿದ ಜಾಗತಿಕ ಬಂಡವಾಳ ಹೂಡಿಕೆದಾರರ ಮೇಳವನ್ನು ಗುರುತಿಸಬೇಕು. ಅದನ್ನು ಕರ್ನಾಟಕ ಮಾರಾಟ ಮೇಳವೆಂದು ಜರಿದು ಪ್ರತಿಭಟಿಸಿದವರನ್ನು ಹಗುರವಾಗಿ ಕಾಣುವುದು ತಪ್ಪಾಗುತ್ತದೆ. ಕೃಷ್ಣ ಅವರ ಆರ್ಥಿಕ ಪರಿಪ್ರೇಕ್ಷ್ಯವೇ ರಾಜ್ಯಕ್ಕೆ ಅತ್ಯಂತ ಹಿತಕಾರಿಯಾದುದೆಂದು ಭ್ರಮಿಸುವವರು ಸಹ ಈ ಮೇಳದ ತಯಾರಿ, ಡಂಗುರ ಮತ್ತು ಫಲಶ್ರುತಿಯನ್ನು ಹುಮ್ಮಸ್ಸಿನಿಂದ ಸಮರ್ಥಿಸಲಾರರು. ಏಕೆಂದರೆ ಈ ವ್ಯವಹಾರದಲ್ಲೂ ಕೃಷಿ ಭೂಮಿಗೆ ಕುತ್ತುಂಟಾಗುವ ನಿಶ್ಚಿತ ಸಾಧ್ಯತೆ ಇದೆ. ಆದರೆ ಅಷ್ಟೇ ಅಲ್ಲ.

ಮೇಳದ ಪ್ರಚಾರಕ್ಕಾಗಿ ನಮ್ಮ ರಾಜ್ಯ ಸರ್ಕಾರವು ಒಂದು ವಿದೇಶಿ ಬಹುರಾಷ್ಟ್ರೀಯ ಜಾಹಿರಾತು ಸಂಸ್ಥೆಯನ್ನು ನೇಮಿಸಿಕೊಂಡಿತು. ಅದೊಂದಕ್ಕೇ ನಮ್ಮ ಎರಡೂವರೆ ಕೋಟಿ ರೂಪಾಯಿ ಹಾರಿಹೋಯಿತು. ಆಮೇಲೆ, ಇಲ್ಲಿಗೆ ದಯಮಾಡಿಸಿದ ಬಂಡವಾಳ ಪ್ರಭೃತಿಗಳಿಗೆ ಆತಿಥ್ಯ ಮುಂತಾದ ಬಾಬ್ತು ಏನಿಲ್ಲವೆಂದರೂ ಮೂರು-ನಾಲ್ಕು ಕೋಟಿ ವ್ಯಯವಾಗಿದೆ. ಇಷ್ಟಾಗಿ, ರಾಜ್ಯವು ನಿರೀಕ್ಷಿಸಿದ್ದ ಹತ್ತು ಸಾವಿರ ಕೋಟಿ ರೂಪಾಯಿಗಳ ಹೂಡಿಕೆ ಆರಂಭದಲ್ಲೇ ಮರೀಚಿಕೆಯಾಯಿತು. ಸರ್ಕಾರವೇ ಹೇಳುವಂತೆ ಹೆಚ್ಚೆಂದರೆ ಮೂರು-ನಾಲ್ಕು ಸಾವಿರ ಕೋಟಿ ರೂಪಾಯಿಗಳ ಹೂಡಿಕೆ ಆಗಬಹುದಂತೆ. ಕರ್ನಾಟಕದ ಮಹಾಜನತೆಗಾಗಿ ನಲವತ್ತು ಸಾವಿರ ಹೊಸ ಉದ್ಯೋಗಗಳು ಈ ಹೂಡಿಕೆಯಿಂದ ನಿರೀಕ್ಷಿಸಲಾಗಿತ್ತೆಂದು ರಾಜ್ಯದ ವಿಶೇಷ ಕಾರ್ಯದರ್ಶಿಯೊಬ್ಬರು ಹೇಳಿದ್ದಾರೆ. ಅವರ ಲೆಕ್ಕಾಚಾರಕ್ಕೆ ಏನು ಆಧಾರವಿದೆಯೋ ಅವರಿಗೂ ಗೊತ್ತಿಲ್ಲ. ಬಹಳವೆಂದರೆ ಒಂದೆರಡು ಸಾವಿರ ಹೊಸ ಉದ್ಯೋಗಗಳು ಸೃಷ್ಟಿಯಾಗಬಹುದೆಂಬುದು ತಿಳಿದವರ ಅಭಿಪ್ರಾಯ. ಅಷ್ಟೂ ಆಗದೆ ಹೋಗಬಹುದು.

ಇರುವುದನ್ನೆಲ್ಲಾ ಮುಚ್ಚುತ್ತಿರುವ ನಮ್ಮ ಧರ್ಮ ಪ್ರವರ್ತಕ ಸರ್ಕಾರಿ ನಾಯಕರು ಹೊಸದಾಗಿ ಔದ್ಯೋಗಿಕ ಉತ್ಪಾದನೆಗಾಗಲಿ ಕೃಷಿ ತಂತ್ರಜ್ಞಾನಕ್ಕಾಗಲಿ ಒಂದು ಗುಲಗಂಜಿ ತೂಕದಷ್ಟನ್ನೂ ಸೇರಿಸುತ್ತಿಲ್ಲ. ಒಂದಿಷ್ಟು ಕೃಷಿ ಭೂಮಿ ನಷ್ಟವಾಗುತ್ತದೆ, ಮಾಹಿತಿ ತಂತ್ರಜ್ಞಾನವೆಂಬ ಮಾಯಾಬಜಾರ್ ಇನ್ನಷ್ಟು ಹಿಗ್ಗುತ್ತದೆ, ಅಷ್ಟೆ. ವಿದ್ಯುನ್ಮಾನ ಕ್ಷೇತ್ರಕ್ಕೆ ಸರ್ಕಾರವು ನಿರೀಕ್ಷಿಸಿದ ಬಂಡವಾಳ ಹೂಡಿಕೆ ಬರುತ್ತದೆಂದು ಯಾರೂ ನಂಬಿಲ್ಲ. ಪ್ರವಾಸೋದ್ಯಮ, ದೂರ ಸಂಪರ್ಕ ತಂತ್ರಜ್ಞಾನ, ಮತ್ತು ಅಂತಹ ಇನ್ನೊಂದೆರಡು ವಿಭಾಗಗಳಲ್ಲಿ ಚಟುವಟಿಕೆ ಹೆಚ್ಚಿದರೆ ನಮ್ಮ ಐದು ಕೋಟಿ ರೂಪಾಯಿ ಆತಿಥ್ಯ ಫಲಪ್ರದವಾದಂತೆ. ಇದು ಜನಪರವಾದ ಆರ್ಥಿಕ ಪರಿಪ್ರೇಕ್ಷ್ಯವೇ?

- ಜಿ. ಆರ್.



ತಿಂಗಳ ಪತ್ರಿಕೆ

ಹೊಸತು

ನೆಮ್ಮದಿಯ ನಾಳೆ ನಮ್ಮದು

ನವಕರ್ನಾಟಕ ಪ್ರಕಾಶನ

ಸಂಪುಟ-೧ ಸಂಚಿಕೆ - ೧೨ ಜುಲೈ ೨೦೦೦

ಪ್ರಧಾನ ಸಂಪಾದಕ

ಜಿ. ರಾಮಕೃಷ್ಣ

ಸಂಪಾದಕ ಮಂಡಲಿ

ಸಿ. ಆರ್. ಕೃಷ್ಣರಾವ್
ಎನ್. ಗಾಯತ್ರಿ
ಬಿ. ಜಿ. ಗುಜ್ಜಾರಪ್ಪ
ಎಸ್. ಗುರುದತ್
ಮಲ್ಲೇಪುರಂ ಜಿ. ವೆಂಕಟೇಶ್
ಬಿ. ವಿ. ವೀರಭದ್ರಪ್ಪ
ಕೆ. ಪಿ. ಸ್ವಾಮಿ

ವ್ಯವಸ್ಥಾಪಕರು

ಎಸ್. ಸುರೇಂದ್ರ
ಎ. ಆರ್. ಉಡುಪ


ಮುದ್ರಕ-ಪ್ರಕಾಶಕ

ಆರ್. ಎಸ್. ರಾಜಾರಾಮ್
ವ್ಯವಸ್ಥಾಪಕ ನಿರ್ದೇಶಕ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.

ಮುದ್ರಣ

ನವಕರ್ನಾಟಕ ಪ್ರಿಂಟರ್ಸ್
೧೬೭ ಮತ್ತು ೧೬೮, ೧೦ನೇ ಮುಖ್ಯ ರಸ್ತೆ
೩ನೇ ಘಟ್ಟ, ಪೀಣ್ಯ ಕೈಗಾರಿಕಾ ಪ್ರದೇಶ
ಬೆಂಗಳೂರು - ೫೬೦೦೫೮
ದೂರವಾಣಿ : ೮೩೯೭೪೮೨೬

ಹೊಸತು ಕಚೇರಿಯ ವಿಳಾಸ



ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
೧೫, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಅಂ. ಪೆ. ೫೧೫೯
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - ೫೬೦ ೦೦೧
ದೂರವಾಣಿ / ಫ್ಯಾಕ್ಸ್ : ೨೨೦೩೫೮೦ / ೮೧ / ೮೨
e-mail : nkp@bgl.vsnl.net.in

ವಿದೇಶಿ ಬಂಡವಾಳ

ನಮ್ಮ ದೇಶದಲ್ಲಿ ಎಷ್ಟು ವಿದೇಶಿ ಬಂಡವಾಳದ ಹೂಡಿಕೆಯಾದರೆ ನಮಗೆ ತೃಪ್ತಿಯಾಗುತ್ತದೋ ತಿಳಿಯದು. ಅದು ಯಾವ ಕ್ಷೇತ್ರದಲ್ಲಾಗಬೇಕು ಅಥವಾ ಬೇಡವೆಂಬ ಖಚಿತ ನಿರ್ಧಾರವೂ ಇಲ್ಲದೆ ವಿದೇಶಿ ಬಂಡವಾಳಕ್ಕೆ ಹೆಚ್ಚಿನ ಸವಲತ್ತು ಘೋಷಿಸುವುದು ಕಳೆದ ಒಂದು ದಶಕದಲ್ಲಿ ಮಿತಿಮೀರಿ ನಡೆದಿದೆ. ನಿರೀಕ್ಷಿತ ಫಲಿತಾಂಶ ಮಾತ್ರ ದೊರೆತಿಲ್ಲ. ಅದಕ್ಕಾಗಿ ಅತೀವ ವ್ಯಥೆ ಪಡಬೇಕಾದ್ದೇನೂ ಇಲ್ಲ. ಮಾರಿಷಸ್ ದ್ವೀಪದಲ್ಲಿ ನೋಂದಣಿಯಾದ ಸಂಸ್ಥೆಗಳೆಂದು ನಮ್ಮಲ್ಲಿ ನೂರಾರು ಕಂಪೆನಿಗಳು ಲಾಭ ಮಾಡಿಕೊಳ್ಳುತ್ತವೆ, ಆದರೆ ತೆರಿಗೆ ತೆರುವುದಿಲ್ಲ. ಅವನ್ನು ಪ್ರಶ್ನಿಸಿದರೆ ಇನ್ನೆಲ್ಲಿ ಬಂಡವಾಳ ಹೂಡುವವರು ವಿದೇಶಗಳಿಂದ ಬರುವುದನ್ನು ನಿಲ್ಲಿಸಿ ಬಿಡುತ್ತಾರೋ ಎಂಬ ಮೂರ್ಖ ಆತಂಕದಿಂದ ನಮ್ಮ ಖಜಾನೆಗೆ ನಾವೇ ವಂಚನೆ ಮಾಡುವುದಾಗಿದೆ. ಈಚಿನ ಇಂತಹ ಒಂದು ಪ್ರಸಂಗದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಅವ್ಯವಹಾರ ಬೆಳಕಿಗೆ ಬಂದಿದೆ. ಆದರಿಂದ ನಮ್ಮ ಕೇಂದ್ರದ ಅರ್ಥಸಚಿವರು ವಿಚಲಿತರಾಗಿಲ್ಲ. ''ರಾಷ್ಟ್ರೀಯತೆ'' ಎಂಬುದಕ್ಕೆ ಹೊಸ ಹೊಸ ವ್ಯಾಖ್ಯಾನಗಳು ಬರುತ್ತಿರುವ ಇಂದಿನ ಸಂದರ್ಭದಲ್ಲಿ ಇದು ಅನುಚಿತವೆಂದು ಹೇಳುವಷ್ಟನ್ನು ಸಹ ನಮ್ಮ ದೊಡ್ಡ ದೊಡ್ಡ ಪತ್ರಿಕೆಗಳು ಮಾಡುತ್ತಿಲ್ಲ. ಏನು ಲೆಕ್ಕಾಚಾರವೋ?

ಇತ್ತೀಚೆಗೆ ಇನ್ನೊಂದು ತೀರ್ಮಾನ ಪ್ರಕಟವಾಗಿದೆ. ವಿದೇಶಿ ಬಂಡವಾಳವನ್ನು ಆಕರ್ಷಿಸಲು ಅದು ಅನುವು ಮಾಡಿಕೊಡುತ್ತದೆಂದು ಹೇಳಲಾಗಿದೆ. ೧೫೦೦ ಕೋಟಿ ರೂಪಾಯಿಗಳವರೆಗೆ ನೇರವಾಗಿ ಬಂಡವಾಳ ಹೂಡಲು ಕೇಂದ್ರ ಸರ್ಕಾರದ ವಿಶೇಷ ಪರವಾನಗಿಯ ಅಗತ್ಯವಿಲ್ಲವೆಂಬುದು ಆ ತೀರ್ಮಾನದ ಒಂದು ಭಾಗ. ಇನ್ನೊಂದು ಭಾಗವೆಂದರೆ ಬಂಡವಾಳದ ಹೂಡಿಕೆಗೆ ಸ್ಥಳೀಯ ಉದ್ದಿಮೆಗಳೊಡನೆ ಜಂಟಿಯಾಗಬೇಕೆಂಬ ಷರತ್ತಿಲ್ಲದಿರುವುದು ಹಾಗೂ ಲಾಭವನ್ನು ಇಡಿಯಾಗಿ ಕೊಂಡೊಯ್ಯುವ ಅವಕಾಶ ಕಲ್ಪಿಸಿರುವುದು. ಇದು ವಿದ್ಯುತ್ ಮತ್ತು ಪೆಟ್ರೋಲಿಯಂ ಉದ್ದಿಮೆಗಳಿಗೆ ಅನ್ವಯವಾಗುವುದಾಗಿ ಕೇಂದ್ರ ಅ(ನ)ರ್ಥ ಸಚಿವರು ಘೋಷಿಸಿದ್ದಾರೆ.

ಕಾಲು ಶತಮಾನದಷ್ಟು ಹಿಂದಿನ ಘಟನೆಗಳನ್ನು ಕೂಡ ಮರೆತುಬಿಡುವ ಪ್ರವೃತ್ತಿ ಬೆಳೆಸಿಕೊಂಡಿರುವ ಭಾರತದ ರಾಜಕೀಯ ನಾಯಕರಿಗೆ ಜನತೆ ಅವನ್ನು ನೆನಪಿಸುವುದು ಆರೋಗ್ಯಕರ. ವಿದೇಶಿ ಪೆಟ್ರೋಲಿಯಂ ಕಂಪೆನಿಗಳು ಹಲವಾರು ನಮ್ಮಲ್ಲಿ ಬಂಡವಾಳ ಹೂಡಿ ತೈಲ ಶುದ್ಧೀಕರಣ ಮತ್ತು ಮಾರಾಟದಲ್ಲಿ ತೊಡಗಿದ್ದವು. ತೈಲವೂ ಅವರದಲ್ಲ. ಅರಬ್ ರಾಷ್ಟ್ರಗಳ ತೈಲವನ್ನು ತಮ್ಮದನ್ನಾಗಿಸಿಕೊಂಡು, ಅದನ್ನು ಭಾರತದಲ್ಲಿ ಶುದ್ಧೀಕರಿಸಿ, ಮಾರಾಟ ಮಾಡಿ ಲಾಭ ಪಡೆಯುತ್ತಿದ್ದವು. ೧೯೭೪ರ ವರೆಗೆ ಆ ಎಲ್ಲ ಕಂಪೆನಿಗಳೂ ಹೂಡಿದ್ದ ಒಟ್ಟು ಬಂಡವಾಳ ಕೇವಲ ೧೧೦ ಕೋಟಿ ರೂಪಾಯಿಗಳು. ಅಷ್ಟೇ ಹೂಡಿಕೆಯಿಂದ ಹದಿನಾಲ್ಕು ವರ್ಷಗಳಲ್ಲಿ ಅವು ಕೊಂಡೊಯ್ದಿದ್ದ ಲಾಭ ೧೪೦೮ ಕೋಟಿ ರೂಪಾಯಿಗಳು. ಅಂದರೆ ಶೇಕಡ ೧೨೦ ರಷ್ಟು ಲಾಭ. ಅರಬ್ ರಾಷ್ಟ್ರಗಳ ಸಂಪತ್ತನ್ನು ತಮ್ಮದಾಗಿಸಿಕೊಂಡದ್ದಕ್ಕೆ ದೊರಕಿದ ಲಾಭ ಇದರಲ್ಲಿ ಸೇರಿಲ್ಲ.

ಹೀಗೆ ವಹಿವಾಟು ನಡೆಸುತ್ತಿದ್ದ ಕಂಪೆನಿಗಳನ್ನು ಭಾರತ ಸರ್ಕಾರ ಮುಚ್ಚಿಸಿದ್ದೇಕೆ? ಸ್ವಂತದ ತೈಲ ಹಾಗೂ ತೈಲ ಶುದ್ಧೀಕರಣಕ್ಕೆ ಇಂಬು ನೀಡುವುದಕ್ಕಾಗಿ, ಎಂಬುದು ಭಾಗಶಃ ಸರಿ. ಆ ವೇಳೆಗೆ ನಮ್ಮಲ್ಲೇ ತೈಲದ ಉತ್ಪಾದನೆ ಆರಂಭವಾಗಿತ್ತು. ನಮ್ಮ ಅಗತ್ಯದ ಶೇ. ೩೦ರಷ್ಟನ್ನು ಅದು ಪೂರೈಸುತ್ತಿತ್ತು. ಆದರೆ ಬೇರೆ ಕಾರಣಗಳೂ ಇದ್ದವು. ಎಪ್ಪತ್ತರ ದಶಕದ ಆದಿಭಾಗದಲ್ಲಿ ಬಂಗ್ಲಾದೇಶ ಅಸ್ತಿತ್ವಕ್ಕೆ ಬರುವುದಿತ್ತು. ಯುದ್ಧ ಜಾರಿಯಲ್ಲಿತ್ತು. ವಿಶಾಖಪಟ್ಟಣದಲ್ಲಿದ್ದ ವಿದೇಶಿ ತೈಲ ಕಂಪೆನಿ ಕಾಲ್ಟೆಕ್ಸ್ ತನ್ನ ಶುದ್ಧೀಕರಣದ ಆಗರದಲ್ಲಿ ತೈಲವನ್ನು ಶುದ್ಧೀಕರಿಸಿ ಸರಬರಾಜು ಮಾಡಲು ನಿರಾಕರಿಸಿತು. ಯುದ್ಧದಲ್ಲಿ ಅತ್ಯಗತ್ಯವಾಗಿ ಬೇಕಾಗಿದ್ದ ತೈಲಕ್ಕೆ ಈ ವಿದೇಶಿ ಕಂಪೆನಿ ಮುಗ್ಗಟ್ಟು ಸೃಷ್ಟಿಸಿತು. ಏಕೆಂದರೆ, ಆ ಅಮೆರಿಕಾದ ಕಂಪೆನಿಯ ಅಭಿಪ್ರಾಯದಲ್ಲಿ ಭಾರತವು ಅಪರಾಧವನ್ನೆಸಗಿತ್ತು. ಪೂರ್ವ ಪಾಕಿಸ್ತಾನದಲ್ಲಿ ನಡೆದಿದ್ದ ದಮನಕ್ಕೆ ಭಾರತ ವಿರೋಧ ವ್ಯಕ್ತಪಡಿಸಿದ್ದು ಅಪರಾಧ, ಯಾಹ್ಯಾ ಖಾನನಿಗೆ ಬೆಂಬಲ ನೀಡಿದ ಅಮೆರಿಕಾ ಮಾಡಿದ್ದು ಪ್ರಜಾಪ್ರಭುತ್ವ ಪರವಾದ ಕ್ರಿಯಾಚರಣೆ! ಇದು ಅಂದಿನ ರಾಜಕೀಯ. ಇಂದೂ ಮರುಕಳಿಸಬಹುದಾದ ರಾಜಕೀಯ. ಅದನ್ನು ಗಮನಿಸದಿರುವ ನಮ್ಮ 'ರಾಷ್ಟ್ರೀಯ' ನಾಯಕರಿಗೆ ಏನೆನ್ನೋಣ?

ಯಾವ ಕ್ಷೇತ್ರದಲ್ಲಿ ವಿದೇಶಿ ಬಂಡವಾಳದ್ದು ಮೇಲುಗೈ ಆಗಬಾರದು ಎಂಬ ವಿಚಕ್ಷಣೆ ಇಲ್ಲದ ವಾಜಪೇಯಿ ಸರ್ಕಾರದ ಇಂದಿನ ನೀತಿ ನಾಳೆ ನಮಗೆ ಉರುಲಾಗುತ್ತದೆ; ಇಲ್ಲವೆ, ಅಮೆರಿಕಾದ ಭಟ್ಟಂಗಿಯಾಗಿ ಉಳಿಯಬೇಕಾದ ಅನಿವಾರ್ಯತೆ ಭಾರತಕ್ಕೆ ಬಂದೀತು. ೧೯೭೩ರಲ್ಲಿ ಅರಬ್ ರಾಷ್ಟ್ರಗಳಿಗೆ ಅಮೆರಿಕಾದ ಅಂದಿನ ಅಧ್ಯಕ್ಷರು ನೀಡಿದ್ದ ಎಚ್ಚರಿಕೆಯನ್ನು ಮರೆಯಬಾರದು: ನೀವು ನಾಗರಿಕತೆಯ ಕತ್ತು ಹಿಚುಕಲು ಬಿಡುವುದಿಲ್ಲ; ನಿಮ್ಮ ತೈಲ ನಿಕ್ಷೇಪಗಳನ್ನು ವಶಪಡಿಸಿಕೊಳ್ಳುತ್ತೇವೆ; ಅದು ನಮ್ಮ ಹಕ್ಕು. -ಏತಕ್ಕಾಗಿ ಈ ಎಚ್ಚರಿಕೆ? ನಮ್ಮ ಸಂಪತ್ತನ್ನು ದೋಚಲು ನಿಮಗೆ ಹಕ್ಕಿಲ್ಲವೆಂದು ಕೆಲವು ಅರಬ್ ರಾಷ್ಟ್ರಗಳು ಹೇಳಿದ್ದಕ್ಕಾಗಿ. ನಂತರದ ಅಮೆರಿಕಾ-ಇರಾಕ್ ಯುದ್ಧಕ್ಕೆ ಇದು ಪೂರ್ವ ಪೀಠಿಕೆಯಾಯಿತೆಂದರೆ ತಪ್ಪಲ್ಲ.

ತೈಲದ ಉತ್ಪಾದನೆ ಮತ್ತು ಶುದ್ಧೀಕರಣದಲ್ಲಿ ತಂತ್ರಜ್ಞಾನವನ್ನು ಪಡೆದಿರುವ ಭಾರತವು ವಿದೇಶಿ ಕಂಪೆನಿಗಳಿಗೆ ಶುದ್ಧೀಕರಣ ಮತ್ತು ಮಾರಾಟದ ಬಾಗಿಲುಗಳನ್ನು ತೆರೆದಿಡುವುದು ಸುತರಾಂ ಅನವಶ್ಯಕ. ಹಿಂದೆ ಬರ್ಮಾ ಶೆಲ್ ಎಂಬ ಒಂದು ಕಂಪೆನಿ ಮುಚ್ಚಿಸಲು ನಾವು ೩೮ ಕೋಟಿ ರೂಪಾಯಿ ಪರಿಹಾರ ನೀಡಿದ್ದೆವು. ಅವರ ಹೂಡಿಕೆ ಇದ್ದದ್ದು ಅದಕ್ಕೂ ಕಡಿಮೆ. ನಮ್ಮ ದೇಶದಿಂದ ೧೦೦ ಕೋಟಿಗೂ ಹೆಚ್ಚು ಹಣ ಕೊಂಡೊಯ್ದಿದ್ದ ಕಂಪೆನಿಗೆ ನಾವು ಪರಿಹಾರ ನೀಡಿ ಅಟ್ಟಿದ್ದು ತೈಲದ ಕ್ಷೇತ್ರವು ಅತಿಗಂಭೀರವಾದ ಕ್ಷೇತ್ರವಾದ್ದರಿಂದ. ದೇಶದ ಜೀವನ್ಮರಣದ ಪ್ರಶ್ನೆ ಅದರಲ್ಲಿದೆ, ಸ್ವಾತಂತ್ರ್ಯ-ಸಾರ್ವಭೌಮತ್ವದ ಪ್ರಶ್ನೆ ಅದರಲ್ಲಿದೆ, ಸ್ವಾವಲಂಬನೆಯ ಪ್ರಶ್ನೆ ಅದರಲ್ಲಿದೆ. ಅಷ್ಟು ಮಹತ್ವದ ಕ್ಷೇತ್ರಕ್ಕೆ ಮತ್ತೆ ವಿದೇಶಿ ಕಂಪೆನಿಗಳಿಗೆ ಆಹ್ವಾನ ನೀಡುವುದನ್ನು ಭಾರತದ ಜನತೆ ಒಕ್ಕೊರಲಿನಿಂದ ತೀವ್ರವಾಗಿ ಪ್ರತಿಭಟಿಸಬೇಕು, ಅದನ್ನು ಆಗದಂತೆ ತಡೆಯಬೇಕು. ಉದಾರೀಕರಣವೆಂದರೆ ರಾಷ್ಟ್ರದ ಜೀವನಾಡಿಗಳನ್ನು ದಾನ ಮಾಡುವುದೆಂದು ನಮ್ಮ ಉಚ್ಚಮಟ್ಟದ ಆರ್ಥಿಕ ವ್ಯವಸ್ಥಾಪಕರು ತಿಳಿದಂತಿದೆ. ಅವರ ಕ್ಷುದ್ರ ತಿಳಿವಳಿಕೆಯನ್ನು ಕ್ರಿಯಾತ್ಮಕವಾಗಿ ವಿರೋಧಿಸುವುದು ಎಲ್ಲ ಜನಪರ ಚಳುವಳಿಗಳ ಜವಾಬ್ದಾರಿಯಾಗಿದೆ.

ಜನರಿಗೆ ನಿಲುಕದ ನ್ಯಾಯಾಲಯಗಳು

ನ್ಯಾಯವು ಎಲ್ಲರ ಹಕ್ಕು. ಹಾಗೆ ಹೇಳುತ್ತಲೇ ಇರುವುದು ವಾಡಿಕೆ. ಹೇಳುವುದೂ ಸುಲಭ. ಅದನ್ನು ಪಡೆಯಲು ಎಷ್ಟು ಪ್ರಯಾಸವಿದೆ ಎಂಬುದು ಅನುಭವಿಸಿದವರಿಗೆ ಗೊತ್ತು. ಅನಕ್ಷರಸ್ಥರೂ ನ್ಯಾಯಾಲಯಗಳಲ್ಲಿ ನ್ಯಾಯ ಪಡೆಯಬೇಕು. ಅವರ ಫಜೀತಿ ಊಹಿಸಿಕೊಳ್ಳುವುದು ಕಷ್ಟವಲ್ಲ. ಏಕೆಂದರೆ ಅಕ್ಷರಸ್ಥರು ಸಹ ಅದರಲ್ಲಿ ಬೆಂದು ಸುಣ್ಣವಾಗುವುದು ಅಪರೂಪವೇನಲ್ಲ.

ಹಣದ ಪ್ರಶ್ನೆಯೂ ಇಲ್ಲಿ ಗೌಣವಲ್ಲ. ವಿದ್ಯೆ ಪಡೆಯಲು ಎಲ್ಲರಿಗೂ ಹಕ್ಕಿದೆ. ಆದರೆ ಪಡೆಯುವವರೆಷ್ಟು ಮಂದಿ? ಎಲ್ಲಿಗೆ ಬೇಕಾದರೂ ವಿಮಾನವನ್ನೇರಿ ಪ್ರಯಾಣಿಸಲು ಎಲ್ಲರಿಗೂ ಹಕ್ಕಿದೆ. ಅದನ್ನು ಚಲಾಯಿಸಲು ಚೈತನ್ಯವಿರುವುದು ಯಾರಿಗೆ? ಹಾಗೇ ನ್ಯಾಯಾಲಯದ ಮೆಟ್ಟಿಲನ್ನೇರುವ ಸೌಲಭ್ಯ ಕೂಡ. ಇಲ್ಲಿ ಇನ್ನೂ ಒಂದು ಮುಗ್ಗಟ್ಟಿದೆ. ಅದೇನೆಂದರೆ ನಮಗೆ ಬೇಕಾದೆಡೆ ನ್ಯಾಯಾಲಯಗಳಿಲ್ಲ. ಅದೆಲ್ಲಿರುತ್ತದೋ ಅಲ್ಲಿಗೆ ಓಡುವ ಶಕ್ತಿ ಇರಬೇಕು. ಅದನ್ನು ತಲುಪಿದ ಮೇಲೆ ಅದರ ಮೆಟ್ಟಿಲು ಏರುವ ಧೈರ್ಯ ಬೇಕು. ಬೇರೆಲ್ಲವನ್ನೂ ಜನರ ಬಳಿಗೆ ತನ್ನಿ ಎನ್ನುವ ಘೋಷಣೆ ಪ್ರಚಾರದಲ್ಲಿರುವಾಗ ನ್ಯಾಯಾಲಯಕ್ಕೆ ಅದನ್ನು ಅನ್ವಯಿಸುವುದಿಲ್ಲ. ಅದಕ್ಕೆ ನ್ಯಾಯಾಲಯದ ವರಿಷ್ಠರ ಅನುಮತಿ ಬೇಕು. ಕಾಲೇಜನ್ನೋ ಬಸ್ಸನ್ನೋ ಜನರ ಬಳಿಗೆ ಕೊಂಡೊಯ್ಯುಲು ಮನಸ್ಸಿದ್ದರೆ ಸರ್ಕಾರ ಅದನ್ನು ಮಾಡಬಹುದು. ಆದರೆ ನ್ಯಾಯಾಲಯವನ್ನಲ್ಲ.

ನ್ಯಾಯಾಲಯಗಳು ಎಲ್ಲಿರಬೇಕೆಂಬುದನ್ನು ಜನರ ಅಗತ್ಯಗಳೇ ತೀರ್ಮಾನಿಸಬೇಕೆಂಬುದು ಅತಿ ಸಾಮಾನ್ಯ ತಿಳಿವಳಿಕೆ. ಆಸ್ಪತ್ರೆ ಎಲ್ಲಿದೆಯೋ ಅಲ್ಲಿಗೆ ರೋಗಿ ಹೋಗಬೇಕು, ನಿಜ. ಆದರೆ ಸಮಾಜದ ಜವಾಬ್ದಾರಿ ಏನು? ಹತ್ತಿರದಲ್ಲಿ ಅವನಿಗೆ ಅದು ಸಿಗುವಂತೆ ಮಾಡುವುದು. ಹತ್ತಿರದಲ್ಲಿರುವುದರ ಗುಣಮಟ್ಟ ಚೆನ್ನಾಗಿಲ್ಲ, ಆದ್ದರಿಂದ ದೂರದ್ದಕ್ಕೆ ಹೋಗುತ್ತೇನೆಂದು ಹೇಳಲು ನ್ಯಾಯಾಲಯವು ಶಾಲೆ, ಕಾಲೇಜು, ಆಸ್ಪತ್ರೆ ಅಥವಾ ಉಪಹಾರ ಗೃಹವಲ್ಲ ಅದರ ಪರಿಧಿಯನ್ನು ನಿಗದಿಗೊಳಿಸಲಾಗಿರುತ್ತದೆಯಾದ್ದರಿಂದ ಅದಕ್ಕೇ ಹೋಗುವುದು ಅನಿವಾರ್ಯ. ರೈಲ್ವೆ ಮಂಡಲಿಯ ಅಥವಾ ರೇಷ್ಮೆ ಮಂಡಲಿಯ ಕಚೇರಿ ಎಲ್ಲಿರಬೇಕೆಂದು ನಿರ್ಧರಿಸುವ ಜನಪ್ರತಿನಿಧಿಗಳಿಗೆ ನ್ಯಾಯಾಲಯ ಎಲ್ಲಿರಬೇಕೆಂದು ತೀರ್ಮಾನಿಸುವ ಹಕ್ಕು ಏಕೆ ಬೇಡ? ನ್ಯಾಯಾಲಯ ಸ್ಥಾಪಿಸಲು ಈಗಾಗಲೇ ಅನುಕೂಲವಿಲ್ಲದಿದ್ದರೆ ಅದನ್ನು ಕಲ್ಪಿಸುವ ಹೊಣೆ ಸರ್ಕಾರದ್ದು. ಸರ್ಕಾರಿ ನೌಕರನು ಎಲ್ಲಿರಲು ಬಯಸುತ್ತಾನೋ ಅಲ್ಲೇ ಸರ್ಕಾರದ ಕಚೇರಿ ಸ್ಥಾಪಿಸಲು ಶಕ್ಯವೆ? ಇದು ನ್ಯಾಯಾಲಯದ ಬಗೆಗೂ ನಿಜವಾಗಬೇಕಾದ್ದು ಸಹಜ. ತಾಂತ್ರಿಕ ಹಾಗೂ ಆಡಳಿತಾತ್ಮಕ ಮುಗ್ಗಟ್ಟುಗಳಿದ್ದರೆ ಅವನ್ನು ಪರಿಹರಿಸಿ ಉತ್ತರ ಕರ್ನಾಟಕದಲ್ಲಿ ರಾಜ್ಯದ ಉಚ್ಚನ್ಯಾಯಾಲಯದ ಒಂದು ವಿಭಾಗವನ್ನು ಖಾಯಂ ಆಗಿ ಸ್ಥಾಪಿಸಬೇಕಾದ್ದು ಇದರಿಂದ ತಾರ್ಕಿಕವಾಗಿ ಹೊಮ್ಮುತ್ತದೆ. ಕಾರ್ಯಾಂಗದಿಂದ ಉಂಟಾಗಬಹುದಾದ ತೊಂದರೆಗೆ ಪರಿಹಾರ ನ್ಯಾಯಾಂಗ ದೊರಕಿಸಿಕೊಡುತ್ತದೆ ಎನ್ನುತ್ತಾರೆ. ನ್ಯಾಯಾಂಗದಿಂದ ತೊಂದರೆಯುಂಟಾದರೆ ಪರಿಹಾರಕ್ಕೆ ಜನ ಎಲ್ಲಿಗೆ ಹೋಗಬೇಕು? ನ್ಯಾಯಾಲಯವೊಂದು ಎಲ್ಲಿರಬೇಕೆಂದು ನ್ಯಾಯಾಂಗವೊಂದೇ ತೀರ್ಮಾನಿಸಬೇಕೇಕೆ? ಹಾಗೇನಾದರೂ ವಿಶ್ವವಿದ್ಯಾನಿಲಯಗಳಿಗೆ ಆಯ್ಕೆಯ ಸ್ವಾತಂತ್ರ್ಯ ಕೊಟ್ಟರೆ ಎಲ್ಲ ರಾಜ್ಯ ವಿಶ್ವವಿದ್ಯಾನಿಲಯಗಳವರೂ ಬೆಂಗಳೂರಿನಲ್ಲೇ ಕಚೇರಿಗಳನ್ನು ಹೊಂದಲು ತೀರ್ಮಾನಿಸುತ್ತಿದ್ದರೋ ಏನೋ! ಇದು ಕೇವಲ ನ್ಯಾಯಾಂಗದ ಹಕ್ಕುಗಳ ಪರಿಧಿಗೆ ಸಂಬಂಧಿಸಿದ ಪ್ರಶ್ನೆಯಲ್ಲ; ನ್ಯಾಯ ಪಡೆಯಬಯಸುವವರ ಅನುಕೂಲ, ಪ್ರತಿಕೂಲಗಳ ಪ್ರಶ್ನೆಯೂ ಆಗಿದೆ. ಈಗ ಎಷ್ಟೋ ಮಂದಿ ದೂರದ ಕಾರಣದಿಂದ ಉಚ್ಚ ನ್ಯಾಯಾಲಯಕ್ಕೆ ಬಂದೇ ಇಲ್ಲ.

ಸರ್ವೋಚ್ಚ ನ್ಯಾಯಾಲಯದ ಪೀಠವೊಂದು ದಕ್ಷಿಣದಲ್ಲಿ ಎಲ್ಲಾದರೊಂದು ಕಡೆ ಇರಬೇಕೆಂಬ ಒತ್ತಾಯ ಹೆಚ್ಚುತ್ತಿರುವಾಗ ರಾಜ್ಯದ ಉಚ್ಚ ನ್ಯಾಯಾಲಯವು ಬೆಂಗಳೂರಿನಲ್ಲಿ ಮಾತ್ರವೇ ಇರಬೇಕೆಂಬುದರಲ್ಲಿ ಏನು ಅರ್ಥವಿದೆ? ನಮ್ಮ ರಾಜ್ಯದ ವಿಸ್ತೀರ್ಣ ಅಷ್ಟು ಕಡಿಮೆಯೆ? ಅಥವಾ ಸರ್ವೋಚ್ಚ ನ್ಯಾಯಲಯವು ದೆಹಲಿಯಲ್ಲಿ ಮಾತ್ರವೇ ಇರಬೇಕೆನ್ನಲು ನಾವೇನು ಯುರೋಪಿನ ರಾಷ್ಟ್ರಗಳಂತೆ ಸಣ್ಣದಾಗಿದ್ದೇವೆಯೆ? ಹಾಗೆ ನೋಡಿದರೆ ಭಾರತದ ನಾಲ್ಕೂ ದಿಕ್ಕುಗಳಲ್ಲಿ ಒಂದೊಂದು ಸರ್ವೋಚ್ಚ ನ್ಯಾಯಾಲಯದ ಪೀಠವಿರಬೇಕೆಂಬುದು ಪ್ರಜಾಪ್ರಭುತ್ವದ ಒಳ್ಳೆಯ ಲಕ್ಷಣ.

ಪ್ರಸ್ತುತ ಕರ್ನಾಟಕದಲ್ಲಿ ಉದ್ಭವಿಸಿರುವ ಬಿಕ್ಕಟ್ಟನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾದ್ದು ಅನಿವಾರ್ಯ. ಪ್ರಾದೇಶಿಕ ಅಸಮತೋಲನೆ ಎಂಬುದು ಜಲ, ವಿದ್ಯುತ್ತು, ಕಾರ್ಖಾನೆ, ಶಿಕ್ಷಣ, ಉದ್ಯೋಗ, ಇತ್ಯಾದಿಗಳಿಗೆ ಅನ್ವಯಿಸುವಂತೆ ನ್ಯಾಯ ಪಡೆಯುವ ಅನುಕೂಲತೆ-ಅನಾನುಕೂಲತೆಗೂ ಅನ್ವಯಿಸುತ್ತದೆ. ನ್ಯಾಯಾಂಗವು ಸಹ ಇದನ್ನು ತಳ್ಳಿಹಾಕಬಾರದೆಂಬ ಅಪೇಕ್ಷೆ ಸಾರ್ವತ್ರಿಕವಾದುದು. ಎಷ್ಟೋ ಹಳ್ಳಿಗಳಲ್ಲಿ ಶಾಲೆಗಳಿಗೆ ಕಟ್ಟಡಗಳಿಲ್ಲ, ಉಪಾಧ್ಯಾಯರಿಗೆ ಮನೆಗಳಿಲ್ಲ. ಹಾಗೆಂದು ಶಾಲೆಗಳನ್ನೆಲ್ಲಾ ಕಟ್ಟಡಗಳಿರುವ ಕಡೆ ಕೇಂದ್ರೀಕರಿಸಬೇಕೋ ಅಥವಾ ಅವಶ್ಯಕತೆ ಇರುವ ಕಡೆಗಳಲ್ಲೆಲ್ಲಾ ಕಟ್ಟಡಗಳನ್ನು ಕಟ್ಟಬೇಕೋ? ಉಪಾಧ್ಯಾಯನು ಯಾವುದೋ ಹಳ್ಳಿಗೆ ಹೋಗಿ ಕೆಲಸ ಮಾಡಲು ನಿರಾಕರಿಸಬಹುದೆ? ಬೀದರ್‌ನಂತಹ ಜಲ್ಲೆಯಲ್ಲಿ ಕೆಲಸ ಮಾಡುವವರೆಲ್ಲಾ ಬೆಂಗಳೂರಿಗೆ ಬರಲಿಚ್ಛಿಸಿದರೆ ಅವರ ಇಚ್ಛೆಯನ್ನು ಪೂರೈಸಲಾದೀತೆ?

ಭುಗಿಲೆದ್ದಿರುವ ಇಂದಿನ ಸಂದರ್ಭದಲ್ಲಿ ಶಾಂತಿ-ಸಹನೆಗಳಿಂದ ಜನರ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಪ್ರಜಾಪ್ರಭುತ್ವವಾದಿ ಕ್ರಮಗಳೆಲ್ಲಾ ಸಮಂಜಸವೇ ಆಗಿರುತ್ತವೆ. ಸಂಬಂಧಪಟ್ಟವರು ಜನರ ಭಾವನೆ ಮತ್ತು ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದು ಉಚಿತ. ತಾಂತ್ರಿಕ ಕಾರಣಗಳನ್ನು ಮುಂದುಮಾಡುವುದರಿಂದ ಪರಿಸ್ಥಿತಿಯನ್ನು ನಿಯಂತ್ರಿಸಲಾಗುವುದಿಲ್ಲ. ಆದ್ದರಿಂದ ಸದ್ಯದ ತೀರ್ಮಾನವನ್ನು ಮತ್ತೆ ಪರಿಶೀಲಿಸಬೇಕಾದ್ದು, ಉತ್ತರ ಕರ್ನಾಟಕದ ಅಗತ್ಯವನ್ನು ಪೂರೈಸಬೇಕಾದ್ದು ನ್ಯಾಯಸಮ್ಮತವಾಗಿರುತ್ತದೆ. ನ್ಯಾಯಯುತ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಮುದಾಯಿಕ.ಹೋರಾಟದ ಮಾರ್ಗವಿರುವಾಗ ನಮ್ಮದೇ ಬೇರೆ ರಾಜ್ಯ ಮಾಡಿಕೊಂಡುಬಿಡುತ್ತೇವೆಂಬ ಕೆಲವರ ಕೆಟ್ಟ ರಾಜಕೀಯ ಕೂಗು ಉತ್ತರ ಕರ್ನಾಟಕದ ಪರಂಪರೆಗೆ ಹೊರತಾದದ್ದು. ಅವರು ಅದನ್ನು ಕೈ ಬಿಡಬೇಕು ಮತ್ತು ಇಡೀ ಕರ್ನಾಟಕದ ಜನತೆಯು ಉತ್ತರ ಕರ್ನಾಟಕದ ಸದ್ಯದ ಹಕ್ಕೊತ್ತಾಯಕ್ಕೆ ಕ್ರಿಯಾಶೀಲವಾಗಿ ದನಿಗೂಡಿಸಬೇಕು. ಕರ್ನಾಟಕದ ಐಕ್ಯತೆ ಮತ್ತು ಅಭಿವೃದ್ಧಿಗೆ ಇದೊಂದೇ ಹಾದಿ.

ತಿಂಗಳ ಪತ್ರಿಕೆ
ಹೊಸತು
ನೆನ್ನೆಯ ನಾಳೆ ನಮ್ಮದು
ನವಕರ್ನಾಟಕ ಪ್ರಕಾಶನ

ಚಂದಾ ವಿವರಗಳು

ಬಿಡಿ ಸಂಚಿಕೆ	ರೂ. ೧೦/-
ವಾರ್ಷಿಕ ಚಂದಾ	ರೂ. ೧೦೦/-
ಎರಡು ವರ್ಷಗಳಿಗೆ	ರೂ. ೧೮೦/-
ಮೂರು ವರ್ಷಗಳಿಗೆ	ರೂ. ೨೫೦/-

ನವಕರ್ನಾಟಕ ಶಾಖೆಗಳು

೫ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು-೫೬೦ ೦೦೯ ☎ : ೨೨೫೧೩೬೭
ಕೆಂಪೇಗೌಡ ವೃತ್ತದ ಬಳಿ
ಬೆಂಗಳೂರು - ೫೬೦ ೦೦೯ ☎ : ೨೮೭೨೩೨೫
ಕೆ. ಎಸ್. ಆರ್. ರಸ್ತೆ
ಮಂಗಳೂರು - ೫೭೫೦೦೧ ☎ : ೪೪೧೦೦೭
ರಾಮಸ್ವಾಮಿ ವೃತ್ತ
ಮೈಸೂರು - ೫೭೦೦೨೪ ☎ : ೪೨೪೦೯೪
ಸ್ಟೇಷನ್ ರಸ್ತೆ
ಗುಲ್ಬರ್ಗಾ - ೫೮೫೧೦೨ ☎ : ೨೪೩೦೨

'ಅನನ್ಯ ಕಲಾ ತಪಸ್ವಿ'

ಲೇಖನ ವಾಸ್ತವತೆಯನ್ನು ಎತ್ತಿ ಹಿಡಿಯುವುದರೊಂದಿಗೆ ಜಾನಪದ ಸಿರಿಯನ್ನು ಮೈಗೂಡಿಸಿಕೊಂಡಿದೆ. ದಿವ್ಯ ಚೇತನ ಕಲಾರಾಧಕ ತಿಪ್ಪೇಸ್ವಾಮಿಯವರ ಸರಳತೆಯ ನಿರಾಡಂಬರ ಬದುಕು ಎಲ್ಲರಿಗೂ ಆದರ್ಶ. ತಿರುಗಾಡುವ ಕಲಾಕೋಶವಾಗಿ ಕುಂಚದಲ್ಲಿ ಪ್ರಕೃತಿಯನ್ನು ಹಿಡಿಯುವ ಶೈಲಿಯು ಜನಸಾಮಾನ್ಯರನ್ನು ಕಲಾ ಜಾನಪದ ಲೋಕಕ್ಕೆ ಕರೆದೊಯ್ಯುವಲ್ಲಿ ಅನುಮಾನವಿಲ್ಲ.

ರಬಕವಿ — ***ಚಿದಾನಂದ ಹೊ. ಪಾಗಾದ***

ಅವರಲ್ಲಿರುವ ಚೈತನ್ಯ ಲಹರಿಯ ಒಡನಾಟಗಳು ಮಾನವೀಯ ಸಂಬಂಧಗಳ ಜೊತೆಗೆ ಸಾಮಾಜಿಕ ಶ್ರೇಯೋಭಿವೃದ್ಧಿಗೆ ಸಹಕಾರಿಯಾಗಿದ್ದುವಲ್ಲದೆ, ನಮ್ಮಲ್ಲಿಯೂ ಅವುಗಳ ಕಾಯಕಲ್ಪಕ್ಕೆ ಅಣಿಯಾಗಿಸುತ್ತಿದ್ದವು. ನಿಸ್ವಾರ್ಥ ಸ್ನೇಹಜೀವಿಯಾಗಿದ್ದ ಅವರ ಪಾರದರ್ಶಕ ಜೀವನ ಶೈಲಿ, ಅಗಮ್ಯವು ಅನಂತದೊಳಗಿನ ಆವಿರ್ಭಾವ. ಪಿ. ಎಂ. ರಾಜನ್ ಅವರು ಅವರ ಕುರಿತಾಗಿ ಬರೆದ ಲೇಖನ ಮನಸ್ಮೃತಿಗೂ ತಟ್ಟಿದ್ದಲ್ಲದೆ, ಮಾನವ ಕೃತಿಗೂ ಮುಟ್ಟಿದೆ.

ಬೆಂಗಳೂರು — ***ಜವಳಗಿ ಸೈ. ಗುಲಬರ್ಗಾ***

ಮುಖ ಚಿತ್ರ

ಜೂನ್ ೨೦೦೦ದ ಮುಖಪುಟದ ಹೊಳೆಯ ಡೊಂಕಿನ ಚಿತ್ರ ಸೊಗಸಾಗಿದೆ. ಕೊಡಗು, ದಕ್ಷಿಣ ಕನ್ನಡ, ಮಲೆನಾಡುಗಳಲ್ಲಿ ಅಡ್ಡಾಡಿದವರಿಗೆ ಸಹಸ್ರ ಸಹಸ್ರ ಸೊಬಗಿನ ದೃಶ್ಯಾವಳಿಗಳನ್ನು ನೆನಪಿಗೆ ತಂದುಕೊಟ್ಟು ಹಂಬಲ ಹುಟ್ಟಿಸುವಂತಿದೆ. ತಿಪ್ಪೇಸ್ವಾಮಿಯವರ ಚಿತ್ರ ಹಾಗೂ ಅವರ ಚಿತ್ರಗಳೂ ಚೆನ್ನಾಗಿ ಮೂಡಿವೆ.

ಉತ್ತಮ ಚಿತ್ರ ಹಾಗೂ ವಿನ್ಯಾಸಗಳಿಗಾಗಿ ಅಭಿನಂದನೆ.

ಬೆಂಗಳೂರು — ***ಎನ್. ಪಿ. ಶಂಕರನಾರಾಯಣರಾವ್***

ವಿಚಾರ ಪ್ರಚೋದಕ


ಜೂನ್ ೨೦೦೦ದ 'ಹೊಸತು'ವಿನಲ್ಲಿ ಪ್ರಕಟವಾಗಿರುವ 'ಈ ತಿಂಗಳು' 'ಆಲಮಟ್ಟಿ ಹೋರಾಟ' ಮತ್ತು ಮುಖ್ಯವಾಗಿ 'ರಾಜಕೀಯ - ಧರ್ಮ' ಅನುಕ್ರಮವಾಗಿ ವರ್ತಮಾನ, ಭೂತ ಹಾಗೂ ಸಾರ್ವಕಾಲಿಕ ಮೌಲ್ಯಗಳನ್ನು ಬಿತ್ತರಿಸುವ ಉತ್ತಮ ಲೇಖನಗಳು. 'ರಾಜಕೀಯ-ಧರ್ಮ'ದಲ್ಲಿಯ ಸಾಮಾಜಿಕ ಕಳಕಳಿ, ವೈಚಾರಿಕತೆ ಮತ್ತು ಅನ್ವಯಶೀಲತೆ ಇದನ್ನೊಂದು ನಿರಂತರ ಅಧ್ಯಯನ ಶೀಲ ಮತ್ತು ಅನುಷ್ಠಾನ ಯೋಗ್ಯ ಲೇಖನವಾಗಿಸಿವೆ. ವಸಂತರಾವ್ ಕುಗ್ವೆಯವರ ವಿಚಾರ ಪರತೆ, ಕಿಚ್ಚು, ಜೀವನೋಲ್ಲಾಸ ಎಲ್ಲವೂ ಆದರ್ಶ ಗುಣಗಳು. ಈ ಲೇಖನದ ಶೀರ್ಷಿಕೆ ಮತ್ತು ಇದರೊಳಗಿನ ದನಿ ಇನ್ನೂ ಮಾರ್ದವ ಹಾಗೂ ಪಕ್ವವಾಗಬಹುದಿತ್ತೋ ಏನೊ. ಜಾತೀಯತೆಯ ಎದುರು ಮಾಡುವ ಸಕಾರಣ ಹೋರಾಟದಲ್ಲಿ ಉದ್ರೇಕ ಸೇರಿದರೆ ಉದ್ದೇಶವೇ ವಿಫಲವಾಗುವ ಸಂಭವವಿದೆ. 'ಹೊಸತು' ಎಂಬ ಹೊಸ ಚಿಗುರು ಚೆನ್ನಾಗಿ ಬರುತ್ತಿದೆ. ಧನ್ಯವಾದಗಳು.

ಮೈಸೂರು — ***ಜಿ. ಟಿ. ನಾರಾಯಣರಾವ್***

'ಹೊಸತು' ಪತ್ರಿಕೆಯ ಮುಖಪುಟದ ''ನೆಮ್ಮದಿಯ ನಾಳೆ ನಮ್ಮದು'' ಎಂಬ ಘೋಷಣೆ ಅರ್ಥವತ್ತಾಗಿದ್ದು, ರಷ್ಯನ್ ಲೇಖಕ ಇವಾನ್ ಟರ್ಗಿನೀವ್‌ನ ಈ ಉಕ್ತಿಯನ್ನು ನೆನಪಿಸುತ್ತದೆ: ''ಪರಿಸ್ಥಿತಿ ಈಗ ಉತ್ತಮವಾಗಿದೆ; ನಿಮ್ಮ ಮಕ್ಕಳ ಪಾಲಿಗೆ ಅದು ಮತ್ತೂ ಉತ್ತಮವಾಗುವುದು'' (ಎ ಹಂಟರ್ಸ್ ಸ್ಕೆಚಸ್).

ಮೈಸೂರು — ***ಡಾ|| ಸಿ. ಪಿ. ಕೃಷ್ಣಕುಮಾರ್***

ಜೂನ್ ೨೦೦೦ದ 'ಹೊಸತು'ವಿನಲ್ಲಿ ಪ್ರಕಟವಾದ 'ರಾಹುಲ ಸಾಂಕೃತ್ಯಾಯನ'ರವರ ವ್ಯಕ್ತಿ ಪರಿಚಯ ಅವರ ಹೆಸರು ಕೇಳಿಯಷ್ಟೇ ಗೊತ್ತಿದ್ದ ನನ್ನಂತಹ ಅಸಂಖ್ಯ ಯುವಕರಿಗೆ ರಾಹುಲರ ವಿಶಾಲ ವ್ಯಕ್ತಿತ್ವದ ದರ್ಶನ ಮಾಡಿಸಿದಂತಾಯಿತು. ಅವರ ವಿಸ್ತಾರ ಓದು, ಪ್ರಖರ



ಪಾಂಡಿತ್ಯ, ಬಹುತೇಕ ಭಾಷೆಗಳ ಪ್ರಭುತ್ವ, ಅವರು ರಚಿಸಿದ ಕೃತಿಗಳು, ಅವರ ಪರ್ಯಟನೆ ಎಲ್ಲವನ್ನೂ ಅರಿಯುತ್ತಾ ಹೋದಂತೆ ಅವರ ಸಾಧನೆಗಳ ಮುಂದೆ ನಾವು ಮೂಕವಿಸ್ಮಿತರಾಗುವುದೊಂದೇ.

ತಗಡೂರು. — ***ಮಂಜುನಾಥ್ ಗೀತಾ***

'ಹೊಸತು' ಪ್ರತಿ ತಿಂಗಳೂ ವಿಚಾರ ಪ್ರಚೋದಕ ಲೇಖನ-ಬರಹಗಳನ್ನು ಹೊತ್ತು ಬರುತ್ತಿರುವುದು ಬಹಳ ಸಂತೋಷ. ಜೂನ್ ತಿಂಗಳ ಮುಖಪುಟ ಚಿತ್ರ ಅತಿ ಉತ್ತಮವಾಗಿತ್ತು. ಸಂಪಾದಕೀಯ ಖಾರವಾಗಿದ್ದರೂ ಅಪೇಕ್ಷಣೀಯ ಮಟ್ಟದಲ್ಲಿತ್ತು. ಸರ್ಕಾರ ಇತ್ತ ಗಮನಿಸಬಹುದು. ಸರ್ಕಾರ ಅನುಸರಿಸಿದ ಹಾದಿ ಸರಿಯಾದದ್ದಲ್ಲ.

ಸೇಡಂ — ***ಅಣ್ಣಾಸಾಗರ್ ಭೀಮಶಪ್ಪ***

ಜೂನ್ ಸಂಚಿಕೆಯಲ್ಲಿನ ಡಾ|| ಸಿದ್ದನಗೌಡ ಪಾಟೀಲರವರ ಲೇಖನ ''ಆಲಮಟ್ಟಿ ಹೋರಾಟ - ಚೈತನ್ಯದ ಜೊತೆ ಚೆಲ್ಲಾಟ'' ಗಮನ ಸೆಳೆಯಿತು. ಬರದೂರಿನ ಜಿಲ್ಲೆಯ ಜನರ ಬವಣೆಯನ್ನು ಎತ್ತಿ ತೋರಿಸಿತು. ಪ್ರಾಮಾಣಿಕ ಸಂಘಟನೆಯೊಂದು ಹೋರಾಡಿದರೆ ಬಿಜಾಪೂರಕ್ಕೆ ಒಲವು-ಗೆಲವು ಸಿಗಬಹುದು. ಈ ಸಂಚಿಕೆಯ ಎಲ್ಲಾ ಬರಹಗಳು ಚಿಂತನೆಗೆ ಹಚ್ಚಿದವು.

ಚಿಕ್ಕರೂಗಿ — ***ಪ್ರಕಾಶ ಜಹಾಗೀರದಾರ***

ರಾಹುಲ ಸಾಂಕೃತ್ಯಾಯನರ ಬಗೆಗಿನ ಲೇಖನ ಓದಿ ಆಶ್ಚರ್ಯವಾಯಿತು. ಏಕೆಂದರೆ ಭಾರತದ ಯಾವುದೇ ವಿಶ್ವವಿದ್ಯಾಲಯಗಳು ಇವರನ್ನು ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲಿಲ್ಲ ಎಂದು ತಿಳಿದು. ಸಾಧಕನಿಗೆ ತಾನು ಬಂಧಿಯಾಗೇ ಇರಲಿ ಇಲ್ಲಾ, ಸ್ವತಂತ್ರವಾಗೇ ಇರಲಿ ಎರಡೂ ಒಂದೇ ಎಂದು ರಾಹುಲರ ಬಗ್ಗೆ ಓದಿ ತಿಳಿಯಿತು. ಬದುಕಿರುವಾಗಲೇ ಸತ್ತಂತಿರುವ ಜನಗಳಿಗಿಂತ ಸತ್ತರೂ ತಮ್ಮ ಗುಣ ವಿಚಾರಗಳಿಂದ ಇನ್ನೂ ಜೀವಂತವಿರುವ ರಾಹುಲರಂತವರೇ ಮೇಲು.

ಮಂಗಳೂರು — ***ಗಣೇಶ್ ಕುಮಾರ್***

ಈ ತಿಂಗಳ (ಜೂನ್ ೨೦೦೦) 'ಹೊಸತು'ವಿನಲ್ಲಿ ಎಸ್ಮಾ ಮತ್ತು ಕ್ರಿಕೆಟ್‌ನ ಬಗೆಗಿನ ಸಂಪಾದಕೀಯ ಉತ್ತಮವಾಗಿತ್ತು. ಮುಖ್ಯಮಂತ್ರಿ ಮತ್ತು ಶಿಕ್ಷಣ ಸಚಿವರ ಸರ್ವಾಧಿಕಾರಿ ಧೋರಣೆ ಖಂಡನೀಯ. ಇನ್ನು ಕ್ರೀಡೆಯ ಬಗ್ಗೆ ಹೇಳುವುದಾದರೆ ಭಾರತದಲ್ಲಿರುವಷ್ಟು ರಾಜಕೀಯ ಬೇರೆ ಯಾವುದೇ ದೇಶದಲ್ಲಿರಲಿಕ್ಕಿಲ್ಲ. ದುಡ್ಡಿಗಾಗಿ ಕ್ರೀಡೆಯ ಮಾನ ಹರಾಜು ಹಾಕಿದ ಆಟಗಾರರಿಗೆ ತಕ್ಕ ಶಿಕ್ಷೆ ವಿಧಿಸಲೇ ಬೇಕು.

ಬೈಕಂಪಾಡಿ — ***ಆಶಾ. ಜೆ***

ಜೂನ್ ತಿಂಗಳ ಸಂಚಿಕೆಯಲ್ಲಿ 'ವಿಶೇಷ ಉಡುಪುಗಳ ವಿನ್ಯಾಸಕಿ' ತಲೆಬರಹ ಓದಿ ಏನೋ ಎಂದು ತಿಳಿದುಕೊಂಡ ನನಗೆ ಇಡೀ ಲೇಖನ ಓದಿದ ಮೇಲೆ ಆಕೆಯ ಮಾನವೀಯ ಮುಖ ಕಂಡು ಕಣ್ಣು ತುಂಬಿತು. 'ಹೊಸತು'ವಿನಲ್ಲಿ ಇಂತಹ ಲೇಖನ ಇನ್ನಷ್ಟು ಮೂಡಿಬರಲಿ. ಧನ್ಯವಾದ.

ಮಂಗಳೂರು — ***ಮಣಿಮಾಲಾ ಶೆಟ್ಟಿ***

ಜೂನ್ ತಿಂಗಳ 'ಹೊಸತು'ವನ್ನು ಓದಿದೆ. ಈ ತಿಂಗಳ ಸಂಚಿಕೆ ತುಂಬಾ ಉಪಯುಕ್ತ ಹಾಗೂ ಸೊಗಸಾಗಿ ಹೊರಬಂದಿದೆ. ಮುಖ್ಯವಾಗಿ 'ಐಕ್ಯವೊಂದೇ ಮಂತ್ರ', 'ರಾಜಕೀಯ ಧರ್ಮ', 'ಪರಿಸರ ಪ್ರಜ್ಞೆಯ ತಾತ್ವಿಕ ನೆಲೆಗಟ್ಟು', 'ಗೊಂದಲಪುರದಿಂದ ಒಂದು ಪತ್ರ', 'ಸರ್ಕಾರಿ ಶಿಕ್ಷಣ', 'ಗಾಂಧೀಜಿಯವರ ಕನಸಿನ ರಾಮರಾಜ್ಯ ನನಸಾಗಲಿಲ್ಲವೇಕೆ?', 'ಮಾದಕ ದ್ರವ್ಯಗಳ ರಾಜಕಾರಣ' ಮತ್ತು 'ಕ್ರೌರ್ಯ - ಒಂದು ಮಾನಸಿಕ ವಿಶ್ಲೇಷಣೆ' ಲೇಖನಗಳು ಅತ್ಯಂತ ಉಪಯುಕ್ತ ಹಾಗೂ ಪರಿಣಾಮಕಾರಿಗಳಾಗಿವೆ. ಲೇಖಕರಿಗೆ ಅಭಿನಂದನೆಗಳು. ನಿಮಗೆ ಧನ್ಯವಾದಗಳು.

ಶ್ರೀಮಿತ್ತೂರು — ***ಎಂ. ವಿ. ಭಟ್***

ಕುರಿಮಂದೆಯೊಳಗಿನ ತೋಳಗಳು

ಭಾರತ ಮತ್ತೆ ಮತ್ತೆ ಸಮಸ್ಯೆಯ ಪ್ಲೇಗ್‌ಗೆ ಒಳಗಾಗಲು ಕಾರಣ, ಇಲ್ಲಿನ ಎಲ್ಲಾ ಪರಿಹಾರೋಪಾಯಗಳು ಸಮಸ್ಯೆಯನ್ನು ಬಗೆಹರಿಸುವ ನೆಪದಲ್ಲಿ ಅದರ ಎರಡೂ ತುತ್ತತುದಿಗಳನ್ನು ಮುಟ್ಟುತ್ತವೆ. ಕಂಟಕಗಳ ನಿವಾರಣೆಗೆಂದು ಟೊಂಕ ಕಟ್ಟಿ ನಿಂತರೆ ಮತ್ತೆರಡು ಕೇಡುಗಳು ಸೃಷ್ಟಿಯಾಗುತ್ತವೆ. ನನ್ನನ್ನು ಇಂತಹ ನಿರ್ಧಾರಕ್ಕೆ ಬರಮಾಡಿದ ಹಲವಾರು ವಿಷಯಗಳಲ್ಲಿ ಪ್ರಸ್ತುತವಾಗಿ ಅಲ್ಪಸಂಖ್ಯಾತ ಕ್ರೈಸ್ತರ ಮೇಲೆ ಮತ್ತು ಕ್ರೈಸ್ತರೊಳಗೆ ನಡೆಯುತ್ತಿರುವ ದೌರ್ಜನ್ಯ, ಮೃಗೀಯ ಘಟನೆಗಳು.

ಸಮಾಜವನ್ನು ಶುದ್ಧೀಕರಿಸುವ ನಾಟಕದ ಹೆಸರಿನಲ್ಲಿ ಪವಿತ್ರ, ನಿಷ್ಕಳಂಕ ಭಾರತಮಾತೆಯನ್ನು ಬೆತ್ತಲು ಮಾಡುವ ಧರ್ಮಾಂಧರ ಗುಂಪು ಒಂದೆಡೆ. ಇತ್ತ ಅಧಿಕಾರ ವ್ಯಾಮೋಹದಿಂದಾಗಿ, ಭಾಷಾಂಧರಾಗಿ, ಒಬ್ಬನೇ ದೇವನನ್ನು ಆರಾಧಿಸುತ್ತ, ಒಂದೇ ತತ್ವದಡಿಯಲ್ಲಿ ಬೆಳೆದು ನಿಂತಿರುವ ಕ್ರೈಸ್ತಧರ್ಮದ ಗೋಡೆಗಳನ್ನು ವಿಘಟಿಸುವ ಡೈನಮೈಟ್‌ಗಳು ಮತ್ತೊಂದು ಕಡೆ. ಇವೆರಡು ಗುಂಪುಗಳ ಧ್ಯೇಯ ಒಂದೇ : ''ಬದಲಾವಣೆ; ನವ ಸಮಾಜದ ಸೃಷ್ಟಿ!'' ಎರಡು ದಶಕಗಳಿಂದ ಕರ್ನಾಟಕದ ಕ್ರೈಸ್ತ ಸಮುದಾಯದೊಳಗೆ ಉರಿಯುತ್ತಿರುವ ಈ ಭಾಷಾಂಧತೆಯ ರಾಹು ಕಳೆದ ಮೂರ್ನಾಲ್ಕು ವರ್ಷಗಳಿಂದ ಎತ್ತರೆತ್ತರಕ್ಕೆ ಪಸರಿಸುತ್ತಿದೆ. ಕನ್ನಡ, ತಮಿಳು, ಕೊಂಕಣಿ, ಮಲೆಯಾಳ ಗುರುಗಳು ಭಾಷಾ ವ್ಯಾಮೋಹದಿಂದ ನಡೆಸುತ್ತಿರುವ ಕಿತ್ತಾಟವು ಮುಗ್ಧ ಜನತೆ ಗುಂಪು ಕಟ್ಟಿ, ಬೀದಿಗಿಳಿದು ರಕ್ತದೋಕುಳಿಯನ್ನು ಹರಿಸುವ ಪರಿಣಾಮವನ್ನು ಹೊಂದಿದೆ. ಆಯಾ ಭಾಷೆಯ ಯುವ ಜನಾಂಗವೇ ಕುರುಡಾಗಿ ಇದರಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದೆ. ''ಕ್ರಿಸ್ತನೆಂಬ ದ್ರಾಕ್ಷಾಬಳ್ಳಿಯ ಕವಲು''ಗಳಾಗಿರಬೇಕಾದ ಜನರನ್ನು ತಮ್ಮ ಸ್ವಾರ್ಥಕ್ಕಾಗಿ ಅಧಿಕಾರದ ಆಸೆಗಾಗಿ ಬೇರ್ಪಡಿಸಿ ಕ್ರಿಸ್ತನನ್ನು ಅಂಗವಿಕಲನನ್ನಾಗಿಸುವ ಕ್ರೂರ ಹೊಸ ನಾಟಕ ಪ್ರಾರಂಭವಾಗಿದೆ.

'ಕರ್ನಾಟಕದಲ್ಲಿ ಕನ್ನಡಕ್ಕೇ ಪ್ರಾಧಾನ್ಯತೆ ನೀಡಬೇಕು, ಕನ್ನಡ ಬಿಷಪ್‌ಗಳಿರಬೇಕು' ಎಂಬ ಕನ್ನಡ ಗುರುಗಳ ವಾದ ಒಂದು ದೃಷ್ಟಿಯಲ್ಲಿ ಸಮಂಜಸವಾದುದೇ. ಕರ್ನಾಟಕದಾದ್ಯಂತ ಇರುವ ಎಂಟು ಧರ್ಮ ಕ್ಷೇತ್ರಗಳ ಪೈಕಿ ಯಾವುದರಲ್ಲೂ ಕನ್ನಡ ಬಿಷಪ್‌ಗಳಿಲ್ಲ. ಆದರೆ ಇದೇ ಕಾರಣಕ್ಕಾಗಿ ಇಂದು ಕನ್ನಡ ಕ್ರೈಸ್ತರು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ, ಮಲತಾಯಿ ಧೋರಣೆಗೆ ಗುರಿಯಾಗಿದ್ದಾರೆ, ಎಂಬ ದೂರು ಇಡೀ ಕ್ರೈಸ್ತ ಧರ್ಮಕ್ಕೇ ನಾಚಿಕೆಗೇಡು! ಇಂದು ಇಡೀ ಚರ್ಚ್‌ನ ಆಡಳಿತ ವ್ಯವಸ್ಥೆಯ ಬಗ್ಗೆಯೇ ಆಳವಾದ ಪ್ರಾಮಾಣಿಕ ಚಿಂತನೆಗಳು ನಡೆಯಬೇಕು. ಒಬ್ಬ ವ್ಯಕ್ತಿಯ ಸಂದೇಶವನ್ನು, ಆದರ್ಶಗಳನ್ನು ಸಾರಲು ಒಂದು ಶ್ರೇಣೀಕೃತ ವ್ಯವಸ್ಥೆಯ ಅವಶ್ಯಕತೆ ಇದೆಯೇ ? ಮನುಷ್ಯನ ಅಂತರಾತ್ಮದ ನಾಡಿ ಮಿಡಿತವನ್ನು ಪರೀಕ್ಷಿಸಲು ಮತ್ತೊಬ್ಬನ ಅಗತ್ಯವಿದೆಯೆ? ಇಂತಹ ವ್ಯವಸ್ಥೆ ತನ್ನ ಮೂಲ ಗುರಿಯನ್ನೇ ಮರೆತು ಮತ್ತೊಂದು ಹಾದಿಯಲ್ಲಿ ನಡೆಯುವ ಹಾಗೂ ನಡೆದ ಉದಾಹರಣೆಗಳಿಲ್ಲವೆ? ಇಂದು ಆಗಿರುವುದೂ ಅದೇ. ನಮ್ಮ ಕೊಳಕು ರಾಜಕೀಯಕ್ಕೂ ಈ ಚರ್ಚ್‌ನ ವ್ಯವಸ್ಥೆಗೂ ಲೇಶವೂ ವ್ಯತ್ಯಾಸವಿಲ್ಲದೆ ಅವೆರಡೂ ಒಂದೇ ಜಾಡನ್ನು ಹಿಡಿದಿವೆ. ಕ್ರಿಸ್ತ ರೂಪಿಸಹೊರಟ ಸಮಾಜದ ಪರಿಕಲ್ಪನೆಯೇ ಇರದ ಅಥವಾ ಇದ್ದು ಮರೆತಿರುವ ಈ ಜನ ಕ್ರಿಸ್ತನನ್ನು ಮತ್ತೆ ಮತ್ತೆ ಶಿಲುಬೆಗೆ ಜಡಿಯುತ್ತಿದ್ದಾರೆ. ಅವನ ಆದರ್ಶಗಳು ಜನರನ್ನು ತಮ್ಮ ಕುಯುಕ್ತಿಗೆ ಬಲಿಕುರಿಗಳಾಗಿಸುವ ಅಸ್ತ್ರವಾಗಿಯಷ್ಟೇ ಬಳಸಲ್ಪಡುತ್ತಿವೆ.



ಈ ಭಾಷಾಂಧತೆ ಮೊದಲು ಮೊಳಕೆಯೊಡೆದದ್ದು ಸಾಮಾನ್ಯ ಜನಸಮುದಾಯದಲ್ಲೇನೂ ಅಲ್ಲ. ದಾರಿ ತಪ್ಪಿದ ಕುರಿಗಳನ್ನು ಮರಳಿ ಮಂದೆಗೆ ಸೇರಿಸಬೇಕಾದ ಕುರುಬರ ಮಧ್ಯೆ! ಇವರ ಕಿತ್ತಾಟಗಳನ್ನು ನೋಡುತ್ತಿದ್ದರೆ, ನಿಜಕ್ಕೂ ಇವರು ಕುರುಬರೋ ಅಥವಾ ''ಕುರಿಮಂದೆಯ ನಡುವೆ ತೋಳಗಳ ಪ್ರವೇಶವಾಗುವುದು'' ಎಂಬ ಕ್ರಿಸ್ತನ ವಾಣಿ ನೆರವೇರಿದೆಯೋ ಎಂದೆನಿಸುತ್ತದೆ. ಗುರುಗಳಲ್ಲಿಯೇ, 'ಕನ್ನಡ ಯಾಚಕರ ಬಳಗ', 'ತಮಿಳು ಗುರುಗಳ ವೇದಿಕೆ', 'ತೆಲಗು ಗುರುಗಳ ಕೂಟ','ಕೊಂಕಣಿ ಪಾದ್ರಿಗಳ ಸಭೆ' -ಇವೆಲ್ಲವನ್ನೂ ನೋಡುತ್ತಿದ್ದರೆ ಹೊಲಸೆದ್ದ ನಮ್ಮ ರಾಜಕೀಯದ ನೆನಪು ದುರ್ವಾಸನೆಯಂತೆ ಬಂದಡರುತ್ತದೆ. ತಮಿಳು ಪಾದ್ರಿಗಳು ಕೋಟ್ಯಾಧೀಶ್ವರರು(!); ಇವರಿಗೆ ಹಣ ಸಾಧನವಾದರೆ, ಅಧಿಕಾರದ ಉನ್ಮಾದದ ತುತ್ತತುದಿಯಲ್ಲಿರುವ ಕೊಂಕಣಿ ಗುರುಗಳಿಗೆ ತಮ್ಮ ಬಳಗವನ್ನು ಬೇರ್ಪಡಿಸಲು ಕಷ್ಟವೇನೂ ಅಲ್ಲ. ಇನ್ನು ಕನ್ನಡ ಗುರುಗಳಿಗೆ ಹಣವೂ ಇಲ್ಲ, ಅಧಿಕಾರವೂ ಇಲ್ಲ. ಆದರೆ ಅವರು ಬುದ್ಧಿವಂತರು, ಸಾಹಿತಿಗಳು, ಸೃಜನಶೀಲರು. 'ಮಾತುಕತೆ' ಎಂಬ ಮಾಸಪತ್ರಿಕೆಯೊಂದನ್ನು ಹುಟ್ಟುಹಾಕಿದರು. ಕನ್ನಡ ಕ್ರೈಸ್ತರಲ್ಲಿ ರೋಷ, ಕಿಚ್ಚು, ದ್ವೇಷಗಳನ್ನು ಬಿತ್ತಿ ಅವರನ್ನು ಭಾಷಾಮತೀಯರನ್ನಾಗಿಸುವ ಕೆಲಸವನ್ನದು ಸುಸೂತ್ರವಾಗಿ ನಡೆಸುತ್ತಿದೆ. ಯುವಶಕ್ತಿಯ ದುರುಪಯೋಗ ಆಗುತ್ತಿದೆ. (ಪತ್ರಿಕೆಯ ಸಕಾರಾತ್ಮಕ ಪಾತ್ರದ ಬಗ್ಗೆ ಮುಂದಿದೆ).

ಬಿಳಿಕಲೆಗಳ ಈ ಸಂತತಿ ನಶಿಸಿ, ಹೊಸಜನಾಂಗದ ಉದಯವಾಗುವುದೆಂದು ನಾವು ಆಶಾವಾದಿಗಳಾಗಿರಲೂ ಸಾಧ್ಯವಿಲ್ಲ. ಕಾರಣ, ಹದಿನೈದು, ಹದಿನಾರು ವರ್ಷಗಳ ಕಾಲ ಸುದೀರ್ಘ ತರಬೇತಿ ನೀಡಿ ಗುರುಗಳನ್ನಾಗಿಸುವ ಗುರುಮಠಗಳಲ್ಲೇ ಈ ಪ್ಲೇಗ್ ಕಾಣಿಸಿಕೊಂಡಿದೆ. ಬಿಷಪ್‌ಗಳಿಂದ ಹಿಡಿದು ಪ್ರತಿಯೊಬ್ಬ ಧಾರ್ಮಿಕ ವ್ಯಕ್ತಿಯೂ ಅನುಸರಿಸುವ ಭಾಷಾವೈಷಮ್ಯವು ತರಬೇತಿಯಲ್ಲಿರುವ ಯುವ ಮನಸ್ಸುಗಳಲ್ಲಿ ಎರಕ ಹೊಯ್ದುಬಿಟ್ಟಿದೆ. ಸಂಕುಚಿತ ಚಿಪ್ಪಿನೊಳಗೆ ನಾರುತ್ತಿರುವ ಮಹಾನುಭಾವರುಗಳೇ ಇವರ ಮಾರ್ಗದರ್ಶಿಗಳು! ಪ್ರಾಮಾಣಿಕ ಕುರಿಗಾಹಿಗಳು ನೂರಕ್ಕೊಬ್ಬರಂತೆ ಇದ್ದರೂ, ತೋಳಗಳ ನಡುವೆ ಅವರನ್ನು ಗುರುತಿಸುವುದು ಕಷ್ಟಸಾಧ್ಯ.

ಇದು ಭಾಷಾಂಧತೆಯ ಒಂದು ಮಜಲು. ಆದರೆ, ಈ ನಕಾರಾತ್ಮಕ ಬೆಳವಣಿಗೆಗಳ ನಡುವೆಯೇ ಕೆಲವು ಹೊಸ ಚಿಂತನೆಗಳ ಚಿಗುರೊಡೆಯುತ್ತಿದೆ. ತಮಗಾದ ಅನ್ಯಾಯವನ್ನು ಪ್ರತಿಭಟಿಸುವ ದಿಸೆಯಲ್ಲಿ ಕನ್ನಡ ಕ್ರೈಸ್ತ ಗುರುಗಳು ಹಾಗೂ ಅವರ ಪತ್ರಿಕೆ ('ಮಾತುಕತೆ') ತೋರುವ ಚರ್ಚಿನ ಸೂರಿನ ರಂಧ್ರಗಳತ್ತ ಲಾಟೀನು ಹಿಡಿದಿದೆ. ಸರ್ವಾಧಿಕಾರಿ ಮನಸ್ಸುಗಳಿಗೆ ಪ್ರತಿರೋಧ, ವ್ಯಕ್ತಿಸ್ವಾತಂತ್ರ್ಯಹರಣಕಾರರಿಗೆ ಎಚ್ಚರಿಕೆ, ಮಿಗಿಲಾಗಿ ೧೫ನೇ ಶತಮಾನದ ಯುರೋಪಿನ ಇತಿಹಾಸದ ಪುನರಾವರ್ತನೆಗೆ ಚಾಲನೆ ನೀಡಿದೆ. ಇಂದು ಈ ಪತ್ರಿಕೆ ಒಂದು ವಿಧದಲ್ಲಿ ಮತ್ತೊಂದು ಕ್ರಾಂತಿಗೆ ಸಾಮಾನ್ಯ (ಕ್ರೈಸ್ತ) ಜನರನ್ನು ಬದ್ಧರನ್ನಾಗಿಸುತ್ತಿದೆ. ಧಾರ್ಮಿಕ ಮುಖಂಡರುಗಳ ವಿರುದ್ಧದ ಅಪವಾದಕ್ಕೆ ಕಿವಿಮುಚ್ಚಿ, ಅನ್ಯಾಯ - ಅಕ್ರಮಗಳನ್ನು ಗಂಟಲಲ್ಲೇ ತಡೆದಿದ್ದ ಜನತೆ ಇಂದು ತನ್ನ ಧ್ವನಿ ಎತ್ತಿದೆ. ಪ್ರಗತಿಪರ ಯೋಚನಾಲಹರಿಗೆ ತನ್ನನ್ನು ಹೊಂದಿಸಿಕೊಂಡಿದೆ. ಗೌಪ್ಯ ಸಾಮಾಜಿಕ ಬದುಕಿನಿಂದ ಹೊರಬಂದಿದೆ. ಯುವ ಮನಸ್ಸುಗಳಲ್ಲಿ ವೈಚಾರಿಕತೆಯ ಉದಯವಾಗಿದೆ. ಕ್ರೈಸ್ತ ಸಮುದಾಯದೊಳಗೇ ನಡೆದಿರುವ ನೂರಾರು ಹಗರಣಗಳನ್ನು ಬಯಲಿಗೆ ಎಳೆದಿದೆ. ಮತ್ಸರವೆನ್ನಬಹುದೋ, ಪ್ರಾಮಾಣಿಕತೆಯೆನ್ನಬಹುದೋ, ಒಟ್ಟಿನಲ್ಲಿ ಕನ್ನಡ ಕ್ರೈಸ್ತ ಪಾದ್ರಿಗಳ ದಿಟ್ಟ ನಡೆಗಳು ಕರ್ನಾಟಕದಲ್ಲೇ ಮತ್ತೊಂದು ಯುರೋಪ್ ಇತಿಹಾಸವನ್ನು ಪುನರಾವರ್ತಿಸುತ್ತವೋ ಎಂದು ಕಾದು ನೋಡಬೇಕು.

ನವೀನ್ ಜೋಸೆಫ್
ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿ
ಮಹಾರಾಜಾ ಕಾಲೇಜು, ಮೈಸೂರು-೫೭೦೦೦೫


ಜಲಕ್ಷಾಮ, ಅಣೆಕಟ್ಟು ಹಾಗೂ ಆತಂಕಗಳು

ದೇಶದ ಕೆಲವು ರಾಜ್ಯಗಳಲ್ಲಿ ಇಂದು ತಲೆದೋರಿರುವ ಜಲಕ್ಷಾಮ ಬಹುಮಂದಿಯ ಸಾವು ಹಾಗೂ ಅಪಾರ ನೋವು ಸಂಕಟಗಳಿಗೆ ಕಾರಣವಾಗಿದೆ. ಇದು ದೇಶದ ಜನರೆಲ್ಲರ ಗಮನವನ್ನು ತನ್ನತ್ತ ಸೆಳೆದಿರುವುದರ ಜೊತೆಗೆ ಪತ್ರಿಕೆ ಮತ್ತಿತರ ಪ್ರಚಾರ ಮಾಧ್ಯಮಗಳಲ್ಲೂ ದೂರದರ್ಶನದಲ್ಲೂ ಲೇಖನ ಚರ್ಚೆಗಳಿಗೆ ಎಡೆಮಾಡಿ ಕೊಟ್ಟಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದಿಂದ ಯೋಜನಾಕಾರರೂ ನೀತಿ ನಿರ್ಮಾಪಕರೂ ಜಲ ಸಂಪನ್ಮೂಲ ಬೆಳವಣಿಗೆಗೆ ಸಂಬಂಧಿಸಿದ ಅಧಿಕಾರಿಗಳೂ ಈ ಸಮಸ್ಯೆಯ ಕಡೆಗೆ ಸಾಕಷ್ಟು ಗಮನ ನೀಡಿಲ್ಲ ಎಂದು ದೂಷಿಸಲೂ ಇದು ಆಸ್ಪದ ನೀಡಿದೆ.

ನಮ್ಮ ದೇಶದಲ್ಲಿ ಸಾಕುಬೇಕಾದಷ್ಟು ಜಲಸಂಪನ್ಮೂಲಗಳಿವೆ. ಉತ್ತರದಲ್ಲಿ ಹಿಮಾಲಯದಿಂದ ಹರಿದು ಬರುತ್ತಿರುವ, ಎಂದೂ ಬತ್ತದ, ಅನೇಕ ಜೀವನದಿಗಳು ಅತ್ಯಂತ ಫಲವತ್ತಾದ ಗಂಗಾನದಿ ಬಯಲನ್ನು ನಿರ್ಮಿಸಿವೆ. ದಕ್ಷಿಣದಲ್ಲೂ ಗೋದಾವರಿ, ಕಾವೇರಿಗಳಂಥ ನದಿಗಳು ಸಮೃದ್ಧ ನೀರಿನ ಆಕರಗಳಾಗಿವೆ. ಹೀಗೆ ನಿಸರ್ಗ ಇಷ್ಟು ಔದಾರ್ಯದಿಂದ ಕೂಡಿರುವಾಗ ಜಲಕ್ಷಾಮ ದಂಥ ಕರಾಳ ಪರಿಸ್ಥಿತಿ ಉಂಟಾಯಿತಾದರೂ ಹೇಗೆ? ಎಲ್ಲಿ ತಪ್ಪಾಗಿದೆ, ಎಂದು ಸಾಮಾನ್ಯ ಜನರು ಕಂಗಾಲಾಗಿ ಕೇಳುವಂತಾಗಿದೆ. ಈ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿ ಕೊಳ್ಳಲು ಮಾನವ ನಾಗರಿಕತೆ ಬೆಳೆದಂತೆ ಜಲಸಂಪನ್ಮೂಲಗಳ ಅಭಿವರ್ಧನೆ ಹೇಗೆ ಸಾಗಿದೆ ಎಂಬುದರ ಕಡೆಗೆ ಸ್ವಲ್ಪ ಗಮನ ಹರಿಸುವುದು ಉಪಯುಕ್ತ.

ಮಾನವರೂ, ಅಂತೆಯೇ ಪ್ರಾಣಿಗಳೂ, ಆರಂಭದಲ್ಲಿ ತಮ್ಮ ವಸತಿಯನ್ನು ನದಿ ದಡಗಳ ಮೇಲೆಯೇ ನಿರ್ಮಿಸಿಕೊಂಡರೆಂಬುದು ಸುವಿದಿತ. ಭಾರತದಲ್ಲಿ ಉತ್ತರದಲ್ಲಿ ಸಿಂಧೂ, ಗಂಗಾ, ಯಮುನಾ ನದಿಗಳ ದಡಗಳ ಮೇಲೆಯೇ ಅತ್ಯಂತ ಪುರಾತನ ನಗರಗಳು ನಿರ್ಮಾಣ ಗೊಂಡಿರುವುದು. ಜನಸಂಖ್ಯೆ ಹೆಚ್ಚಿದಂತೆ, ಕೃಷಿಗಾರಿಕೆ ವಿಸ್ತಾರಗೊಳ್ಳತೊಡಗಿದಂತೆ ಜನ ಒಳ ಪ್ರದೇಶಗಳಿಗೂ ಹರಡತೊಡಗಿದರು. ಆದರೆ ಅಲ್ಲೂ ಸಣ್ಣ ಪುಟ್ಟ ಹೊಳೆಗಳ ಬದಿಯಲ್ಲೇ ಆಸರೆ ಕಂಡುಕೊಂಡರು. ಜನಸಂಖ್ಯೆ ಇನ್ನೂ ಹೆಚ್ಚಾದಾಗ ಈ ನದಿ ಪ್ರದೇಶಗಳಿಂದಲೂ ಹೊರಟು ಜನ ಮಳೆ ನೀರು ಲಭ್ಯವಿರುವ ಎಡೆಗಳಿಗೆ ಹೋಗಿ ನೆಲಸ ತೊಡಗಿದರು. ಮಳೆ ಬಾರದ ದಿನಗಳಲ್ಲಿ ಬಳಸಲೋಸುಗ ಮಳೆ ನೀರನ್ನು ಸಂಗ್ರಹಿಸಿ ಇರಿಸಿಕೊಳ್ಳತೊಡಗಿದರು. ಮೊದಲು ಹಳ್ಳ ಕೊಳ್ಳಗಳಲ್ಲಿ ಸಹಜವಾಗಿಯೇ ಸಂಗ್ರಹವಾಗಿದ್ದ ನೀರನ್ನು ಜನರು ಬಳಸುತ್ತಿದ್ದವರು ಅನಂತರ ನೀರಿನ ಹರವಿಗೆ ಅಡ್ಡಲಾಗಿ ತಾವೇ ಮಣ್ಣಿನ ದಂಡೆಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸತೊಡಗಿದರು. ಹೀಗೆಯೇ ಕೆರೆ ಸರೋವರಗಳೂ ಅಣೆಕಟ್ಟು-ಜಲಾಶಯಗಳೂ ಅಸ್ತಿತ್ವಕ್ಕೆ ಬಂದುದು. ಕಟ್ಟಾ ಹಾಗೂ ಸಂಕುಚಿತ ಮನಸ್ಕ ಪರಿಸರವಾದಿಗಳು ಅಣೆಕಟ್ಟುಗಳನ್ನು ಎಷ್ಟೇ ಅಸಹನೆಯ ಬಯ್ಗುಳಗಳಿಂದ ವರ್ಣಿಸಿದರೂ, ಅವು ನೀರನ್ನು ಸಂಗ್ರಹಿಸಿಡುವ ಬಲು ದೊಡ್ಡ ಆಗರಗಳಷ್ಟೆ ಎಂಬುದನ್ನಂತೂ ಮರೆಯುವಂತಿಲ್ಲ.

ಹರಿದುಬರುವ ನೀರು ವ್ಯರ್ಥವಾಗಿ ಸಮುದ್ರಕ್ಕೆ



ನರ್ಮದಾ ಅಣೆಕಟ್ಟಿನ ನಿರ್ಮಾಣದ ಆರಂಭದ ದಿನಗಳಲ್ಲಿ

ಸೇರುವುದಕ್ಕೆ ಬಿಡುವ ಬದಲು ಮಧ್ಯೆ ಅಡ್ಡಕಟ್ಟು ನಿರ್ಮಿಸಿ ನೀರನ್ನು ಹೆಚ್ಚು ಉಪಯುಕ್ತವನ್ನಾಗಿ ಬಳಸುವ ವಿಚಾರ ಮಾನವನಿಗೆ ಬೀವರ್ ಪ್ರಾಣಿಯ ವೀಕ್ಷಣೆಯಿಂದ ಬಂದಿತೆಂದು ಹೇಳಲಾಗುತ್ತದೆ. ಅಮೆರಿಕದಲ್ಲಿರುವ ಸುಪ್ರಸಿದ್ಧ ಬೀವರ್ ಕಣಿವೆ ಇದಕ್ಕೆ ಮೂಕಸಾಕ್ಷಿಯಾಗಿ ನಿಂತಿದೆ. ಅತ್ಯಂತ ದೊಡ್ಡ ಅಣೆಕಟ್ಟೆಯಿಂದ ಹಿಡಿದು ಮಳೆ ನೀರು ಸಂಗ್ರಹಿಸಿಡುವ ಅತ್ಯಂತ ಸಣ್ಣ ತಟಾಕದವರೆಗೆ ಎಲ್ಲವೂ ನೀರು ಶೇಖರಣಾ ಕಟ್ಟಣೆಗಳಲ್ಲದೆ ಬೇರೇನೂ ಅಲ್ಲ. ಅವುಗಳ ನಡುವೆ ಪ್ರಮಾಣಗಳಲ್ಲಷ್ಟೆ ವ್ಯತ್ಯಾಸ ಉಂಟು. ಅವೆಲ್ಲವುಗಳ ಮೂಲ ಉದ್ದೇಶ ಒಂದೇ.

ಬಿ. ಎಸ್. ಭವಾನಿಶಂಕರ್


ಕೃಷಿ ಕಾರ್ಯಕ್ಕೆ ಹೆಚ್ಚು ಹೆಚ್ಚು ನೀರು ಬೇಕಾಗ ತೊಡಗಿದಾಗ ಮನುಷ್ಯನು ನದಿಯ ಹರಿವಿನ ದಿಕ್ಕನ್ನು ಬದಲಿಸಿ ಬೇರೆಡೆ ನೀರು ಸಂಗ್ರಹವಾಗುವಂತೆ ಮಾಡಿ ಅಲ್ಲಿಂದ ನೀರಿನ ಅಭಾವವಿರುವ ಭಾಗಗಳಿಗೆ ನೀರು ಒದಗಿಸುವ ಏರ್ಪಾಟು ಮಾಡತೊಡಗಿದ. ಹೀಗೆಯೇ ಸಾವಿರಾರು ವರ್ಷಗಳ ಹಿಂದೆ ಚೋಳ ರಾಜರು ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿದ ಬೃಹತ್ ಅಣೆಕಟ್ಟು ಅಸ್ತಿತ್ವಕ್ಕೆ ಬಂದುದು; ಉತ್ತರ ಭಾರತದಲ್ಲೂ ಇದೇ ರೀತಿ ಮೊಗಲ್ ದೊರೆಗಳು ಗಂಗಾ ಯಮುನಾ ನದಿಗಳಲ್ಲಿ ಪ್ರವಾಹ ಬಂದಾಗ ಉಬ್ಬಿ ಹರಿದ ನೀರನ್ನು ಕಾಲುವೆಗಳ ಮೂಲಕ ನೀರಿರದ ಪ್ರದೇಶಗಳಿಗೆ ಒಯ್ಯುವ ಕಾಲುವೆ ವ್ಯವಸ್ಥೆ ಮಾಡಿದುದು. ಜಲಾಭಾವ ಪರಿಸ್ಥಿತಿಗಳಿಂದ ಕ್ಷಾಮಗಳುಂಟಾದ ನಿದರ್ಶನಗಳು ಇತಿಹಾಸದಲ್ಲಿ ಬೇಕಾದಷ್ಟಿವೆ. ಆದರೆ ಆಗ ಜನಸಂಖ್ಯೆ ಕಡಿಮೆ ಇದ್ದುದರಿಂದ ಹಾಗೂ ಶೀಘ್ರ ಸುದ್ದಿ ಹರಡುವ ವ್ಯವಸ್ಥೆ ಇರದಿದ್ದುದರಿಂದ, ಆ ಕ್ಷಾಮಗಳ ಪ್ರಭಾವ ಅಷ್ಟಾಗಿ ಗೋಚರಕ್ಕೆ ಬರುತ್ತಿರಲಿಲ್ಲ. ಆದರೂ ರಾಜರುಗಳೂ ಜನನಾಯಕರುಗಳೂ ನಾನಾ ಗಾತ್ರಗಳ ಅನೇಕ ಕೆರೆ ಕೊಳಗಳನ್ನು ನಿರ್ಮಿಸಿದ, ನದಿಗಳ ದಿಕ್ಕು ಬದಲಿಸಿದ ನಿದರ್ಶನಗಳು ಇತಿಹಾಸದಲ್ಲಿ ಇಲ್ಲದಿಲ್ಲ. ಕಾಲ ಸಂದಂತೆ ನೀರಿನ ಲಭ್ಯತೆ ಹೆಚ್ಚು ನಂಬಲರ್ಹವಾಗುವಂತೆ ಮಾಡಲು ಹೆಚ್ಚು ಹೆಚ್ಚು ಯತ್ನ ಮಾಡಲಾಯಿತು. ಕೊಳಗಳೂ ಕೆರೆಗಳೂ ಚಿಕ್ಕವಾಗಿದ್ದಲ್ಲಿ ಬೇಸಿಗೆಯಲ್ಲಿ ಒಣಗಿ ಹೋಗುವ ಸಂಭವವಿದ್ದುದರಿಂದ ಅವನ್ನು ಹೆಚ್ಚು ದೊಡ್ಡವನ್ನಾಗಿ ಮಾಡಲಾಯಿತು. ಮಧ್ಯಭಾರತದಲ್ಲಿ ಭೋಜರಾಜನು ನಿರ್ಮಿಸಿದ ಭೋಪಾಲ್‌ತಾಲ್ (ಭೋಪಾಲ್ ಎಂಬ ನಗರದ ಹೆಸರು ಇದರಿಂದಲೇ ಬಂದುದು) ಅಂತಹ ಒಂದು ಅತಿ ದೊಡ್ಡ ಸರೋವರವಾಗಿದ್ದಿತು (ಇಂದು ಇದು ಅಸ್ತಿತ್ವದಲ್ಲಿಲ್ಲ). ಇದೇ ರೀತಿ ರಾಜಸ್ತಾನದಲ್ಲಿ ೩೦೦ ವರ್ಷಗಳ ಹಿಂದೆ ಅಲ್ಲಿನ ರಾಜ ನಿರ್ಮಿಸಿದ್ದ ಮಹಾಸಮಂದ್ ಸರೋವರವು ಎಂದೂ ಒಣಗದಿದ್ದಿತು. ಈ ವರ್ಷವಷ್ಟೇ ಅದು ಮೊದಲ ಬಾರಿಗೆ ನೀರಿಲ್ಲದಂತಾಗಿದೆ.

೧೮-೧೯ನೇ ಶತಮಾನಗಳಲ್ಲಿ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಇದ್ದಾಗಲೂ ದೇಶಾದ್ಯಂತ ಅನೇಕ ಬಾರಿ ಉಗ್ರ

ಜಲಕ್ಷಾಮ ತಲೆದೋರಿ ಲಕ್ಷಾಂತರ ಜನ ಸಾವಿಗೀಡಾದರು. ಆಗ ಈಸ್ಟ್ ಇಂಡಿಯಾ ಕಂಪೆನಿ ದಕ್ಷಿಣದಲ್ಲಿ ಕೃಷ್ಣ ಗೋದಾವರಿ ನದಿಗಳ ಹಾಗೂ ಉತ್ತರದಲ್ಲಿ ಗಂಗಾ, ಯಮುನಾ, ಸಿಂಧು ಮತ್ತವುಗಳ ಉಪನದಿಗಳ ಸಮೃದ್ಧ ಜಲರಾಶಿಯನ್ನು ಜಲಾಭಾವ ಪ್ರದೇಶಗಳಿಗೆ ಸಾಗಿಸಲು ಭಾರಿ ಕಾಲುವೆಗಳನ್ನು ನಿರ್ಮಿಸಿತು. ಅದೇ ರೀತಿ ರಾಜರುಗಳು ಆಳುತ್ತಿದ್ದ ಸಂಸ್ಥಾನಗಳಲ್ಲೂ ಆಗಾಗ್ಗೆ ತಲೆದೋರುತ್ತಿದ್ದ ಕ್ಷಾಮಗಳನ್ನು ತಪ್ಪಿಸಲು ಪ್ರಥಮ ಭಾರತೀಯ ನೀರಾವರಿ ಆಯೋಗದ ಶಿಫಾರಸು ಮೇರೆಗೆ ಅನೇಕ ಅಣೆಕಟ್ಟುಗಳನ್ನು ನಿರ್ಮಿಸಲಾಯಿತು. ಹೀಗೆ ಕ್ಷಾಮ ಡಾಮರಗಳು ಪದೇ ಪದೇ ಸಂಭವಿಸುವುದನ್ನು ಕೊನೆಗಾಣಿಸಲಾಯಿತು.

ಭಾರತ ಸ್ವಾತಂತ್ರ್ಯ ಗಳಿಸಿಕೊಂಡಾಗಲೂ ದೇಶ ಇನ್ನೂ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಲೇ ಇದ್ದಿತು. ಇದು ಬ್ರಿಟಿಷರು ತಮ್ಮ ಸ್ವಂತ ಹಿತಕ್ಕಾಗಿ ಅನುಷ್ಠಾನಕ್ಕೆ ತಂದ ಪರಿಪಾಠವಾಗಿದ್ದಿತು. ಆದರೆ ನೆಹರೂರವರ ನಾಯಕತ್ವದಲ್ಲಿ ದೇಶದ ಆರ್ಥಿಕತೆಯ ಪುನರ್ ನಿರ್ಮಾಣ ಕಾರ್ಯ ಕೈಗೊಂಡಾಗ ಪ್ರಶಸ್ತ ವಿದೇಶೀ ವಿನಿಮಯ ಉಳಿಸಲೋಸುಗ ದೇಶದಾದ್ಯಂತ ಬೃಹತ್ ಪ್ರಮಾಣದ ನದಿ ಕಣಿವೆ ಪ್ರಾಯೋಜನೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಯಿತು. ಇದರ ಫಲವಾಗಿ ದೇಶವು ಆಹಾರ ಧಾನ್ಯೋತ್ಪಾದನೆಯಲ್ಲಿ ಸ್ವಯಂ ಪರಿಪೂರ್ಣತೆಯನ್ನು ಸಾಧಿಸಿತಷ್ಟೇ ಅಲ್ಲ, ರಫ್ತು ಮಾಡುವ ಸಾಮರ್ಥ್ಯವನ್ನೂ ಗಳಿಸಿತು. ಆದರೆ ಬ್ರಿಟಿಷರ ಕಾಲದಲ್ಲಿದ್ದಂತೆ ಭಾರೀ ಯೋಜನೆಗಳಿಗೇ ಒತ್ತು ಕೊಡುವ ಮತ್ತು ನದಿಗಳ ನೀರಿನ ನಿಯಂತ್ರಣ ಸರಕಾರದ ಕೈಗಳಲ್ಲೇ ಕೇಂದ್ರೀಕರಿಸುವ ನೀತಿಯೇ ಮುಂದುವರಿಯಿತು. ಇದರಿಂದಾಗಿ ಹಿಂದೆ ರಾಜರುಗಳೂ ಪಾಳೆಗಾರರುಗಳೂ ತಮ್ಮ ಪ್ರದೇಶಗಳ ಜನರ ಬಳಕೆಗಾಗಿ ಸಣ್ಣ ಪುಟ್ಟ ಕೆರೆ ಕೊಳಗಳನ್ನು ನಿರ್ಮಿಸುತ್ತಿದ್ದ ಅಭ್ಯಾಸ ಬಿಟ್ಟುಹೋಯಿತು.

ಭಾರಿ ಪ್ರಮಾಣದ ನೀರಾವರಿ ಯೋಜನೆಗಳು ಹೆಚ್ಚು ನಂಬಲರ್ಹವೆನಿಸಿಕೊಂಡದ್ದರಿಂದ ಸರಕಾರವೂ ಜನರೂ ಸಣ್ಣ ಪುಟ್ಟ ಕೆರೆ ಕೊಳಗಳನ್ನು ನಿರ್ಮಿಸುವುದನ್ನು ಬಿಟ್ಟು ಭಾರಿ ಅಣೆಕಟ್ಟುಗಳ ಕಡೆಗೇ ಗಮನ ಹರಿಸಿದರು. ಅನಾದಿಕಾಲದಿಂದ ಇದ್ದುಕೊಂಡು ಬಂದಿದ್ದಂಥ ಸಣ್ಣ ಪುಟ್ಟ ಕೆರೆ ಕೊಳಗಳನ್ನು ನಿರ್ಲಕ್ಷಿಸಲಾಯಿತು. ಇದೊಂದು ಭಾರಿ ತಪ್ಪಾಯಿತು. ಬೃಹತ್ ಪ್ರಮಾಣದ ಯೋಜನೆಗಳ ಜೊತೆಗೇ ಸಣ್ಣ ಪುಟ್ಟ ನಿರ್ಮಾಣಗಳನ್ನು ಉಳಿಸಿಕೊಂಡು ಬರಬೇಕಿದ್ದಿತು. ಈ ನಷ್ಟಕ್ಕೆ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು, ಗ್ರಾಮಾಂತರ ಜನರನ್ನು ದೂಷಿಸಬೇಕಷ್ಟೆ. ಈ ಲೋಪದ ನೇರ ಫಲವೇ ಇಂದು ದೇಶ ಎದುರಿಸುತ್ತಿರುವ ಭಾರಿ ಜಲಕ್ಷಾಮ.



ನರ್ಮದಾ ಅಣೆಕಟ್ಟು - ಒಂದು ಭಾಗ

ಆದರೂ ಕೆಲವು ಭಾಗಗಳಲ್ಲಿ ಹಳೆಯ ಪರಂಪರೆಗೂ ಸಮುದಾಯ ಯತ್ನಗಳಿಗೂ ಗಮನ ನೀಡಿದ್ದೂ ಉಂಟು. ಉದಾಹರಣೆಗೆ, ಆಳ್ವಾರ್‌ನಲ್ಲಿ ಆಳ್ವಾರಿ ನದಿ ಪ್ರದೇಶ, ಮಹಾರಾಷ್ಟ್ರದಲ್ಲಿ ರಲೆಗಾಂವ್-ಸಿದ್ದಿ ಪ್ರದೇಶ ಮತ್ತು ಗುಜರಾತ್‌ನಲ್ಲಿ ಕೆಲವು ಪ್ರದೇಶಗಳು. ಇಲ್ಲಿನ ಜನ ತೋರಿದ ಉಪಕ್ರಮಗಳ ಫಲವಾಗಿ ಜಲಾಭಾವ-ಪೀಡಿತ ಪ್ರದೇಶಗಳ ನಡುವೆಯೂ ಇಲ್ಲಿ ಹಸುರು ಕಂಗೊಳಿಸುತ್ತಿದೆ ಮತ್ತು ನೀರು ಲಭ್ಯವಿದೆ. ಇದೇ ಸಮಯದಲ್ಲಿ ಮತ್ತೊಂದು ಅಂಶವನ್ನೂ ಗಮನಕ್ಕೆ ತಂದುಕೊಳ್ಳಬೇಕು. ಕಳೆದ ಸುಮಾರು ಮೂವತ್ತು ವರ್ಷಗಳಲ್ಲಿ ಕೆಲವು ವ್ಯಕ್ತಿಗಳೂ, ಗುಂಪುಗಳೂ ಅಣೆಕಟ್ಟುಗಳ ವಿರುದ್ಧ ಭಾರಿ ಚಳವಳಿಯನ್ನೇ ಪ್ರಾರಂಭಿಸಿರುವುದು ಒಂದು ವಿಪರ್ಯಾಸವಾಗಿದೆ. ಭಾರಿ ಅಣೆಕಟ್ಟುಗಳ ನಿರ್ಮಾಣದಿಂದ ಅನೇಕ ಬುಡಕಟ್ಟು ಜನಾಂಗಗಳು ಸ್ಥಳಾಂತರಗೊಳ್ಳಬೇಕಾಗುತ್ತವೆ. ಅವರ ಜೀವನ ಶೈಲಿ ಬದಲುತ್ತದೆ, ಹಳ್ಳಿಗಳೂ ಕಾಡುಗಳೂ ಮುಳುಗಿ ಹೋಗಿ ಪರಿಸರಕ್ಕೆ ಧಕ್ಕೆ ಉಂಟಾಗುತ್ತದೆ, ಎಂಬುದು ಇವರ ವಾದ. ನದಿ ಸಮೀಪ ವಾಸಿಸುತ್ತಿರುವ ಮಾತ್ರಕ್ಕೆ ನದಿಗಳು ಅವರ ಸ್ವಂತ ಆಸ್ತಿಯಾಗುತ್ತವೆಯೆ? ನರ್ಮದಾ ನದಿಯ ಪ್ರಸಂಗದಲ್ಲಾಗುತ್ತಿರುವಂತೆ, ನದಿಯ ನೀರನ್ನು ವ್ಯರ್ಥವಾಗಿ ಸಮುದ್ರಕ್ಕೆ ಹರಿಯಬಿಡುವುದು ತರವೇ? ನದಿಯು ದೇಶದ ಒಂದು ನೈಸರ್ಗಿಕ ಆಸ್ತಿ. ಹತ್ತಿರದಲ್ಲಿರುವವರಿಗಷ್ಟೇ ಅಲ್ಲ, ದೂರದಲ್ಲಿ ವಾಸಿಸುತ್ತಿರುವವರಿಗೂ ಅದರ ಪ್ರಯೋಜನ ಲಭಿಸುವಂತಾಗಬೇಕು. ಬುಡಕಟ್ಟುಗಳ ಜನರು ಆಧುನಿಕ ವಿಜ್ಞಾನ ಹಾಗೂ ಯಂತ್ರಕಲೆಗಳ ಫಲಗಳನ್ನು ಅನುಭವಿಸದೆಯೇ ಉತ್ತಮ ಆರೋಗ್ಯ ಹಾಗೂ ಜೀವನದ ಗುಣಮಟ್ಟ ಪಡೆದುಕೊಳ್ಳದೆಯೇ, ಹಿಂದಿನಂತೆಯೇ ಗುಡ್ಡಗಾಡು ಜೀವನವನ್ನೇ ನಡೆಸುತ್ತ ಹೋಗಬೇಕೆಂದು ವಾದಿಸುವುದು ಎಷ್ಟರ ಮಟ್ಟಿಗೆ ಸರಿ? ಅವರು ಸ್ವಂತ ಯತ್ನದಿಂದಲೋ ಅಥವಾ ಬೇರಾವುದೋ ಬಾಹ್ಯ ಬಲಾತ್ಕಾರದ ಫಲವಾಗಿಯೋ ಬೇರೆ ಸ್ಥಳಗಳಿಗೆ ಹೋಗಿ ಹೆಚ್ಚು ಉತ್ತಮ ಬಾಳು ನಡೆಸುವಂತೆ ಉತ್ತೇಜಿಸುವುದು ಒಳಿತಲ್ಲವೇ? ಇಲ್ಲಿ ಅವಶ್ಯವಾದುದು ಏನೆಂದರೆ –ಸರಕಾರವು ಹೆಚ್ಚು ಜನರ ಒಳಿತಿಗಾಗಿ ಯಾವುದೇ ಕಾರ್ಯ ಕೈಗೊಂಡಾಗ ಅದರಿಂದ ತೊಂದರೆಗೆ, ನಷ್ಟಕ್ಕೆ ಒಳಗಾಗುವ ಜನರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂಬುದು. ಸ್ಥಳಾಂತರಿಸಿದ ಜನರಿಗೆ ಹೊಸ ಸ್ಥಳದಲ್ಲಿ ಹೆಚ್ಚು ಉತ್ತಮ ಜೀವನಾವಕಾಶವನ್ನು ಸರಕಾರ ತನ್ನ ಖರ್ಚಿನಲ್ಲೇ ಒದಗಿಸಿಕೊಡಬೇಕು. ಇಂತಹ ಒತ್ತಾಯಗಳನ್ನು ಹಾಕದೆ ಕೇವಲ ಬೃಹತ್ ಅಣೆಕಟ್ಟುಗಳ ನಿರ್ಮಾಣವನ್ನು ಹಟಮಾರಿತನದಿಂದ ಸಾರಾಸಗಟು ವಿರೋಧಿಸುವುದು ಸರಿಯಲ್ಲ. ನಿಜ, ಪರಿಸರ ಹಾಗೂ ಜೀವವೈಜ್ಞಾನಿಕ ಪರಿಗಣನೆಗಳ ಕಡೆಗೂ ಸಾಕಷ್ಟು ಗಮನ ನೀಡಲೇಬೇಕು.

ನದಿಯ ನೀರಿನ ಬಳಕೆಯ ಮೂಲಕ ಸರ್ವರಿಗೂ ಪ್ರಯೋಜನವಾಗುವಂಥ ಅಭಿವೃದ್ಧಿಶೀಲ ಪ್ರಾಯೋಜನಗಳ ಕಡೆಗೆ ಗಮನ ಹರಿಸಿ ಆ ನಿಟ್ಟಿನಲ್ಲಿ ತಮ್ಮ ಕೈಲಾದಷ್ಟು ಕಾಣಿಕೆ ಸಲ್ಲಿಸುವ ಬದಲು, ತಮ್ಮ ಸ್ವಂತ ಪ್ರಾಮುಖ್ಯ ಗಳಿಸಲೋಸುಗ ಕೇವಲ ವಿರೋಧಕ್ಕಾಗಿಯೇ ವಿರೋಧಿಸುವುದು ಇಂದಿನ ಜಲಕ್ಷಾಮ ಪರಿಸ್ಥಿತಿಗಳಲ್ಲಿ ಒಳಿತಿಗಿಂತ ಹೆಚ್ಚು ಕೆಡುಕನ್ನೇ ಉಂಟುಮಾಡಿದೆ. ಕಳೆದ ೨-೩ ದಶಕಗಳಲ್ಲಿ ಜಲಸಂಪನ್ಮೂಲಗಳನ್ನು ಬಳಕೆಗೆ ರೂಢಿಸುವ ಪ್ರಯತ್ನ ಹಿಂದೆ ಬಿದ್ದಿದೆ. ದೇಶದ ಜನಸಂಖ್ಯೆ ತಡೆ ಇಲ್ಲದೆ ಹೆಚ್ಚುತ್ತ ಹೋಗುತ್ತಿದೆ. ಆದರೆ ನೀರಿನ ಲಭ್ಯತೆ ಅಷ್ಟೇ ಪ್ರಮಾಣದಲ್ಲಿ ಹೆಚ್ಚುತ್ತಿಲ್ಲ. ವಿವಿಧ ರಾಜ್ಯಗಳ ನಡುವೆ ನದಿ ನೀರಿನ ಬಳಕೆ ಕುರಿತ ವಿವಾದಗಳಿಗೆ ನೇಮಕ ಗೊಂಡ ನ್ಯಾಯಪೀಠಗಳು ತೀರ್ಪು ನೀಡುವಲ್ಲಿ ತಡವಾಗುತ್ತಿರುವುದೂ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಿದೆ.

ಇಂದು ಮುಖ್ಯವಾಗಿ ಆಗಬೇಕಾದುದೆಂದರೆ – ಸಣ್ಣ ಪುಟ್ಟ ಕೆರೆ ಕೊಳಗಳ ನಿರ್ಮಾಣದಿಂದ ಕೂಡಿದ ಪಾರಂಪರಿಕ ಜಲ ಬಳಕೆ ವಿಧಾನಗಳನ್ನೂ ಭಾರಿ ಅಣೆಕಟ್ಟುಗಳ ಆಧುನಿಕ ತಾಂತ್ರಿಕ ಆವಿಷ್ಕರಣೆಗಳನ್ನೂ ಔಚಿತ್ಯಪೂರ್ಣವಾಗಿ ಜೊತೆ ಗೂಡಿಸಿಕೊಂಡು ಒಂದು ಸಮಗ್ರ ಕಾರ್ಯ ಯೋಜನೆಯನ್ನು ಅನುಷ್ಠಾನಕ್ಕೆ ತರುವುದಾಗಿದೆ. ಭಾರಿ ಅಣೆಕಟ್ಟುಗಳ ನಿರ್ಮಾಣವನ್ನು ವಿರೋಧಿಸುವ ಪರಿಸರವಾದಿಗಳೂ, ಕೇವಲ ಭಾರಿ ಅಣೆಕಟ್ಟುಗಳ ನಿರ್ಮಾಣಕ್ಕೆ ಗಮನ ನೀಡುತ್ತಿರುವ ಸರಕಾರೀ ಅಧಿಕಾರಶಾಹಿಯೂ ತಮ್ಮ ಮೂಗಿನ ನೇರಕ್ಕೆ ವಾದ ಮಾಡುತ್ತ ಹೋಗುತ್ತಿರುವುದು ಇಂದಿನ ಆತಂಕ ಪರಿಸ್ಥಿತಿಗೆ ಮೂಲ ಕಾರಣವಾಗಿದೆ.

ಆದರೂ ಪರಿಸರವಾದಿಗಳ ವಿರೋಧದ ಫಲವಾಗಿಯೇ ಎನ್ನಬೇಕು, ಸರಕಾರಗಳು ಈಗ ಸಮಗ್ರ ರೀತಿಯಲ್ಲಿ ಯೋಚಿಸತೊಡಗಿರುವುದು ಒಂದು ಉತ್ತಮ

ಬೆಳವಣಿಗೆಯಾಗಿದೆ. ಉದಾಹರಣೆಗೆ, ಕರ್ನಾಟಕ ಸರಕಾರವು ಸುಮಾರು ೩೬,೭೦೦ ಕೆರೆ ಕೊಳಗಳನ್ನು ಪುನರುಜ್ಜೀವನಗೊಳಿಸುವ ಮೂಲಕ ನೀರಿನ ಬಳಕೆಯಲ್ಲಾಗಿರುವ ಅಸಮತೋಲವನ್ನು ಸರಿಪಡಿಸಲು ಹವಣಿಸಿದೆ. ಅದು ಮುಂದಿನ ಐದು ವರ್ಷಗಳಲ್ಲಿ ೫೦೦ ಕೊಳಗಳನ್ನು ತದನಂತರ ಸುಮಾರು ೨೫,೦೦೦ ಕೊಳಗಳನ್ನು ವಿಶ್ವಬ್ಯಾಂಕ್ ನೆರವಿನಿಂದ ಪುನಶ್ಚೇತನ ಗೊಳಿಸಲು ಯೋಜನೆ ಹಾಕಿಕೊಂಡಿದೆ. ಇದರ ಜೊತೆಗೆ ಜಲಾನಯನ ಭೂಮಿ ಬೆಳವಣಿಗೆ ಮತ್ತಿತರ ತತ್ಸಂಬಂಧಿತ ಯೋಜನೆಗಳನ್ನು ಅದು ಸಮ್ಮಿಳನಗೊಳಿಸಿ ನಿರ್ಮಿಸಲು ಯತ್ನಿಸುತ್ತಿದೆ.

ಕಳೆದ ಒಂದುನೂರು ವರ್ಷಗಳಲ್ಲಿ ಭೂಮಿಯ ಮೇಲ್ಮೈ ನೀರಿನ ಬಳಕೆಯಲ್ಲಿ ಉಂಟಾದ ಅಸಮತೋಲನವು ಜಲಕ್ಷಾಮ ಪರಿಸ್ಥಿತಿಗಳನ್ನು ಎದುರಿಸುವ ನಮ್ಮ ಸಾಮರ್ಥ್ಯಕ್ಕೆ ಕುಂದುಂಟು ಮಾಡಿದೆ. ಭೂಮಿಯ ಮೇಲ್ಮೈ ಮೇಲಿನ ನೀರಿನ ಬಳಕೆಯ ಭಾರಿ ಯೋಜನೆಗಳಿಗೆ ಹೋಲಿಸಿದಂತೆ, ನೆಲದಡಿಯ ನೀರಿನ ಬಳಕೆ ಕಮ್ಮಿ ಖರ್ಚಿನಲ್ಲಿ ಹೆಚ್ಚು ಸುಲಭವಾಗಿ ಲಭಿಸುವುದರಿಂದ ಇಂದು ಅದಕ್ಕೇ ಹೆಚ್ಚು ಒತ್ತು ಕೊಟ್ಟಿರುವುದೇ ಭಾರಿ ತಪ್ಪಾಗಿದೆ. ಇದರ ಜೊತೆಗೆ ಕೆಲವು ಸರಕಾರಗಳು ಚುನಾವಣೆಗಳಲ್ಲಿ ಗ್ರಾಮಾಂತರ ಜನರ ಮತ ಗಳಿಸುವ ಉದ್ದೇಶದಿಂದ ನೀರಾವರಿ ಪಂಪ್ ಸೆಟ್ಟುಗಳಿಗೆ ಉಚಿತ ಇಲ್ಲವೇ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸುತ್ತಿರುವುದು ಮತ್ತೊಂದು ಮಹಾಪರಾಧವಾಗಿದೆ. ಇದರಿಂದ ಗ್ರಾಮಾಂತರ ಪರಿಸ್ಥಿತಿ ಹದಗೆಡುತ್ತಿದೆ. ಸ್ಥಳೀಯ ಮಳೆನೀರಿನ ಪ್ರಮಾಣಕ್ಕಿಂತ ಹೆಚ್ಚಾಗಿ ನೆಲದಡಿ ನೀರನ್ನು ಪಂಪ್ ಮಾಡಲಾಗುತ್ತಿರುವುದರಿಂದ ನೆಲದಡಿ ಜಲರಾಶಿ ಶೀಘ್ರವಾಗಿ ನಶಿಸುತ್ತಿದೆ. ಅಷ್ಟೇ ಅಲ್ಲ, ಆಳ ನೀರಿನ ಬಸಿತದಿಂದಾಗಿ ಮಳೆ ನೀರು ನೆಲದ ಮೇಲೆ ಹರಿದು ಕೆರೆಕೊಳ್ಳಗಳನ್ನು ತುಂಬುವ ಪ್ರಕ್ರಿಯೆಯೂ ನಾಶಗೊಂಡಿದೆ. ಯಾವುದೇ ಪ್ರದೇಶದಲ್ಲಿ ನೆಲದಡಿಯ ಅಥವಾ ನೆಲದ ಮೇಲಿನ ನೀರಿನ ಬಳಕೆಗೆ ಆ ಪ್ರದೇಶದಲ್ಲಿ ಎಷ್ಟು ಪ್ರಮಾಣದಲ್ಲಿ ಮಳೆ ಬೀಳುತ್ತಿದೆ ಎಂಬುದಷ್ಟೆ ಅಳತೆಗೋಲಾಗಿರಬೇಕು.

ಉಚಿತವಾಗಿ ಅಥವಾ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಸರಬರಾಜಾಗುತ್ತಿರುವುದರಿಂದ ಗ್ರಾಮಾಂತರದಲ್ಲಿ ರೈತರು ಎಗ್ಗಿಲ್ಲದಂತೆ ಪಂಪು ಚಾಲನೆ ಮಾಡಿ ಭಾರಿ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ವ್ಯಯ ಮಾಡುತ್ತಿರುವುದಲ್ಲದೆ ಭೂಮಿಯ ಸಾರ ನಾಶಗೊಳ್ಳುವುದಕ್ಕೂ ಪರಿಸರ ಮಾಲಿನ್ಯಕ್ಕೂ ಕಾರಣರಾಗುತ್ತಿದ್ದಾರೆ. ಏಕೆಂದರೆ ನೆಲದಡಿಯ ನೀರನ್ನು ಕೊಳವೆ ಬಾವಿಗಳಿಂದ ಹೆಚ್ಚಾಗಿ ಹೊರಹೊಯ್ದಂತೆ ಅಲ್ಲಿಗೆ ಇತರ ಪ್ರದೇಶಗಳಿಂದ ಕಲುಷಿತ ಹಾಗೂ ಉಪ್ಪು ನೀರು ಹರಿದು ಬಂದು ಸೇರುವುದಕ್ಕೆ ಆಸ್ಪದವಾಗುತ್ತದೆ. ಕೇಂದ್ರ ಸರಕಾರವು ಕೆಲವು ದಶಕಗಳ ಹಿಂದೆಯೇ ನೆಲದಡಿ ನೀರಿನ ಬಳಕೆಗೆ ಸಂಬಂಧಿಸಿ ನಿಯಂತ್ರಣ ಮಸೂದೆಯೊಂದನ್ನು ತಯಾರಿಸಿದ್ದರೂ ಅನೇಕ ರಾಜ್ಯಗಳು ಅದನ್ನಿನ್ನೂ ಕಾನೂನನ್ನಾಗಿ ಮಾಡಿಲ್ಲ. ಹೆಚ್ಚು ಹೆಚ್ಚು ಹತ್ತಿರವಾಗಿ ಹಾಗೂ ಕೆರೆ ಕೊಳಗಳ ಸಮೀಪದಲ್ಲಿ ಆಳ ಕೊಳವೆ ಬಾವಿಗಳನ್ನು ತೋಡುತ್ತಿರುವುದರಿಂದ ತೆರೆದ-ಬಾವಿಗಳೂ ಕೊಳಗಳೂ ಬತ್ತಿ ಹೋಗಿ ಗ್ರಾಮಾಂತರಗಳಲ್ಲಿ ಬಡಜನರು ಕಷ್ಟಕ್ಕೊಳಗಾಗಿದ್ದಾರೆ. ಹಾಗಾಗಿ ತಕ್ಷಣದ ಜನಪ್ರಿಯತೆ ಗಳಿಸುವುದಕ್ಕಾಗಿ ಆಡಳಿತಾರೂಢ ಸರಕಾರಗಳು ಗ್ರಾಮಾಂತರಗಳಲ್ಲಿ ರೈತರಿಗೆ ಪಂಪ್‌ಚಾಲನೆಗಾಗಿ ಉಚಿತವಾಗಿ ಇಲ್ಲವೇ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿರುವುದೇ ಇಂದಿನ ಜಲಕ್ಷಾಮ ಪರಿಸ್ಥಿತಿಗೆ ಹಾಗೂ ಬಡರೈತರ ಸಂಕಷ್ಟಕ್ಕೆ ಮೂಲಕಾರಣವೆಂದು ಹೇಳಿದಲ್ಲಿ ತಪ್ಪಾಗಲಾರದು.

ಜಲಕ್ಷಾಮಗಳು ಹಿಂದೆಯೂ ಇದ್ದಂಥವೇ. ಅವೇನೂ ಅನಿರೀಕ್ಷಿತವಾಗಿ ಹಠಾತ್ತನೆ ಬಂದೆರಗುವುದಿಲ್ಲ. ಹಿಂದೆ ತುಂಬ ಆಳ ಬಾವಿ ತೋಡುವ ಸಾಧನಗಳೂ ಇರಲಿಲ್ಲ. ವಿದ್ಯುತ್ ಸರಬರಾಜು ಕಡಿಮೆಯಾಗಿದ್ದಿತು. ಹಾಗಾಗಿ ನೆಲದಡಿ ನೀರು ಬತ್ತಿ ಹೋಗುವ ಪ್ರಮೇಯ ಇರಲಿಲ್ಲ. ತೆರೆದ ಬಾವಿ ಹಾಗೂ ಕೊಳಗಳೇ ಸಾಕಷ್ಟು ನೀರು ಒದಗಿಸುತ್ತಿದ್ದವು. ಆದ್ದರಿಂದ ಇಂದು ನೀರಾವರಿ ಪಂಪ್ ಸೆಟ್ಟುಗಳಿಗೆ ನೀಡುತ್ತಿರುವ ಉಚಿತ ವಿದ್ಯುತ್ ಸರಬರಾಜು ತಕ್ಷಣವೇ ನಿಲ್ಲಬೇಕು. ನೆಲದಡಿ ನೀರಿನ ಕೊರತೆ ಇರುವಂಥ ಪ್ರದೇಶಗಳಲ್ಲಿ ಆಳದ ಕೊಳವೆ ಬಾವಿಗಳನ್ನು ತೋಡುವುದನ್ನು ನಿಷೇಧಿಸಬೇಕು. ಮಧ್ಯಪ್ರದೇಶದ ದೇವಾಸ್ ಜಿಲ್ಲೆಯಲ್ಲಿ ಹೀಗೆಯೇ ಮಾಡಲಾಗಿದೆ. ನೀರಾವರಿಗಾಗಿ ವಿದ್ಯುಚ್ಛಕ್ತಿಯನ್ನು ಹಗಲಿನ ಹೊತ್ತಷ್ಟೇ ಒದಗಿಸಬೇಕು. ಅದು ತೆರೆದ ಬಾವಿಗಳಿಂದಷ್ಟೆ ನೀರನ್ನು ಪಂಪ್ ಮಾಡಬೇಕೆಂದು ನಿಗದಿಪಡಿಸಬೇಕು. ನೆಲದ ಮೇಲಿನ ಮಳೆ ನೀರು ಈ ತೆರೆದ ಬಾವಿಗಳನ್ನು ತುಂಬುವುದರಿಂದ ಮಳೆ ನೀರನ್ನಷ್ಟೆ ನೀರಾವರಿಗೆ ಬಳಸಿದಂತಾಗುತ್ತದೆ.

ಹಗಲು ಹೊತ್ತು ವಿದ್ಯುತ್ ಸರಬರಾಜಿಗಾಗಿ ಪಂಪ್ ಸ್ಟೋರೇಜ್ ಯೋಜನೆಗಳನ್ನು ಜಾರಿಗೆ ತರಬೇಕು ಮತ್ತು ವಿದ್ಯುತ್ ಸರಬರಾಜಿಗಾಗಿ ರೈತರಿಂದ ಹಣ ವಸೂಲು ಮಾಡಬೇಕು. ರೈತರು ಹಗಲು ಹೊತ್ತಷ್ಟೆ, ಹೆಚ್ಚು ಫಸಲು ಪಡೆಯಲು ಬೇಕಾಗುವಷ್ಟೆ ನೀರನ್ನು ಪಂಪ್ ಮಾಡಬೇಕು ಮತ್ತು ಇದಕ್ಕೆ ಹಣ ನೀಡಲೂ ಸಿದ್ಧರಿರಬೇಕು. ಇದು ಬೇಕಾಬಿಟ್ಟಿ ವಿದ್ಯುಚ್ಛಕ್ತಿಯ ಹಾಗೂ ನೀರಿನ ಬಳಕೆಯನ್ನೂ ಅದಕ್ಕಾಗಿ ಹಣ ನೀಡಲು ರೈತರ ಕೈಲಾಗದಿರುವುದನ್ನೂ ತಪ್ಪಿಸುತ್ತದೆ.

ಇಂದು ದೇಶದಲ್ಲಿ ಹೆಚ್ಚು ಅಗತ್ಯವಾಗಿರುವುದು ಒಂದು ಸೂಕ್ತ ರಾಷ್ಟ್ರವ್ಯಾಪೀ ಜಲನೀತಿ, ಭೂ ಬಳಕೆ ನೀತಿ ಹಾಗೂ ವಿದ್ಯುತ್ ಸರಬರಾಜು ನೀತಿ. ಈ ಒಂದು ನೀತಿ ಇನ್ನೊಂದಕ್ಕೆ ಬೆಂಬಲ ನೀಡುವಂತಿರಬೇಕು. ಅವು ವಿವೇಕಯುತವಾಗಿ ಸಮ್ಮಿಳನಗೊಂಡಿರಬೇಕು. ಇದರಿಂದ ಜನರಿಗೂ ರೈತರಿಗೂ ಸಂಪತ್ತಿನ ಅಭಿವೃದ್ಧಿಗೆ ಅವಕಾಶವೂ ಒದಗುತ್ತದೆ, ಹಣ ನೀಡುವ ಸಾಮರ್ಥ್ಯವೂ ಒದಗುತ್ತದೆ. ಮುಂದೆ ಶತ ಶತಮಾನಗಳ ಕಾಲ ಪರಿಸರ ರಕ್ಷಣೆಯ ಸೂಕ್ತ ಪರಿಸ್ಥಿತಿಯೂ ಉಂಟಾದಂತಾಗುತ್ತದೆ.

ಶ್ರೀ ಬಿ. ಎಸ್. ಭವಾನಿಶಂಕರ್
ನಂ. ೭೬, ೭ನೇ ಮೇನ್, ೪ನೇ ಕ್ರಾಸ್
ಕೆ.ಎಸ್. ಆರ್.ಟಿ.ಸಿ. ಲೇಔಟ್, ಜೆ.ಪಿ. ನಗರ, ೨ನೇ ಹಂತ
ಬೆಂಗಳೂರು - ೫೬೦ ೦೭೮

ಸೀಜರನ ಸ್ವಗತ

ನನ್ನ ವಧೆಗೆ, ತೇಜೋವಧೆಗೆ
ಕತ್ತಿ ಮಸೆಯುತ್ತಿರುವ
ಮದ್ದು ಅರೆಯುತ್ತಿರುವ
ಬರೀ ಬ್ರೂಟಸರ ಮಧ್ಯೆ ಅರಸುತ್ತಿದ್ದೇನೆ
ಆತುರದಿಂದ ಕಾತುರದಿಂದ, ಓರ್ವನಾದರೂ
ಗೆಳೆಯ, ಸಹೃದಯ ಆ್ಯಂಟೊನಿ
ಕಾಣ ಸಿಗುವನೆ ಎಂದು !
ಹಿತೈಷಿಗಳೆಂದು ಬಗೆದವರು
ನನ್ನಿಂದ ಏನೆಲ್ಲ ಪಡೆದವರು
ಸೊಂಪಾಗಿ ಬೆಳೆದವರು
ಇಂಪಾಗಿ ಉಲಿದವರು
ಬ್ರೂಟಸ್ ಪ್ರಚೋದನೆಯಿಂದ
ಗುಂಪಿನಲಿ ಗುಂಪಾಗಿ
ನನ್ನ ವಿರುದ್ಧ ದನಿ ಎತ್ತಿ
ಸಹೃದಯತೆ ಬದಿಗೊತ್ತಿ
ಬೆದ್ದು ಗೆದ್ದವರಂತೆ
ಮುಂದಾಗಿದ್ದಾರೆ
ನನ್ನ ವಧೆಗೆ !

ಅಯ್ಯೋ ಬ್ರೂಟಸ್
ಸಹೃದಯನೆಂದೇ ನಂಬಿದ್ದೆ ನಿನ್ನ !
ನನ್ನ ತೇಜೊವಧೆಯಲ್ಲಿ ಸಧ್ಯ
ನೀನು ಸಫಲವಾದರೂ ಕೂಡ
ನೆನಪಿಡು ಒಂದು ಮಾತು
ಈಡೇರದು ನಿನ್ನ ಹೇತು !

ಸತ್ತೇ ಹೋಗುತ್ತಿರುವೆ ನಾನಂತು
ಬಿಡು ನನ್ನ ಮಾತು !
ನನ್ನ ಹಿರಿಮೆ ಗರಿಮೆ ಎತ್ತಿ ಹೇಳಲು
ನಿನ್ನ ಅಂತರಂಗ ಬಿಚ್ಚಿ ಇಡಲು
ಬಂದೇ ಬರುವನು ಆ್ಯಂಟೋನಿ
ಬಯಲಾಗೇ ಆಗುವದು ನಿನ್ನ ಮಹತ್ವಾಕಾಂಕ್ಷೆ
ಅಷ್ಟೆ ನನ್ನ ಅಂತಿಮ ಅಪೇಕ್ಷೆ !

ಶಂಕರ ತಲ್ಲೂರ
೧೭೨, ಹಿಂದವಾಡಿ, ಬೆಳಗಾವ

ಶತಮಾನಗಳ ಹೋರಾಟ-ನರ್ಮದಾ

ಹದಿನಾಲ್ಕು ವರ್ಷಗಳ ನಿರಂತರ ಹೋರಾಟ ಆ ಜನರನ್ನು ಒಂದಿಷ್ಟೂ ವಿಚಲಿತರನ್ನಾಗಿಸಿಲ್ಲ. ಪ್ರತಿದಿನ ಘೋಷಣೆ ಕೂಗುವುದು, ಕ್ರಾಂತಿಗೀತೆ ಹಾಡುವುದು, ನರ್ಮದೆಯ ದಡದಲ್ಲಿ ನಿಂತು ಜೀವನದಿಯನ್ನು ಪ್ರೀತಿಯಿಂದ, ಕರುಣೆಯಿಂದ, ಬೇಸರದಿಂದ ದಿಟ್ಟಿಸುವುದು; ಹೋರಾಟ ಎನ್ನುವುದು ಈ ಜನರ ಸಂಸ್ಕೃತಿಯಾಗಿ ಬಿಟ್ಟಿದೆ. ನರ್ಮದಾ ಕಣಿವೆಗೆ ಹೋದಾಗ ನಮಗೆ ನಮ್ಮ ಸಣ್ಣತನಗಳು, ಐಷಾರಾಮ, ನಾಗರಿಕತೆ, ಅಭಿವೃದ್ಧಿ ಇವುಗಳು ವಾಕರಿಕೆ ತರಿಸುತ್ತವೆ. ಅಲ್ಲಿಂದ ಮರಳಿ ಬರುವಾಗ ಹೊಸ ಹುರುಪು ಬಂದಿರುತ್ತದೆ.

ನರ್ಮದಾ ಕಣಿವೆಯಲ್ಲಿ ನಡೆಯುತ್ತಿರುವ ಹೋರಾಟ ದಿನೇ ದಿನೇ ಕಾವೇರುತ್ತಿದೆ. ಹೊಸ ಸಹಸ್ರಮಾನದ ಸಂಭ್ರಮದಲ್ಲಿ ಕಾಲ ಹಾಕುತ್ತಿರುವ ಇಂದು ನರ್ಮದಾ ಕಣಿವೆಯ ಜನ ಬದುಕಿನ ಹಕ್ಕಿಗಾಗಿ ಇನ್ನೂ ಹೋರಾಟ ನಡೆಸುತ್ತಿದ್ದಾರೆ. ಎಷ್ಟೋ ರಾಜಕಾರಣಿಗಳು ದೇಶ ಪ್ರಗತಿ ಹೊಂದುತ್ತಿದೆ ಎಂದು ಮೈಕ್ ಸಿಕ್ಕಲ್ಲೆಲ್ಲಾ ಬಡಾಯಿ ಕೊಚ್ಚುತ್ತಿದ್ದಾರೆ. ಆದರೆ ನರ್ಮದಾ ನದಿ ತೀರದ ಸುಮಾರು ಹತ್ತು ಲಕ್ಷ ಜನರಿಗೆ ನೆಮ್ಮದಿಯ ಉಸಿರು ಬಿಡಲು ಇನ್ನೂ ಸಾಧ್ಯವಾಗಿಲ್ಲ.

೧೯೪೮ರಲ್ಲಿ ಪ್ರಧಾನಿ ನೆಹರೂರವರು ಹಿರಾಕುಡ್ ಅಣೆಕಟ್ಟಿನಿಂದಾಗಿ ನಿರಾಶ್ರಿತರಾದ ಹಳ್ಳಿಯ ಜನರನ್ನು ಕುರಿತು ಈ ದೇಶದ ಅಭಿವೃದ್ಧಿಗಾಗಿ ನೀವು ತ್ಯಾಗ ಮಾಡಬೇಕೆಂದರು. ನೆಹರೂ ಈ ಮಾತು ಹೇಳಿದಾಗ ಬಹುಶಃ ಅವರಿಗೆ ಗೊತ್ತಿರಲಿಲ್ಲ; ಈ ದೇಶದ ಅಭಿವೃದ್ಧಿಗಾಗಿ ಇಂದಿಗೂ ತ್ಯಾಗ ಮಾಡಬೇಕಾಗಿರುವುದು ಮತ್ತು ಮಾಡಿರುವುದು ದಲಿತ ಮತ್ತು ಆದಿವಾಸಿಗಳೇ ಎಂದು.

ಏನೀ ಸರ್ದಾರ್ ಸರೋವರ್ ಯೋಜನೆ

ಸರ್ದಾರ್ ಸರೋವರ್ ಯೋಜನೆಯು ಕೇಂದ್ರ ಸರ್ಕಾರ, ಮಹಾರಾಷ್ಟ್ರ, ಮಧ್ಯಪ್ರದೇಶ್ ಮತ್ತು ಗುಜರಾತ್‌ಗಳ ಸಹಯೋಗದೊಂದಿಗೆ ಅನುಷ್ಠಾನಗೊಳ್ಳಬೇಕಾಗಿರುವ, ಗುಜರಾತ್ ಸರ್ಕಾರ ಮತ್ತು ನರ್ಮದಾ ಕಣಿವೆ ಅಭಿವೃದ್ಧಿ ಪ್ರಾಧಿಕಾರದ ಮಹತ್ತರ ಕನಸಾಗಿದೆ. ವಿಶ್ವದಲ್ಲಿಯೇ ಅತಿದೊಡ್ಡ ಯೋಜನೆಯಾದ ಈ ನರ್ಮದಾ ಯೋಜನೆ ಮುಖ್ಯವಾಗಿ ಮೂರು ಉದ್ದೇಶಗಳನ್ನು ಹೊಂದಿದೆ !

(ಅ) ನರ್ಮದಾ ನದಿಗೆ ಅಡ್ಡಲಾಗಿ ಸುಮಾರು ೩೦ ಬೃಹತ್, ೧೩೫ ಮಧ್ಯಮ ಗಾತ್ರದ ಹಾಗೂ ೩,೦೦೦ ಸಣ್ಣ ಅಣೆಕಟ್ಟುಗಳ ನಿರ್ಮಾಣ;

(ಆ) ೧,೪೫೦ ಮೆಗಾವಾಟ್‌ಗಳ ಎರಡು ಜಲವಿದ್ಯುತ್ ಸ್ಥಾವರಗಳ ನಿರ್ಮಾಣ ಹಾಗೂ ಇಲ್ಲಿ ಉತ್ಪಾದನೆಯಾದ ವಿದ್ಯುತ್ತನ್ನು ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶಗಳಿಗೆ ಸರಬರಾಜು ಮಾಡುವುದು; ಮತ್ತು

(ಇ) ಸುಮಾರು ೭೫,೦೦೦ ಕಿ.ಮೀ. ಉದ್ದದ ಕಾಲುವೆಯನ್ನು ತೆಗೆದು ಕಚ್ ಮತ್ತು ಸೌರಾಷ್ಟ್ರದ ಸುಮಾರು ೪ ಕೋಟಿ ಜನರಿಗೆ ಕುಡಿವ ನೀರು ಸರಬರಾಜು ಮಾಡುವುದು. ಹಾಗೂ ಸುಮಾರು ೧೮ ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಮಾಡಿಕೊಡುವುದು.

ಆದರೆ ಏಕೀ ಹೋರಾಟ ?

ನರ್ಮದಾ ಕಣಿವೆ ಅಭಿವೃದ್ಧಿಯ ಬಗ್ಗೆ ಇಲ್ಲಿನ ಜನರಿಗೆ ಮೊದಲೇ ಗುಮಾನಿ ಇತ್ತು. ಯಾರದೋ ಅಭಿವೃದ್ಧಿಗಾಗಿ, ನಗರವಾಸಿಗಳ ಹವಾ ನಿಯಂತ್ರಣಕ್ಕಾಗಿ ಈ ವಿದ್ಯುತ್ ಪೋಲಾಗುತ್ತದೆ ಎಂದು. ಅಲ್ಲದೆ ಹಲವಾರು ಪರಿಸರ ತಜ್ಞರು, ಹೋರಾಟಗಾರರು ಈ ಯೋಜನೆಯ ವಿರೋಧಾಭಾಸ ಹಾಗೂ ದೋಷಗಳನ್ನು ಮೊದಲೇ ಗುರ್ತಿಸಿದ್ದರು.



ನರ್ಮದಾ ನೀರಿನಲ್ಲಿ ಮುಳುಗಡೆಯಾಗಿರುವ ಸತ್ಯಾಗ್ರಹ ಸ್ಥಳ

ಈ ಯೋಜನೆ ಪೂರ್ಣಗೊಂಡಲ್ಲಿ ಸುಮಾರು ೧೩,೨೦೦ ಹೆಕ್ಟೇರ್ ಅರಣ್ಯ, ಸುಮಾರು ೧೩,೦೦೦ ಹೆಕ್ಟೇರ್ ಕೃಷಿ ಭೂಮಿ ಹಾಗೂ ೧೩,೫೦೦ ಹೆಕ್ಟೇರ್ ಕೃಷಿಯೇತರ ಭೂಮಿ ಮುಳುಗಡೆಯಾಗುತ್ತದೆ. ಸರ್ದಾರ್ ಸರೋವರ್ ಅಣೆಕಟ್ಟು ಒಂದರಿಂದಲೇ ಸುಮಾರು ೨೪೫ ಹಳ್ಳಿಗಳ ೨.೫ ಲಕ್ಷ ಜನ ಆದಿವಾಸಿಗಳು ತಮ್ಮ ನೆಲೆಯನ್ನು ಕಳೆದುಕೊಳ್ಳುತ್ತಾರೆ.

ಈಗಾಗಲೇ ಜನಸಂಖ್ಯೆಯಲ್ಲಿ ಗಣನೀಯವಾಗಿ ಕಡಿಮೆಯಾಗುತ್ತಿರುವ ಇಲ್ಲಿನ ಭಿಲ್ - ಭಿಲಾಲ್ ಹಾಗೂ ಗೊಂಡ ಸಂತತಿಗಳು ಮನೆ ಮಠ ಕಳೆದುಕೊಂಡು ಸಾವಿನ ಅಂಚಿಗೆ ದೂಡಲ್ಪಟ್ಟಿದ್ದಾರೆ (ಭಿಲ್ ಯುವಕರ ಒಂದು ಚಿತ್ರ ಮುಖಪುಟದಲ್ಲಿದೆ). ಈ ಯೋಜನೆಯಲ್ಲಿ ತಮ್ಮ ನೆಲೆಯನ್ನು ಕಳೆದುಕೊಳ್ಳುವವರ ಸಂಖ್ಯೆ ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಗುಜರಾತ್ ಸೇರಿ ಸುಮಾರು ಹತ್ತು ಲಕ್ಷಕ್ಕೂ ಮೀರುತ್ತದೆ.

ಈ ಯೋಜನೆಯ ಸಿಂಹಪಾಲು ಲಾಭವನ್ನು ಪಡೆದುಕೊಳ್ಳುವ ಗುಜರಾತ್ ಸರ್ಕಾರ ಈ ನಿರ್ವಸಿತರಿಗೆ ಪುನರ್ವಸತಿಯನ್ನು ಕೊಡುವ ಜವಾಬ್ದಾರಿಯನ್ನು ಹೊತ್ತಿದೆ. ಆದರೆ ಗುಜರಾತ್‌ನಲ್ಲಿ ಈ ಪ್ರಮಾಣದ ಭೂಮಿಯಿಲ್ಲ. ಇದ್ದರೂ, ಕಾಡನ್ನೇ ನಂಬಿ ಈ ನರ್ಮದೆಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿರುವ ಈ ಜನರಿಗೆ ಗುಜರಾತ್ ಕೊಡುವ ಕೊಳೆಗೇರಿಗಳು ಜೀವನ ಕೊಡಲು ಸಾಧ್ಯವಿಲ್ಲ.

ಸುಪ್ರೀಂ ಕೋರ್ಟ್ ಮತ್ತು ಗುಜರಾತ್ ಸರ್ಕಾರ

ನರ್ಮದಾ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಸಾಕಷ್ಟು ಮುನ್ನವೇ ಇಲ್ಲಿನ ನಿರಾಶ್ರಿತರಿಗೆ ಸೂಕ್ತ ಸ್ಥಳಗಳನ್ನು ಗುರುತಿಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. ಯೋಜನಾ ಪ್ರದೇಶ ಜಲಾವೃತ್ತವಾಗುವ ಮುನ್ನ ಕನಿಷ್ಠ ಪಕ್ಷ ಒಂದು ವರ್ಷ ಮುನ್ನ ನಿರಾಶ್ರಿತ ಬುಡಕಟ್ಟು ಜನರಿಗೆ ಪುನರ್ವಸತಿಗೆ ಕ್ರಮ ಕೈಗೊಳ್ಳುವ ಭರವಸೆ ಗುಜರಾತ್ ಸರ್ಕಾರ ನೀಡಿದ್ದರೂ ಸಹ ಈವರೆಗೆ ಸೂಕ್ತ ಕ್ರಮ ಕೈಗೊಂಡಿಲ್ಲ. ಬದಲಾಗಿ ಅಲ್ಲಿ ನಡೆಯುತ್ತಿರುವ ನರ್ಮದಾ ಬಚಾವೋ ಆಂದೋಲನದ ಧ್ವನಿಯನ್ನು ಅಡಗಿಸುವಲ್ಲಿ ಸರ್ಕಾರ ತನ್ನ 'ಮಾಧ್ಯಮ' ಮತ್ತು 'ಮಾಫಿಯಾ'ವನ್ನು ಚೆನ್ನಾಗಿ ಬಳಸಿಕೊಳ್ಳುತ್ತಿದೆ. ಈ ಯೋಜನೆಯ ನಿಜವಾದ ವೆಚ್ಚ ಹಾಗೂ ವಾಸ್ತವಾಂಶಗಳನ್ನು ಹೊರಗೆಡಹದೆ ಬರೀ ಕಚ್ ಮತ್ತು ಸೌರಾಷ್ಟ್ರಗಳಿಗೆ ನೀರನ್ನು ಒದಗಿಸುವುದು ಮತ್ತು ೧೪೫೦ ಮೆಗಾವಟ್ ವಿದ್ಯುತ್ತಿನ ಉತ್ಪತ್ತಿಯನ್ನೇ ಮುಖ್ಯವಾಗಿ ಪ್ರಚಾರ ಮಾಡುತ್ತಿದೆ.

ನರ್ಮದಾ ಹೋರಾಟ

ನರ್ಮದಾ ಕಣಿವೆಯ ಹೋರಾಟವನ್ನು ಒಂದು ಪ್ರತಿಗಾಮಿ, ಅಭಿವೃದ್ಧಿ ವಿರೋಧಿ, ದೇಶದ್ರೋಹಿ ಹೋರಾಟವೆಂಬಂತೆ [illegible] ಕಾರ್ಯ ವ್ಯಾಪಕವಾಗಿ ನಡೆಯುತ್ತಿದೆ ಹಾಗೂ ಇದೇ ನಗರವಾಸಿ [illegible]

ಟಿ. ಎಚ್. ಲವಕುಮಾರ್

ಹೋರಾಟವೆಂದು ಮೇಧಾರನ್ನು ಟೀಕಿಸಲಾಗುತ್ತಿದೆ. ಆದರೆ ನರ್ಮದಾ ಹೋರಾಟ ಇಂದೂ ಸಹ ಉಸಿರಾಡುತ್ತಿರುವುದು ಅಲ್ಲಿನ ಜನರ ಅದಮ್ಯ ವಿಶ್ವಾಸ ಹಾಗೂ ನಂಬಿಕೆಗಳಿಂದ ಮಾತ್ರ. ಮೇಧಾರವರು ಚಳುವಳಿಯಲ್ಲಿ ಧುಮುಕುವ ಮುನ್ನವೂ ಅಲ್ಲಿ ಪ್ರತಿಭಟನೆಯ ಧ್ವನಿ ಇತ್ತು. ಆದರೆ ಇವರ ಸಕ್ರಿಯ ಪಾಲ್ಗೊಳ್ಳುವಿಕೆ ಚಳುವಳಿಗೆ ವ್ಯಾಪಕತೆ ತಂದುಕೊಟ್ಟಿತು.

ಬದುಕಿಗಾಗಿ ಹೋರಾಟ ನಡೆಸುತ್ತಿರುವ ಇಂತಹ ಸ್ವಾಭಿಮಾನಿ ಆದಿವಾಸಿಗಳ ಅಹಿಂಸಾ ಹೋರಾಟವನ್ನು ನಗಣ್ಯವೆಂದು ತಳ್ಳಿಹಾಕುವುದು ಸಾಧ್ಯವಿಲ್ಲ. ನರ್ಮದಾ ಹೋರಾಟ ಇಂದು ನಮ್ಮ ಮುಂದೆ ಹಲವಾರು ಸವಾಲುಗಳನ್ನೊಡ್ಡಿದೆ. ಅಭಿವೃದ್ಧಿ, ಅಧಿಕಾರ, ಪ್ರಜಾಪ್ರಭುತ್ವ, ಸ್ವಯಂ ಆಡಳಿತ, ಈ ಪರಿಕಲ್ಪನೆಗಳ ಬಗ್ಗೆ ನಿಜವಾಗಿ ಜನರ ದೃಷ್ಟಿಕೋನದಿಂದ ನೋಡುವಂತೆ ಮಾಡಿದೆ. ಆದರೆ ಜನರ ದೃಷ್ಟಿಕೋನದಿಂದ ಲೇಖನ ಬರೆದ ಅರುಂಧತಿ ರಾಯ್ ಹಾಗೂ ಮೇಧಾರವರ ಮೇಲೆ ನ್ಯಾಯಾಲಯ ನಿಂದನೆ ಆರೋಪಕ್ಕೆ ಶಿಫಾರಸ್ಸು ಮಾಡಿದ್ದುದು ನಿಜಕ್ಕೂ ಜನರ ಪರವಾಗಿ ಮಾತನಾಡುವುದು ಅಪರಾಧ(?) ಎನ್ನುವ ಧೋರಣೆಯನ್ನು ತೋರಿಸುತ್ತದೆ.

ಇಂದು ದೇಶದಲ್ಲಿ ನಡೆಯುತ್ತಿರುವ ಬಹುತೇಕ ಅಭಿವೃದ್ಧಿ ಯೋಜನೆಗಳಿಂದ ಯಾವ ನಗರಗಳೂ ಮುಳುಗಿಲ್ಲ. ಬದಲಾಗಿ ನಾಗರಹೊಳೆ ನ್ಯಾಷನಲ್ ಪಾರ್ಕ್‌ನಿಂದ, ಬಾಗೂರು ನವಿಲೆಯ ಸುರಂಗದಿಂದ,



ಮುಳುಗಡೆಯಾಗಲಿರುವ ನರ್ಮದಾ ಕಣಿವೆಯಲ್ಲಿ ನೀರು ತರುತ್ತಿರುವ ಭಿಲ್ ಆದಿವಾಸಿ ಯುವತಿ

ಕಾರವಾರದ ಸೀಬರ್ಡ್ ನೌಕಾನೆಲೆಯಿಂದ, ಆಲಮಟ್ಟಿ ಯೋಜನೆಯಿಂದ, ಅಭಿವೃದ್ಧಿ ಹೊಂದುತ್ತಿರುವುದು ಶ್ರೀಮಂತ ನಗರವಾಸಿಗಳೇ ಹೊರತು ನಿರಾಶ್ರಿತರಾದ ದಲಿತ, ಆದಿವಾಸಿ ರೈತವರ್ಗದವರಲ್ಲ. ಸ್ವಾತಂತ್ರ್ಯ ಬಂದು ಅರ್ಧ ಶತಮಾನವಾದರೂ ಈ ಜನರ ಹತಾಶೆಗಳು ಹೆಚ್ಚುತ್ತಲೇ ಇವೆ.

ದೇಶದಲ್ಲಿ ಅಭಿವೃದ್ಧಿ ಯೋಜನೆಗಳಿಗಾಗಿ ಬೃಹತ್ ಹಣ ಪೋಲಾಗುತ್ತಿದೆ. ನರ್ಮದಾ ಯೋಜನೆಯ ಅಂದಾಜು ವೆಚ್ಚ ೪೪,೦೦೦ ಕೋಟಿ. ಆದರೆ ಇಷ್ಟು ಹಣ ಈಗಾಗಲೇ ಖರ್ಚಾಗಿದೆ. ಆದರೆ ಯೋಜಿತ ಉದ್ದೇಶಗಳು ಇನ್ನೂ ಪೂರ್ಣಗೊಂಡಿಲ್ಲ. ಪ್ರಪಂಚದೆಲ್ಲೆಡೆ ದೊಡ್ಡ ಅಣೆಕಟ್ಟುಗಳನ್ನು ನಿರಾಕರಿಸುತ್ತಿದ್ದರೂ ಇನ್ನೂ ಆರ್ಥಿಕವಾಗಿ ಚೇತರಿಸಿಕೊಳ್ಳದ ನಮ್ಮ ದೇಶಕ್ಕೆ ಇಂತಹ ಬೃಹತ್ ಯೋಜನೆಗಳ ತೆವಲು ಪ್ರಶ್ನಾರ್ಹವಾಗಿದೆ.

ನರ್ಮದಾ ಕಣಿವೆಯಲ್ಲಿ ಮೊದಲು ಪೂರ್ಣಗೊಂಡ ಜಬಲ್‌ಪುರದ ಹತ್ತಿರದ 'ಭಾರ್ಗಿ ಅಣೆಕಟ್ಟು' ಯೋಜಿತ ಹಣಕ್ಕಿಂತ ಹತ್ತುಪಟ್ಟು ಹೆಚ್ಚು ಹಣವನ್ನು ಕಸಿದುಕೊಂಡಿದೆ. ಈ ಯೋಜನೆಯ ಅಂದಾಜಿನಂತೆ ಸುಮಾರು ೧೦೧ ಹಳ್ಳಿಗಳ ೭೦,೦೦೦ ಜನರು ನಿರ್ವಸಿತರಾಗಬೇಕಿತ್ತು. ಆದರೆ ಜಲಾಶಯದಲ್ಲಿ ನೀರು ನಿಂತಾಗ ಸುಮಾರು ೧೬೨ ಹಳ್ಳಿಗಳು ಮುಳುಗಡೆಯಾದವು. ಆದ್ದರಿಂದಲೇ ಅಭಿವೃದ್ಧಿ ಯೋಜನೆಗಳು, ಅವುಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಸರಕಾರದ ಬೇಜವಾಬ್ದಾರಿತನ ಮತ್ತು ಸಾಮಾಜಿಕ ಕಾಳಜಿಗಳು ಪ್ರಜ್ಞಾವಂತರಿಗೆ ಪ್ರಶ್ನೆಯಾಗಿಯೇ ಉಳಿದಿವೆ.

ಟಿ. ಎಚ್. ಲವಕುಮಾರ್
'ಸಂವಾದ', ಬೆಂಗಳೂರು -೫೬೦ ೦೦೧

ಸಾಮಾಜಿಕ-ಧಾರ್ಮಿಕ ಕ್ರಾಂತಿಗಳ ಧಾರೆಯಲ್ಲಿ ಬುದ್ಧ, ಬಸವ ಮತ್ತು ಭೀಮ

ಡಾ|| ಎಂ. ವಿ. ನಾಡಕರ್ಣಿ

ಗೌತಮ ಬುದ್ಧ, ಬಸವಣ್ಣ ಮತ್ತು ಡಾ|| ಅಂಬೇಡ್ಕರರು ಅನೇಕ ಶತಮಾನಗಳಿಂದ ಬೇರ್ಪಟ್ಟವರು. ಈ ಮೂವರೂ ಮಹಾನ್ ಕ್ರಾಂತಿಪುರುಷರು. ಅವರ ವಿಚಾರಗಳಲ್ಲಿ ಸಾಮ್ಯಗಳೂ ಇವೆ, ವ್ಯತ್ಯಾಸಗಳೂ ಇವೆ. ಒಂದು ವಿಚಾರಧಾರೆಯ ಮುಂದುವರಿಕೆಯೂ ಇದೆ. ಮೂವರೂ ಸಂಪ್ರದಾಯ ವಿರೋಧಿಗಳು, ಜಾತಿ ಮತ್ತು ವರ್ಣವ್ಯವಸ್ಥೆಯನ್ನು ಖಂಡಿಸಿದವರು, ಮಾನವೀಯ ಮೌಲ್ಯಗಳ ಮೇಲೆ ಒತ್ತು ಕೊಟ್ಟವರು, ಸಾಮಾನ್ಯ ಜನತೆಯ ದುಃಖವನ್ನು ನಿವಾರಿಸಲು ಪಣ ತೊಟ್ಟವರು. ಅವರಲ್ಲಿ ಕೆಲವೊಂದು ವ್ಯತ್ಯಾಸಗಳೂ ಇರಬಹುದು. ಆದರೆ ಅವು ಒಂದಕ್ಕೊಂದು ಪೂರಕವಾಗಿವೆ. ವಿರೋಧಾತ್ಮಕಗಳಾಗಿಲ್ಲ.

ಗೌತಮ ಬುದ್ಧರು ಕ್ರಿ. ಪೂ. ೬೨೩ರಲ್ಲಿ ಜನಿಸಿ ೫೪೩ರಲ್ಲಿ ತಮ್ಮ ಎಂಭತ್ತನೆಯ ವರ್ಷದಲ್ಲಿ ಪರಿನಿರ್ವಾಣ ಹೊಂದಿದರು. ಭಾರತದ ಮಹಾನ್ ಕ್ರಾಂತಿಕಾರಕ ತತ್ವವೇತ್ತರಲ್ಲಿ ಅವರು ಬಹುಶಃ ಮೊದಲಿಗರು. ವೇದಗಳೇ ಪ್ರಮಾಣವೆಂಬ ನಂಬಿಗೆಯನ್ನು, ಅವುಗಳ ಅಧಿಕಾರವನ್ನು ತಿರಸ್ಕರಿಸಿದರು. ಅದರಂತೆಯೇ ವರ್ಣ ವ್ಯವಸ್ಥೆಯನ್ನು ಖಂಡಿಸಿದರು. ಅದರ ಜೊತೆಗೆ ಯಾವುದೇ ಪವಿತ್ರ ಗ್ರಂಥಗಳ ಪ್ರಮಾಣಕ್ಕಿಂತಲೂ ತರ್ಕಬದ್ಧ ವಿಚಾರದಿಂದ ಸತ್ಯಾನ್ವೇಷಣೆ ಸಾಧ್ಯವೆಂದು ಸಾರಿದರು. ಅವರ ಪ್ರವಚನ ಮತ್ತು ಸಂವಾದಗಳು ಇದೇ ಮಾತನ್ನು ಬಿಂಬಿಸುತ್ತವೆ. ಗ್ರೀಸಿನಲ್ಲಿ ಸಾಕ್ರೆಟೀಸ್ ಕೂಡಾ ಸತ್ಯಾನ್ವೇಷಣೆಯ ಇದೇ ಪದ್ಧತಿಯನ್ನು ಎರಡು ಶತಮಾನಗಳ ನಂತರ ಜಾರಿಗೆ ತಂದರು. ಗೌತಮ ಬುದ್ಧರ ಈ ಸತ್ಯಶೋಧನೆಯ ರೀತಿ ಭಾರತೀಯ ತರ್ಕಶಾಸ್ತ್ರ ಅಥವಾ ನ್ಯಾಯಶಾಸ್ತ್ರಗಳ ಉಗಮಕ್ಕೆ ಕಾರಣವಾಯಿತು. ಬುದ್ಧರ ಕಾಲದಲ್ಲಿಯೇ ಅವರ ವಿಚಾರ ರೀತಿ ಜನಪ್ರಿಯವಾಗತೊಡಗಿ ಸಮಾಜದ ವಿವಿಧ ವರ್ಗಗಳ ಜನರು ಅವರ ಹತ್ತಿರ ಬಂದು ಶಿಷ್ಯರಾದರು. ಅವರಲ್ಲಿ ರಾಜಸುತರೂ ಇದ್ದರು, ಸ್ತ್ರೀಯರೂ ಇದ್ದರು, ಬ್ರಾಹ್ಮಣರೂ ಇದ್ದರೂ, ಶರೀರ ಶ್ರಮ ಮಾಡುವ ದುಡಿಯುವ ವರ್ಗಗಳ ಜನರೂ ಇದ್ದರು. ತರ್ಕಶುದ್ಧ ರೀತಿಯ ಸತ್ಯಶೋಧದಲ್ಲಿ ದೇವರ ಅಸ್ತಿತ್ವದ ಗೊಡವೆಗೆ ಅವರು ಹೋಗಲಿಲ್ಲ; ಅದು ಅವರಿಗೆ ಮುಖ್ಯ ಪ್ರಶ್ನೆಯೇ ಆಗಿದ್ದಿಲ್ಲ.

ಅವರು ಒತ್ತು ಕೊಟ್ಟಿದ್ದು ಮನುಷ್ಯನ ನೀತಿಮತ್ತೆಗೆ, ಸೌಹಾರ್ದಭಾವಕ್ಕೆ, ಪರಸ್ಪರ ಪ್ರೇಮಕ್ಕೆ. ಒಬ್ಬ ಕಮ್ಮಾರ ಚುಂದನಿಗೆ ಅವರು ಉಪದೇಶದಲ್ಲಿ ಹೀಗೆ ಹೇಳುತ್ತಾರೆ: ''ಚುಂದನೇ, ಇತರರು ಹಿಂಸಾಪರರಾಗಿದ್ದರೂ ನಾವು ಅಹಿಂಸೆಯ ಮಾರ್ಗದಲ್ಲಿರಬೇಕು; ಇತರರು ಕಳ್ಳತನ ಮಾಡಿದರೂ ನಾವು ಮಾಡಬಾರದು; ಇತರರು ಪರರ ಧನವನ್ನು ಕಬಳಿಸುವ ದುರಾಸೆ ಮಾಡಿದರೂ ನಾವು ಹಾಗೆ ಮಾಡಬಾರದು. ಇದೇ ಶುಚಿಯಾದ ಮನಸ್ಸನ್ನು, ಶಾಂತಿಯನ್ನು ಪಡೆಯುವ ಮಾರ್ಗ.'' ಆರು ಶತಮಾನಗಳ ನಂತರ ಏಸು ಕ್ರಿಸ್ತ ಹೇಳುವ ಮಾತುಗಳಿಗೂ ಈ ಮಾತುಗಳಿಗೂ ಎಷ್ಟೊಂದು ಸಾಮ್ಯವಿದೆ! ಗೌತಮ ಬುದ್ಧರ ಸಮಕಾಲೀನರಾದ ಮಹಾವೀರರೂ ಅಹಿಂಸೆಯ ಸಂದೇಶವನ್ನು ಸಾರಿದರು. ಇತರ ಮನುಷ್ಯರ ಬಗ್ಗೆಯಷ್ಟೇ ಅಲ್ಲ, ಸಕಲ ಪ್ರಾಣಿ ಮಾತ್ರಗಳಲ್ಲಿಯೂ ದಯೆ ಅನುಕಂಪವಿರಬೇಕೆಂದು ಉಪದೇಶಿಸಿದರು.

ಈ ದಯೆ ಮತ್ತು ಅನುಕಂಪದ ಸಂದೇಶಕ್ಕೆ ಒಂದು ಐತಿಹಾಸಿಕ ಹಿನ್ನೆಲೆಯಿದೆ. ಕ್ರಿ.ಪೂ. ಆರನೆಯ ಶತಮಾನದಲ್ಲಿ ಮಗಧ ಮತ್ತು ಕೋಸಲ ಸಾಮ್ರಾಜ್ಯಗಳು ತಲೆಯೆತ್ತಿದ್ದವು. ಅವು ತಮ್ಮ ರಾಜ್ಯಗಳನ್ನು ಸ್ಥಾಪಿಸಬೇಕಾದರೆ ಬುಡಕಟ್ಟಿನ ಜನಾಂಗಗಳ ಗಣರಾಜ್ಯಗಳನ್ನು ಹತ್ತಿಕ್ಕಬೇಕಾಗಿತ್ತು. ಹೀಗೆ ಮಾಡುವುದರಲ್ಲಿ ಅಪಾರವಾದ ಹಿಂಸೆ ಮತ್ತು ಹಾನಿಯನ್ನು ಸಾಮಾನ್ಯ ಜನತೆ ಅನುಭವಿಸಬೇಕಾಯಿತು. ಆಸೆಯೇ ಮನುಷ್ಯನ ದುಃಖಕ್ಕೆ ಕಾರಣವಾಗುವುದೆಂದು ಬುದ್ಧರು ಮನಗಂಡರು. ಆಸೆಯೇ ಮನುಷ್ಯನ ದುಃಖಕ್ಕೆ ಮೂಲ ಎಂಬ ಸತ್ಯವನ್ನು ಸಾರಿದರು. ಬುದ್ಧರ ಈ ವಿಚಾರಕ್ಕೂ ನಂತರ ಬಂದ ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿ ಬರುವ ೬೨ ಮತ್ತು ೬೩ನೆಯ ಶ್ಲೋಕಗಳಿಗೂ ಎಷ್ಟೊಂದು ಸಾಮ್ಯವಿದೆ ! ('ವಿಷಯಾಸಕ್ತಿಗಳ ಬಗ್ಗೆಯೇ ಚಿಂತಿಸಿದಾಗ ಅವುಗಳ ಬಗ್ಗೆ ಅನುರಕ್ತತೆ ಬರುತ್ತದೆ. ಆ ಮೂಲಕ ಕಾಮ, ಕಾಮದಿಂದ ಕ್ರೋಧ, ಕ್ರೋಧದಿಂದ ಸಂಮೋಹ, ಸಂಮೋಹದಿಂದ ಬುದ್ಧಿನಾಶ ಮತ್ತು ಬುದ್ಧಿನಾಶದಿಂದ ಸರ್ವನಾಶವಾಗುತ್ತದೆ'). ಇಲ್ಲಿ ಗಮನಾರ್ಹ ವಿಚಾರವೆಂದರೆ



ಈ ತತ್ವ ಬುದ್ಧ ಧರ್ಮದಲ್ಲಿ [illegible] ಎಂದು ಹೇಳುವುದೇ ಕಷ್ಟ.

ಭಾರತದ ಧಾರ್ಮಿಕ ಮತ್ತು ತಾತ್ವಿಕ ಇತಿಹಾಸದಲ್ಲಿ ಭಗವಾನ ಬುದ್ಧ ಒಂದು ಮಹತ್ವದ ಮೈಲಿಗಲ್ಲು. ಮೊದಲಿನ ವೇದೋಪನಿಷತ್ತುಗಳ ವೈದಿಕ ಧರ್ಮ ಹಿಂದೂ ಧರ್ಮವಾಗಿ ಅನಂತರ [illegible] ಗೊಳ್ಳುವುದು ಕಂಡುಬರುತ್ತದೆ. ದೇವರ ಬಗ್ಗೆ ಬುದ್ಧ ಮಾತಾಡದಿದ್ದರೂ ಭಾರತೀಯರು ಆತನನ್ನು ದೇವರ ಅವತಾರವೆಂದು ಗ್ರಹಿಸಿ ಆತನ ತತ್ವಜ್ಞಾನವನ್ನು ಹಿಂದೂ ತತ್ವದಲ್ಲಿ ಅಳವಡಿಸತೊಡಗಿದರು. ಬುದ್ಧ ಧರ್ಮ ಭಾರತದಿಂದ ಹೊರದಬ್ಬಲ್ಪಡಲಿಲ್ಲ, ಅದು ಹಿಂದೂ ಧರ್ಮದಲ್ಲಿಯೇ ಅಂತರ್ಗತವಾಯಿತು. ಗೌತಮ ಬುದ್ಧ ಹಿಂದೂ ಧರ್ಮದ ಮೇಲೆ ಪ್ರಭಾವ ಬೀರಿದ್ದಲ್ಲದೇ ಉಪನಿಷತ್ತುಗಳ ವಿಚಾರಧಾರೆಗೂ [illegible]. ಉಪನಿಷತ್ತುಗಳ ಕಾಲ ಬುದ್ಧನ ಜನನಕ್ಕಿಂತ ಸಾಧಾರಣ ಎರಡು ಮೂರು ಶತಮಾನಗಳಾದರೂ ಹಿಂದಿನದು. ಅದು ಅನೇಕ ವಿಚಾರಗಳ ತಾಕಲಾಟಗಳ ಕಾಲವಾಗಿತ್ತು. ಉಪನಿಷತ್ತುಗಳಲ್ಲಿ ಎರಡು ಮುಖ್ಯ ವಿಚಾರಧಾರೆಗಳು ಕಂಡುಬರುತ್ತವೆ. ಒಂದು ಉದ್ದಾಲಕ ಆರುಣಿಯದು. ಇನ್ನೊಂದು ಯಾಜ್ಞ್ಯವಲ್ಕ್ಯರದು. ಉದ್ದಾಲಕರ ಪ್ರಕಾರ ಈ ವಿಶ್ವ, ಜಗತ್ತು, ಅದರಲ್ಲಿಯ ಜೀವಕೋಟಿ ಎಲ್ಲವೂ ಸತ್ಯವೇ, ಮಿಥ್ಯವಲ್ಲ. ಇದು ಲೌಕಿಕವಾದವೆನ್ನಬಹುದು. ಈ ವಿಚಾರಧಾರೆ ಮುಂದೆ ಲೋಕಾಯತ ತತ್ವಜ್ಞಾನಕ್ಕೆ ಎಡೆ ಮಾಡಿಕೊಟ್ಟಿತು. ಈ ವಿಚಾರಧಾರೆಯೇ ಜನರ ಮೇಲೆ, ಭಾರತದ ವೈಚಾರಿಕತೆಯ ಮೇಲೆ ಹೆಚ್ಚು ಪ್ರಭಾವ ಬೀರಿದ್ದರೆ ವೈಜ್ಞಾನಿಕ ಕ್ರಾಂತಿ ಪಾಶ್ಚಾತ್ಯ ರಾಷ್ಟ್ರಗಳಿಗಿಂತ ಮುಂಚೆ ಭಾರತದಲ್ಲೇ ಆಗುತ್ತಿತ್ತೇನೋ! ಆದರೆ ಹೆಚ್ಚು ಪ್ರಭಾವ ಬೀರಿದ್ದು ಯಾಜ್ಞವಲ್ಕ್ಯರ ಪಾರಮಾರ್ಥಿಕ ತತ್ವ; ಈ ಜಗತ್ತು ಮತ್ತು ವಿಶ್ವಕ್ಕೂ ಮೀರಿ ಇದ್ದ ಸತ್ಯ ಪರಮಾತ್ಮ ಅಥವಾ ಪರಬ್ರಹ್ಮ. ಈ ವಿಶ್ವ ನಿಜವಾದ ಸತ್ಯವಲ್ಲ. ಇದು ಪಾರಲೌಕಿಕವಾದ.

ಗೌತಮ ಬುದ್ಧರು ಈ ಎರಡೂ ವಾದಗಳನ್ನು ಸಂಪೂರ್ಣ ಒಪ್ಪದೇ ಒಂದು ಮಧ್ಯದ [illegible] ತಳೆದರು. ಈ ಜಗತ್ತನ್ನು ಮೀರಿದ ಒಂದು [illegible] ತತ್ವವಿದೆಯೇ ಎಂಬ ಪ್ರಶ್ನೆಯನ್ನು ಅವರು ಎತ್ತಲಿಲ್ಲ. ಅಂತಹ ಪ್ರಶ್ನೆಗೆ ಉತ್ತರ ಕೊಡುವುದು ಸಾಧ್ಯವಿಲ್ಲ ಎಂಬ ನಿಲುವು ಅವರದಿತ್ತು ಎಂದು ತೋರುತ್ತದೆ. ಈ ಜಗತ್ತು ನಿಜವೆಂದು ಅವರು ಒಪ್ಪಿದರೂ ಅದು ಸ್ಥಿರವಲ್ಲ, ನೀರಿನ ಪ್ರವಾಹದಂತೆ ಅದು ಯಾವಾಗಲೂ ಒಂದು ಚಲನೆಯಲ್ಲಿದ್ದು ಅಸ್ಥಿರವಾದದ್ದು ಎಂಬ ಮಾತನ್ನು ಸಾರಿದರು. ಇದರ ನೈತಿಕ ಅರ್ಥವೆಂದರೆ ಈ ಅಸ್ಥಿರ ಜಗತ್ತಿನ [illegible] ವಿಷಯಗಳ ಬಗ್ಗೆ [illegible] ಮಾರ್ಗವಾಗುವುದು [illegible]

ಗೌತಮ ಬುದ್ಧರ ನಂತರ ಭಾರತದಲ್ಲಿ ತಾತ್ವಿಕ ವಿಷಯಗಳ ಬಗ್ಗೆ ನಿರಂತರವಾಗಿ ಬಿಸಿ ಬಿಸಿ ಚರ್ಚೆ ವಾದಗಳು ಎದ್ದದ್ದು ಕಂಡುಬರುತ್ತದೆ. ಈ ತಾತ್ವಿಕ ಮಂಥನದಿಂದ ಅನೇಕ ವಿಚಾರಧಾರೆಗಳು ಹೊರಬಿದ್ದವು. ಲೋಕಾಯತ ಅಥವಾ ಚಾರ್ವಾಕವಾದ ಈ ಜಗತ್ತು ನಿಜವೆಂದಷ್ಟೇ ಅಲ್ಲ, ಅದರಲ್ಲಿಯ ಸುಖವನ್ನು ಪಡೆಯುವುದೇ ಜಾಣತನದ ಕೆಲಸ ಎಂಬ ತತ್ವವನ್ನು ಸಾರಿತು. ಇವರು ದೇವರ ಅಸ್ತಿತ್ವದ ಗೊಡವೆಗೆ ಹೋಗಲಿಲ್ಲ. ಆದರೆ ಮಾನವೀ ಮೌಲ್ಯಗಳನ್ನು, ನೈತಿಕ ಮೌಲ್ಯಗಳನ್ನು ನಿರಾಕರಿಸಲಿಲ್ಲ. ಏಕೆಂದರೆ ಅವು ಮನುಷ್ಯನ ದೀರ್ಘಕಾಲದ ಸುಖಕ್ಕಾಗಿ ಬೇಕಾದವು. ದೇವರ ಅಸ್ತಿತ್ವವನ್ನು ಒಪ್ಪಿಕೊಂಡು, ದೇವರು, ಜಗತ್ತು ಮತ್ತು ವೈಯಕ್ತಿಕ ಆತ್ಮಗಳ ಸಂಬಂಧಗಳ ಬಗ್ಗೆ ಬೇರೆ ಬೇರೆ ತಾತ್ವಿಕ ವಿಚಾರಧಾರೆಗಳು ಹೊರಬಂದವು. ಇವುಗಳಲ್ಲಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಮತ್ತು ಶೈವಸಿದ್ಧಾಂತಗಳು ಪ್ರಮುಖವಾದವು. ಇವುಗಳಲ್ಲಿ ಅತ್ಯಂತ ಪುರಾತನ ವಾದದ್ದು ಶೈವಸಿದ್ಧಾಂತ. ಈ ಸಿದ್ಧಾಂತಗಳ ಮತ್ತು ವಿಚಾರ ಧಾರೆಗಳ ವಿವರಣೆಗಾಗಿ ಡಿ. ಎಸ್. ಶರ್ಮ ಅವರ **ಎಸೆನ್ಸ್ ಆಫ್ ಹಿಂದೂಯಿಸಂ** ಮತ್ತು ಚಟ್ಟೋಪಾಧ್ಯಾಯ ಅವರ **ಇಂಡಿಯನ್ ಫಿಲಾಸಫಿ** ಪುಸ್ತಕಗಳನ್ನು ನೋಡಬಹುದು.

ಈ ತಾತ್ವಿಕ ವಿಚಾರಧಾರೆಗಳಿಂದ ಬೇರ್ಪಡೆಯಾಗಿ ಜನರ ದೈನಂದಿನ ನಡೆವಳಿಕೆಗಳನ್ನು ಪ್ರಭಾವಿಸಲು ಧರ್ಮಶಾಸ್ತ್ರ ಮತ್ತು ಸ್ಮೃತಿಗಳು ಬರೆಯಲ್ಪಟ್ಟವು. ಇವುಗಳಲ್ಲಿ ಮನುಸ್ಮೃತಿಯೂ ಒಂದು. ಇವುಗಳಿಗೆ ತಾತ್ವಿಕ ಆಧಾರವಿತ್ತೆಂದು ಹೇಳಲಾಗುವುದಿಲ್ಲ. ಅಷ್ಟೇ ಅಲ್ಲ, ತತ್ವಗಳಿಗೆ, ವೇದೋಪನಿಷತ್ತುಗಳಿಗೆ ಇದ್ದ ಮನ್ನಣೆ ಅಧಿಕಾರವಾಣಿಯೂ ಇದ್ದಿಲ್ಲ. ಆದರೆ ಹಿಂದೂ ಧರ್ಮಕ್ಕೆ ಕಳಂಕ ತಂದದ್ದು, ಸಾಮಾಜಿಕ ಅನ್ಯಾಯಗಳಿಗೆ ಒಂದು ಧಾರ್ಮಿಕ ಬೆಂಬಲ ಕೊಡಲು ಪ್ರಯತ್ನ ತಂದದ್ದು ಈ ಧರ್ಮಶಾಸ್ತ್ರಗಳೇ. ಇವುಗಳಲ್ಲಿ ಸಮಾಜದ ಹಿತಕ್ಕೆ ಬೇಕಾದ ವಿಚಾರಗಳಿಗಿಂತ ಸಾಮಾಜಿಕ ಅನ್ಯಾಯವನ್ನೂ ವೈಷಮ್ಯ ಗಳನ್ನೂ ಮುಂದುವರಿಸುವ, ಅವಕ್ಕೆ ಮಾನ್ಯತೆ ಕೊಡುವ ವಿಚಾರಗಳೇ ಬಹಳವಾಗಿದ್ದವು. ಋಗ್ವೇದದಲ್ಲಿಯ



ಪುರುಷ ಸೂಕ್ತವನ್ನು ಸಹ ಈ ಧರ್ಮಶಾಸ್ತ್ರಗಳನ್ನು ಬರೆದ ಪಂಡಿತರು ಕೃತ್ರಿಮವಾಗಿ ಅನಂತರ ಸೇರಿಸಿದರು ಎಂದು ಕೂಡ ವಾದವಿದೆ. ಮೂಲ ತತ್ವಜ್ಞಾನಗಳ ನಿಲುವಿನಿಂದ ಕೃತಿ ಅಥವಾ ವ್ಯವಹಾರ ಬೇರ್ಪಡೆಯಾಗಿದ್ದು ಇತರ ಧರ್ಮ ಗಳಲ್ಲಿಯೂ ಕಾಣುತ್ತೇವೆ. ಏಸುಕ್ರಿಸ್ತ ಜನರಿಗೆ ಪ್ರೇಮ ಮತ್ತು ಕರುಣೆಯ ಮಹತ್ವವನ್ನು ಸಾರಿದರು. ಆದರೆ ಕೆಥೋಲಿಕ್ ಚರ್ಚು ಮತ್ತು ಅದರ ಅನುಯಾಯಿ ಗಳು ಸಾವಿರಾರು ಜನರನ್ನು ಧರ್ಮದ ಹೆಸರಿನಲ್ಲಿ ಜೀವಂತ ಸುಟ್ಟದ್ದು ಐತಿಹಾಸಿಕ ಸತ್ಯವಾಗಿದೆ. ಹೀಗೆ ಸುಡಲ್ಪಟ್ಟವರಲ್ಲಿ ಬ್ರೂನೋ ಅಂತಹ ವಿಜ್ಞಾನಿಗಳೂ ಸೇರಿದ್ದರು. ಹಾಗೆಯೇ ಧರ್ಮಶಾಸ್ತ್ರ ಮತ್ತು ಸ್ಮೃತಿಗಳ ಯುಗ ಭಾರತ ದಲ್ಲಿ ಸಾಮಾಜಿಕ ಧಾರ್ಮಿಕ ಬೆಳವಣಿಗೆಯ ದೃಷ್ಟಿಯಿಂದ ಒಂದು ಕತ್ತಲೆಯ ಯುಗವಾಯಿತು. ಯುರೋಪಿನ ಕೆಥೋಲಿಕ್ ಚರ್ಚಿನಂತೆ ಇಲ್ಲಿ ಧರ್ಮಗುರುಗಳ ಆಳ್ವಿಕೆಯೇನೋ ಆಗಿದ್ದಿಲ್ಲ. ಆದರೆ ದೇವರ ಮೇಲಿನ ಭಕ್ತಿಗಿಂತ ಹೆಚ್ಚಾಗಿ ಗೊಡ್ಡು ಸಂಪ್ರದಾಯ ಮತ್ತು ಯಾಂತ್ರಿಕ ವಿಧಿಗಳೇ ಧರ್ಮದ ಮೂಲಭೂತ ಭಾಗ ಗಳೆಂಬಂತೆ ಧರ್ಮ ಶಾಸ್ತ್ರಗಳು ವರ್ತಿಸಿದವು. ಅದಕ್ಕೂ ವಿಷಾದನೀಯವೆಂದರೆ ಈ ಶಾಸ್ತ್ರಗಳ ದಬ್ಬಾಳಿಕೆಯಲ್ಲಿ ಕೆಳವರ್ಗ ದವರು, ವಿಶೇಷವಾಗಿ ದಲಿತರು ಮತ್ತು ಸ್ತ್ರೀಯರು, ತುಂಬ ಶೋಷಣೆಗಳಿಗೆ ಒಳಗಾದರು. ಇವೇ ಕಾರಣಗಳಿಂದಾಗಿ ಸ್ವಾಮಿ ದಯಾನಂದ ಸರಸ್ವತಿಯವರು ಈ ಸ್ಮೃತಿಗಳು, ಧರ್ಮಶಾಸ್ತ್ರಗಳು ಹಿಂದೂ ಧರ್ಮಕ್ಕೆ ಬೇಕಾಗಿಯೇ ಇಲ್ಲ, ಅವು ಹಿಂದೂ ಧರ್ಮದ ಸತ್ವ ಅಥವಾ ತಳಹದಿಯಲ್ಲ ಎಂದು ಘೋಷಿಸಿದರು. ಸತತವಾಗಿ ಪರಕೀಯರ ದಾಳಿಗೊಳಪಟ್ಟದ್ದರಿಂದ ಸಮಾಜದ ಭದ್ರತೆಯನ್ನು ಮತ್ತು ಧರ್ಮವನ್ನು ಕಾಯ್ದುಕೊಳ್ಳಲು ಈ ಜಾತೀಯ ಕಟ್ಟಳೆಗಳನ್ನು ಮಾಡಲಾಯಿತು ಎಂಬ ಒಂದು ವಾದವಿದೆ. ಈ ವಾದವನ್ನು ತೀಕ್ಷ್ಣ ಪರೀಕ್ಷೆಗೆ ಒಳಪಡಿಸಬೇಕಾಗಿದೆ. ಆದರೆ ಇಲ್ಲಿ ಅದು ಅಪ್ರಸ್ತುತ.

ಈ ಕತ್ತಲೆಯನ್ನು ಹೋಗಲಾಡಿಸಲು ೧೨ನೆಯ ಶತಮಾನದ ಹೊತ್ತಿಗೆ ಭಕ್ತಿ ಪಂಥ ಹುಟ್ಟಿತು. ಈ ಭಕ್ತಿ ಪಂಥ ಧರ್ಮದ ನೈತಿಕ ತತ್ವಗಳನ್ನು ಜನರ ಬದುಕಿಗೆ ನೆರವಾಗುವಂತೆ ಅರ್ಥೈಸಿ ವಿಶದಗೊಳಿಸಿದ್ದಷ್ಟೇ ಅಲ್ಲ ದೇವರನ್ನು ಜನರ ಹತ್ತಿರಕ್ಕೆ ತಂದಿತು. ಗೊಡ್ಡು ಸಂಪ್ರದಾಯಗಳನ್ನು ಖಂಡಿಸಿತು. ವರ್ಣ ಮತ್ತು ಜಾತಿ ಪದ್ಧತಿಯನ್ನು ತಿರಸ್ಕರಿಸಿತು. ಈ ಸಂತರೆಲ್ಲ ಸಂಸ್ಕೃತವನ್ನು ಬಿಟ್ಟು ಜನರ ಭಾಷೆಗಳಲ್ಲಿಯೇ ಬರೆದರು ಮತ್ತು ಉಪದೇಶಿಸಿದರು. ಅವೇ ಜನರಿಗೆ ಧರ್ಮ ಗ್ರಂಥಗಳಾದವು. ಈ ಭಕ್ತಿ ಪಂಥದ ಪರಿಣಾಮವಾಗಿ ಹಿಂದೂ ಧರ್ಮದ ಸ್ವರೂಪವೇ ಬದಲಾಯಿತು. ಅದು ಹೆಚ್ಚು ಜನಪ್ರಿಯವೂ ಜನಪರವೂ ಆಯಿತು. ಇದರ ಪ್ರಕಾರ ಸಾಮಾನ್ಯ ಬಡ ಮನುಷ್ಯ ಸಹ ಯಾವ ಧಾರ್ಮಿಕ ವಿಧಿಗಳಿಲ್ಲದೇ ತನ್ನ ಇಷ್ಟ ದೇವರನ್ನು ಭಜಿಸಿ ತನ್ನ ಧಾರ್ಮಿಕ ತೃಷ್ಣೆಯನ್ನು ತಣಿಸಿಕೊಳ್ಳಬಹುದು, ದೇವರನ್ನೂ ಸಾಧಿಸಬಹುದು. ಜಾತಿ ಭೇದ ಹೋಗಿ ಸಾಮಾಜಿಕ ಸಮಾನತೆಯ ಕಲ್ಪನೆಯು ಆ ಸ್ಥಳದಲ್ಲಿ ಬಂದಿತು. ಈ ಭಕ್ತಿ ಪಂಥದ ಕ್ರಾಂತಿ ಆರಂಭವಾದದ್ದು ದಕ್ಷಿಣ ಭಾರತದಲ್ಲಿ, ಅದೂ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ. ಅದು ವೈಷ್ಣವ ಮತ್ತು ಶೈವ ಸಂತರಿಬ್ಬರನ್ನೂ ಒಳಗೊಂಡಿತು. ಅಷ್ಟೇ ಅಲ್ಲ, ಅನೇಕ ದಲಿತ ವರ್ಗದ ಸಂತರೂ ಇದಕ್ಕೆ ಅಮೂಲ್ಯವಾದ ಕೊಡುಗೆ ಕೊಟ್ಟರು. ಕರ್ನಾಟಕದ ಶರಣರಲ್ಲಿ, ತಮಿಳುನಾಡಿನ ಸಂತರಲ್ಲಿ, ಮಹಾರಾಷ್ಟ್ರದ ಸಂತರಲ್ಲೆಲ್ಲ ದಲಿತರು ಇದ್ದರು. ಮುಸ್ಲಿಂ ಸಂತರೂ ಕೂಡ ಭಕ್ತಿ ಪಂಥಕ್ಕೆ ಕೊಡುಗೆ ನೀಡಿದರು ಮತ್ತು ಹಿಂದೂ ಧರ್ಮ ಬೆಳೆಯುವಂತೆ ಮಾಡಿದರು. ಹಿಂದೆ ಎಂದಿಗೂ ಇಲ್ಲದಷ್ಟು ಹಿಂದೂ ಸಮಾಜ ಪ್ರಜಾಸತ್ತಾತ್ಮಕವಾಗಿ ಪರಿವರ್ತಿತವಾಯಿತು. ವೇದಗಳ ಪಠಣ, ಅಧ್ಯಯನ, ಧಾರ್ಮಿಕ ವಿಧಿಗಳು ಯಾವೊಂದೂ ದೇವರ ಕೃಪೆಗೆ ಬೇಕಾಗಿದ್ದಿಲ್ಲ. ನಿರ್ಮಲವಾದ ಭಕ್ತಿ ಮತು ನೈತಿಕ ಮಾರ್ಗದಿಂದ ಜೀವಿಸುವುದು, ಇವೆರಡೇ ಸಾಕಾಗಿತ್ತು. ಸಮಾಜದ ಯಾವುದೇ ವರ್ಗದ ವ್ಯಕ್ತಿಗೆ ಈ ಮಾರ್ಗದ ಬೆಳಕಿನಲ್ಲಿ ಹೋಗಲು ಅಧಿಕಾರ ಸಿಕ್ಕಿತು.

ಈ ಕ್ರಾಂತಿಯಲ್ಲಿ ಕರ್ನಾಟಕ ಮಹತ್ವದ ಪಾತ್ರ ವಹಿಸಿತು. ೧೨ನೆಯ ಶತಮಾನದಲ್ಲಿ ಶ್ರೀ ರಾಮಾನುಜಾ ಚಾರ್ಯರನ್ನು ಅವರ ಸಂಪ್ರದಾಯ ವಿರೋಧೀ ವಿಚಾರಗಳಿಂದಾಗಿ ತಮಿಳುನಾಡಿನಿಂದ ಓಡಿಸಿದ ಮೇಲೆ ಅವರು ದಕ್ಷಿಣ ಕರ್ನಾಟಕದಲ್ಲಿ ಆಶ್ರಯ ಪಡೆದರು. ಅವರು ಅನೇಕ ದಲಿತರನ್ನು ತಮ್ಮ ಮತದ ದೀಕ್ಷೆ ಕೊಟ್ಟು ಸೇರಿಸಿಕೊಂಡರು ಮತ್ತು ಅಸ್ಪೃಶ್ಯತೆಯನ್ನು ಖಂಡಿಸಿದರು. ಅದೇ ಕಾಲಕ್ಕೆ ಉತ್ತರ ಕರ್ನಾಟಕದಲ್ಲಿ ಈ ಭಕ್ತಿ ಪಂಥದ ಕ್ರಾಂತಿಯ ನಾಯಕತ್ವವನ್ನು ಬಸವಣ್ಣನವರು ವಹಿಸಿದರು. ಗೌತಮ ಬುದ್ಧನಂತೆ ದಯವೇ ಧರ್ಮದ ಮೂಲವೆಂದು ಸಾರಿದರು. ಬಸವಣ್ಣನವರ ಚಳುವಳಿ ಇತರೆಡೆಯ ಭಕ್ತಿ ಪಂಥಗಳಿಗೆ ದಾರಿ ತೋರಿಸಿತು. ಭಕ್ತಿ ಪಂಥಗಳ ಎಲ್ಲ ಸಾಮಾನ್ಯ ಅಂಶಗಳನ್ನು ಒಳಗೊಂಡಿದ್ದುದು ಅಲ್ಲದೇ ತನ್ನದೇ ಆದ ಎರಡು ವೈಶಿಷ್ಟ್ಯಗಳನ್ನೂ ಬಸವಣ್ಣನವರ ಚಳುವಳಿ ಪಡೆದಿತ್ತು. ಆ ಕಾರಣದಿಂದ ಭಕ್ತಿ ಪಂಥಗಳಲ್ಲೆಲ್ಲ ಬಸವಣ್ಣನವರ ಚಳುವಳಿ ಪ್ರಾರಂಭಿಕವಾದರೂ ಅತ್ಯಂತ ಪ್ರಗತಿಪರವಾಗಿತ್ತೆಂದು ಹೇಳಬಹುದು. ಇದರಲ್ಲಿ ಮೊದಲನೆಯ ವೈಶಿಷ್ಟ್ಯವೆಂದರೆ ಬಸವಣ್ಣನವರು ಸ್ತ್ರೀಯರಿಗೆ ಕೊಟ್ಟ ಗೌರವ. ಅವರಿಗೂ ಸಮಾನ ಹಕ್ಕು ಇದೆ ಎಂಬ ನಿಲುವು ಅಕ್ಕಮಹಾದೇವಿಯವರು ಶರಣ ಕ್ರಾಂತಿಯಲ್ಲಿ ವಹಿಸಿದ ಮಹತ್ವದ ಪಾತ್ರದಲ್ಲಿ ಬಿಂಬಿತ ವಾಗಿದೆ.

ಸಂಕ್ರಮಣ ಸಾಹಿತ್ಯ ಸ್ಪರ್ಧೆ : ೨೦೦೦

ಪ್ರತಿ ವರ್ಷದಂತೆ ಈ ವರ್ಷವೂ ಸಂಕ್ರಮಣ ಪ್ರಕಾಶನವು ಕತೆ, ಕವನ, ಪ್ರಬಂಧ, ಚುಟುಕು ಮತ್ತು ನಾಟಕ - ಈ ಸಾಹಿತ್ಯ ಪ್ರಕಾರಗಳಲ್ಲಿ ಸ್ಪರ್ಧೆ ಏರ್ಪಡಿಸಿದೆ. ಪ್ರವೇಶಗಳನ್ನು ಕಳಿಸಲು ಕಡೇ ದಿನಾಂಕ: ೧೫ ಆಗಸ್ಟ್ ೨೦೦೦.

ವಿವರಗಳಿಗಾಗಿ
'ಸಂಕ್ರಮಣ ಪ್ರಕಾಶನ'
ಬನಶಂಕರಿ ೨ನೇ ಹಂತ
ಬೆಂಗಳೂರು - ೫೬೦ ೦೭೦

ಎರಡನೆಯ ವೈಶಿಷ್ಟ್ಯ ಬಸವಣ್ಣನವರು ದೈಹಿಕ ಶ್ರಮಕ್ಕೆ, ದುಡಿಮೆಗೆ ಕೊಟ್ಟ ಗೌರವ ಮತ್ತು ಮಹತ್ವ. ಈ ಕಾರಣ ದಿಂದಾಗಿ ದುಡಿಯುವ ಜನ ಕೀಳು ವರ್ಗ ದವರಲ್ಲ, ದುಡಿಯದೇ ಉಣ್ಣುವ ವರ್ಗಗಳಿಗಿಂತ ಶ್ರೇಷ್ಠರು ಎಂಬ ಕ್ರಾಂತಿಕಾರಕ ವಿಚಾರ ಮೇಲೆದ್ದಿತು. ಕರ್ಮ ಯೋಗದ ತತ್ವ ಉಪನಿಷತ್ತುಗಳಷ್ಟೇ ಪುರಾತನವಾಗಿದ್ದರೂ ಬಸವಣ್ಣನವರ ಕೊಡುಗೆ ದೈಹಿಕ ಶ್ರಮಕ್ಕೆ ಗೌರವ ಕೊಟ್ಟದ್ದು, ಜೊತೆಗೆ ಈ ಜಗತ್ತಿನ ಅಸ್ತಿತ್ವವನ್ನು ನಿಜವೆಂದೂ ಅವರು ಒಪ್ಪಿಕೊಂಡಿದ್ದರು. ಕೆಲ ಶತಮಾನಗಳ ನಂತರ ಯುರೋಪಿನಲ್ಲಿ ಪ್ರೊಟೆಸ್ಟಂಟ್ ಪಂಥ ಇಂತಹುದೇ ವಿಚಾರಧಾರೆಯನ್ನು ಹೊಂದಿತ್ತು ಮತ್ತು ಪರಲೋಕಕ್ಕಿಂತ ಇಹಲೋಕಕ್ಕೆ ಹೆಚ್ಚು ಮಹತ್ವ ಕೊಟ್ಟಿತ್ತು. ಆದರಿಂದಲೇ ಯುರೋಪಿನಲ್ಲಿ ಔದ್ಯೋಗಿಕ ಕ್ರಾಂತಿಯಾಯಿತು ಎಂದು ಮ್ಯಾಕ್ಸ್ ವೆಬರ್ ಪ್ರತಿಪಾದಿಸಿದ್ದಾರೆ. ಆದರೆ ಕರ್ನಾಟಕದಲ್ಲಿ ಇದೇ ವಿಚಾರಧಾರೆ ಮೊದಲೇ ಬಂದಿದ್ದರೂ ಔದ್ಯೋಗಿಕ ಕ್ರಾಂತಿ ಇಲ್ಲಿ ಆಗಲಿಲ್ಲ. ಅದಕ್ಕೆ ಒಂದು ಕಾರಣವೆಂದರೆ ಪ್ರೊಟೆಸ್ಟಂಟ್ ಕ್ರಾಂತಿಯ ಜೊತೆಗೆ ಅಥವಾ ಅದಕ್ಕೂ



ಮೊದಲಾಗಿ ಅಲ್ಲಿ ವೈಜ್ಞಾನಿಕ ಕ್ರಾಂತಿಯೂ ಆರಂಭವಾಗಿತ್ತು. ವೈಜ್ಞಾನಿಕ ಸತ್ಯ ಶೋಧನೆಗೆ ಭಾರತದಲ್ಲಿ ಆಗ ಬೆಂಬಲ ದೊರೆಯಲಿಲ್ಲ. ಭಾರತೀಯರ ಮನಸ್ಸು, ವೈಚಾರಿಕತೆ ದೇವರ ಕಡೆಗೇ ಹೆಚ್ಚು ಕೇಂದ್ರೀಕೃತವಾಗಿದ್ದವು.

ಬುದ್ಧ ಮತ್ತು ಬಸವೇಶ್ವರರಲ್ಲಿ ಒಂದು ಮಹತ್ವದ ವ್ಯತ್ಯಾಸವಿದೆ. ದೇವರ ಅಸ್ತಿತ್ವದ ಗೊಡವೆಗೇ ಬುದ್ಧ ಹೋಗಲಿಲ್ಲ. ಮನುಷ್ಯನಿಗೆ ನೀತಿಮತ್ತೆ, ತರ್ಕಶುದ್ಧ ವಿಚಾರ, ಪ್ರೇಮ, ಅನುಕಂಪ ಇವಿಷ್ಟಿದ್ದರೆ ಸಾಕಿತ್ತು. ಆದರೆ ಬಸವೇಶ್ವರ ಭಕ್ತಿ ಭಂಡಾರಿ. ಶಿವನಲ್ಲಿ ಭಕ್ತಿ, ಶ್ರದ್ಧೆ, ವಿಶ್ವಾಸಗಳೂ ಮನುಷ್ಯನ ನೀತಿಮತ್ತೆಗೆ ಮತ್ತು ಮುಕ್ತಿಗೆ ಬೇಕಾಗಿದ್ದವು. ಈ ವ್ಯತ್ಯಾಸವಿದ್ದರೂ ಇಬ್ಬರೂ ಮಾನವೀಯ ಮೌಲ್ಯಗಳ ಮೇಲೆ ಒತ್ತುಕೊಟ್ಟರು. ದಯೆ, ಪ್ರೀತಿ ಒಳ್ಳೆಯ ನಡೆವಳಿಕೆ ಇಬ್ಬರಿಗೂ ಅತ್ಯಮೂಲ್ಯವಾದವುಗಳು. ಇನ್ನೊಂದು ವ್ಯತ್ಯಾಸವೆಂದರೆ ಬುದ್ಧ ಸನ್ಯಾಸಕ್ಕೆ ಕೊಟ್ಟ ಮಹತ್ವವನ್ನು ಬಸವಣ್ಣನವರು ಕೊಡಲಿಲ್ಲ. ಎಲ್ಲ ಭಕ್ತಿ ಪಂಥದ ಸಂತರಂತೆ ಬಸವಣ್ಣನವರೂ ಸಹ ಮನುಷ್ಯ ನಿತ್ಯ ಸಂಸಾರದಲ್ಲಿಯೇ ಇದ್ದು ತನ್ನ ಕೆಲಸ ಮಾಡಿಕೊಂಡು ದೇವರನ್ನು ಸಾಧಿಸಬಹುದೆಂದು ಪ್ರತಿಪಾದಿಸಿದರು. ಇದಕ್ಕೆ ಸನ್ಯಾಸಿಯಾಗುವ, ಭಿಕ್ಷುವಾಗುವ ಅಗತ್ಯವಿದ್ದಿಲ್ಲ.

ದೇಶವಿಡೀ ವ್ಯಾಪಿಸಿದ ಭಕ್ತಿ ಪಂಥದಿಂದಲೂ ಭಾರತದಲ್ಲಿ ಅಸ್ಪೃಶ್ಯತೆ ತೊಲಗಲಿಲ್ಲ. ಜಾತಿಯ ಕಟ್ಟಳೆಗಳು ಹೋಗಲಿಲ್ಲ. ಸ್ತ್ರೀಯರು ಸತಿ ಹೋಗುವುದು ಸಹ ನಿಲ್ಲಲಿಲ್ಲ. ಇಷ್ಟೆಲ್ಲ ತತ್ವವೇತ್ತರೂ ಸಂತರೂ ಮಾಡಿದ ಕೆಲಸ ವ್ಯರ್ಥವಾಯಿತೇನೋ ಎಂದು ಅನಿಸಿತು. ಬುದ್ಧ ಬಂದ ೧೭ ಶತಮಾನಗಳ ನಂತರ ಬಸವೇಶ್ವರರು ಬಂದರು. ಬಸವೇಶ್ವರ ಬಂದ ಎಳೆಂಟು ಶತಮಾನಗಳ ನಂತರ ಡಾ|| ಅಂಬೇಡ್ಕರರು ಬಂದರು. ಡಾ|| ಅಂಬೇಡ್ಕರರ ಮುಂಚೆ ಬ್ರಿಟಿಷರ ಆಳ್ವಿಕೆಯಲ್ಲಿಯೇ ರಾಜಾರಾಮ ಮೋಹನ ರಾಯರಿಂದ ಗಾಂಧೀಜಿಯ ತನಕ ಅನೇಕರು ಹಿಂದೂ ಸಮಾಜದ ಈ ಕಳಂಕವನ್ನು ನಿವಾರಿಸಲು ಮತ್ತು ಅದರ ಸುಧಾರಣೆ ಮಾಡಲು ಶ್ರಮಿಸಿದರು ನಿಜ, ಆದರೂ ಅವರಿಗೆ ಸಾಕಷ್ಟು ಸಾಫಲ್ಯ ಸಿಗಲಿಲ್ಲ. ಡಾ|| ಅಂಬೇಡ್ಕರರಂಥ ಭೀಮ ವ್ಯಕ್ತಿತ್ವವುಳ್ಳವರು ಈ ಕೆಲಸಕ್ಕೆ ಬೇಕಾಗಿತ್ತು. ಡಾ|| ಅಂಬೇಡ್ಕರರ ವಿಚಾರಗಳಲ್ಲಿಯೂ ಬುದ್ಧ ಬಸವರ ವಿಚಾರ ಗಳಲ್ಲಿಯೂ ಅನೇಕ ಸಾಮ್ಯಗಳಿವೆ. ಸಾಮಾಜಿಕ ನ್ಯಾಯದ ಮೇಲೆ ಅವರು ಕೊಟ್ಟ ಒತ್ತು, ವರ್ಣ ಮತ್ತು ಜಾತಿ ವ್ಯವಸ್ಥೆಯನ್ನು ತಿರಸ್ಕರಿಸಿದ್ದು, ಸ್ತ್ರೀಯರ ಹಕ್ಕುಗಳಿಗೆ ಕೊಟ್ಟ ಗೌರವ, ದೈಹಿಕ ಶ್ರಮಕ್ಕೆ ಮತ್ತು ದುಡಿಯುವ ಜನರಿಗೆ ಕೊಟ್ಟ ಮಹತ್ವ ಇವೆಲ್ಲ ಬುದ್ಧ ಬಸವರಿಬ್ಬರೂ ಪ್ರತಿಪಾದಿಸಿದ್ದರು. ಸಂಘಟನೆಗೆ ಸಹ ಮೂವರೂ ಒತ್ತು ಕೊಟ್ಟರು. ಆದರೆ ಡಾ|| ಅಂಬೇಡ್ಕರರು ಇನ್ನೂ ಮುಂದೆ ಹೋಗಿ ದಲಿತ ವರ್ಗಗಳು ಒಳ್ಳೆಯ ಶಿಕ್ಷಣ ಹೊಂದಬೇಕೆಂದೂ ಮತ್ತು ತಮ್ಮ ಹಕ್ಕುಗಳಿಗೆ ಹೋರಾಟ ಮಾಡಬೇಕೆಂದೂ ಉಪದೇಶಿಸಿದರು. ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳಿಲ್ಲದೆ ದಲಿತರು ಮುಂದೆ ಬರುವ ಮಾರ್ಗವಿದ್ದಿಲ್ಲ. ಸಮಾಜದ ಪ್ರಮುಖವಾಹಿನಿಯಲ್ಲಿ ದಲಿತರು ಬರಲು ಶಿಕ್ಷಣ ಮತ್ತು ಸರಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಕೊಟ್ಟದ್ದೂ ಒಂದು ಬಹಳ ಮಹತ್ವದ ಪಾತ್ರ ವಹಿಸಿತು. ಈ ಕಾರಣಗಳಿಂದ ಹಿಂದೆ ಬುದ್ಧ ಬಸವರು ಎಲ್ಲಿ ಅಯಶಸ್ವಿಯಾಗಿದ್ದರೋ ಅಲ್ಲಿ ಡಾ|| ಅಂಬೇಡ್ಕರರು ಯಶಸ್ವಿಯಾದರೆಂದೆನ್ನಬಹುದು. ಡಾ|| ಅಂಬೇಡ್ಕರರು ದಲಿತರನ್ನು ಮುಂದೆ ತಂದು ಭಾರತಕ್ಕೆ ಮತ್ತು ಹಿಂದು ಸಮಾಜಕ್ಕೆ ಇದ್ದ ಪುರಾತನ ಕಳಂಕವನ್ನು ಹೋಗಲಾಡಿಸಿ ದೊಡ್ಡ ಉಪಕಾರ ಮಾಡಿದರು. ಇಡೀ ದೇಶವೇ ಅವರಿಗೆ ಈ ಕಾರಣಕ್ಕಾಗಿ ಕೃತಜ್ಞವಾಗಬೇಕು.

ಈ ಲೇಖನದ ಮುಕ್ತಾಯಕ್ಕೆ ಮೊದಲು ಒಂದು ಮಹತ್ವದ ಅಂಶವನ್ನು ಮನಗಾಣಬೇಕು. ಅದೆಂದರೆ ವರ್ಣ ವ್ಯವಸ್ಥೆ, ಅಸ್ಪೃಶ್ಯತೆ ಈ ದೇಶದಲ್ಲಿದ್ದರೂ ದಲಿತರು ಭಾರತೀಯ ಸಂಸ್ಕೃತಿಗಷ್ಟೇ ಅಲ್ಲ ಹಿಂದೂ ಧರ್ಮಕ್ಕೂ ಸಹ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ. ಬಿಡಿ ಬಿಡಿಯಾಗಿ ಚದುರಿದ ಸ್ಥಿತಿಯಲ್ಲಿದ್ದ ವೇದಗಳ ಮಂತ್ರಗಳನ್ನು ಕ್ರೋಢೀಕರಿಸಿ ವ್ಯವಸ್ಥಿತವಾಗಿ ಸಂಪಾದಿಸಿದ ಶ್ರೇಯ ಮಹಾಭಾರತವನ್ನು ಬರೆದ ವೇದವ್ಯಾಸರಿಗೆ ಸಲ್ಲುತ್ತದೆ. ಇದಕ್ಕೇ ಅವರಿಗೆ ವೇದವ್ಯಾಸ ಎಂಬ ಹೆಸರು ಬಂತು. ಇವರು ಯಾರು? ವೇದವ್ಯಾಸ ಪರಾಶರ ಋಷಿಯ ಪುತ್ರ. ಪರಾಶರ ಮೂಲತಃ ಒಂದು ಕೆಳ ವರ್ಗಕ್ಕೆ ಸೇರಿದವ, ಆದರೆ ಜ್ಞಾನ ಸಂಪಾದಿಸಿ ಋಷಿಯಾದ. ಆತನ ಪ್ರೇಯಸಿ (ವೇದವ್ಯಾಸರ ತಾಯಿ) ಒಬ್ಬ ಮೀನುಗಾರಿತಿ, ಮತ್ಸ್ಯಗಂಧಿ. ಋಷಿ ಮೂಲ ಮತ್ತು ನದಿ ಮೂಲಗಳನ್ನು ನೋಡಬಾರದು ಎಂದು ಒಂದು ಉಕ್ತಿಯಿದೆ. ಇದಕ್ಕೆ ಕಾರಣ ಹಿಂದಿನ ಅನೇಕ ಋಷಿಗಳು ದಲಿತ ವರ್ಗಗಳಿಂದಲೇ ಬಂದವರು ಎಂಬುದು. ರಾಮಾಯಣ ಬರೆದ ವಾಲ್ಮೀಕಿಯೂ ದಲಿತರೇ, ಆರಣ್ಯಕಗಳನ್ನು ಬರೆದ ಜಾಬಾಲ ಋಷಿಯೂ ದಲಿತರೇ, ಸಂಸ್ಕೃತದ ಕವಿ ಶ್ರೇಷ್ಠ ಕಾಳಿದಾಸ ಕೂಡ ದಲಿತರೇ. ಭಕ್ತಿ ಪಂಥದಲ್ಲಿ ಹೆಸರುಗಳಿಸಿದ ಅನೇಕ ಸಂತರಲ್ಲಿ ಮತ್ತು ಶರಣರಲ್ಲಿ ದಲಿತರೂ ಸೇರಿದ್ದರು. ಹಿಂದಿನ ದಲಿತ ಪಂಡಿತರು, ಕವಿಗಳು, ಋಷಿಗಳು ಸಂಸ್ಕೃತದಲ್ಲಿ ಬರೆದರೆ, ಮಧ್ಯಯುಗದಲ್ಲಿ ಅವರು ಜನರ ಭಾಷೆಯಲ್ಲಿಯೇ ಬರೆದರು. ಇದಕ್ಕೆಲ್ಲ ಕಳಸವಾಗಿ ಅರ್ವಾಚೀನ ಯುಗದಲ್ಲಿ ದಲಿತರಾಗಿ ಹುಟ್ಟಿದ ಡಾ|| ಅಂಬೇಡ್ಕರರು ಭಾರತಕ್ಕೆ ಹಿಂದೂ ಕೋಡ್ ಮತ್ತು ಸಂವಿಧಾನವನ್ನೇ ಕೊಟ್ಟರು. ಇಷ್ಟೆಲ್ಲ ಇದ್ದೂ ದಲಿತರನ್ನು ಹಳ್ಳಿಗಳಲ್ಲಿ ಹೀನಾಯವಾಗಿ ಇನ್ನೂ ನಡೆಸುವುದು, ಅವರ ಮೇಲೆ ದೌರ್ಜನ್ಯ ಮಾಡುವುದು ತುಂಬಾ ಖಂಡನೀಯ, ವಿಷಾದನೀಯ. ಇದು ದೇಶಕ್ಕೆ ಅವಮಾನ, ಕಳಂಕ.

ಈ ಕಳಂಕ ಕಾಯಿದೆಯಿಂದ ಮಾತ್ರ ಹೋಗುವುದಿಲ್ಲ. ಜನರ ಮನಸ್ಸಿನ ಪರಿವರ್ತನೆಯೂ ಅಷ್ಟೇ ಮುಖ್ಯ. ಈ ದಿಶೆಯಲ್ಲಿ ಹಿಂದೂ ಮಠಾಧಿಪತಿಗಳು ಒಂದು ಮುಖ್ಯ ಕಾರ್ಯವನ್ನು ಮಾಡಬೇಕಾಗಿದೆ. ಮೊನ್ನೆ ಮಾರ್ಚ್ ೨೦೦೦ದಲ್ಲಿ ಪೋಪ್ ಜಾನ್ ಪಾಲ್-೨ ಅವರು ಕೆಥೋಲಿಕ್ ಚರ್ಚು ಧರ್ಮದ ಹೆಸರಿನಲ್ಲಿ ಮಾಡಿದ ಅತ್ಯಾಚಾರ ದೌರ್ಜನ್ಯದ ಬಗ್ಗೆ ತಪ್ಪೊಪ್ಪಿಕೊಂಡು ಕ್ಷಮಾಪಣೆ ಕೇಳಿದರು. ಇದು ಅವರ ದೊಡ್ಡ ಮನಸ್ಸನ್ನು ತೋರಿಸುತ್ತದೆ. ನಮ್ಮ ಮಠಾಧಿಪತಿಗಳೂ ಸಹ ವರ್ಣ ಪದ್ಧತಿ, ವಿಶೇಷವಾಗಿ ಅಸ್ಪೃಶ್ಯತೆ, ಹಿಂದೂ ಧರ್ಮಕ್ಕೆ ಬೇಕಾಗಿಯೇ ಇಲ್ಲ, ಮಾತ್ರವಲ್ಲ ಅದರ ಮೂಲ ತತ್ವಗಳಿಗೆ ವಿರುದ್ಧವಾಗಿದೆ ಎಂದು ಘೋಷಿಸಿ ಸಾವಿರಾರು ವರುಷ ಧರ್ಮದ ಹೆಸರಿನಲ್ಲಿ ನಡೆದ ದೌರ್ಜನ್ಯದ ಬಗ್ಗೆ ವಿಷಾದ ವ್ಯಕ್ತಪಡಿಸಬೇಕು. "ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಮಾಪ್ನುಯಾತ್" ಎಂಬ ಸನಾತನ ಹಿಂದೂ ತತ್ವವನ್ನು ಸಕ್ರಿಯವಾಗಿ ವ್ಯವಹಾರದಲ್ಲಿ ತರಬೇಕು. ಹಾಗೆ ಮಾಡಿದರೆ ಹಿಂದೂ ಧರ್ಮದ ಒಂದು ಮುಖ್ಯವಾದ ಕಳಂಕವನ್ನು ತೊಳೆದು ಹಾಕಲು ಸಹಾಯವಾದೀತು.

[illegible]

ಮೌನ ಸುಂದರಿ

ದು. ನಿಂ. ಬೆಳಗಲಿ


ಬಂಗಾರಿಗೆ ನಗು ಬಂದರೂ ತಡೆದಿದ್ದಳು. ನಾನು ಬಾಗಿ ಏಳುವಾಗ, ಅಜ್ಜಿ ನನ್ನ ಕೆನ್ನೆ, ಗದ್ದ, ತುಟಿ ಸ್ಪರ್ಶಿಸಿ ಲಟಿಕೆ ಮುರಿದುಕೊಂಡಿದ್ದಳು. ಬಂಗಾರಿಯ ಸರತಿ ಈ ಮೊದಲೇ ಮುಗಿದು, ಆಕೆ ಸೆರಗಿನ ಅಂಚನ್ನು ಬಾಯಿಗೆ ಹಿಡಿದು, ನಗುವಿಗೆ ತಡೆಹಾಕಿ, ದೊಡ್ಡದಾದ ಕಣ್ಣು ಪಿಳಿ ಪಿಳಿ ಬಿಡುತ್ತ ನನ್ನತ್ತ ನೋಡುತ್ತಲಿದ್ದಳು.

''ನನ್ನಪ್ಪ , ಆಯುಷ್ಯವಂತನಾಗು, ಎಂಟ ಮಕ್ಳ ತಂದಿ ಆಗು.....''

''ಅಜ್ಜೀ, ಈಗ ಎರಡಕ್ಕಿಂತ ಹೆಚ್ಚಿಗಿ ಹಡದರ ಸರಕಾರ ಶಿಕ್ಷಾ ಕೊಡತೈತಿ.....'' ಬದಿಗೆ ನಿಂತ, ನನ್ನ ಕಿರಿಯ ಭಾವ ಉಮೇಶ್, ಅಜ್ಜಿಯ ಮಾತಿಗೆ ನಕ್ಕು ಹೇಳಿದ್ದ.

''ಅದ್ಯಾವ ಸರ್ಕಾರೋ! ಮಕ್ಳಾ ಹಡೀಬ್ಯಾಡಂತ ಹೇಳ್ತಾರೇನು? ಅವರ್ನ ಇಲ್ಲಿ ಕರೀ ನೋಡ್ತಿನು......''

ಅಜ್ಜಿಯ, ಅಂದರೆ ನನ್ನ ಮಾವ -ಬಂಗಾರಿ ತಂದೆಯ ತಾಯಿಯ ಮಾತೆಂದರೆ ಇದೇ ರೀತಿ. ಹಳೆಯ ಸಂಪ್ರದಾಯದ ಆಕೆಗೆ, ಆಧುನಿಕ ವಿಚಾರಗಳ ಪರಿಚಯವಿರಲಿಲ್ಲ. ಇಷ್ಟೇ ಅಲ್ಲ, ಸಿರಿವಂತಿಕೆಯಲ್ಲಿಯೇ ಹುಟ್ಟಿ ಬೆಳೆದು, ಬಾಳಿದ ಆಕೆಗೆ, ಮಾತಿನ ಬೆಲೆಯೇ ಇಲ್ಲ. ಈ ರೀತಿಯ ಆಕೆಯ ಮಾತುಗಳು ಎಲ್ಲ ಮೊಮ್ಮಕ್ಕಳಿಗೆ ಮೋಜಾಗಿ, ಹಾಸ್ಯ ಮಾಡಲು ಅನುಕೂಲವಾಗುತ್ತಿದ್ದವು. ಮನೆಯಲ್ಲಿ ಆಕೆಯ ಆಜ್ಞೆಯೆಂದರೆ, ಸರ್ವಾಧಿಕಾರಿಯ ಆಡಳಿತ ವೆಂದೇ ಹೇಳಬೇಕು. ಈಗ ಅದೇ, ತನ್ನ ಏಕಮಾತ್ರ ಮೊಮ್ಮಗಳ ಮುಖ ನೋಡಬೇಕೆಂಬಾಸೆ ಆಯಿತಂತೆ. ಆಕೆಯ ಬಯಕೆ ಬೆನ್ನೇರಿ ತಂತಿ ಬಂದೇ ಬಿಟ್ಟಿತು. ಒಂದೆರಡು ದಿನ ರಜೆ ಪಡೆದು ಬಂಗಾರಿಯ ಮುಖವನ್ನು ಆಕೆಗೆ ದರ್ಶನ ಮಾಡಿಸಲು ನಾನೇ ಕರೆತರಬೇಕಾಯಿತು.



ಮಾವನವರಿಗೆ ವ್ಯಾಪಾರ, ತೋಟ, ಪಟ್ಟಿಯೆಂದು ಬಿಡುವಿರಲಿಲ್ಲ. ಹಿರಿಯವ ಸುರೇಶ ಕಾರು ತೆಗೆದುಕೊಂಡು ವ್ಯಾಪಾರಕ್ಕಾಗಿಯೇ ಮುಂಬಯಿಗೆ ಹೋಗಿದ್ದ. ಇನ್ನುಳಿದವರು ಕಿರಿಯರು ಶಾಲೆ ಕಾಲೇಜಿಗೆ ಹೋಗುವವರು. ಬಂಗಾರಿ ಒಬ್ಬಳೇ ತವರಿಗೆ ಬರಲು ಸಿದ್ಧಳಿಲ್ಲ. ಅಲ್ಲದೆ ಈ ಮುದುಕಿಯ ಮಂದ ಕಣ್ಣಿಗೆ ನಾನೂ ಬೀಳದಿದ್ದರೆ ಬಂಗಾರಿಗೆ ಒಂದೆರಡು ಬೈಗಳ ಹೆಚ್ಚು.

ಹೀಗಾಗಿ ಮೂರು ದಿನ ರಜೆ ಪಡೆದು, ಒಂದು ರವಿವಾರ ಸೇರಿಸಿ, ನಾನು ಅಜ್ಜಿಯ ಸಲುವಾಗಿಯೇ ಬಂಗಾರಿಯ ಜತೆಗೂಡಿ ಬರಬೇಕಾಯಿತು. ಇಲ್ಲ ಇದರಲ್ಲಿ ನನ್ನ ಸ್ವಾರ್ಥವೂ ಇದೆ. ಹೆಚ್ಚು ಸಂಬಳ ತರುವ ನೌಕರಿಯಾದರೇನು? ಆಫೀಸು, ಪ್ರವಾಸ ಎಂದು ತಲೆ ಚಿಟ್ಟು ಹಿಡಿದಾಗ, ಒಂದೆರಡು ದಿನ ನಿಶ್ಚಿಂತನಾಗಿ, ಬಂಗಾರಿಯ ಸಾನ್ನಿಧ್ಯ ವಿಹರಿಸಲು, ಮಾವನ ಮನೆಯ ಸತ್ಕಾರದಲ್ಲಿ ಸಮಯ ಕಳೆಯಲು ಅವಕಾಶ ಒದಗಿಸಿಕೊಡುತ್ತಿರುವ ಆ ಅಜ್ಜಿಗೆ ನನ್ನ ಕೃತಜ್ಞತೆಗಳು ಸಲ್ಲಬೇಕು.

ನನ್ನ ಮಾವನವರಿಗೆ ಬಂಗಾರಿ ಒಬ್ಬಳೇ ಮಗಳು. ಉಳಿದ ನಾಲ್ವರು ಗಂಡು ಮಕ್ಕಳು. ಹೀಗಾಗಿ ಅತ್ತೆಯಿಂದ ಮತ್ತು ಅಜ್ಜಿಯಿಂದ ಮೊಮ್ಮಕ್ಕಳು ಎಲ್ಲರೂ, ಬಂಗಾರಿಗೆ ಸೋತು ಸುಸ್ತಾಗುವವರೆಗೆ ವಾತ್ಸಲ್ಯ ಸುರಿಸುವವರೇ.

'ಬಂಗಾರಿ' ಎಂದು ನನ್ನವಳಿಗೆ ನಾನಿಟ್ಟ ಹೆಸರು. ಆಕೆಯ ಮನೆಯ ಹೆಸರು 'ಉಮಾ' ಎಂದಿದ್ದರೂ, ನಾನೇ ಪ್ರೀತಿಯಿಂದ ಆಕೆಯ ಕೊರಳಿಗೆ ತಾಳಿ ಬಿಗಿದ ಬಳಿಕ 'ಬಂಗಾರಿ' ಎಂದು ಕರೆಯತೊಡಗಿದೆ. ಕೆಲವರಿಗೆ ಇದು ಹಳೆಯದಾಗಿ ಕಂಡರೂ ನನಗೆ ಅಪರೂಪವಾಗಿತ್ತು.

ಮಧ್ಯಾಹ್ನ ಊಟ ಮುಗಿಸಿ ಬಂಗಾರಿಯ ಕೋಣೆಯಲ್ಲಿ ಅಡ್ಡಾದಾಗ, ನಿದ್ರೆ ಆಗಲೇ ಆವರಿಸಿಬಿಟ್ಟಿತ್ತು. ಕಣ್ಣು ಬಿಟ್ಟು ನೋಡಿದಾಗ, ಸಾಯಂಕಾಲ ಐದುಗಂಟೆ. ಪ್ರವಾಸದ ದಣಿವು ಆಗಷ್ಟೇ ಹಗುರಾದಂತೆ, ಮೈ ಮುರಿದು ಹಾಸುಗೆಯ ಮೇಲೆ ಕುಳಿತೆ.

''ರಾಯರ ನಿದ್ದೆ ಮುಗಿತೋ, ಇನಾ...'' ಪಕ್ಕದ ವಿರಾಮ ಕುರ್ಚಿಯಲ್ಲಿ ಕುಳಿತ ಬಂಗಾರಿ ಪುಸ್ತಕದಲ್ಲಿಯ ಮುಖ ತೆಗೆದು ಕೇಳಿದಳು.

''ಇನಾ ಮುಗೀಲಿಲ್ಲ! ಒಂದ ಜೋಗಳಾ ಅದ್ರೂ ಹಾಡು...'' ನಾನು ಆಕಳಿಸುವ ನೆಪದಲ್ಲಿ ಕೈ ಚಾಚಿದಾಗ ಆಕೆಯ ಸೆರಗೂ ಸಿಗದೆ, ಆಕೆ ದೂರ ಓಡಿ , ಟವಲ್ ಬೀಸಿ ಸಿಗ್ನಲ್ ಕೊಟ್ಟಿದ್ದಳು, ಮುಖ ತೊಳೆಯಲು ಬಚ್ಚಲ ಮನೆಗೆ ಬರಬೇಕೆಂದು.

ಕೋಣೆಯ ಬಾಕಿ ಬಚ್ಚಲ ಮನೆಯಲ್ಲಿ ಸಂದಾಯವಾಗಿತ್ತಷ್ಟೆ.

ಚಹ ಮುಗಿದ ಬಳಿಕ, ಅಜ್ಜಿಯ ಪ್ರೀತಿಯ ಮಾತಿಗೆ ಬಂಗಾರಿಯನ್ನು ಬಲಿ ಕೊಟ್ಟು ನಾನು ಉಪಾಯವಾಗಿ ಹೊರಗೆ ಜಾರಿದ್ದೆ, ನನ್ನ ಪ್ರಿಯವಾದ ತಾಣ ಸೇರಲು.

ಮಾವ ಅಂಗಡಿಯತ್ತ ಬರ ಹೇಳಿದ್ದರೆ, ಅತ್ತೆ ತೋಟದತ್ತ ತಿರುಗಾಡಲು ಬಂಗಾರಿಯ ಜತೆ ಬರುವು ದೆಂದು ಆಳಿಗೆ ಹೇಳಿ ಕಳಿಸಿದ್ದಳು. ಅಜ್ಜಿ ಬಂಗಾರಿ ಯನ್ನು ಕರೆದಾಗ ನನ್ನ ಲೈನ್ ಕ್ಲಿಯರ್ ಆಗಿತ್ತು.

ಆ ನಗರದ ಮೂಡಣ ದಿಕ್ಕಿಗೆ ಎರಡು ಮೈಲಿಗಳಾಚೆ ಇರುವ ಕಡಿದಾದ ಬೆಟ್ಟದಡಿ, ನನಗೆ ಬಹಳೇ ಹಿಡಿಸಿದ ತಾಣ. ಈ ಹಿಂದೆ ಉಮೇಶನ ಜತೆ ಬಂದು ಪರಿಚಯವಾದ ಆ ಸ್ಥಳ, ನಾನು ಅಲ್ಲಿ ಬಂದಾಗಲೆಲ್ಲ ಸ್ವಾಗತಿಸದೇ ಇರುತ್ತಿರಲಿಲ್ಲ. ನಿಸರ್ಗ ಸೌಂದರ್ಯ ಈ ಭೂಮಿಯ ಮೇಲೆ ಅಲ್ಲಲ್ಲಿ ಕಾಲು ಮುರಿದುಕೊಂಡುಬಿದ್ದಂತೆ ಆ ಬೆಟ್ಟದಡಿಯಲ್ಲಿಯ ಸೃಷ್ಟಿ ಸೂರೆಯಾಗಿ ಕಾಲೂರಿಕೊಂಡು ನಿಂತಿದೆ.

ಉನ್ನತವಾದ ಹಸಿರು ಬೆಟ್ಟ, ಒಂದೇ ಕಲ್ಲಿನಂತಿರುವ ಕಡಿದಾದ ಅದರ ಮಡಿಲು. ಅದರಡಿ ಭೂತಾಕಾರದ ಬಂಡೆಗಲ್ಲುಗಳು. ಅಲ್ಲಿಯೇ ಒಂದೆರಡು ಚಾಲುಕ್ಯ ಶೈಲಿಯ ನಿರ್ಲಕ್ಷಿತ, ಚಿಕ್ಕ ಸುಂದರ ದೇವಾಲಯಗಳು. ಇನ್ನು ಕೆಳಭಾಗದಲ್ಲಿ ಹಸಿರು ಗದ್ದೆ

ತೋಟಪಟ್ಟಿಗಳು. ಅದರಾಚೆ ಮಗು ಅಂಬೆಗಾಲಿಕ್ಕುತ್ತ ಸಾಗಿದಂತೆ ಬೆಳೆಯುತ್ತಿರುವ ನಗರ. ಮೇಲೆ ನೀಲಿ, ಮಧ್ಯ ಹಸಿರು ಅಲ್ಲಲ್ಲಿ ತಾಮ್ರವರ್ಣ, ಕೆಳಗೆ ಹಸಿರು ಒಂದು ಕ್ರಮವಿಲ್ಲದಂತೆ ಟ್ಯೂಬಿನಿಂದ ಸೋರಿ, ಕ್ಯಾನ್‌ವಾಸ್ ಮೇಲೆ ಇಳಿದ ಬಣ್ಣದಂತೆ. ಅದೂ ಕಣ್ಣಿಗೆ ಒಂದು ರೀತಿಯ ಅಂದ, ಇನ್ನೊಂದು ತೆರ ಚೆಂದ.

ಆಗ ಪಕ್ಕದಲ್ಲಿ ಬಂಗಾರಿ ಇಲ್ಲದ್ದು ಅನುಕೂಲ ವಾಯಿತೆನ್ನಬೇಕು. ತನ್ನ ಸೌಂದರ್ಯ ನೋಡದೆ, ಸೃಷ್ಟಿಯತ್ತ ನಿರಕಿಸುವುದು ಆಕೆಗೆ ಮಾತ್ಸರ್ಯವೇನಲ್ಲ! ಆದರೆ ಆಕೆ, ಮೂಕಿಯಾಗಿ ಆ ಸೌಂದರ್ಯದಲ್ಲಿ ಸಮಾಧಿ ಹೊಂದುವವಳಲ್ಲ. ಮೇಲಿನ ಮೋಡ, ಬುಡದ ಬೆಟ್ಟ, ಅಡಿಯ ಗುಡಿ, ಕಾಲಕೆಳಗಿನ ಕಾಲುವೆ, ಮಾತು ಹಾಗೇ ಜಾರಿ ತೋಟಪಟ್ಟಿ ದಾಟಿ ಊರು, ಸೀರೆ, ಸಿನೇಮಾ, ಕಾದಂಬರಿ - ಅವುಗಳಲ್ಲಿಯ ಪಾತ್ರಗಳು, ಮನೆ, ಅಲ್ಲಿಯ ಜನರು, ಗೆಳತಿಯರು, ಅವರ ಗಂಡಂದಿರು, ಒಂದೇ ಎರಡೇ ತುದಿ ಮೊದಲಿಲ್ಲದ ಆ ಮಾತುಗಳು.

ಮಂಚದಂತಹ ಒಂದು ಬಂಡೆಗಲ್ಲಿನ ಮೇಲೆ ಮಲಗಿ ನಾನು, ಪಡುವಣದತ್ತ ನೆಲಮುಗಿಲುಗಳನ್ನು ನೋಡುವು ದರಲ್ಲಿ ತಲ್ಲೀನನಾಗಿದ್ದೆ. ಕೆಳಗೆ ಗದ್ದೆಯ ಬತ್ತ ತರಂಗಗಳಂತೆ ತೆರೆತೆರೆಯಾಗಿ ಹೊಯ್ದಾಡುತ್ತಲಿತ್ತು. ಮೇಲೆ ಆಕಾಶದಲ್ಲಿ ಮೋಡ ಹಾಯಿ ಬಿಚ್ಚಿದ ದೋಣಿಗಳಂತೆ ತೇಲುತ್ತಿದ್ದವು. ಆದರೆ ಅದೆಷ್ಟು ಅಂತರ ಆ ತರಂಗ ಮತ್ತು ದೋಣಿಗಳಿಗೆ! ನಿಸರ್ಗ ಸೃಷ್ಟಿಯಾಗಿ ಅದೆಷ್ಟು ದಿನ ಕಳೆದರೂ, ಅದು ಹಳೆಯದಾಗಿಲ್ಲ. ನಿತ್ಯ ನೂತನವಾಗಿಯೇ ಕಾಣುತ್ತಿದೆ! ಎಂತಲೇ ಅದು ಸೃಷ್ಟಿ ಅಲ್ಲವೇ?

ಸುಳಿಗಾಳಿಯ ತರಂಗ, ಸುಗಂಧವನ್ನು ತಂದು ಮೂಗಿಗೆ ಸ್ಪರ್ಶಿಸಿದಾಗ, ಜಾಗರವಾಗಿತ್ತು. ಅದರ ಜತೆ ನವಿರಾದ ಸದ್ದು, ಎಡಗೈಯೂರಿ ಎದ್ದು ಅತ್ತಿತ್ತ ಕಣ್ಣು ಬಿಡುವುದರಲ್ಲಿ, ಬದಿಯ ದೇವಾಲಯದ ಪಕ್ಕದಲ್ಲಿ ಯುವತಿಯೋರ್ವಳು ಜಾರಿದ ಸೆರಗನ್ನು ಎಡಹೆಗಲಿ ನಂಚಿಗೆ ಸ್ಪರ್ಶಿಸುತ್ತ ನಗುಮುಖದಿಂದ ನಿಂತಿದ್ದಳು! ನನ್ನ ಕಣ್ಣು ನಂಬಿದರೂ ಮಿದುಳು ನಂಬಲು ಸಿದ್ಧವಾಗಿರಲಿಲ್ಲ. ಅಂಥ ನಿರ್ಜನ ಸ್ಥಳದಲ್ಲಿ, ಅದೂ ಮುಚ್ಚಂಜೆಯಲ್ಲಿ ಏಕಾಂಗಿಯಾದ ಸುಂದರಿ! ಮರೆಯಲ್ಲಿ ಬೇರೆ ಜತೆಯವರು ಇದ್ದಿರಬೇಕೆ? ಒಂದು ಕ್ಷಣದಲ್ಲಿ ಮುದ್ರಣ ಯಂತ್ರದಲ್ಲಿ ಹಾಯ್ದು ಹೋಗುತ್ತಿರುವ ಕಾಗದದ ಮೇಲೆ, ಚಿತ್ರ, ಅಕ್ಷರ, ಒತ್ತಿದಂತೆ ಅದೇನೋ ಭಾವನೆಗಳು ನನ್ನ ಮನಸ್ಸಿನಲ್ಲಿ ಮೂಡಿದವು.

ಆಕೆ ನಿಜವಾಗಿಯೂ ಯುವತಿಯೆ? ಇಲ್ಲವೆ .....ದೆವ್ವ, ಭೂತ.....! ಇಲ್ಲ ನಾನು ಅವುಗಳನ್ನು ಎಂದೂ ನಂಬಿದವನಲ್ಲ. ನನ್ನ ಅನುಭವಕ್ಕೆ ಅಂಥ ಸಂಗತಿಗಳು ಒದಗಿಲ್ಲ. ಹೇಗೆ ನಂಬಲಿ? ಸಂಜೆ ಏಳುಗಂಟೆಗೂ ಭೂತ ಪ್ರತ್ಯಕ್ಷವಾಗುವುದೆಂದು ನನ್ನ ಸ್ನೇಹಿತನೊಬ್ಬ ಹೇಳಿದ ಮಾತು ಸ್ಮರಣೆಗೆ ಬಂದಿತು. ಆಗ ಸರಿಯಾಗಿ ಏಳುಗಂಟೆ! ಭೂತವನ್ನು ನಾನು ಕಂಡವನಲ್ಲ. ಆದರೆ ಕೇಳಿದಂತೆ ಅವುಗಳಿಗೆ ಛಾಯೆ ಇರುವುದಿಲ್ಲವಂತೆ. ಆ ಕತ್ತಲೆಯಲ್ಲಿ ಅದೆಲ್ಲಿಂದ [illegible] ಬೇಕು? ಅವು ಕಣ್ಣು ಪಿಳಕಿಸುವದಿಲ್ಲವಂತೆ, ಇಲ್ಲ ಆಕೆ ಒಂದೆರಡು ಸಲ ಕಣ್ಣು ಪಿಳಕಿಸಿದ್ದನ್ನು ಮುಗುಳುನಗು ಬೀರಿದ್ದನ್ನು ಕಂಡಿದ್ದೆ. ಆಕೆ ಯಾವಳೋ ತರುಣಿಯೇ ಸರಿ!

ಮಲ್ಲಿಗೆಯ ದೇಹಕ್ಕೆ ತೆಳು ನೀಲಿ ಸೀರೆ ಅಂಟಿಕೊಂಡಿತ್ತು. ಒಂದಂಗುಲ ತೋಳಿನ ಬ್ಲೌಸು. ರಾಶಿಯಾದ ಕೇಶವನ್ನು ಜಾಗರೂಕತೆಯಿಂದ ತುರುಬು ಕಟ್ಟಿದ್ದಳು. ಸುಗಂಧ ತೆರೆ ಆಕೆಯಿಂದ ಹರಿದುಬರುತ್ತಲೇ ಇತ್ತು. ಇಷ್ಟೆಲ್ಲ ಕಣ್ಣ ಮುಂದೇ ಇರುತ್ತಿರಲು ಕಾಣದ ಭೂತದ ಬಗ್ಗೆ ಕಲ್ಪನೆಯೇಕೆ?

ತುಂಬ ವಿಚಾರಗಳು ತಾಕಲಾಡಿದ ಬಳಿಕ ನಾನು ಎದೆಗೊಂಡೆ. ಪ್ರಥಮದಲ್ಲಿ ಭಯ ಪಟ್ಟಿದ್ದೆನಂತಲ್ಲ. ಆ ಪರಿಸರ, ಆ ಏಕಾಂಗಿಯನ್ನು ಕಂಡು ಮನಸ್ಸು ಗಡಿಬಿಡಿಸಿತ್ತಷ್ಟೆ.

'ನಮಸ್ಕಾರ.....' ಎಂದು ಯಾಂತ್ರಿಕವಾಗಿ ಹೇಳಿದೆ.

ನನ್ನ ವಂದನೆಗೆ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಒಂದು ಕ್ಷಣ ಹಾಗೇ ನಿಂತು, ನಗುವನ್ನು ನಿಲ್ಲಿಸಿ ನನ್ನನ್ನು ದಿಟ್ಟಿಸುತ್ತಲೇ ಆಕೆ ಹಿಂದೆ ಸರಿದಿದ್ದಳು. ಅನಂತರ ಹಿಂದಿರುಗಿ ದೇವಾಯಲದತ್ತ ಮರೆಯಾದಳು. ಆಕೆಯ ವಿಚಿತ್ರ ನಡತೆಯಿಂದ ನನಗೇನೂ ಅರ್ಥವಾಗಲಿಲ್ಲ. ಪರಪುರುಷನಾದ ನನ್ನನ್ನು ಕಂಡು ಭಯಭೀತಳಾಗಿರ ಬೇಕೆ? ಹಾಗಾದರೆ ಇಂಥ ನಿರ್ಜನ ಪ್ರದೇಶಕ್ಕೆ ಅವೇಳೆ ಯಲ್ಲಿ ಯಾಕೆ ಬರಬೇಕು? ಜತೆಯಲ್ಲಿ ಯಾರಾದರೂ ಇದ್ದಿರಬಹುದೇ? ಕೆಲವು ಕ್ಷಣ ಹಾಗೆಯೇ ಕುಳಿತೆ.

ಕುತೂಹಲ ತಡೆಯದೇ ಎದ್ದು, ಆಕೆ ಮಾಯವಾದ ಸ್ಥಳಕ್ಕೆ ಹೋಗಿ ನೋಡಿದಾಗ, ಅಲ್ಲಿ ಏನೂ ಕಾಣಲಿಲ್ಲ. ತಿಳಿ ಕಪ್ಪು ಬಣ್ಣದಲ್ಲಿ ಇನ್ನಷ್ಟು ದಟ್ಟ ಕಪ್ಪನ್ನು ಸುರಿಯುವಂತೆ ಕತ್ತಲೆ ಗಾಢವಾಗಿತ್ತು! ಅತ್ತಿತ್ತ ದೇವಾಲಯ ಬಂಡೆಗಲ್ಲು ಸುತ್ತಿದ್ದೇ ಶ್ರಮ. ಆಕೆ ಕಾಣಲೇ ಇಲ್ಲ. ಮುಂದೆ ಅಲ್ಲಿ ನಿಲ್ಲಲಾಗದೆ ಆಕೆ ನಿಂತ ಭಂಗಿಯನ್ನೇ ತಲೆಯಲ್ಲಿ ತುಂಬಿಕೊಂಡು ನಿಧಾನವಾಗಿ ಮನೆಗೆ ಹಿಂದಿರುಗಿದೆ.

ಬಂಗಾರಿಯೆದುರು ನನ್ನ ಗಂಭೀರ ಮುಖ ತೋರಿಸಲು ಕಷ್ಟವಾಯಿತು. ಮುಖದ ಮೇಲೆ ಆದಷ್ಟು ನಗೆ ಎಳೆದುಕೊಂಡು, ಆ ನೋಟ ಮರೆಯಲು ಯತ್ನಿಸುತ್ತಿದ್ದೆ. ಆಳವಾಗಿ ಬೇರು ಬಿಟ್ಟ ಆ ಮೌನ ಸುಂದರಿಯ ಚಿತ್ರ ಹೇಗೆ ಅಲುಗಾಡಬೇಕು?

ಮರುದಿನ ನಮ್ಮ ಆಗಮನದ ನೆಪದಿಂದ ತೋಟದಲ್ಲಿ ಭೋಜನದ ಏರ್ಪಾಟು ನಡೆದಿತ್ತು. ಬೆಳಿಗ್ಗೆ ನಾನು ಮನೆ ಯಲ್ಲಿ ಉಪಹಾರ ಮುಗಿಸಿ ಭಾವಂದಿರ ಜತೆ ಸ್ನಾನಕ್ಕಾಗಿ ತೋಟಕ್ಕೆ ಬಂದಿದ್ದೆ. ಇನ್ನೂ ಕಾರು ಬರದೆ, ಅತ್ತೆ, ಅಜ್ಜಿ, ಬಂಗಾರಿಯರಿಗಾಗಿ ಚಕ್ಕಡಿಯನ್ನು ಕಳಿಸಲಾಗಿತ್ತು. ಮಾವ, ಮಧ್ಯಾಹ್ನ ಬಿಡುವು ಮಾಡಿಕೊಂಡು ಊಟದ ಸಮಯಕ್ಕೆ ಬರುವುದಾಗಿ ಹೇಳಿ ಅಂಗಡಿಗೆ ಹೋಗಿದ್ದರು.

ಎಪ್ಪತ್ತು ವರ್ಷ ವಯಸ್ಸಾದರೂ ಇನ್ನೂ ಗಟ್ಟಿಮುಟ್ಟ ಯಾದ ಅಜ್ಜಿ ತನ್ನ ಮೊಮ್ಮಕ್ಕಳ ಜತೆ ಅಡ್ಡಾಡಿ ತೋಟ ನೋಡುವುದರಲ್ಲಿ ಮಗ್ನಳಾಗಿದ್ದಳು. ಕಬ್ಬಿನ ಪಡ, ಎಲೆ ಬಳ್ಳಿ, ಬಾಳೆ ಪಡ ಸುತ್ತುವುದರಲ್ಲಿ ಬಂಗಾರಿ ಜಾರಿಕೊಂಡು ಬಂದು ಬಾವಿಯ ದಡದಲ್ಲಿ ನಿಂತ ನನ್ನನ್ನು ಸೇರಿಕೊಂಡಿದ್ದಳು. ಅತ್ತೆ ಆಳಿನ ಜತೆ ತೋಟದ ಮನೆಯಲ್ಲಿ ಅಡುಗೆಗೆ ತೊಡಗಿದ್ದಳು. ಇನ್ನೇನು, ನಾವೇ ನಾವು!

ಬಂಗಾರಿ ಅಜ್ಜಿಯ ಕಣ್ಣು ತಪ್ಪಿಸಿ ಬಾವಿಯತ್ತ ಬರಲು ಒಂದು ಬಲವಾದ ಕಾರಣವಿತ್ತು. ಬಂಗಾರಿಗೆ ಬಾವಿಯಲ್ಲಿ ಈಜುವ ಚಪಲ. ಅದಕ್ಕೆ ಅಜ್ಜಿಯ ಆತಂಕ. ಬಂಗಾರಿ ದೊಡ್ಡವಳಾದ ಬಳಿಕ ಅಜ್ಜಿ, ಆಕೆಯನ್ನು ಬಾವಿಯತ್ತ ಬಿಟ್ಟವಳೇ ಅಲ್ಲ. ಅಜ್ಜಿಯಿಲ್ಲದಾಗ, ಆಗೀಗ ನೀರಿನಲ್ಲಿ ತೇಲುತ್ತಾಳಷ್ಟೆ.

ಅದಾಗಲೇ ಸಾಕಷ್ಟು ಈಜಿ, ಸ್ನಾನ ಮುಗಿಸಿದ ನಾನು, ಮೀನಿನಂತೆ ನೀರಲ್ಲಿ ಬಳಕುವ ಬಂಗಾರಿಯನ್ನೇ ನಿಟ್ಟಿಸುತ್ತ ಏತದ ಕಟ್ಟೆಯ ಮೇಲೆ ಕುಳಿತಿದ್ದೆ. ನನ್ನ ದೇಹ ಅಲ್ಲಿದ್ದು, ದೃಷ್ಟಿ ಬಂಗಾರಿಯತ್ತ ಸರಿದರೂ, ಮನಸ್ಸು ಮಾತ್ರ ಆ ಮೌನ ಸುಂದರಿಯನ್ನೇ ಸುತ್ತಿಕೊಂಡು ಸುಳಿದಾಡುತ್ತಲಿತ್ತು.

ಆಕೆ ಯಾರು? ಅಲ್ಲಿ ಏಕೆ ಬಂದಿದ್ದಳು? ಅಂಥ ಸಮಯ ಅದೇನು ಕೆಲಸ? ಅದೆಲ್ಲಿ ಮಾಯವಾದಳು? ಅದೇಕೆ? ಹೇಗೆ? ನೂರೆಂಟು ಪ್ರಶ್ನೆಗಳ ಫಿಲ್ಮ್ ಮಾಲಿಕೆ ಬಿಚ್ಚಿ, ಬೇರೆ ಬೇರೆ ಚಿತ್ರ ಮೂಡಿಸುತಲೇ ಇತ್ತು.

ಮಧ್ಯಾಹ್ನ ಒಂದು ಗಂಟೆಯ ಮೇಲೆ ಮಾವ ಬಂದಾಗ ಎಲ್ಲರೂ ಸೇರಿ ಊಟಕ್ಕೆ ಕುಳಿತೆವು ಆ ರಸಮಯ ಪ್ರಸಂಗದಲ್ಲಿ ಎಲ್ಲ ಮರೆತು ಅವರೊಡನೆ ಬೆರೆತಿದ್ದೆನು. ಊಟ ಮುಗಿದ ಬಳಿಕ ನಿದ್ರೆಗೆ ಅವಕಾಶವಿದ್ದರೂ ಕಣ್ಣು ಕೂಡಲಿಲ್ಲ. ಬಂಗ್ಲೆಯ ಕೋಣೆಯಲ್ಲಿಯೇ ಚಹ ಬಂತು.

ಬಂಗಾರಿ ಚಹ ತಂದು ಕಾಟಿನ ಮೇಲೆ ಕುಳಿತು,

''ಇನ್ನು ಸಂಜೆ ಕಾರ್ಯಕ್ರಮ ಏನು?'' ಎಂದು ಕೇಳಿದಳು.

ಆಕೆಯೂ ಬೆಟ್ಟದಡಿ ಬರುವುದಾಗಿ ಆಶಿಸಿದ್ದಾಳೆಂದು ಬಂಗಾರಿಯ ಮುಖಚಹರೆಯಿಂದ ಕಂಡುಕೊಂಡೆ. ಈದಿನ ಆಕೆಗೆ ನನ್ನ ಜತೆ ಒಂದೆರಡು ನಿಮಿಷ ಕಳೆಯಲು ಸಮಯ ದೊರೆತಿರಲಿಲ್ಲ. ಆ ಕಾರಣವೂ ಸೇರಿತ್ತು. ಆಕೆಯನ್ನು ಬಿಟ್ಟು ನಾನು ಅತ್ತ ಹೋಗಬೇಕೆಂದರೆ, ಆಕೆಯೇ ಮಾತಿನ ಪ್ರಸ್ತಾವನೆ ಹಾಕಿದ್ದಾಳಲ್ಲ!

''ಯಾಕ ಮೂಕರಾದ್ರಿ? ನಾ ಹೇಳಿದ್ದು ಕೇಳಿಸಲಿಲ್ಲ...?''

''ಹು, ಎರಡೂ ಕಿವಿ ಕೇಳಿಸ್ತಾವು....'' ನಗುತ್ತ ನಾನು ಮಾತು ಬದಲಿಸಲು, ಆಕೆಯ ಜಡೆಯ ಚುಂಗನ್ನು ಸ್ಪರ್ಶಿಸಿ ಏನನ್ನೋ ಹೇಳಿದೆ.

''ನಿಮ್ಮಂಥವ್ರಿಗೆ, ಇನಾ ಎರಡು ಕಿವಿ ಹೆಚ್ಚ ಬೇಕಾಗಿದ್ದವು'' ಕತ್ತು ಕೊಂಕಿಸಿ ಬಂಗಾರಿ ಕಣ್ಣು ಪಿಳಕಿಸಿದಳು.

''ಗಂಡಸರಿಗೆ ಕೊಟ್ಟರೇನ ಲಾಭ? ನಿಮ್ಮಂಥ ಹೆಂಗಸರಿಗೆ ಕೊಟ್ಟಿದ್ದರ ಇನಾ ತುಸು ಜನ ಅಕ್ಕಸಾಲಿಗರ ಹೊಟ್ಟೆ ತುಂಬುತ್ತಿತ್ತು.....'' ಎಂದೆನ್ನುತ್ತ, ನಾನು ಆಕೆಯ ಕಿವಿ ಹಿಡಿಯುವುದರಲ್ಲಿ ತಪ್ಪಿಸಿಕೊಂಡು ಹೋಗಿದ್ದಳು.

ನಾನು ಅವಸರವಾಗಿ ಎದ್ದು, ಉಪಾಯದಿಂದ ಅಜ್ಜಿಯ ಹತ್ತಿರ ಹೋದೆ. ನನ್ನ ಉಪಾಯ ನಾಟ, ಬಂಗಾರಿ ಎಲ್ಲರ ಜತೆ ಚಕ್ಕಡಿಯಲ್ಲಿ, ಮನೆಗೆ ಮರಳುವುದಾಗಿತ್ತು.

ನಾನು ತೋಟದಿಂದ ಹಾಗೇ, ಆ ಬೆಟ್ಟದತ್ತ, ಬಂಗಾರಿ

ಯತ್ತ ಹಿಂದಿರುಗಿ ನೋಡದೆ ಸಾಗಬೇಕಾಯಿತು.

ಆ ಮೌನ ಸುಂದರಿ ಈ ದಿನವೂ ಬರಬಹುದೇನೋ ಎಂಬ ಆಶೆ. ಅದು ಭರವಸೆಯ ರೂಪದಲ್ಲಿ ತಾಳುತ್ತಿತ್ತು. ನನಗೆ ಯಾವ ಸಂಬಂಧವಿಲ್ಲದಿದ್ದರೂ, ಆ ವಿಚಿತ್ರ ಸನ್ನಿವೇಶದಲ್ಲಿ ಕಂಡ ಆಕೆಯ ಬಗೆಗೆ ತಿಳಿಯಲು ಕುತೂಹಲ, ಹುಚ್ಚು ರೀತಿಯ ಒಂದು ಬಯಕೆ. ಅಷ್ಟಲ್ಲದೆ ಮತ್ತಿನ್ನೇನು?

ಆ ದಿನವೂ ಹೊನ್ನ ಬಿಸಿಲಿನಲ್ಲಿ ಪ್ರಕೃತಿ ಚೇತೋಹಾರಿಯಾಗಿ ಚೆಲ್ಲುವರಿದರೂ, ಅದರತ್ತ ನನ್ನ ಗಮನವಿರಲಿಲ್ಲ. ಆಕೆ ನಿಂತು ಮಾಯವಾದ ಆ ದೇವಾಲಯದ ಬಲ ಪಕ್ಕದಲ್ಲಿ ಅತ್ತಿತ್ತ ಅರಸಿದೆ. ಬಂಡೆಯ ಮೇಲೆ ನಿಂತು ನೋಡಿದೆ. ಹುಬ್ಬಿಗೆ ಅಂಗೈಯಿಟ್ಟು ಬಹುದೂರ ದೃಷ್ಟಿಸಿದೆ. ಏನೂ ಗೋಚರಿಸದು. ಇನ್ನೂ ಸಾಕಷ್ಟು ಸಮಯವಿದ್ದು, ಆಕೆ ಬಂದು ಹೋಗಬಹುದೇನೋ ಎಂಬ ಭರವಸೆ, ನನ್ನನ್ನು ಅಲ್ಲಿಯೇ ಸಮಯ ಕಳೆಯುವಂತೆ ಒತ್ತಾಯಿಸುತ್ತಲಿತ್ತು.

ಹಾಗೇ ಅತ್ತಿತ್ತ ಸುಳಿಯುತ್ತಿರುವಲ್ಲಿ, ಹಿಂದಿನ ದಿನ ನಾನು ಅಡ್ಡಾದ ಬಂಡೆಗಲ್ಲಿನ ಮೇಲೆ ಒಂದು ಕಾಗದದ ಚೂರು ಕಂಡಿತು. ಅವಸರವಾಗಿ ಸಮೀಪಿಸಿದಾಗ, ಅದು ಹಾರಿ ಹೋಗದಂತೆ ಅದರ ಮೇಲೆ ಕಲ್ಲನ್ನಿಡಲಾಗಿತ್ತು. ಆ ತುಂಡನ್ನು ಕೈಗೆತ್ತಿಕೊಂಡು ನೋಡಿದೆ. ಹಸಿರು ಮಸಿಯಲ್ಲಿ ಮೂಡಿಸಿದ ಮುದ್ದಾದ ಅಕ್ಷರಗಳು.

''ಅಪರಿಚಿತರಿಗೆ,

''ಇಲ್ಲಿ ನೀವು ಆಕಸ್ಮಿಕವಾಗಿ ಕಂಡಿರಿ. ನಾನು ಭಯದಿಂದ ಮರೆಯಾದೆ. ಈ ದಿನ ಬೇಗ ಬಂದು ನಿಮ್ಮನ್ನು ನಿರೀಕ್ಷಿಸಿ ಮರಳುತ್ತಿದ್ದೇನೆ. ಒಂದು ಜರೂರ ಕಾರ್ಯದಲ್ಲಿ ನೀವು ನನಗೆ ಸಹಾಯ ಮಾಡುವಿರೆಂದು ನಂಬಿದ್ದೇನೆ. ಈ ರಾತ್ರಿ ಒಂಬತ್ತು ಗಂಟೆಗೆ ರೈಲು ನಿಲ್ದಾಣದ ಎಡಬದಿಯ ಕ್ರಾಸಿಂಗ್ ಗೇಟಿಗೆ ಬಂದು ಕಾಣಬೇಕು. ಕಾರಣ, ಸಮಕ್ಷಮ.

ಇತಿ

ಅಪರಿಚಿತೆ.''

ಒಂದು ಕ್ಷಣ ನಾನು ಕಲ್ಲಿನಂತೆ ನಿಂತುಬಿಟ್ಟೆ. ಯಾವುದೋ ಕುತೂಹಲದ ಬೆನ್ನೇರಿ ಬಂದಾಗ, ಹೊಸ ಸಮಸ್ಯೆಯೊಂದು ಸುತ್ತು ಹಾಕುತ್ತಿದೆಯಲ್ಲ! ಇದೇನು? ಆಕೆ ಯಾರು? ಅಲ್ಲಿಗೇಕೆ ಬರುತ್ತಿರಬಹುದು? ಈ ಮೊದಲು ಬೇರೆ ಎಲ್ಲಿಯಾದರೂ ನನ್ನನ್ನು ಕಂಡಿರಬಹುದೆ? ನನ್ನನ್ನೇಕೆ ಕರೆದಿರಬೇಕು? ನನ್ನಿಂದ ಅದೇನು ಸಹಾಯ?

ಬೇರೆ ಏನಾದರೂ ಮೋಸ ಇದ್ದಿರಬಹುದೆ? ಇದಕ್ಕೇನು ಉಪಾಯ? ಮತ್ತೆ ಅವೇ ನೂರೆಂಟು ಸಮಸ್ಯೆಗಳಿಂದ ನನ್ನ ಮನಶ್ಶಾಂತಿ ಕದಡಿತ್ತು. ಆ ಕಾಗದದ ಚೂರು ಗೊಂದಲವನ್ನುಂಟು ಮಾಡಿತ್ತು.

ಸಮಯ ನೋಡಿದೆ, ಸರಿಯಾಗಿ ಏಳಾಗಿತ್ತು. ಇದೇನು ವಿಸ್ಮಯ! ಆ ವಿಚಿತ್ರ ಸನ್ನಿವೇಶದಲ್ಲಿ ಎದೆಯೊಳಗೆ ಅದೇನೋ ಭಯ ಕೊರೆಯುತ್ತಿರುವಂತೆ ಭಾವನೆ. ಆದರೆ, ಆ ಅಪರಿಚಿತಳ ಆಹ್ವಾನವನ್ನು ಸ್ವೀಕರಿಸದಿದ್ದರೆ? ಅದನ್ನು ಬಿಟ್ಟು ನನ್ನ ಪಾಡಿಗೆ ನಾನಿದ್ದರೆ? ಅದರಲ್ಲಿ ಮತ್ತಷ್ಟು ಕುತೂಹಲವೊಂದು ಜೇರೆ. ಆ ಆಹ್ವಾನವನ್ನು ಸ್ವೀಕರಿಸಲೇ ಬೇಕು. ಅದೇನು ವಿಷಯ ನೋಡಿಯೇಬಿಡಬೇಕು. ಅಸಹಾಯಕಳಾದ ಓರ್ವ ಸ್ತ್ರೀ, ಏನಾದರೂ ಸಹಾಯ ಯಾಚಿಸಿದ್ದರೆ?

ಊಟವಾದ ನಂತರ ಏನೇನೂ ನೆಪಮಾಡಿ, ಹೇಗಾದರೂ ಬಂಗಾರಿಯನ್ನು ಬಿಟ್ಟು, ಆ ಮೌನಸುಂದರಿ ತಿಳಿಸಿದ ಸಮಯಕ್ಕೆ ರೈಲು ಗೇಟಿನತ್ತ ಹೋಗಬೇಕೆಂದು ನಿರ್ಧರಿಸಿ, ಕೆಳಗಿಳಿದು ಹೊರಗಿನ ಒಂದು ಕಾಲುದಾರಿ ಹಿಡಿದೆ. ಯಾವುದೋ ಅನುಚಿತ ಮಾರ್ಗ ಹಿಡಿದಿರುವದಾಗಿ ಎದೆಯಲ್ಲಿ ಅಳುಕು ಮೂಡಿ, ಮನಸ್ಸು ಸ್ಥಿಮಿತದಲ್ಲಿರಲಿಲ್ಲ.

ಕತ್ತಲು ಕವಿಯುವುದರಲ್ಲಿ ರಸ್ತೆ ಸೇರಿದಾಗ, ಎದೆಯಲ್ಲಿ ಒಂದಿಷ್ಟು ಅಭಯ ತುಂಬಿತ್ತು. ರಸ್ತೆಯ ದೀಪ ಬೆಳಗಿ ಉಪಕರಿಸಿದ್ದವು.

ಹೆದ್ದಾರಿ ದಾಟಿ ಮನೆಯತ್ತ ನಡೆದಾಗ, ಅನತಿದೂರದ ಪೆಟ್ರೋಲ್‌ಬಂಕ್ ಹತ್ತಿರ ಜನಸಂದಣಿ ಸೇರಿದ್ದು ಕಂಡಿತು. ಕುತೂಹಲ ತಡೆದಿರಲಿಲ್ಲ. ಹೆದ್ದಾರಿಯ ಎಡಬದಿಗೆ ಒಂದು ಟ್ರಕ್ ನಿಂತಿತ್ತು. ಜನರು ಅದನ್ನು ಸುತ್ತುವರೆದಿದ್ದರು.

ದಿ|| ದು. ನಿಂ. ಬೆಳಗಲಿಯವರ ಕಥೆ ಕಳಿಸಿ ಕೊಟ್ಟವರು

ಶ್ರೀ ಮಧುಕೇಶ್ವರ ಬೆಳಗಲಿ
'ಕಾದಂಬರಿ', ಸೋಮವಾರಪೇಟೆ, ಬನಹಟ್ಟಿ - ೫೮೭ [illegible]

ಎಡ್ವರ್ಡ್ ಸಯಿದ್

ಪ್ಯಾಲೆಸ್ತೈನ್ ಜನತೆಯ ದುರಂತಗಳು ಮತ್ತು ಕನಸುಗಳನ್ನು ಬಿಂಬಿಸುವ ಮೂಲಕ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಗಳ ನಿಜಸ್ವರೂಪವನ್ನು ಬಯಲು ಮಾಡುತ್ತಿರುವ ಮಹಾನ್ ಚಿಂತಕ

ಎಡ್ವರ್ಡ್ ಸಯಿದ್

ದೇವರೇ !
ಚೆಲುವನ್ನು ಸೃಷ್ಟಿಸಿದ್ದು ನೀನೆ,
ಅದರ ಒಂಬತ್ತು ಭಾಗ ಜೆರೂಸಲೆಮ್‌ಗೆ,
ಮಿಕ್ಕಿದ್ದು ಇತರರಿಗೆ
ನೀಡಿದ್ದು ನೀನೆ.
ದುಃಖ ದುಮ್ಮಾನಗಳನ್ನು
ಜಗಕ್ಕೆ ಹಂಚಿದ್ದು ಇನ್ನಾರು ?
ಅದರ ಒಂಬತ್ತು ಭಾಗ ಜೆರೂಸಲೆಮ್‌ಗೆ,
ಮಿಕ್ಕಿದ್ದು ಇತರರಿಗೆ
ನೀಡಿದ್ದು ಇನ್ನಾರು ?
ನೀನೆ.

ಪ್ಯಾಲೆಸ್ತೈನ್ ಸುಮಾರು ೪೫೦೦ ವರುಷಗಳ ಭವ್ಯ ಇತಿಹಾಸವುಳ್ಳ ನಾಡು. ತಮ್ಮ ಪುರಾತನ ಸಂಸ್ಕೃತಿ, ಕಲೆಗಳ ಬಗ್ಗೆ ಅಲ್ಲಿನ ಜನರಿಗಿರುವ ಹೆಮ್ಮೆ ಮತ್ತು ಅನಂತರದಲ್ಲಿ ಬಂದೆರಗಿದ ದುರಂತಗಳಿಂದ ಅವರಲ್ಲಿ ಆಳವಾಗಿ ಬೇರೂರುತ್ತಿರುವ ಹತಾಶೆಯ ಭಾವನೆಗಳಿಗೆ ಮೇಲಿನ ಸಾಲುಗಳು ಕನ್ನಡಿ ಹಿಡಿಯುತ್ತವೆ. ಜಗತ್ತಿನ ಎಲ್ಲ ಪ್ರಜ್ಞಾವಂತ ಜನತೆಯ ಅಂತಃಪ್ರಜ್ಞೆಯನ್ನು ಕಲಕುವಂಥ ನೋವಿನ ಅನುಭವ ಈ ಮಾತುಗಳಲ್ಲಿವೆ.

ತಾಯ್ನಾಡು ವಂಚಿತ ಪ್ಯಾಲೆಸ್ತೈನಿನ ಜನ

ಇತಿಹಾಸದ ಪುಟಗಳು ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಎಸಗಿರುವ ಘೋರ ಕೃತ್ಯಗಳಿಂದ ತುಂಬಿಹೋಗಿವೆ. ಅವರ ದುರಾಕ್ರಮಣ, ಶೋಷಣೆಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ತುತ್ತಾಗದೆ ಉಳಿದಿರುವ ಜನಾಂಗಗಳು, ಧರ್ಮಗಳು, ರಾಷ್ಟ್ರಗಳು ಯಾವುವೂ ಇಲ್ಲವೆಂದೇ ಹೇಳಬಹುದು. ಅದರಲ್ಲಿಯೂ ಈ ಪೈಶಾಚಿಕ ಶಕ್ತಿಗಳ ಮತ್ತು ಝಿಯೋನಿಸ್ಟರ [illegible]ಗಳಿಗೆ ತುತ್ತಾಗಿ ಮತ್ತು ನೆರೆ ಹೊರೆಯ ಅರಬ್ ಪ್ರತಿಗಾಮಿ ಶಕ್ತಿಗಳ ವಿಶ್ವಾಸಘಾತುಕತನಕ್ಕೆ ಬಲಿಯಾಗಿ, ತಮ್ಮ ತಾಯ್ನಾಡನ್ನೇ ಕಳೆದುಕೊಂಡು ೧೯೪೦ರಲ್ಲಿ ದೇಶಭ್ರಷ್ಟರಾದ ಪ್ಯಾಲೆಸ್ತೈನ್ ಜನತೆಯ ದುರಂತಕ್ಕೆ ಸಮನಾದ ಬೇರೊಂದು ದುರ್ಘಟನೆ ಮನುಕುಲದ ಇತಿಹಾಸದಲ್ಲಿ ಕಾಣಸಿಗದು. ಈ ಎಲ್ಲ ಬೆಳವಣಿಗೆಗಳ ಫಲವಾಗಿ ಪ್ಯಾಲೆಸ್ತೈನ್ ನೆಲದಲ್ಲಿ ದಿಢೀರನೆ ಅವತರಿಸಿದ ಯಹೂದ್ಯರ ನಾಡು ಇಸ್ರೇಲ್. ಪ್ರಾಚೀನ ಇತಿಹಾಸದಲ್ಲಿ ಅದು ಅವರ ನಾಡಾಗಿದ್ದಿತೆಂಬುದು ಅದರ ಪರವಾಗಿರುವ ಒಂದೇ [illegible]. ಇದರ ಪರಿಣಾಮವಾಗಿ ಅರ್ಧಶತಮಾನ ಕಾಲ ನೆರೆರಾಷ್ಟ್ರಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡು ನಿರಾಶ್ರಿತರಾಗಿ ಡೇರೆಗಳಲ್ಲಿ ದಿನಗಳನ್ನು ಕಳೆಯುತ್ತಿರುವ ಐವತ್ತು ಲಕ್ಷ ಪ್ಯಾಲೆಸ್ತೈನರು ತಮ್ಮ ತಾಯ್ನಾಡಿಗಾಗಿ ಇಂದಿಗೂ ಹೋರಾಡುತ್ತಿದ್ದಾರೆ. ಅಲ್ಲಿಯೇ ಉಳಿದ ಇಪ್ಪತ್ತು ಲಕ್ಷ ಜನ ಸ್ಥಳೀಯರು ಝಿಯೋನಿಸ್ಟರ ಆಡಳಿತಕ್ಕೆ ಸಿಕ್ಕಿ ದುರ್ಭರ ಬದುಕನ್ನು ನಡೆಸುತ್ತಿದ್ದಾರೆ (ಝಿಯೋನಿಸಂ ಎಂದರೆ ವಿಶ್ವದ ಎಲ್ಲ ಯಹೂದ್ಯರೂ ಒಂದೇ ನಾಡಿನಲ್ಲಿ - ಇರಬೇಕೆಂಬ ವಾದ. ಹಾಗಾಗಬೇಕಾದರೆ ಆ ನಾಡಿನ ಎಲ್ಲೆಗಳು ಸದಾ ವಿಸ್ತಾರಗೊಳ್ಳುತ್ತಲೇ ಇರಬೇಕೆಂಬುದು ಅವರಿಗೆ ಮಾನ್ಯ).

ಮಾನವೀಯ ಕಾಳಜಿಯುಳ್ಳ ಅನೇಕ ಪುರೋಗಾಮಿ ರಾಷ್ಟ್ರಗಳು, ರಾಜಕಾರಣಿಗಳು, ಸಾಹಿತಿಗಳು, ಕಲಾವಿದರು ಈ ಅಮಾನುಷ ಬೆಳವಣಿಗೆಗಳ ವಿರುದ್ಧ ಸಿಡಿದೆದ್ದಿದ್ದಾರೆ, ಮಮ್ಮಲ ಮರುಗಿದ್ದಾರೆ. ಪ್ಯಾಲೆಸ್ತೈನ್ ನೆಲದಿಂದಲೇ ಬಂದ ಕಾನಫಾನಿ, ತಖ್ವಾನ್, ಮಹಮ್ಮದ್ ದರ್ವೇಶ್ ಮುಂತಾದ ಸಾಹಿತಿಗಳು, ಕವಿಗಳು ತಮ್ಮ ಕೃತಿಗಳ ಮೂಲಕ ಝಿಯೋನಿಸಂ ವಿರುದ್ಧ ಧ್ವನಿ ಎತ್ತಿದ್ದಾರೆ. ಇವರೆಲ್ಲರಂತೆಯೇ ಪ್ಯಾಲೆಸ್ತೈನ್ ಸಮಸ್ಯೆಗಳ ಮೂಲಗಳನ್ನು ಒಳಹೊಕ್ಕು ನೋಡುವುದರ ಮೂಲಕ ಸಾಮ್ರಾಜ್ಯಶಾಹಿ, ವಸಾಹತುಶಾಹಿ ಮತ್ತು ಭಯೋತ್ಪಾದಕತೆಗಳನ್ನು ತೀವ್ರ ವಿಶ್ಲೇಷಣೆಗೆ ಗುರಿಮಾಡಿ, ಒರೆಹಚ್ಚಿ ನೋಡುವ ಅಸಾಧಾರಣ ಚಿಂತಕ ಮತ್ತು ಬುದ್ಧಿಜೀವಿ ಎಡ್ವರ್ಡ್ ಸಯಿದ್ ನಮ್ಮೆಲ್ಲರ ಗಮನವನ್ನು ಸೆಳೆಯುತ್ತಾನೆ.

ಧೀಮಂತ ಸಾಹಿತಿ......

ಸಯಿದ್‌ನ ಹುಟ್ಟು ಪ್ಯಾಲೆಸ್ತೈನ್‌ನಲ್ಲಿಯೇ. ೧೯೪೮ರಲ್ಲಿ ಬಲಾತ್ಕಾರದಿಂದ ತಾಯ್ನಾಡನ್ನು ತ್ಯಜಿಸಬೇಕಾಗಿ ಬಂದ ಲಕ್ಷಾಂತರ ಕುಟುಂಬಗಳಲ್ಲಿ ಈತನ ತಾಯಿತಂದೆಯರ ಕುಟುಂಬವೂ ಒಂದು. ಬಾಲ್ಯದ ಕೆಲವು ವರುಷಗಳ ಕಾಲ ಈಜಿಪ್ಟ್‌ನಲ್ಲಿ ವಾಸ. ಅಲ್ಲಿಯೇ ಅವನ ಆರಂಭಿಕ ವಿದ್ಯಾಭ್ಯಾಸ. ಬ್ರಿಟಿಷರ ವಸಾಹತುಶಾಹಿ ಶಾಲೆಗಳಲ್ಲಿ, ಪರಕೀಯರು ಹಾಗೂ ಆಂಗ್ಲ ಅಧ್ಯಾಪಕರ ದರ್ಪ ತಾತ್ಸಾರಗಳ ಮೊದಲ ಅನುಭವ ಆದದ್ದೂ ಅಲ್ಲಿಯೇ. ಅನಂತರ ಅಮೆರಿಕದಲ್ಲಿ ಕಲಿಕೆಯ ಮುಂದುವರಿಕೆ. ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಮತ್ತು ತೌಲನಿಕ ಸಾಹಿತ್ಯ ವಿಭಾಗದಲ್ಲಿ ಪ್ರೊಫೆಸರ್ ಆಗಿರುವ ಸಯಿದ್ ತನ್ನ ಜೀವನದುದ್ದಕ್ಕೂ, ಝಿಯೋನಿಸಂ ಮತ್ತು ಮೂಲಭೂತವಾದದ ವಿರುದ್ಧ ಹೋರಾಡುತ್ತಲೇ ಬಂದಿದ್ದಾನೆ. ಅಮೆರಿಕ ಒಂದು ಪ್ರಜಾಪ್ರಭುತ್ವ ರಾಷ್ಟ್ರವೆನಿಸಿಕೊಂಡಿದ್ದರೂ ಆಂತರಿಕವಾಗಿ ಕಪ್ಪು ಜನರ, ವರ್ಣೀಯರ, ಹಕ್ಕುಗಳನ್ನು ಹತ್ತಿಕ್ಕುವುದರ ಜೊತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ದಮನಕಾರಿ ನೀತಿಯನ್ನೇ ತನ್ನ ಇಡೀ ಚರಿತ್ರೆಯಲ್ಲಿ ಅನುಸರಿಸಿಕೊಂಡು ಬಂದಿರುವುದು ಒಂದು ವಿಪರ್ಯಾಸ. ಇದಕ್ಕೆಲ್ಲಾ ಪ್ಯಾಲೆಸ್ತೈನ್, ಕೊರಿಯಾ, ಚಿಲಿ, ದಕ್ಷಿಣ ಆಫ್ರಿಕ, ಚೈನಾ, ಹಿಂದಿನ ಸೋವಿಯತ್ ಒಕ್ಕೂಟ...... ಹೀಗೆ ಅನೇಕಾನೇಕ ಉದಾಹರಣೆಗಳಿವೆ. ಅಂತಹ ಸಾಮ್ರಾಜ್ಯಶಾಹಿ ನಾಡಿನಲ್ಲಿದ್ದುಕೊಂಡು ಪ್ಯಾಲೆಸ್ತೈನ್ ಬಗ್ಗೆ ಪ್ರಸ್ತಾಪಿಸಿದರೆ ಸಂಶಯಾತ್ಮಕವಾಗಿ ನೋಡುವವರೇ ಜಾಸ್ತಿ. ಅಮೆರಿಕದ ರಾಜಕಾರಣ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಅಲ್ಲಿನ ಯಹೂದ್ಯರ ಪ್ರಭಾವಶಾಲಿ ಪಾತ್ರವನ್ನು ಗಮನಿಸಿದರೆ ಮೇಲಿನ ಮಾತುಗಳಿಗೆ ವಿವರಣೆ ಸಿಗುತ್ತದೆ. ಎಡ್ವರ್ಡ್ ಸಯಿದ್ ಅಲ್ಲಿನ ಇಂತಹ ಪ್ರತಿಕೂಲ ವಾತಾವರಣದಲ್ಲಿ ಕಿರುಕುಳ, ಪ್ರಾಣಾಪಾಯದ ಬೆದರಿಕೆಗಳಿಗೆ ಅನೇಕ ಬಾರಿ ತುತ್ತಾಗಿದ್ದಾನೆ. ವಿಶ್ವವಿದ್ಯಾನಿಲಯದಲ್ಲಿ ಅವನ ಕಛೇರಿಯನ್ನು ದುಷ್ಕರ್ಮಿಗಳು ಸುಟ್ಟುಹಾಕಿದ್ದು ಒಂದು ಚಿಕ್ಕ ಘಟನೆ ಮಾತ್ರ. ಇವೆಲ್ಲವನ್ನೂ ಒಂದು ಸವಾಲಾಗಿ ಸ್ವೀಕರಿಸಿ ಸಯಿದ್ ತನ್ನ ಬೌದ್ಧಿಕ ಚಟುವಟಿಕೆಗಳನ್ನು ಮುಂದುವರಿಸಿದ್ದಾನೆ. ತನ್ನ ನೆಚ್ಚಿನ ನಂಬಿಕೆಗಳನ್ನು ನಿರ್ಭೀತವಾಗಿ ಮಂಡಿಸುತ್ತ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ, ಉಪನ್ಯಾಸಗಳನ್ನು ನೀಡಿದ್ದಾನೆ. ಹೊರದೇಶದಲ್ಲಿ ನೆಲೆಗೊಂಡಿದ್ದ ಪ್ಯಾಲೆಸ್ತೈನ್ ನ್ಯಾಷನಲ್ ಕೌನ್ಸಿಲ್ ಹಾಗೂ ಪ್ಯಾಲೆಸ್ತೈನ್ ಪಾರ್ಲಿಮೆಂಟಿನ ಸದಸ್ಯನಾಗಿ ಆತ ತನ್ನ ಸಾಹಿತ್ಯಕ ತಾತ್ವಿಕ ಹಾಗೂ ಸಾಂಸ್ಕೃತಿಕ ಆಸಕ್ತಿಗಳನ್ನು ಸಮಕಾಲೀನ ರಾಜಕೀಯ ಆಸಕ್ತಿಗಳೊಂದಿಗೆ ಮೇಳೈಸಿಕೊಂಡು ಹೋಗುತ್ತಿದ್ದಾನೆ.

ಫ್ರೆಂಚ್, ಸ್ಪ್ಯಾನಿಷ್, ಜರ್ಮನ್, ಇಟಾಲಿಯನ್

ಎಸ್. ಸುರೇಂದ್ರ

ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಸಾಕಷ್ಟು ಪಾಂಡಿತ್ಯ ಗಳಿಸಿರುವ ಸಯಿದ್ ಮೊದಲು ಅಭ್ಯಸಿಸಿದ್ದು ಭಾರತೀಯ ಇತಿಹಾಸವನ್ನು. ಅನಂತರ ಪ್ಯಾಲೆಸ್ಟೈನ್ ಸಮಸ್ಯೆಗಳು ಮತ್ತು ಅರಬಿಕ್ ಭಾಷೆಯ ಆಳವಾದ ಅಧ್ಯಯನವು ಸಮಗ್ರ ಇತಿಹಾಸದ ಅಧ್ಯಯನದತ್ತ ಕೊಂಡೊಯ್ದು ಪ್ಯಾಲೆಸ್ಟೈನ್ ಪ್ರಶ್ನೆಗೂ ಮೀರಿ ಸಾಮ್ರಾಜ್ಯಶಾಹಿ ಮತ್ತು ರಾಷ್ಟ್ರೀಯ ವಿಮೋಚನಾ ಚಳುವಳಿಗಳ ವಿವಿಧ ಆಯಾಮಗಳತ್ತ ಅವನು ಗಮನ ಹರಿಸುವಂತೆ ಪ್ರೇರೇಪಿಸುತ್ತದೆ. ಇದರ ಪರಿಣಾಮವೆಂದರೆ ಅವನ ಅದ್ಭುತವಾದ ವಸ್ತುನಿಷ್ಠ ಅಭಿಪ್ರಾಯಗಳು ಮತ್ತು ದೃಷ್ಟಿಕೋನ. ಈ ಎಲ್ಲ ಅನಿಸಿಕೆಗಳ ಅವನ ವಿಚಾರಧಾರೆ ಗಟ್ಟಿಗೊಳ್ಳುವುದು ''ಓರಿಯೆಂಟಲಿಸಂ'', ''ರಿಫ್ಲೆಕ್ಷನ್ಸ್ ಆಫ್ ಅನ್ ಎಕ್ಸೈಲ್'', ''ಕಲ್ಚರ್ ಅಂಡ್ ಇಂಪೀರಿಯಲಿಸಂ'' ಮತ್ತಿತರ ಅವನ ಕೃತಿಗಳಲ್ಲಿ. ದೇಶಭ್ರಷ್ಟರಾಗಿ ವಲಸೆ ಹೋಗಿ ಮತ್ತೆ ತಾಯ್ನಾಡಿಗೆ ಮರುಳುವ ಚಿಂತನೆಯಲ್ಲಿ ಜೀವನ ನಡೆಸುವವರ ಕತೆಯೇ ಈ ಶತಮಾನದ ಕತೆ ಎನ್ನುತ್ತಾನೆ ಸಯಿದ್. ''ನಾನು ರಾಜಕಾರಣಿಯಲ್ಲ; ಆದರೆ ಕಲೆ, ಸಾಹಿತ್ಯ, ಸಂಗೀತಗಳ ವಿವಿಧ ಪ್ರಕಾರಗಳಲ್ಲಿ ರಾಜಕೀಯ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ವಿಷಯಗಳನ್ನು ವಿಮರ್ಶಿಸು ವುದು ನನ್ನ ಪ್ರಮುಖ ಆಸಕ್ತಿಗಳಲ್ಲೊಂದು'', ಎನ್ನುತ್ತಾನೆ ಸಯಿದ್.

ಪತ್ರಿಕಾ ಸಂದರ್ಶನವೊಂದರಲ್ಲಿ, ''ನಿಮ್ಮ ಎಲ್ಲ ಬರಹಗಳಲ್ಲಿಯೂ ಗಡೀಪಾರು, ದೇಶಭ್ರಷ್ಟತೆಯ ವಿಷಯಗಳೇ ಪ್ರಾಮುಖ್ಯವಾಗಿವೆ. ಆದರೆ, ನೀವು ಅವನ್ನು ಪ್ರಸ್ತಾಪಿಸುವಾಗ ಜನರು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸ್ಥಳಾಂತರಗೊಳ್ಳುವುದಕ್ಕೆ ಮಾತ್ರ ಆ ಪದದ ಅರ್ಥವನ್ನು ಸೀಮಿತಗೊಳಿಸುವುದಿಲ್ಲ. ಏಕೆ?'' ಎನ್ನುವ ಪ್ರಶ್ನೆಗೆ ಎಡ್ವರ್ಡ್ ಸಯಿದ್‌ನ ಪ್ರತಿಕ್ರಿಯೆ ಮಾರ್ಮಿಕವಾಗಿದೆ:

''ಹದಿನೈದು ವರುಷಗಳ ಹಿಂದೆ 'ರಿಫ್ಲೆಕ್ಷನ್ಸ್ ಆಫ್ ಅನ್ ಎಕ್ಸೈಲ್' ಎಂಬ ಪ್ರಬಂಧ ಬರೆದಾಗ ಯಾವುದೋ ಒಂದು ನಿರ್ದಿಷ್ಟ ಚಾರಿತ್ರಿಕ ಹಿನ್ನೆಲೆಯಲ್ಲಿ ದೇಶಭ್ರಷ್ಟತೆಯ ಅನಿವಾರ್ಯತೆಯ ಬಗ್ಗೆ ಚರ್ಚಿಸಿದ್ದೆ. ಗಡೀಪಾರು ನಿನ್ನೆಮೊನ್ನೆಯದಲ್ಲ. ಉದಾಹರಣೆಯೆಂದರೆ ಆರ್ಮೇನಿಯನ್ನರು. ಅವರು ಜಗತ್ತಿನ ಅನೇಕ ಭಾಗಗಳಲ್ಲಿ ಚದುರಿ ಹಂಚಿ ಹೋಗಿದ್ದಾರೆ. ಇನ್ನು ಯಹೂದ್ಯರು. ಅಂದರೆ ಝಿಯೋನಿಸ್ಟರು. ಅವರು ಇಂದು ನಮ್ಮ ಶತ್ರುಗಳಾಗಿದ್ದಾರೆ. ಇದು ನಿಜಕ್ಕೂ ಒಂದು ವಿಪರ್ಯಾಸ. ಏಕೆಂದರೆ, ಚಾರಿತ್ರಿಕವಾಗಿ ನೋಡಿದರೆ ಅವರೂ ಗಡೀಪಾರಾದ ಒಂದು ಜನಾಂಗವೇ. ಇನ್ನೊಂದು ನನಗೆ ಮುಖ್ಯವೆನಿಸುವ ಅಂಶ, ಗಡೀಪಾರಾದ ಒಬ್ಬ ವ್ಯಕ್ತಿ - ತನ್ನದೆನಿಸಿಕೊಂಡ ನೆಲದಲ್ಲಿಯೇ ಗಟ್ಟಿಯಾಗಿ ಬೇರೂರಿದ ಮತ್ತೊಬ್ಬ - ಇವರಿಬ್ಬರ ಮನಃಸ್ಥಿತಿಗಳ ಅಂತರ. ಇಲ್ಲಿರುವ ಪ್ರತ್ಯೇಕತೆ, ಪರಕೀಯತೆ ಮತ್ತು ತುಮುಲಗಳನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. *ದೇಶಭ್ರಷ್ಟನಾದವನು ತನ್ನ ತಾಯ್ನಾಡಿಗೆ ಮರಳಿ ಬಂದ ಮಾತ್ರಕ್ಕೆ ಅವನಿಗೆ ಸಂಭವಿಸಿರುವ ದುರ್ಘಟನೆಗೆ ಪರಿಹಾರ ಸಿಕ್ಕಿಬಿಡುವುದೆಂಬ ಭ್ರಮೆ ನನಗಿಲ್ಲ. ಅದು ಅಷ್ಟು ಸರಳವೂ ಅಲ್ಲ. ಏಕೆಂದರೆ ಗಡೀಪಾರಿನ ಅನುಭವ ಅಷ್ಟು ಭಯಂಕರ, ಅಷ್ಟು ಹೃದಯ ವಿದ್ರಾವಕ. ಆ ಅನುಭವದಲ್ಲೆಲ್ಲೋ ಒಂದು ವ್ಯಕ್ತಿಗತ ವಾಗಿ ಆಣಕ ಅಡಗಿದೆ. ಗಡೀಪಾರಾಗಿ ನೂರಾರು ವರುಷ ತಮ್ಮ ನೆಲೆಯನ್ನು ಕಳೆದುಕೊಂಡು ಜನರು ಈಗಿನ ಜಾಗತಿಕ ಸಂದರ್ಭದಲ್ಲಿ ತಮ್ಮ ತಾಯ್ನಾಡನ್ನು ಮರುಪಡೆಯಲು ಸಾಧ್ಯವೇ ಇಲ್ಲ. ಇದು ಒಂದು ಹೊಸ ಮಾನವೀಯ ಸಮ್ಮಿಲನದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ ಎನಿಸುತ್ತದೆ.''*

ಬುದ್ಧಿ ಜೀವಿಗಳ ಸಕ್ರಿಯ ಪಾತ್ರ......

ಎಡ್ವರ್ಡ್ ಸಯಿದ್‌ನನ್ನು ಕೇವಲ ಒಬ್ಬ ಪ್ಯಾಲೆಸ್ಟೈನ್ ಪರವಾದ ಹೋರಾಟಗಾರ, ಬುದ್ಧಿಜೀವಿ ಎಂದು ಗುರುತಿಸಿದರೆ ಸಾಲದು. ಬುದ್ಧಿಜೀವಿಗಳ ಸಾಮಾಜಿಕ ಜವಾಬ್ದಾರಿಗಳೇನೆಂಬುದು ಅವನ ಮಾತುಗಳಲ್ಲಿಯೇ ಹೇಳುವುದಾದರೆ– ''ಒಬ್ಬ ಬುದ್ಧಿಜೀವಿ ತನ್ನ ಕಾರ್ಯಕ್ಷೇತ್ರವನ್ನು ತನಗೆ ಆಸಕ್ತಿಯುಳ್ಳ ವಿಷಯಗಳಿಗೆ ಮಾತ್ರ ಸೀಮಿತಗೊಳಿಸದೆ ಸುತ್ತಮುತ್ತಲಿನ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಆಗುಹೋಗುಗಳಿಗೆ ಸ್ಪಂದಿಸಿ ತನ್ನ ಕ[illegible]ಗಳನ್ನು ವಿಸ್ತರಿಸಿಕೊಳ್ಳಬೇಕಾಗುತ್ತದೆ. ಜಗತ್ತಿನ ಪ್ರತಿಯೊಂದು ಜನಸಮುದಾಯದಲ್ಲೂ ಬುದ್ಧಿಜೀವಿಗಳು ಉದಯಿಸಿದ್ದಾರೆ. ಆಯಾ ಸಂದರ್ಭಗಳಿಗನುಸಾರವಾಗಿ ಅವತ್ತಿನ ಚಿಂತನಾಕ್ರಮಗಳಿಗೆ ಚಾಲನೆಯಿತ್ತಿದ್ದಾರೆ. ಅವರ ಸಕ್ರಿಯ ಪಾತ್ರವಿಲ್ಲದ ಜಾಗತಿಕ ಕ್ರಾಂತಿಗಳು ಯಾವುವೂ ಇಲ್ಲ. ಹಾಗೆಯೇ ಪ್ರತಿಕ್ರಾಂತಿಗಳೂ ಇಲ್ಲ. ಬುದ್ಧಿಜೀವಿ ತನ್ನ ಮಾನಸಿಕ [illegible] ಕಲಿಕೆ, ಮನೋವೈಶಾಲ್ಯತೆ, ಬುದ್ಧಿಕೌಶಲ್ಯ ಎಲ್ಲವನ್ನೂ ಅರ್ಥಹೀನ ಸಂಪ್ರದಾಯ, ಜಡ್ಡುತನ, ಮತಾಂಧತೆಗಳ ವಿರುದ್ಧದ ಹೋರಾಟಗಳಿಗೆ ಅರ್ಪಿಸಿಕೊಂಡು ಕಣ್ಕಾವಲಿಯ ಬೇಕಾಗುತ್ತದೆ. ತುಳಿತಕ್ಕೊಳಗಾದವರ, ಸಾಮಾಜಿಕವಾಗಿ ಕಡೆಗಾಣಿಸಲ್ಪಟ್ಟವರ ಪರ ನಿಂತು ತನ್ನ ಚಿಂತನಾಶೀಲತೆಯನ್ನು ಬೆಳೆಸಿ ರೂಢಿಸಿಕೊಳ್ಳಬೇಕಾಗುತ್ತದೆ. ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯವೆಂಬ ಉನ್ನತ ಮೌಲ್ಯಗಳ ಆಧಾರದ ಮೇಲೆ ರೂಪುಗೊಳ್ಳುವ ಚಳುವಳಿಗಳಿಗೆ ದನಿಗೂಡಿಸಬೇಕಾಗುತ್ತದೆ.

ಸ್ಪ್ಯಾನಿಷ್, ಪೋರ್ಚುಗೀಸ್, ಡಚ್ ಹಾಗೂ ಬ್ರಿಟಿಷ್ ಮತ್ತು ಫ್ರೆಂಚ್ ವಸಾಹತುಶಾಹಿ ಧೋರಣೆಗಳಲ್ಲಿರುವ ವಿವಿಧ ನೆಲೆಗಳು, ಅವುಗಳಿಂದ ವಸಾಹತುಶಾಹಿಗಳಲ್ಲಿನ ಜನರ ನೈತಿಕ, ಸಾಂಸ್ಕೃತಿಕ ಬದುಕಿನ ಮೇಲೆ ಆಗಿರುವ ಆಘಾತಗಳು ಮತ್ತು ಇಂದಿನ ವಸ್ತುಸ್ಥಿತಿ ಇವುಗಳ ಬಗ್ಗೆ ಬೌದ್ಧಿಕ ಒಳನೋಟದಿಂದ ಮೂಡಿಬರುವ ಅವನ ವಿಚಾರಗಳು ರೋಚಕವಾಗಿವೆ.

''ನಾನು ನಾಸ್ತಿಕ. ಆಸ್ತಿಕನಾದ ಬುದ್ಧಿಜೀವಿ ತನ್ನ ವೈಚಾರಿಕತೆಯನ್ನು ಕಳೆದುಕೊಂಡು ಬದುಕಿನ ಸಂಕೀರ್ಣ ಮತ್ತು ನಿಗೂಢ ವಿಷಯಗಳ ಕುರಿತು ಹೇಗೆ ತಾನೆ ಅನ್ವೇಷಣೆ ಮಾಡಬಲ್ಲ?'' ಎಂದು ಪ್ರಶ್ನಿಸುವ ಸಯಿದ್ ಮನುಷ್ಯರು ತಮ್ಮ ಇತಿಹಾಸವನ್ನು ತಾವೇ ನಿರ್ಮಿಸುತ್ತಾರೆ ಎಂಬ ಕಾರ್ಲ್ ಮಾರ್ಕ್ಸ್ ಮತ್ತು ವಿಕೋ ಅವರ ಹೇಳಿಕೆಯನ್ನು ಸಮರ್ಥಿಸುತ್ತಾನೆ. ಈತ ಬದುಕಿನ ವಿವಿಧ ನೆಲೆಗಳನ್ನು ಲೌಕಿಕ ದೃಷ್ಟಿಯಿಂದಲೂ ನೋಡುವ ಒಬ್ಬ ಅಪರೂಪದ ವಿಮರ್ಶಕ.


ಸಯಿದ್ ಯಹೂದಿ, ಕ್ರಿಶ್ಚಿಯನ್, ಇಸ್ಲಾಮಿ ಅಥವಾ ಹಿಂದ್, ಹೀಗೆ ಯಾವುದೇ ಬಣ್ಣದ ಮೂಲಭೂತವಾದವನ್ನು ವಿರೋಧಿಸುತ್ತಾನೆ. ಇವತ್ತಿನ ಜಾಗತಿಕ ಸಂದರ್ಭದಲ್ಲಿ ಸ್ನೇಹ, ಸೌಹಾರ್ದತೆ, ಪರಸ್ಪರ ಸಹಕಾರಗಳಿಂದ ಮಾತ್ರ ಹೊಸ ಬದುಕನ್ನು ನಿರ್ಮಿಸಲು ಸಾಧ್ಯ ಎಂದು ವಾದಿಸುವ ಈ ಮಹಾನ್ ಚಿಂತಕ ಎಡ್ವರ್ಡ್ ಸಯಿದ್ ತನ್ನ ದಿಟ್ಟ ನಿಲುವು, ಅಭಿಪ್ರಾಯ ಹಾಗೂ ಭಾವನೆಗಳಿಂದ ವೈಚಾರಿಕ ಜಗತ್ತಿನಲ್ಲಿ ಹೊಸ ಅಲೆಗಳನ್ನೇ ಸೃಷ್ಟಿಸಿದ್ದಾನೆ. ಪ್ರಾಮಾಣಿಕ ಬುದ್ಧಿಜೀವಿಗೆ ಮಾದರಿ ಎನಿಸಿದ್ದಾನೆ.

ಎಸ್. ಸುರೇಂದ್ರ
ನಂ. ೨೩, ಕೆನರಾ ಬ್ಯಾಂಕ್ ಕಾಲೋನಿ, [illegible]
ಜಯನಗರ, ಬೆಂಗಳೂರು [illegible]

ಕ(ತ)ಣ್ಣೀರು

ಹೆಣ್ಣು ಮಗು
ಕಣ್ಣು ಬಿಡದೇ
ಹಾಕುತ್ತಿದೆ 'ಕಣ್ಣೀರು'!
ಹೆಣ್ಣಾಗಿದ್ದಕ್ಕೆ ತನ್ನ
ಹೆತ್ತವರೇ ತನ್ನಾಸೆಗಳಿಗೆ
ಹಾಕುವರೆಂದು 'ತಣ್ಣೀರು'!!

ಶ್ರೀ ಅಶೋಕ ಯ. ಪತ್ತಾರ
ಸ. ಹಿ. ಪ್ರಾ. ಶಾಲೆ., ಡೋಣಿ



ನಮಗೆ ಮುಳುವಾಗುತ್ತಿರುವ ಜಾಗತೀಕರಣ

- ಅಧ್ಯಕ್ಷ ಡಾ॥ ಫಿಡೆಲ್ ಕ್ಯಾಸ್ಟ್ರೋ

ಸಂಪತ್ತು ಹಾಗೂ ಸಂಕ್ಷೇಮವನ್ನು ವೃದ್ಧಿಪಡಿಸಲು ಹಿಂದೆಂದೂ ಇಲ್ಲದಷ್ಟು ಅಗಾಧವಾದ ವೈಜ್ಞಾನಿಕ ಮತ್ತು ತಾಂತ್ರಿಕ ಸಾಮರ್ಥ್ಯ ಇಂದು ಮಾನವಕುಲದ ಪಾಲಿಗೆ ಲಭ್ಯವಿದೆ. ಆದಾಗ್ಯೂ ಹಿಂದೆಂದೂ ಇಲ್ಲದಷ್ಟು ತಾರತಮ್ಯ ಮತ್ತು ಅಸಮಾನತೆ ತುಂಬಿದೆ. ಸಂಪರ್ಕ ಸಾಧನಗಳು ಭೂಮಂಡಲದ ಭಾಗಗಳನ್ನು ತೀರಾ ಸಮೀಪಕ್ಕೆ ತಂದಿರುವಂಥ ತಾಂತ್ರಿಕ ಅದ್ಭುತಗಳ ಜೊತೆಜೊತೆಗೇ ಸಿರಿವಂತಿಕೆ ಮತ್ತು ಬಡತನ, ಅಭಿವೃದ್ಧಿ ಮತ್ತು ಹಿಂದುಳಿಕೆ - ಇವುಗಳ ನಡುವಣ ಅಂತರವೂ ಹೆಚ್ಚುತ್ತಿದೆ.

ಜಾಗತೀಕರಣವು ನಾವೆಲ್ಲರೂ ಒಂದೇ ಹಡಗಿನಲ್ಲಿದ್ದೇವೆ, ಎಂಬುದನ್ನು ಸೂಚಿಸುತ್ತದೆ. ನಾವು ವಾಸಿಸುತ್ತಿರುವ ಭೂಮಿ ಆ ಹಡಗು. ಆದರಲ್ಲಿ ಪ್ರಯಾಣ ಮಾಡುತ್ತಿರುವ ಜನ ಮಾತ್ರ ತೀರ ಭಿನ್ನವಾದ ಪರಿಸ್ಥಿತಿಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಅತ್ಯಂತ ಅಲ್ಪ ಸಂಖ್ಯೆಯ ಜನರು ಇಂಟರ್‌ನೆಟ್, ಸೆಲ್‌ಫೋನ್ ಮುಂತಾದ ವಿಸ್ತೃತ ಸಂಪರ್ಕ ಸಾಧನಗಳೂ ಸೇರಿದಂತೆ ಸುಸಜ್ಜಿತವಾದ ಅಲಂಕೃತ ಕ್ಯಾಬೀನುಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಶುದ್ಧ ನೀರಿನ ಸರಬರಾಜು ಅಲ್ಲದೆ ಅವರಿಗೆ ಪುಷ್ಟಿಕರವಾದ, ಯಥೇಷ್ಟ ಹಾಗೂ ಸಂತುಲಿತ ಆಹಾರ ಲಭಿಸುತ್ತದೆ. ಸುಶ್ಲಿಷ್ಟ ವೈದ್ಯಕೀಯ ಸೌಲಭ್ಯಗಳು ಮತ್ತು ಸಾಂಸ್ಕೃತಿಕ ಸೇವೆಗಳೂ ಅವರ ಪಾಲಿಗಿವೆ.

ಅತ್ಯಧಿಕ ಸಂಖ್ಯೆಯ ಇತರ ಪ್ರಯಾಣಿಕರು, ಕಳೆದ ವಸಾಹತೀಯ ಅವಧಿಯಲ್ಲಿ ಆಫ್ರಿಕದಿಂದ ಅಮೆರಿಕಕ್ಕೆ ಮಾಡಲಾಗುತ್ತಿದ್ದ ಗುಲಾಮರ ಮಾರಾಟವನ್ನು ಹೋಲುವಂಥ ಭಯಂಕರ ಪರಿಸ್ಥಿತಿಯಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಅಂದರೆ, ಶೇ. ೮೫ರಷ್ಟು ಜನರು ಹಸಿವು, ರೋಗರುಜಿನ ಮತ್ತು ಅಸಹಾಯಕತೆಗಳಿಂದ ಬಳಲುತ್ತ ಹಡಗಿನ ಇಕ್ಕಟ್ಟಾದ ಕೊಳಕು ಜಾಗದಲ್ಲಿ ಕಿಕ್ಕಿರಿದು ಪ್ರಯಾಣ ಮಾಡುತ್ತಿದ್ದಾರೆ.

ಈ ಹಡಗು ತೇಲುತ್ತ ಉಳಿದಿರುವುದಕ್ಕಾಗಿಯೇ ಸಾಕಷ್ಟು ಅನ್ಯಾಯಗಳನ್ನು ತುಂಬಿಸಿಕೊಂಡು ಯಾವ ಸುರಕ್ಷಿತ ಬಂದರಿಗೂ ತಲುಪಲು ಸಾಧ್ಯವಾಗದಂತೆ ಅಸಮಂಜಸವಾದ, ಅವಿವೇಕದ ಮಾರ್ಗದಲ್ಲಿ ಚಲಿಸುತ್ತಿದೆ ಎಂಬುದು ಸ್ಪಷ್ಟ. ಈ ಹಡಗು ಖಂಡಿತವಾಗಿ ಹಿಮದ ಬಂಡೆಯೊಂದಕ್ಕೆ ಢಿಕ್ಕಿ ಹೊಡೆಯುವಂತೆ ಕಾಣಿಸುತ್ತದೆ. ಹಾಗಾದ ಪಕ್ಷದಲ್ಲಿ ನಾವೆಲ್ಲರೂ ಅದರ ಜೊತೆಯಲ್ಲೇ ಮುಳುಗುತ್ತೇವೆ.

ಬಹುಸಂಖ್ಯೆಯ ಜನರ ಪ್ರತಿನಿಧಿಗಳಾಗಿ ಇಲ್ಲಿ ನೆರೆದಿರುವ ರಾಷ್ಟ್ರ ಮತ್ತು ಸರಕಾರಿ ನಾಯಕರಿಗೆ ಈ ಹಡಗನ್ನು ವಿನಾಶದ ಮಾರ್ಗದಿಂದ ಪಾರುಮಾಡಿ [illegible] ಮಾರ್ಗಕ್ಕೆ ಒಯ್ಯುವ ಹಕ್ಕು ಮತ್ತು ಜವಾಬ್ದಾರಿ ಇದೆ. ಹಡಗಿನ ಎಲ್ಲ ಪ್ರಯಾಣಿಕರೂ ಐಕ್ಯತೆ, ಸಮಾನತೆ ಹಾಗೂ ನ್ಯಾಯವಾದ ಪರಿಸ್ಥಿತಿಯಲ್ಲಿ ಪ್ರಯಾಣ ಮಾಡಲು ಸಹಾಯಕವಾಗುವಂತೆ ಮಾಡಬೇಕಾದ ಕರ್ತವ್ಯವಿದೆ.

ತೃತೀಯ ಜಗತ್ತಿನ ದೇಶಗಳು ಕಳೆದ ಎರಡು ದಶಕಗಳಿಂದಲೂ ಬಹಳ ಸರಳವಾದ ಉಪದೇಶವೊಂದನ್ನು ಕೇಳುತ್ತಾ ಬಂದಿವೆ. ಮಾರುಕಟ್ಟೆಯ ನಿಯಂತ್ರಣವನ್ನು ಸಡಿಲಗೊಳಿಸುವುದು, ಹೆಚ್ಚುಮಟ್ಟಿನ ಖಾಸಗೀಕರಣ, ಆರ್ಥಿಕ ಚಟುವಟಿಕೆಗಳಿಂದ ರಾಜ್ಯ ಹಿಂದೆ ಸರಿಯುವುದು - ಇವು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಹಾಯಕವಾಗುವ ಸೂತ್ರಗಳೆಂದು ನಮಗೆ ಬೋಧಿಸಲಾಯಿತು.

> ***ಅಭಿವೃದ್ಧಿಶೀಲ ದೇಶಗಳ ಶಿಖರ ಸಮ್ಮೇಳನವು ಇದೇ ಏಪ್ರಿಲ್‌ನಲ್ಲಿ ಕ್ಯೂಬಾದ ರಾಜಧಾನಿ ಹವಾನಾದಲ್ಲಿ ಜರುಗಿತು. ಆ ಸಂದರ್ಭದಲ್ಲಿ ಇಡೀ ಮನುಕುಲದ ಆಶಯಗಳನ್ನು ಸಾರವತ್ತಾಗಿ ನಿರೂಪಿಸಿದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ಬಂಡವಾಳಶಾಹಿ ಜಗತ್ತಿನ ಕುಟಿಲ ನೀತಿಗಳನ್ನು ಬಯಲಿಗೆಳೆದು ಇಂದಿನ ಆರ್ಥಿಕ ಅವ್ಯವಸ್ಥೆಗೆ ಮೂಲಭೂತ ಕಾರಣಗಳನ್ನು ಬೆರಳುಮಾಡಿ ತೋರಿಸಿದರು. ನಮ್ಮ ಕ್ರಿಯಾವಂತಿಕೆಗೆ ದಿಕ್ಕು ತೋರಿಸುವಂತಹ ಕ್ಯಾಸ್ಟ್ರೋ ಪ್ರತಿಪಾದನೆಯ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ.***

ಈ ಸೂತ್ರದಂತೆ, ಶ್ರೀಮಂತ ರಾಷ್ಟ್ರಗಳು, ವಿಶೇಷವಾಗಿ ಅಮೆರಿಕ, ಲಾಭಕೋರ ಬಹುರಾಷ್ಟ್ರೀಯ ಸಂಸ್ಥೆಗಳು, ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್ ಕಳೆದ ಎರಡು ದಶಕಗಳಲ್ಲಿ ನಮ್ಮ ದೇಶಗಳ ಪ್ರಗತಿಗೆ ಅಷ್ಟೇನೂ ಸಹಾಯಕವಲ್ಲದ, ಸಮಾಜದ, ಪರಿಸರದ ರಕ್ಷಣೆಗೆ ಎಷ್ಟು ಮಾತ್ರಕ್ಕೂ ಪೋಷಕವಾಗಿರದ ಜಾಗತಿಕ ಆರ್ಥಿಕ ಪದ್ಧತಿಯನ್ನು ರೂಪಿಸಿದವು.

ನವ-ಉದಾರೀಕರಣದ ಎಲ್ಲ ಪ್ರತಿಪಾದಕರು ಜಾಗತೀಕರಣದ ಈ ಸೂತ್ರವನ್ನು ಪಟ್ಟಾಗಿ ಹಿಡಿದುಕೊಂಡರು. ಆದರೆ, ಮಾರುಕಟ್ಟೆಯಲ್ಲಿ ರೂಢಿಯಲ್ಲಿರುವ ಅಸಮವಾದ ಸ್ಪರ್ಧೆಯ ಪರಿಸ್ಥಿತಿಯಲ್ಲಿ, ಜಾಗತೀಕರಣದಿಂದ ಆದದ್ದು ಅಭಿವೃದ್ಧಿಯಲ್ಲ, ಬದಲು ಬಡತನ; ನಮ್ಮ ರಾಷ್ಟ್ರೀಯ ಸಾರ್ವಭೌಮತ್ವಕ್ಕೆ ಸಂದದ್ದು ಗೌರವವಲ್ಲ, ಬದಲು ಅಗೌರವದ ಉಲ್ಲಂಘನೆ; ನಮ್ಮ ಜನತೆಗಳ ಮಧ್ಯೆ ಏಕತೆಯಲ್ಲ, ಬದಲು ಅಸ್ತವ್ಯಸ್ತತೆ.

ಮೇಲಿನ ಸಿದ್ಧಾಂತಕ್ಕೆ ಸಂಪೂರ್ಣ ಅನುಗುಣವಾಗಿ ನವ-ಉದಾರೀಕರಣವನ್ನು ಅನ್ವಯಿಸಲಾದ ಲ್ಯಾಟಿನ್ ಅಮೆರಿಕದ ದೇಶಗಳಲ್ಲಿನ ಆರ್ಥಿಕ ಅಭಿವೃದ್ಧಿಯು, ಆ ಮೊದಲಿನ ರಾಜ್ಯ ಅಭಿವೃದ್ಧಿ ನೀತಿಗಳ ಅವಧಿಯಲ್ಲಿ ಸಾಧಿಸಿದುದಕ್ಕಿಂತ ಕಡಿಮೆಯಾಯಿತು. ಎರಡನೇ ಪ್ರಪಂಚ ಯುದ್ಧ ಮುಗಿದ ನಂತರದ ಅವಧಿಯಲ್ಲಿ ಲ್ಯಾಟಿನ್ ಅಮೆರಿಕದ ದೇಶಗಳು ಸಾಲಗಾರ ದೇಶಗಳಾಗಿರಲಿಲ್ಲ. ಆದರೆ ಇಂದು ನಾವು ಸರಿ ಸುಮಾರು ಹತ್ತು ಲಕ್ಷ ಕೋಟಿ ಡಾಲರುಗಳಷ್ಟು ದೊಡ್ಡ ಮೊತ್ತದ ಸಾಲಗಾರರಾಗಿದ್ದೇವೆ. ಇದು ತಲಾ ಸಾಲದ ಲೆಕ್ಕದಲ್ಲಿ ಜಗತ್ತಿನಲ್ಲಿಯೇ ಅತ್ಯಧಿಕ ಸಾಲದ ಹೊರೆಯಾಗಿದೆ. ಉಳ್ಳವರು ಮತ್ತು ಬಡವರ ವರಮಾನದ ನಡುವಣ ಅಂತರ ಜಗತ್ತಿನ ಇತರ ಭಾಗಗಳಿಗಿಂತ ಅಧಿಕವಾಗಿದೆ. ಇತಿಹಾಸದ ಯಾವುದೇ ಕಷ್ಟದ ಅವಧಿಯಲ್ಲಿದ್ದುದಕ್ಕಿಂತಲೂ ಹೆಚ್ಚು ಬಡವರು, ನಿರುದ್ಯೋಗಿಗಳು ಮತ್ತು ಹಸಿವಿನಿಂದ ತೊಳಲುತ್ತಿರುವ ಮಂದಿ ಇಂದು ಲ್ಯಾಟಿನ್ ಅಮೆರಿಕದ ದೇಶಗಳಲ್ಲಿದ್ದಾರೆ.

ನವ-ಉದಾರೀಕರಣದ ಅವಧಿಯಲ್ಲಿ ಜಗತ್ತಿನ ಆರ್ಥಿಕತೆ ನಿಜವಾಗಿ ಕ್ಷಿಪ್ರಗತಿಯ ಬೆಳವಣಿಗೆ ಸಾಧಿಸಿಲ್ಲ. ಹೆಚ್ಚು ಅಸ್ಥಿರತೆ, ಸಟ್ಟಾ ವ್ಯವಹಾರ, ಬಾಹ್ಯ ಸಾಲ ಮತ್ತು ಅಸಮವಾದ ವಿನಿಮಯ- ಇಂಥ ಪರಿಸ್ಥಿತಿ ಉಂಟಾಗಿದೆ. ಅದೇ ರೀತಿ, ಅನೇಕ ಸಲ ಹಣಕಾಸು ಬಿಕ್ಕಟ್ಟು ಉಂಟಾಗಿದೆ; ಬಡತನ, ಅಸಮಾನತೆ, ಶ್ರೀಮಂತ ಉತ್ತರ ಹಾಗೂ ಬಡ ದಕ್ಷಿಣ ದೇಶಗಳ ನಡುವಣ ಅಂತರ ಹೆಚ್ಚಿದೆ.

ಸಮಾಚಾರ ವಿನಿಮಯದಲ್ಲಿ ಹೆಚ್ಚು ಪಾರದರ್ಶಕವಾಗಿರಬೇಕೆಂದು, ಬ್ಯಾಂಕುಗಳ ಮೇಲಿನ ಹಿಡಿತದ ವಿಷಯದಲ್ಲಿ ಹೆಚ್ಚು ಪರಿಣಾಮಕಾರಿ ಕ್ರಮಗಳನ್ನು ಅನುಸರಿಸಬೇಕೆಂದು ನಮಗೆ ಹೇಳಲಾಗುತ್ತದೆ. ಆದರೆ ತಮ್ಮ ಲಾಭದ ಮೇಲೆ ಮಾತ್ರವೇ ಕಣ್ಣಿಟ್ಟಿರುವ ಹಣಕಾಸು ನಿಧಿ ಸಂಸ್ಥೆಗಳು ತಮ್ಮ ಚಟುವಟಿಕೆಗಳ ಬಗ್ಗೆ ಯಾವುದೇ ಮಾಹಿತಿ ನೀಡುವುದಿಲ್ಲ, ತೀರಾ ಅಕ್ರಮವಾಗಿ ಕೆಲಸ ಮಾಡುತ್ತವೆ. ತೃತೀಯ ಜಗತ್ತಿನ ದೇಶಗಳು ತಮ್ಮ ಹಣಕಾಸು ಸಂಪನ್ಮೂಲಗಳನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸದಂತೆ ತಡೆಹಿಡಿಯುವ ನಿರ್ಬಂಧಕ್ಕೊಳಗಾಗಿವೆ. ಸಟ್ಟಾ ವ್ಯವಹಾರ ಮೂಲದಿಂದ ಅಪಾಯ ಉಂಟಾಗಬಹುದಾದ ಸಂದರ್ಭದಲ್ಲಿ ಬಳಸಲೆಂದು ಗಟ್ಟಿ ಕರೆನ್ಸಿ ಕಾಪನ್ನು ಸಂಚಯಿಸಿಟ್ಟು ತಮ್ಮ ಸಾಲವನ್ನು ಹೆಚ್ಚಿಸಿಕೊಂಡಿವೆ. ಕಳೆದ ಕೆಲವು ವರ್ಷಗಳಲ್ಲಿ ಹೀಗೆ ಸಂಗ್ರಹಿಸಲಾದ ಬಂಡವಾಳ ಆದಾಯಗಳ ಶೇ. ೨೦ ರಷ್ಟನ್ನು ಅಭಿವೃದ್ಧಿ ಕಾರ್ಯಗಳಿಂದ ತಡೆಹಿಡಿಯಲಾಗಿದೆ. ಆದರೆ, ಇತ್ತೀಚೆಗೆ ಆಗ್ನೇಯ ಏಶಿಯಾದಲ್ಲಿ ಸಂಭವಿಸಿದ ಹಣಕಾಸು ಬಿಕ್ಕಟ್ಟಿನಂಥ ಅಪಾಯವನ್ನು ಎದುರಿಸಲು ಇಂಥ ಕ್ರಮದಿಂದ ಪ್ರಯೋಜನವಾಗದು ಎಂಬುದು ಸ್ಪಷ್ಟವಾಗಿದೆ.

ಜಗತ್ತಿನ ಸೆಂಟ್ರಲ್ ಬ್ಯಾಂಕುಗಳ ಕಾಯ್ದಿಟ್ಟ ನಿಧಿಗಳಿಂದ ಹೀಗೆ ಸಂಗ್ರಹಿಸಲಾದ ೭೨ ಲಕ್ಷ ಕೋಟಿ ಅಮೆರಿಕನ್ ಡಾಲರ್ ಸದ್ಯಕ್ಕೆ ಅಮೆರಿಕದ ವಶದಲ್ಲಿದೆ. ಜಗತ್ತಿನ ಅತ್ಯಂತ ಶ್ರೀಮಂತ ಹಾಗೂ ಬಲಿಷ್ಠ ದೇಶಕ್ಕೆ ಬಡದೇಶಗಳು ತಮ್ಮ ಕಾಯ್ದಿಟ್ಟ ನಿಧಿಯಿಂದ ದೀರ್ಘಕಾಲಿಕ ಅಗ್ಗದ ಹಣಕಾಸು ಒದಗಿಸುತ್ತಿವೆ ಎಂಬುದು ವಿರೋಧಾಭಾಸವಾಗಿದೆ. ಈ ಸಂಪನ್ಮೂಲಗಳನ್ನು ಆ ದೇಶಗಳ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಬಹುದಾಗಿದ್ದರೆ!

ನಾಲ್ಕು ದಶಕಗಳ ಆರ್ಥಿಕ ದಿಗ್ಬಂಧನ ಮತ್ತು ಅಮೆರಿಕದ ಡಾಲರಿಗೆ ಸಂಬಂಧಿಸಿದಂತೆ ಕಳೆದ ಐದು ವರ್ಷಗಳಲ್ಲಿ ತನ್ನ ಕರೆನ್ಸಿಯನ್ನು ಏಳುಬಾರಿ ಅಪಮೌಲ್ಯಕ್ಕೊಳಪಡಿಸಿದರೂ, ನಮ್ಮ ಕ್ಯೂಬಾ ಶಿಕ್ಷಣ, ಆರೋಗ್ಯ ರಕ್ಷಣೆ, ಸಂಸ್ಕೃತಿ, ವಿಜ್ಞಾನ, ಕ್ರೀಡೆ ಮತ್ತು ಇತರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ ಎಂದರೆ, ಅದು ಅಂತರರಾಷ್ಟ್ರೀಯ ಹಣಕಾಸು ನಿಧಿಯ ಸದಸ್ಯ ದೇಶವಲ್ಲ ಎಂಬ ವಿಶೇಷ ಕಾರಣದಿಂದಲೇ.

ಬಡ ದೇಶಗಳು ಶ್ರೀಮಂತ ದೇಶಗಳಿಗೇ ಹಣಕಾಸು ಒದಗಿಸಬೇಕಾದಂಥ ವ್ಯವಸ್ಥೆ ನಮ್ಮದು. ನಮ್ಮ ದೇಶಗಳಿಗೆ ಅಗತ್ಯವಾಗಿರುವ ಅಷ್ಟು ದೊಡ್ಡ ಮೊತ್ತದ ಸಂಪನ್ಮೂಲಗಳನ್ನು ಅಭಿವೃದ್ಧಿ ಕಾರ್ಯಗಳಿಂದ ತಡೆಹಿಡಿಯುವಂಥ ಈ ಹಣಕಾಸು ವ್ಯವಸ್ಥೆ ಅಗತ್ಯವೆ?

ಅಂತರರಾಷ್ಟ್ರೀಯ ಹಣಕಾಸು ನಿಧಿಯು ಸದ್ಯಕ್ಕೆ ಚಾಲ್ತಿಯಲ್ಲಿರುವ ಹಣಕಾಸು ವ್ಯವಸ್ಥೆಗೆ ಕನ್ನಡಿ ಹಿಡಿದಂತಿದೆ. ಅಮೆರಿಕ ಅದರ ನಿರ್ಣಯಗಳ ಮೇಲೆ ವೀಟೋ ಅಧಿಕಾರ ಹೊಂದಿದೆ. ಇತ್ತೀಚೆಗೆ ಉಂಟಾದ ಹಣಕಾಸು ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಅದು ದೂರದೃಷ್ಟಿಯನ್ನೇನೂ ತೋರಿಸಿಲ್ಲ. ಜಾಗತಿಕ ಅರ್ಥವ್ಯವಸ್ಥೆಗೆ ಸ್ಥಿರತೆಯನ್ನು ತಾರದ, ಅದೇ ವೇಳೆ ಸಾಲಗಾರ ದೇಶಗಳಿಗೆ ಅವುಗಳ ಅಸ್ಥಿರತೆಯ ಬಿಕ್ಕಟ್ಟನ್ನು ನಿವಾರಿಸಲು ನಿಧಿಗಳನ್ನು ಒದಗಿಸದ ಇಂಥ ಸಂಸ್ಥೆಯನ್ನು ತೊಡೆದು ಹಾಕುವಂತೆ ಒತ್ತಾಯಿಸಲು ತೃತೀಯ ಜಗತ್ತಿನ ದೇಶಗಳಿಗೆ ಇದು ಸಕಾಲವಾಗಿದೆ.

ಅಮೆರಿಕದ ಬೆಂಬಲ ಪಡೆದ ಕೆಲವು ಮಂದಿ ತಂತ್ರಾಡಳಿತಗಾರರು ವಾಷಿಂಗ್ಟನ್ನಿನಲ್ಲಿ ಕುಳಿತು, ತೃತೀಯ ಜಗತ್ತಿನ ನಿರ್ದಿಷ್ಟ ಸಮಸ್ಯೆಗಳನ್ನು ನಿಭಾಯಿಸಲು ಬೇರೆ ಬೇರೆ ದೇಶಗಳಲ್ಲಿ ಕಾರ್ಯರೂಪಕ್ಕೆ ತರುವಂತೆ ಏಕರೀತಿಯ ಆರ್ಥಿಕ ಹೊಂದಾಣಿಕೆ ಕಾರ್ಯಕ್ರಮಗಳನ್ನು ರೂಪಿಸಲು ಅವಕಾಶ ನೀಡುವ ಈ ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಗೆ ವಿವೇಚನೆ ಮತ್ತು ನೈತಿಕತೆ ಎಲ್ಲಿದೆ?

ನಾವು ೧೯೮೫ರಿಂದಲೂ ಹೇಳುತ್ತ ಬಂದಿರುವ ವಿಷಯವನ್ನು ನಾನು ಈಗ ಮತ್ತೆ ಹೇಳಬೇಕಾಗಿದೆ. ಸಾಲ ನೀಡಲು ಅನುಸರಿಸುವ ಕ್ರಮ, ಕಳೆದ ದಶಕದಲ್ಲಿ ಅಮೆರಿಕನ್ ಡಾಲರಿಗೆ ಸಂಬಂಧಿಸಿದಂತೆ ಬಡ್ಡಿದರಗಳ ಕ್ಷಿಪ್ರ ಮತ್ತು ಸ್ವೇಚ್ಛಾನುಸಾರ ಹೆಚ್ಚಳ ಮತ್ತು ಅಭಿವೃದ್ಧಿಶೀಲ ದೇಶಗಳ ಆದಾಯಗಳ ಪ್ರಧಾನ ಮೂಲವಾಗಿರುವ ಕಚ್ಚಾ ವಸ್ತುಗಳ ಬೆಲೆಗಳ ಇಳಿತ, ಇವನ್ನು ಗಮನಕ್ಕೆ ತಂದುಕೊಂಡರೆ, ನಾವು ತೆಗೆದುಕೊಂಡಿರುವ ಸಾಲ ಈಗಾಗಲೇ ಮರುಪಾವತಿಯಾಗಿದೆ. ಈ ಸಾಲ ಒಂದು ವಿಷ ವೃತ್ತದಂತೆ ನಿರಂತರ ಬೆಳೆಯುತ್ತಿದೆ, ಸಾಲಕ್ಕೆ ಬಡ್ಡಿ ತೆರುವ ಸಲುವಾಗಿ ಮತ್ತೆ ಸಾಲ ಮಾಡಬೇಕಾದಂಥ ಪರಿಸ್ಥಿತಿ ಉಂಟಾಗಿದೆ.

ಇಂದು ಬಾಹ್ಯ ಸಾಲವು ಅಭಿವೃದ್ಧಿಗೆ ಭಾರಿ ತಡೆಗಳಲ್ಲೊಂದಾಗಿದೆ. ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಜಾಗತಿಕ ಅರ್ಥವ್ಯವಸ್ಥೆಯ ಅಸ್ತಿಭಾರಗಳನ್ನು ಸ್ಫೋಟಿಸಲು ಸಿದ್ಧವಾಗಿರುವ ಅಣುಗುಂಡು ಇದು.

ಸಾಲ ನೀಡುವ ದೇಶಗಳ ಸಂಪತ್ತು ಮತ್ತು ವೆಚ್ಚಗಳಿಗೆ ಹೋಲಿಸಿದರೆ, ಸಮಸ್ಯೆಯ ಪರಿಹಾರಕ್ಕೆ ಅಗತ್ಯವಾಗಿರುವ ಸಂಪನ್ಮೂಲಗಳ ಪ್ರಮಾಣ ಅಷ್ಟು ದೊಡ್ಡದೇನೂ ಅಲ್ಲ. ಶೀತಯುದ್ಧ ಅಂತ್ಯಗೊಂಡ ನಂತರ ಸಹ ಶಸ್ತ್ರಾಸ್ತ್ರಗಳು ಮತ್ತು ಸೈನ್ಯಗಳಿಗಾಗಿ ಹಣಕಾಸು ಒದಗಿಸಲು ಪ್ರತಿವರ್ಷ ೮೦ ಲಕ್ಷ ಕೋಟಿ ಅಮೆರಿಕನ್ ಡಾಲರ್‌ಗಳನ್ನೂ ಬಳಸಲಾಗುತ್ತಿದೆ. ಅದೇ ವೇಳೆ ೪೦ ಲಕ್ಷ ಕೋಟಿಗೆ ಕಡಿಮೆ ಇಲ್ಲದಷ್ಟು ಹಣ ಮಾದಕ ವಸ್ತುಗಳಿಗಾಗಿ ಮತ್ತು ವಾಣಿಜ್ಯ ಪ್ರಚಾರಕ್ಕಾಗಿ ವ್ಯಯವಾಗುತ್ತಿದೆ.



ಪ್ರಾಮಾಣಿಕವಾಗಿ ಹಾಗೂ ವಾಸ್ತವಿಕವಾಗಿ ಹೇಳುವುದಾದರೆ, ತೃತೀಯ ದೇಶಗಳ ಬಾಹ್ಯ ಸಾಲ ಹಿಂದಿರುಗಿಸಲಾಗದ್ದು, ವಸೂಲು ಮಾಡಲಾಗದಂಥದ್ದು.

ನವ ಉದಾರೀಕರಣವಾದಿಗಳು ಮುಕ್ತ ವಾಣಿಜ್ಯ ಪದ್ಧತಿಯಿಂದ ಉಂಟಾಗಿರುವ ಅವಕಾಶಗಳ ಬಗ್ಗೆ ತಮ್ಮ ಉಪದೇಶವನ್ನು ಮುಂದುವರಿಸುತ್ತಿರುವಾಗ, ೧೯೯೮ರಲ್ಲಿ ಜಾಗತಿಕ ರಫ್ತುಗಳಲ್ಲಿ ಬಡದೇಶಗಳ ಪಾಲು, ೧೯೫೩ರಲ್ಲಿ -ಅಂದರೆ ನಲವತ್ತೈದು ವರ್ಷಗಳ ಹಿಂದೆ ಇದ್ದುದಕ್ಕಿಂತ ಕಡಿಮೆಯಾಗಿದೆ. ೧೯೯೮ರಲ್ಲಿ ವಿಶಾಲ ರಾಷ್ಟ್ರವಾದ ಬ್ರೆಜಿಲ್‌ನ ರಫ್ತು ವಹಿವಾಟು ೫೧.೫ ಬಿಲಿಯ ಅಮೆರಿಕನ್ ಡಾಲರ್ ಮೊತ್ತದ್ದಾದರೆ, ಅದೇ ವರ್ಷ ಬಹಳ ಕಡಿಮೆ ವಿಸ್ತೀರ್ಣದ ನೆದರ್‌ಲ್ಯಾಂಡ್‌ನ ರಫ್ತು ವಹಿವಾಟು ೧೯೮.೭ ಬಿಲಿಯ ಅಮೆರಿಕನ್ ಡಾಲರ್ ಮೊತ್ತದ್ದು.

ಶ್ರೀಮಂತ ರಾಷ್ಟ್ರಗಳು ಮುಂದುವರಿದ ತಂತ್ರಜ್ಞಾನಕ್ಕೆ ಸಂಬಂಧಿಸಿಂತೆ, ತಮಗೆ ಬಹಳ ಅನುಕೂಲ್ಯಗಳಿರುವ ಆಯಕಟ್ಟಿನ ವಿಭಾಗಗಳಲ್ಲಿ ಉದಾರೀಕರಣವನ್ನು ಪೋಷಿಸುತ್ತ ಮುಕ್ತಮಾರುಕಟ್ಟೆಯ ಅಭಿವೃದ್ಧಿಗೆ ಸಹಾಯಕವಾಗುತ್ತವೆ. ಸೇವೆಗಳು, ಸಮಾಚಾರ ತಂತ್ರಜ್ಞಾನ, ಬಯೋಟೆಕ್ನಾಲಜಿ ಮತ್ತು ಸಂಪರ್ಕ ಮಾಧ್ಯಮಗಳು-ಇವು ಮುಖ್ಯ ಉದಾಹರಣೆಗಳು.

ಮತ್ತೊಂದು ಕಡೆ, ನಮ್ಮ ದೇಶಗಳ ಪಾಲಿಗೆ ಎರಡು ವಿಶೇಷ ಮಹತ್ವದ ವಿಭಾಗಗಳಾದ ಕೃಷಿ ಮತ್ತು ಜವಳಿಗೆ ಸಂಬಂಧಿಸಿದಂತೆ ಉರುಗ್ವೆ ಸುತ್ತಿನ ಮಾತುಕತೆಗಳ ಸಂದರ್ಭದಲ್ಲಿ ಸಮ್ಮತಿಸಲಾದ ನಿರ್ಬಂಧಗಳನ್ನು ತೆಗೆದು ಹಾಕಲೂ ಸಾಧ್ಯವಾಗಿಲ್ಲ. ಏಕೆಂದರೆ ಅವು ಶ್ರೀಮಂತ ದೇಶಗಳಿಗೆ ಆಸಕ್ತಿಯ ವಿಷಯಗಳಲ್ಲ.

ನವ ಉದಾರೀಕರಣದ ವಿರುದ್ಧ ಸಿಯಾಟ್ಲ್‌ನಲ್ಲಿ ಬಂಡಾಯ ಸಿಡಿದೆದ್ದಿತು. ಬಂಡವಾಳ ಹೂಡಿಕೆಗಳ ವಿರುದ್ಧ ಬಹುಪಕ್ಷೀಯ ಒಪ್ಪಂದದ ಹೇರಿಕೆಯನ್ನು ಸಮ್ಮತಿಸಲು ನಿರಾಕರಿಸಿದುದು ತೀರಾ ಇತ್ತೀಚಿನ ದೃಷ್ಟಾಂತವಾಗಿದೆ. ಮಾರುಕಟ್ಟೆಯನ್ನೇ ಅತ್ಯಂತ ಪ್ರಧಾನವೆಂದು ಪರಿಗಣಿಸುವ ತತ್ವವನ್ನು ಜಗತ್ತು ಬಲವಾಗಿ ಹಾಗೂ ನ್ಯಾಯವಾಗಿಯೇ ನಿರಾಕರಿಸಿದುದನ್ನು ಇದು ತೋರಿಸುತ್ತದೆ. ಆ ತತ್ವ ಈಗಾಗಲೇ ಭಾರಿ ಅನಾಹುತಗಳಿಗೆ ಕಾರಣವಾಗಿದೆ.

ಇದೆಲ್ಲದರ ಜೊತೆಗೆ ಬಹಳ ದುಬಾರಿ ತೈಲ ಬೆಲೆಗಳು ಬೇರೆ. ಜಗತ್ತಿನಾದ್ಯಂತ ಮಾರಾಟವಾಗುವ ತೈಲದ ಸುಮಾರು ಶೇ. ೮೦ರಷ್ಟನ್ನು ತೃತೀಯ ಜಗತ್ತಿನ ದೇಶಗಳು ಉತ್ಪಾದಿಸುತ್ತವೆ; ಆ ಮೊತ್ತದ ಶೇ. ೮೦ರಷ್ಟು ಶ್ರೀಮಂತ ದೇಶಗಳಿಗೆ ರಫ್ತಾಗುತ್ತದೆ.

ಶ್ರೀಮಂತ ರಾಷ್ಟ್ರಗಳು ತಮ್ಮ ದುಂದು ಬಳಕೆಯ ಮಟ್ಟವನ್ನು ಉಳಿಸಿಕೊಳ್ಳಲು ಇಂಧನಕ್ಕಾಗಿ ಯಾವುದೇ ಬೆಲೆಯನ್ನು ತೆರಬಲ್ಲವು. ಪರಿಸರ ನಾಶದ ಬಗ್ಗೆ ಅವಕ್ಕೆ ಕಾಳಜಿ ಇರುವುದಿಲ್ಲ. ಅಮೆರಿಕವು ತಲಾ ಲೆಕ್ಕದಲ್ಲಿ ೮.೧ ಟನ್ ತೈಲ ಬಳಸುತ್ತದಾದರೆ, ತೃತೀಯ ಜಗತ್ತಿನ ಬಳಕೆದಾರರು ಸರಾಸರಿ ತಲಾ ೦.೮ ಟನ್‌ಗಳನ್ನು, ಬಹಳ ಬಡದೇಶಗಳು ಕೇವಲ ೦.೩ ಟನ್‌ಗಳಷ್ಟನ್ನು ಬಳಸುತ್ತವೆ.

ತೈಲ ಬೆಲೆಗಳು ಇದ್ದಕ್ಕಿದ್ದಂತೆ ಒಂದು ಬ್ಯಾರಲ್‌ಗೆ ೧೫ರಿಂದ ೬೦ ಡಾಲರ್‌ಗಳಿಗೆ ಅಥವಾ ಅದಕ್ಕಿಂತಲೂ ಅಧಿಕ ಏರಿದಾಗ, ಅದರಿಂದ ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಭಾರೀ ವಿನಾಶಕಾರಿ ಪರಿಣಾಮ ಉಂಟಾಗುತ್ತದೆ. ಇದರ ಜೊತೆಗೆ ಅವುಗಳ ಬಾಹ್ಯ ಸಾಲ, ಮೂಲ ಸರಕುಗಳಿಗೆ ಕಡಿಮೆ ಬೆಲೆ, ಹಣಕಾಸು ಬಿಕ್ಕಟ್ಟು ಮತ್ತು ಅಸಮ ವಾಣಿಜ್ಯ ನಿರ್ಬಂಧಗಳ ನೇತ್ಯಾತ್ಮಕ ಪರಿಣಾಮ ಉಂಟಾಗುತ್ತವೆ. ಈಗ ದಕ್ಷಿಣದ ಸೋದರ ದೇಶಗಳ ಮಧ್ಯೆ ಇಂಥದೇ ಪರಿಸ್ಥಿತಿ ತಲೆದೋರುತ್ತಿರುವುದನ್ನು ಕಾಣುತ್ತಿದ್ದೇವೆ.

ಪೆಟ್ರೋಲಿಯಂ ವಾಣಿಜ್ಯಿಕವಾಗಿ ಅತ್ಯಮೂಲ್ಯವಾಗಿರುವ ಮುಖ್ಯ ಸರಕಾಗಿದ್ದು, ವಾಸ್ತವದಲ್ಲಿ ಮಾರುಕಟ್ಟೆ ನಿಯಮಗಳಿಂದ ಹೊರಗುಳಿಯುತ್ತದೆ. ಅದರ ಬೆಲೆಯನ್ನು ನಿರ್ಣಯಿಸುವಲ್ಲಿ ದೊಡ್ಡ ಬಹುರಾಷ್ಟ್ರೀಯ ಕಂಪೆನಿಗಳು ಅಥವಾ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಸ್ವತ

ಅವುಗಳೊಂದಿಗೆ ಸಂಬಂಧ ಹೊಂದಿರುವ ತೃತೀಯ ಜಗತ್ತಿನ ತೈಲ ರಫ್ತುದಾರ ದೇಶಗಳು ಒಂದಲ್ಲ ಒಂದು ರೀತಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ.

ಭಾರಿ ಪ್ರಮಾಣದ ಇಂಧನವನ್ನು ಪೋಲು ಮಾಡುವ ಶ್ರೀಮಂತ ದೇಶಗಳಿಗೆ ಅಗ್ಗದ ಬೆಲೆಗಳು ಬಹುಮಟ್ಟಿಗೆ ಸಹಾಯಕವಾಗುತ್ತವೆ. ಹೊಸ ತೈಲ ನಿಕ್ಷೇಪಗಳನ್ನು ಅನ್ವೇಷಿಸಿ ತೈಲ ಉತ್ಪಾದನೆಯನ್ನು ಹೆಚ್ಚಿಸಿ ಬಳಕೆಯನ್ನು ಕಡಿಮೆ ಮಾಡಬಲ್ಲ ಹಾಗೂ ಪರಿಸರವನ್ನು ರಕ್ಷಿಸಲು ಸಹಾಯಕವಾಗುವಂಥ ತಂತ್ರಜ್ಞಾನದ ಅನ್ವೇಷಣೆಗೆ ಅಡ್ಡಿಯಾಗುತ್ತವೆ. ಅಲ್ಲದೆ ಅವು ತೃತೀಯ ಜಗತ್ತಿನ ರಫ್ತುದಾರ ದೇಶಗಳ ಮೇಲೆ ದುಷ್ಪರಿಣಾಮ ಉಂಟುಮಾಡುತ್ತವೆ. ಮತ್ತೊಂದು ಕಡೆ, ದುಬಾರಿ ಬೆಲೆಗಳು ರಫ್ತುದಾರರಿಗೆ ಲಾಭಕರವೂ ಆಗಿವೆ ಹಾಗೂ ಶ್ರೀಮಂತ ದೇಶಗಳು ಸುಲಭವಾಗಿ ನಿಭಾಯಿಸ ಬಹುದಾಗಿದೆ. ಆದರೆ, ಅವು ನಮ್ಮ ಜಗತ್ತಿನ ಬಹುಭಾಗದ ಆರ್ಥಿಕ ವ್ಯವಸ್ಥೆಗಳಿಗೆ ಹಾನಿಕಾರಕವಾಗಿವೆ.

ಇಪ್ಪತ್ತು ವರ್ಷಗಳ ಹಿಂದೆ, ವೆನೆಜುವೆಲ ಮತ್ತು ಮೆಕ್ಸಿಕೋ ದೇಶಗಳು, ತೈಲ ಆಮದು ಮಾಡಿಕೊಳ್ಳುವ ಕೆಲವು ಸಣ್ಣ ದೇಶಗಳೊಂದಿಗೆ ಮಾಡಿಕೊಂಡ ಸ್ಯಾನ್‌ಜೋಸ್ ಒಪ್ಪಂದವು, ಇಂಥ ಪರಿಸ್ಥಿತಿಗಳಲ್ಲಿ ತೃತೀಯ ಜಗತ್ತಿನ ಪ್ರತಿಯೊಂದು ದೇಶದ ವಿಶಿಷ್ಟ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಏನು ಮಾಡಬಹುದು, ಏನು ಮಾಡತಕ್ಕದ್ದು ಎಂಬುದಕ್ಕೆ ಒಳ್ಳೆಯ ಉದಾಹರಣೆಯಾಗಿದೆ.

ಕೆಲವು ದೇಶಗಳು ಒಂದು ಬ್ಯಾರಲಿಗೆ ೧೦ ಅಮೆರಿಕನ್ ಡಾಲರ್‌ಗಿಂತ ಹೆಚ್ಚು ತೆರಲಾರವು, ಇನ್ನಿತರ ದೇಶಗಳು ೧೫ ಡಾಲರಿಗಿಂತ ಹೆಚ್ಚು, ಮತ್ತೆ ಕೆಲವು ೨೦ ಡಾಲರಿಗಿಂತ ಹೆಚ್ಚು ತೆರುವ ಸ್ಥಿತಿಯಲ್ಲಿಲ್ಲ.

ದುಂದು ವೆಚ್ಚಕ್ಕೆ ಹಾಗೂ ಗ್ರಾಹಕ ಸಂಸ್ಕೃತಿಗೆ ಒಗ್ಗಿ ಹೋಗಿರುವ ಶ್ರೀಮಂತ ದೇಶಗಳ ಜಗತ್ತು ಒಂದು ಬ್ಯಾರಲ್‌ಗೆ ೩೦ ಡಾಲರ್ ತೆರಬಲ್ಲದು. ಆದರಿಂದ ಯಾವ ಹಾನಿಯೂ ಉಂಟಾಗುವುದಿಲ್ಲ. ಆಯಾದೇಶಗಳ ಆರ್ಥಿಕ ಚೈತನ್ಯಕ್ಕೆ ತಕ್ಕಂತೆ ಬೆಲೆಗಳನ್ನು ನಿಗದಿಗೊಳಿಸಿ ಒಟ್ಟಿನಲ್ಲಿ ಉತ್ಪಾದಕರಿಗೆ ಹಣವನ್ನು ಸರಿದೂಗಿಸುವುದೇ ಸರಿಯಾದ ತಂತ್ರವಾಗುತ್ತದೆ.

ದಕ್ಷಿಣ-ದಕ್ಷಿಣ ಸಹಕಾರವನ್ನು ತೃತೀಯ ಜಗತ್ತಿನ ಅಭಿವೃದ್ಧಿಯ ಪ್ರಬಲ ಸಾಧನವಾಗಿ ಮಾಡಲು ಇದು ಪರಿಣಾಮಕಾರಿಯಾದ ಮಾರ್ಗವಾಗಬಲ್ಲದು. ಇದಕ್ಕೆ ವಿರುದ್ಧವಾದುದನ್ನು ಮಾಡುವುದಾದರೆ ಅದು ಸ್ವಯಂ ವಿನಾಶಕ್ಕೆ ಕಾರಣವಾಗುತ್ತದೆ.

ಜ್ಞಾನವು ಅಭಿವೃದ್ಧಿಗೆ ಕೀಲಿಕೈಯಾಗಿರುವ ಜಗತ್ತಿನಲ್ಲಿ, ವೈಜ್ಞಾನಿಕ ಸಂಶೋಧನೆ ಮತ್ತು ಅದರ ಫಲಿತಾಂಶಗಳು ಹೆಚ್ಚು ಹೆಚ್ಚು ಖಾಸಗೀಕರಣಕ್ಕೆ ತುತ್ತಾಗುತ್ತಿವೆ. ಶ್ರೀಮಂತ ಮತ್ತು ಬಡದೇಶಗಳ ನಡುವಣ ತಂತ್ರಜ್ಞಾನದ ಅಂತರವನ್ನು ಮತ್ತಷ್ಟು ಹೆಚ್ಚಿಸುವುದಕ್ಕೆ ಅದು ಕಾರಣವಾಗುತ್ತದೆ.

ಜಗತ್ತಿನ ಜನಸಂಖ್ಯೆಯ ಶೇ. ೧೫ರಷ್ಟಿರುವ ಶ್ರೀಮಂತ ದೇಶಗಳಲ್ಲಿ ಈಗ ಶೇ. ೮೮ರಷ್ಟು ಮಂದಿ ಇಂಟರ್‌ನೆಟ್ ಬಳಸುತ್ತಾರೆ. ಜಗತ್ತಿನ ಎಲ್ಲ ದೇಶಗಳಲ್ಲಿರುವುದಕ್ಕಿಂತ ಹೆಚ್ಚು ಸಂಖ್ಯೆಯ ಕಂಪ್ಯೂಟರ್‌ಗಳು ಅಮೆರಿಕದಲ್ಲಿವೆ. ಈ ದೇಶಗಳು ಜಗತ್ತಿನಾದ್ಯಂತ ಶೇ. ೯೭ರಷ್ಟು ಪೇಟೆಂಟ್‌ಗಳನ್ನು ನಿಯಂತ್ರಿಸುತ್ತವೆ ಮತ್ತು ಅಂತರರಾಷ್ಟ್ರೀಯ ಲೈಸನ್ಸ್ ಹಕ್ಕುಗಳನ್ನು ಪಡೆದಿವೆ. ಅದೇ ವೇಳೆ ದಕ್ಷಿಣದ ಅನೇಕ ಬಡ ದೇಶಗಳ ಪಾಲಿಗೆ ಬೌದ್ಧಿಕ ಆಸ್ತಿ ಹಕ್ಕಿನ ಚಲಾವಣೆಯೇ ಅಸ್ತಿತ್ವದಲ್ಲಿಲ್ಲ.

ಖಾಸಗೀ ಸಂಶೋಧನೆಯಲ್ಲಿ ಅಗತ್ಯಗಳನ್ನು ಪೂರೈಸುವುದಕ್ಕಿಂತ ಹೆಚ್ಚಾಗಿ ಲಾಭ ತರುವ ಅಂಶವೇ ಮೇಲುಗೈ ಪಡೆಯುತ್ತದೆ. ಬೌದ್ಧಿಕ ಆಸ್ತಿ ಹಕ್ಕುಗಳು ಬಡದೇಶಗಳ ಪಾಲಿಗೆ ಜ್ಞಾನವು ಕೈಗೆಟುಕದಂತೆ ಮಾಡುತ್ತವೆ. ಪೇಟೆಂಟ್ ಕುರಿತ ಕಾನೂನು ದಕ್ಷಿಣದ ದೇಶಗಳಿಗೆ ಅತ್ಯಂತ ಮುಖ್ಯವಾಗಿರುವ ತಂತ್ರಜ್ಞಾನದ ವರ್ಗಾವಣೆಯನ್ನು ಅಥವಾ ಅವುಗಳ ಪರಂಪರಾಗತ ಆಸ್ತಿ ವ್ಯವಸ್ಥೆಗಳನ್ನು ಮಾನ್ಯ ಮಾಡುವುದಿಲ್ಲ. ವ್ಯಾಕ್ಸೀನುಗಳ ಸಂಶೋಧನೆಯು ಆರೋಗ್ಯ ರಕ್ಷಣೆಯ ವೆಚ್ಚಗಳನ್ನು ಕಡಿಮೆ ಮಟ್ಟದಲ್ಲಿರಿಸಲು ಸಹಾಯಕವಾಗುವ ಅತ್ಯಂತ ಸಮರ್ಥವಾದ ತಂತ್ರಜ್ಞಾನವಾಗಿದೆ. ಒಂದೇ ಡೋಸಿನಲ್ಲಿ ವ್ಯಾಕ್ಸೀನುಗಳು ರೋಗಗಳನ್ನು ತಡೆಯಬಲ್ಲವು. ಆದರೆ ಅವುಗಳಿಂದ ಬರುವ ಲಾಭ ಕಡಿಮೆ ಇರುವುದರಿಂದ, ಅವುಗಳನ್ನು ಬದಿಗಿರಿಸಿ, ಹೆಚ್ಚು ಡೋಸೇಜುಗಳು ಅಗತ್ಯವಾಗುವ ಹಾಗೂ ಹೆಚ್ಚು ಲಾಭ ಗಳಿಸಲು ಸಹಾಯಕವಾಗುವ ಔಷಧಗಳ ತಯಾರಿಕೆಗೆ ಗಮನ ನೀಡಲಾಗುತ್ತದೆ.

ನವ-ಉದಾರೀಕರಣ ನೀತಿಯ ನಿರಾಶಾದಾಯಕ ಸಾಮಾಜಿಕ ಫಲಿತಾಂಶಗಳು ಈಗಾಗಲೇ ಗೋಚರಕ್ಕೆ ಬಂದಿವೆ. ಸುಮಾರು ಒಂದು ನೂರು ದೇಶಗಳಲ್ಲಿ ತಲಾ ವರಮಾನವು ಹದಿನೈದು ವರ್ಷಗಳ ಹಿಂದೆ ಇದ್ದುದಕ್ಕಿಂತ ಕಡಿಮೆಯಾಗಿದೆ. ಇದೀಗ, ೧.೬ ಬಿಲಿಯ ಜನರು ೧೯೮೦ರ ದಶಕದ ಪ್ರಾರಂಭದಲ್ಲಿದ್ದುದಕ್ಕಿಂತಲೂ ಹೆಚ್ಚಿನ ದುಃಸ್ಥಿತಿಯಲ್ಲಿದ್ದಾರೆ. ಇಂದು ದಕ್ಷಿಣದ ಬಡದೇಶಗಳಲ್ಲಿರುವ ೫೦೭ ಮಿಲಿಯ ಜನರು ತಮ್ಮ ೪೦ರ ಹುಟ್ಟು ಹಬ್ಬವನ್ನು ಆಚರಿಸಲಾರರು ಎಂದು ಅಂದಾಜು ಮಾಡಲಾಗಿದೆ.

ಇಲ್ಲಿ ಪ್ರಾತಿನಿಧ್ಯ ಪಡೆದಿರುವ ತೃತೀಯ ಜಗತ್ತಿನ ದೇಶಗಳಲ್ಲಿ, ಪ್ರತಿ ಐದು ಮಕ್ಕಳಲ್ಲಿ ಇಬ್ಬರು ಬೆಳವಣಿಗೆಯ ದೋಷದಿಂದ ಬಳಲುತ್ತಿದ್ದಾರೆ. ಮೂರರಲ್ಲಿ ಒಂದು ಮಗು ಆ ಪ್ರಾಯದಲ್ಲಿರಬೇಕಾದ ತೂಕಕ್ಕಿಂತ ಕಡಿಮೆ ತೂಗುತ್ತದೆ. ಬದುಕಿಸಲು ಸಾಧ್ಯವಿರುವಂಥ ಸುಮಾರು ೩೦,೦೦೦ ಮಕ್ಕಳು ಪ್ರತಿದಿನ ಸಾವಿಗೀಡಾಗುತ್ತಿದ್ದಾರೆ. ಎರಡು ಮಿಲಿಯ ಮಂದಿ ಬಾಲಕಿಯರು ವೇಶ್ಯಾವೃತ್ತಿಗಿಳಿಯುವ ನಿರ್ಬಂಧಕ್ಕೊಳಗಾಗುತ್ತಿದ್ದಾರೆ. ೧೩೦ ಮಿಲಿಯ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಪಡೆಯುವ ಅವಕಾಶವಿಲ್ಲ. ೧೫ಕ್ಕಿಂತ ಕಡಿಮೆ ಪ್ರಾಯದ ೨೫೦ ಮಿಲಿಯ ಮಕ್ಕಳು ಹೊಟ್ಟೆಪಾಡಿಗಾಗಿ ದುಡಿಯುತ್ತಿದ್ದಾರೆ.

ಜಗತ್ತಿನ ಆರ್ಥಿಕ ವ್ಯವಸ್ಥೆಯು ಒಟ್ಟು ಜನಸಂಖ್ಯೆಯ ಶೇ. ೨೦ರಷ್ಟು ಜನರಿಗಾಗಿ ಕೆಲಸ ಮಾಡುತ್ತಿದೆ. ಆದರೆ ಉಳಿದ ಶೇ. ೮೦ರಷ್ಟು ಜನರನ್ನು ಹೊರಗಿಡುತ್ತದೆ, ಹೀನಾಯವಾಗಿ ನಡೆಸಿಕೊಳ್ಳುತ್ತದೆ.

೭೭ ದೇಶಗಳ ವೃಂದದ ಕುರಿತು ಹೇಳುವುದಾದರೆ, ಇದು ಭಿಕ್ಷೆ ಬೇಡುವುದಕ್ಕೆ, ಅವುಗಳಿಗೆ ಅಡಿಯಾಳಾಗುವುದಕ್ಕೆ, ಸೋಲೊಪ್ಪಿಕೊಳ್ಳುವುದಕ್ಕೆ ಅಥವಾ ಪರಸ್ಪರ ವಿಧ್ವಂಸಕ ವಿಭಜನೆಗೆ ಕಾಲವಲ್ಲ. ನಮ್ಮ ಹಕ್ಕೊತ್ತಾಯಗಳನ್ನು ಪ್ರತಿಪಾದಿಸುವಲ್ಲಿ, ನಮ್ಮ ಹೋರಾಟದ ಕಸುವನ್ನು ಮರಳಿ ಪಡೆಯಲು, ನಮ್ಮ ಐಕಮತ್ಯವನ್ನು ಉಳಿಸಿಕೊಳ್ಳಲು ಇದು ಸಕಾಲವಾಗಿದೆ.

ಮುಂದೊಂದು ದಿನ ಅಭಿವೃದ್ಧಿಗೊಂಡ ಮತ್ತು ಹಿಂದುಳಿದ ದೇಶಗಳ ಮಧ್ಯೆ ಯಾವ ಅಂತರವೂ ಉಳಿದಿರುವುದಿಲ್ಲ ಎಂದು ಐವತ್ತು ವರ್ಷಗಳ ಹಿಂದೆ ನಮಗೆ ಭರವಸೆ ನೀಡಲಾಯಿತು. ನಮಗೆ ಆಹಾರದ ಮತ್ತು ನ್ಯಾಯದ ಭರವಸೆ ನೀಡಲಾಯಿತು. ಆದರೆ ಇಂದು ನಮಗೆ ಹಸಿವಿನಿಂದ ಬಿಡುಗಡೆ ದೊರಕಿಲ್ಲ. ಹೆಚ್ಚು ಅನ್ಯಾಯವೂ ನಮ್ಮ ಪಾಲಿಗೆ ದೊರಕಿದೆ.

ನವ-ಉದಾರೀಕರಣದ ನಿಯಮದಂತೆ ಪ್ರಪಂಚವನ್ನು ಜಾಗತೀಕರಣಕ್ಕೊಳಪಡಿಸಬಹುದು. ಆದರೆ ಹಸಿವಿನಿಂದಿರುವ, ಅನ್ಯಾಯಕ್ಕೆ ಬಲಿಯಾಗಿರುವ ಕೋಟಿ ಕೋಟಿ ಜನರ ಮೇಲೆ ಅಧಿಕಾರ ನಡೆಸಲು ಸಾಧ್ಯವಂತೂ ಅಲ್ಲ.

ಆಫ್ರಿಕದ ಹಲವು ದೇಶಗಳಲ್ಲಿ ಬರಪೀಡಿತರಾಗಿರುವ ಮತ್ತು ಇತರ ಅನಾಹುತಗಳಿಗೆ ಸಿಕ್ಕಿ ತೊಳಲುತ್ತಿರುವ ತಾಯಂದಿರು ಹಾಗೂ ಮಕ್ಕಳ ಚಿತ್ರಗಳು ನಾತ್ಸಿ ಜರ್ಮನಿಯ ಕೂಡುದೊಡ್ಡಿಗಳ ದೃಶ್ಯವನ್ನು, ಹೆಣಗಳ ರಾಶಿ ಮತ್ತು ಮರಣಾವಸ್ಥೆಯಲ್ಲಿರುತ್ತಿದ್ದ ಗಂಡಸರು, ಹೆಂಗಸರು ಮತ್ತು ಮಕ್ಕಳ ಚಿತ್ರವನ್ನು ನೆನಪಿಗೆ ತರುತ್ತವೆ.

ಎರಡನೇ ಪ್ರಪಂಚ ಯುದ್ಧ ನಡೆದ ಆರು ವರ್ಷಗಳ ಅವಧಿಯಲ್ಲಿ ಮಡಿದವರಿಗಿಂತ ಅಧಿಕ ಸಂಖ್ಯೆಯಲ್ಲಿ ಜನರು ಪ್ರತಿ ಮೂರು ವರ್ಷಗಳಿಗೊಮ್ಮೆ ಹಸಿವಿನಿಂದ, ತಪ್ಪಿಸಬಹುದಾಗಿದ್ದ ಅಥವಾ ಗುಣಪಡಿಸಬಹುದಾಗಿದ್ದ ರೋಗರುಜಿನಗಳಿಂದ ಸಾಯುತ್ತಿದ್ದಾರೆ. ಇಂಥ ಅನಿಷ್ಟ ಆರ್ಥಿಕ ಪದ್ಧತಿಯನ್ನು ನಮ್ಮ ಮೇಲೆ ಬಲವಂತವಾಗಿ ಹೇರಿದುದಕ್ಕಾಗಿ ಮತ್ತೊಂದು ನ್ಯೂರೆಂಬರ್ಗ್ ವಿಚಾರಣೆ ನಡೆಯಬೇಕಾಗಿದೆ.

ಆ ಕುರಿತು ನಾವು ಏನು ಮಾಡಬೇಕು ಎಂಬುದನ್ನು ಇಲ್ಲಿ ಚರ್ಚಿಸಬೇಕು.

ಕ್ಯೂಬಾದಲ್ಲಿ ನಾವು ಸಾಮಾನ್ಯವಾಗಿ ಹೇಳುತ್ತೇವೆ. ''ತಾಯ್ನಾಡು ಇಲ್ಲವೇ ಮರಣ!'' ತೃತೀಯ ಜಗತ್ತಿನ ದೇಶಗಳ ಈ ಶೃಂಗಸಭೆಯಲ್ಲಿ ಹೀಗೆ ಹೇಳಬೇಕಾಗುತ್ತದೆ: ''ನಾವು ಒಗ್ಗಟ್ಟಾಗಿ ಪರಸ್ಪರ ನಿಕಟ ಸಹಕಾರ ಸಂಪರ್ಕ ಏರ್ಪಡಿಸಿಕೊಂಡರೆ ಸರಿ, ಹಾಗಿಲ್ಲದಿದ್ದರೆ ಮರಣವೇ ಗತಿ!''

ಅನು : ಕೆ. ಪಿ. ಸ್ವಾಮಿ

ವಸುಮತಿ ಉಡುಪ

ಖಾಲಿ ಸೈಟಿನ ಆತ್ಮಕಥೆ

ಹಿಂದೆ, ಕೆಲವು ವರ್ಷಗಳ ಹಿಂದೆ, ನಾನೊಂದು ಗದ್ದೆಯಾಗಿದ್ದೆ. ವರ್ಷಕ್ಕೊಂದು ಸಲ ಮುಂಗಾರಿನ ಹದಮಳೆ ನನ್ನ ಮೈ ತೋಯಿಸಿ ಪುಲಕವೆಬ್ಬಿಸಿದಾಗ, ಕಚಕುಳಿ ಕೊಡುವಂತೆ ನೇಗಿಲಿನ ಗೆರೆಗಳನ್ನು ಎತ್ತುಗಳು ನನ್ನ ಮೈಮೇಲೆ ಎಳೆಯುತ್ತಿದ್ದುವು. ಬಿತ್ತಿದ ಬೀಜ ನನ್ನ ಮಡಿಲಲ್ಲಿ ಮೊಳಕೆಯೊಡೆದು ನಿಧಾನವಾಗಿ ಬೆಳೆದು, ಪೈರುಗಳು ಹೊಡೆ ತುಂಬಿ ಗಾಳಿಯಲ್ಲಿ ಓಲಾಡುವಾಗ ಸುಖದ ತಂದ್ರಿಯಲ್ಲಿ ನಾನು ಮೈಮರೆಯುತ್ತಿದ್ದೆ. ಊರು ಬೆಳೆಯುತ್ತಾ ಬೆಳೆಯುತ್ತಾ ನನ್ನವರೆಗೆ ಬರುವ ಮುನ್ಸೂಚನೆ ಕಂಡುಕೊಂಡ ಬುದ್ಧಿವಂತ ರೈತನೊಬ್ಬ ನನ್ನ ಮಾಲೀಕನಿಗೆ ಹಣದಾಸೆ ತೋರಿಸಿ ನನ್ನನ್ನು ಖರೀದಿಸಿದ. ಉದ್ದಾನುದ್ದದ ನನ್ನನ್ನು ವಿಂಗಡಿಸಿ, ವಿಂಗಡಿಸಿ, ಒಂದೊಂದಾಗಿ ಮಾರಿ ಕೊಂಡ. ಒಂದಾಗಿದ್ದ ನಾನು ಹಲವು ಚೂರುಗಳಾಗಿ ವಿಭಾಗಗೊಂಡೆ. ಕ್ರಮೇಣ ಅಲ್ಲೆಲ್ಲಾ ಮನೆಗಳು ಹುಟ್ಟಿಕೊಳ್ಳತೊಡಗಿದವು. ಕಲ್ಲು, ಮರಳು, ಸಿಮೆಂಟಿನ ಲಾರಿಗಳ ಓಡಾಟದಿಂದ ನನ್ನ ಶಾಂತಿ ಭಂಗವಾಯಿತು. ಮಾತ್ರವಲ್ಲ ಕಳೆದುಕೊಂಡ ಈ ಶಾಂತಿ ಇನ್ನೆಂದೂ ಲಭ್ಯವಾಗದೆಂಬ ಕಟುಸತ್ಯವನ್ನು ಅನಿವಾರ್ಯವಾಗಿ ನಾನು ಒಪ್ಪಿಕೊಳ್ಳಬೇಕಾಯಿತು, ಒಗ್ಗಿಕೊಳ್ಳಬೇಕಾಯಿತು. ಹಾಯಾಗ ಗಾಳಿ ಬೆಳಕಿಗೆ ಮೈಯೊಡ್ಡಿ ಮಲಗಿದ್ದ ನಾನು ಕಾಂಕ್ರೀಟು ಕಟ್ಟಡವೊಂದರ ಭಾರ ಹೊತ್ತು ಮುಸುಗರೆಯಬೇಕಾದ ಕಾಲ ಸನ್ನಿಹಿತವಾಗಿದೆಯೆಂಬ ಚಡಪಡಿಕೆಯಿಂದ ನಾನು ಅಸ್ವಸ್ಥನಾಗಿದ್ದೆ. ನನ್ನನ್ನು ತನ್ನದಾಗಿಸಿಕೊಂಡ ಮಾಲೀಕ ಎಂದೋ ಒಂದು ಶುಭದಿನ ಜರತಾರಿ ಸೀರೆಯುಟ್ಟು ಪೂಜಾಸಾಮಗ್ರಿಗಳನ್ನು ಕೈಲಿ ಹಿಡಿದ ಹೆಂಡತಿಯೊಂದಿಗೆ, ಉತ್ಸಾಹ ಚಿಮ್ಮುತ್ತಿರುವ ಮಕ್ಕಳೊಂದಿಗೆ, ಬಂಧು ಬಾಂಧವರೊಂದಿಗೆ ಆಗಮಿಸಿದ. ಪುರೋಹಿತರು ಮಂತ್ರ ಪುಷ್ಪಗಳೊಂದಿಗೆ ನನ್ನನ್ನು ಪೂಜಿಸಿ, ಯಜಮಾನ ನನ್ನ ಮೈಯನ್ನು ಕೆತ್ತಿದ ಶಾಸ್ತ್ರ ಪೂರೈಸಿ, ನೆರೆದವರೆಲ್ಲಾ ಸಿಹಿ ತಿಂದು ಹರಸಿ ಹೋದರು. ಅಲ್ಲಿಗೆ ನನ್ನ ಬದುಕಿನ ಮತ್ತೊಂದು ಅಧ್ಯಾಯ ಆರಂಭ ವಾಗುತ್ತದೆಯೆಂಬ ನನ್ನ ನಡುಕದ ನಿರೀಕ್ಷೆ ನಿರೀಕ್ಷೆ ಯಾಗಿಯೇ ಉಳಿದುಕೊಂಡಿತು. ಇಲ್ಲೊಂದು ಸತ್ಯವನ್ನು ಮುಚ್ಚುಮರೆಯಿಲ್ಲದೇ ಹೇಳಿಬಿಡುತ್ತೇನೆ. ನಿಜವಾದ ಕಷ್ಟಕ್ಕಿಂತಾ ಅದು ಬಂದೀತೆನ್ನುವ ಹೆದರಿಕೆಯೇ ಹೆಚ್ಚು ತಾಪದಾಯಕ ಎನ್ನುವುದು ನಿಮ್ಮ ಅನುಭವಕ್ಕೂ ಬಂದಿರಬಹುದು. ಯಜಮಾನ ಅಪರೂಪಕ್ಕೊಮ್ಮೆ ಬಂದು, ಕೆಲಹೊತ್ತು ನನ್ನ ಬಳಿ ನಿಂತು, ನನ್ನ ಉದ್ದಗಲಗಳನ್ನು ಕಣ್ಣಲ್ಲಿ ತುಂಬಿಕೊಂಡು ಹೋಗುತ್ತಿದ್ದನೇ ಹೊರತು ತನ್ನ ಉದ್ದೇಶಕ್ಕಾಗಿ ನನ್ನನ್ನು ಬಳಸಿಕೊಳ್ಳುವ ಸೂಚನೆ ಕಂಡುಬರಲಿಲ್ಲ. ಇದರ ಕಾರಣವನ್ನೂ ಅವನು ನನ್ನ ನೆರೆಮನೆಯವರ ಹತ್ತಿರ ಮಾತಾಡುವಾಗ ಕೇಳಿಸಿಕೊಂಡೆ ಮತ್ತು ಎರಗಲಿದ್ದ ಆಪತ್ತು ಮುಂದೆ ಹೋದುದಕ್ಕಾಗಿ ನಿಟ್ಟುಸಿರ್ಗರೆದು ಹಗುರಾದೆ.



ಈಗಾಗಲೇ ನನ್ನ ಮಾಲೀಕನಿಗೆ ಶಹರದ ನಡುವಿನ ಲ್ಲೊಂದು ಸ್ವಂತಮನೆ ಇತ್ತು. ಅಲ್ಲಿನ ಗೌಜು, ಗದ್ದಲ, ಪ್ರದೂಷಣಗಳಿಂದ ಬೇಸತ್ತ ಅವನು ಶಾಂತವಾಗಿ ನೆಮ್ಮದಿಯಿಂದ ಬದುಕು ಮಾಡಬೇಕೆಂಬ ಇಚ್ಛೆಯಿಂದ ನನ್ನನ್ನು ಆಯ್ದುಕೊಂಡಿದ್ದ. ಆದರೆ ಇಲ್ಲಿ ಮನೆ ಕಟ್ಟಿಸಿಕೊಂಡರೆ ಮಕ್ಕಳ ಸ್ಕೂಲು, ಅವನ ಆಫೀಸು, ಅಲ್ಲದೆ ನಿತ್ಯ ವ್ಯವಹಾರದ ಪ್ರತಿಯೊಂದಕ್ಕೂ ಮೈಲುಗಟ್ಟಲೆ ಓಡಾಡಬೇಕಾದ ಕಾರಣದಿಂದ ಇಲ್ಲಿ ಮನೆ ಎಬ್ಬಿಸುವು ದನ್ನು ಮುಂದೂಡುತ್ತಿದ್ದಾನೆ. ಎಂದೋ ಒಂದು ದಿನ ಇಲ್ಲಿ ಮನೆ ಕಟ್ಟಿಸುವುದಂತೂ ನಿಶ್ಚಯ ಎಂಬುದನ್ನು ಅವನು ಪುನರುಚ್ಚರಿಸಿದ್ದ. ಅವನು ಹೊರಟುಹೋದ ಮೇಲೆ ನೆರೆಮನೆಯಾತ ಹೆಂಡತಿಯೊಂದಿಗೆ ಹೇಳಿದ್ದ:

'ಜಾಗದ ಮೇಲೆ ದುಡ್ಡು ಹಾಕಿದರೆ ಅದು ಬೆಳೆಯುತ್ತಾ ಹೋಗುತ್ತೆ ಅಂತ ದುಡ್ಡು ಹಾಕಿದಾನೇ ಹೊರತು ಮನೆ ಕಟ್ಟಿಸುವ ಯೋಚನೆ ಸುಳ್ಳು. ಯಾವತ್ತೋ ಒಂದು ದಿನ ಮಾರಿಹಾಕ್ತಾನೆ ನೋಡ್ತಿರು...'

ಭತ್ತ ಬೆಳೆಯುವ ಸ್ಥಳವಾಗಿದ್ದ ನಾನು ದುಡ್ಡು ಬೆಳೆಯುವ ಸ್ಥಳವಾಗಿ ಮಾರ್ಪಾಟಾದ ಜೋಕ್ಯಕ್ಕೆ ನಾನು ಅಚ್ಚರಿಗೊಂಡೆ. ಸದ್ಯಕ್ಕಂತೂ ತಲೆಯ ಮೇಲೆ ತೂಗುತ್ತಿದ್ದ ಕತ್ತಿ ಕಡಿದು ಬೀಳುವ ಭಯದಿಂದ ತಪ್ಪಿಸಿಕೊಂಡದ್ದರಿಂದ ಮನಸ್ಸು ನಿರಾಳವಾಗಿತ್ತು. ಈ ನಡುವೆ ಈ ಹೊಸ ಬಡಾವಣೆಯ ಮಕ್ಕಳು ನನ್ನ ಮೇಲೆ ಕಣ್ಣು ಹಾಕಿದರು. ಅವರಿಗೆ ಆಡುವುದಕ್ಕೆ, ಕುಣಿಯುವುದಕ್ಕೆ ಒಂದು ಜಾಗ ಬೇಕಾಗಿತ್ತು. ನಾನೇ ಯಾಕಾಗಬಾರದು? ನನ್ನೆದುರು ನಿಂತು ಈ ವಿಚಾರವಾಗಿ ಪುಟ್ಟ ಪೋರರ ಗುಂಪು ಚರ್ಚೆ ಮಾಡುವಾಗ ಹೊಸ ದೊಂದು ಸುಖದ ನಿರೀಕ್ಷೆ ಯಿಂದ ನಾನು ಪುಲಕಿತ ಗೊಂಡೆ. ಆ ದಿನವೂ ಬಹುಬೇಗ ಬಂತು. ಮಕ್ಕಳೇ ಹಾಗೆ. ಒಂದು ವಿಷಯ ಅವರ ತಲೆಗೆ ಬಂತು ಅಂದರೆ ಅದು ತಕ್ಷಣ ಕಾರ್ಯರೂಪಕ್ಕಿಳಿದು ಬಿಡಬೇಕು. ಅವರ ಉತ್ಸಾಹಕ್ಕೆ ಕಡಿವಾಣವೆಂಬುದಿಲ್ಲ. ಅದೇ ಭಾನುವಾರ ಬೆಳಗಿನ ತಿಂಡಿಯ ನಂತರ ಮಕ್ಕಳೆಲ್ಲಾ ಗುಂಪು ಗೂಡಿದರು. ನನ್ನ ಮೇಲೆ ಬೆಳೆದಿದ್ದ ಕಾಡುಗಿಡ, ಕಲ್ಲು, ಕಸಕಡ್ಡಿಗಳನ್ನು ತೆಗೆದು ನನ್ನನ್ನು ಚೆಲುವಾಗಿಸಲು ಶ್ರಮಿಸ ತೊಡಗಿದರು. ನನ್ನ ನೆರೆಯ ವನು ಕಿಟಕಿಯ ಮೂಲಕ ಈ ಸಂಭ್ರಮವನ್ನು ನೋಡಿ ಬೀಗಿದ. ಕಾಸು ಖರ್ಚಿಲ್ಲದೆ ಪಕ್ಕದ ಖಾಲಿ ಜಾಗ ಚೊಕ್ಕಟವಾಗುತ್ತಿದೆ ಎಂದು ಖುಷಿಪಟ್ಟ. ನನ್ನ ಸಂತಸವನ್ನು ಹೇಗೆ ಹಂಚಿಕೊಳ್ಳಲಿ? ಮೊಮ್ಮಕ್ಕಳು ತೊಡೆಯ ಮೇಲೆ ಕುಣಿದಾಡಿದಂತೆ ಹಿತ, ಸುಖ. ಎಳೆಯ ಪಾದಗಳ ತುಳಿತಕ್ಕೊಳಗಾಗಿ ನನ್ನ ಜೀವನ ಪಾವನವಾಯಿತೆಂಬ ಸಂತೃಪ್ತಿ. ಬಿಸಿಲೇರಿದಂತೆ ಮಕ್ಕಳು ಬೆವರತೊಡಗಿದುವು. ದಣಿದುವು. ಆದರೆ ಅವರ ಹುಮ್ಮಸ್ಸಿಗೆ ದಣಿವಾಗಲಿಲ್ಲ. ಹೆತ್ತವರು ಬಂದು ಕರೆವರೆ ಒಬ್ಬನೆಂದರೆ ಒಬ್ಬನೂ ಒಗೊಡಲಿಲ್ಲ. ನನ್ನನ್ನು ಅವರ ಕ್ರೀಡೆಗೆ ಯೋಗ್ಯವಾಗಿಸಿದ ನಂತರವೇ ವಿಶ್ರಾಂತಿಯೆಂದು ಅವರು ಸಂಕಲ್ಪ ಮಾಡಿದಂತಿತ್ತು. ಅವತ್ತಿನ ಸಂಜೆಯ ಸಡಗರ ಇವತ್ತಿಗೂ ನನ್ನೊಳಗೆ ಅಚ್ಚಳಿಯದೆ ಉಳಿದು ಕೊಂಡಿದೆ. ಅದೇನು ಗಲಭೆ, ಅದೇನು ಮಾತು, ಅದೇನು ನಗು, ಕುಣಿತ, ಜಿಗಿತ, ನಲಿತ. ಬಾಲ್ಯದ ಸೊಗಸಿಗೆ ಸಾಟಿ ಇಲ್ಲ. ಗಿಲಿಗುಟ್ಟುವ ಗೆಜ್ಜೆಕಾಲಿನ ಪುಟ್ಟಪೋರಿಯರು ನನ್ನ ಮೇಲೆ ಗೆರೆ ಕೊರೆದು ಕುಂಟಾಬಿಲ್ಲೆ ಆಡಿದರು. ಹುಡುಗರು ಕ್ರಿಕೆಟ್ ಆಡಿ ಗಲಾಟೆ ಎಬ್ಬಿಸಿದರು. ಇಬ್ಬರೂ,


ಲೆಕ್ಕಕ್ಕಿಲ್ಲದ ಪುಟಾಣಿಗಳು ದೂರ ಓಡಿದ ಚೆಂಡನ್ನು ಬೆನ್ನಟ್ಟಿ ಏದುಬ್ಬಸ ಬಿಡುತ್ತಾ ಅದನ್ನು ತಂದು ಆಡುವವರ ಕೈಗೊಪ್ಪಿಸುವ ವೈಖರಿಯೇ ವೈಖರಿ. ಸೂರ್ಯ ಮುಳುಗಿ ಕತ್ತಲು ಕವಿಯುತ್ತಾ ಬಂದರೂ ಯಾರಿಗೂ ನನ್ನನ್ನು ಬಿಟ್ಟು ಹೋಗುವ ಮನಸ್ಸಿಲ್ಲ. ಇನ್ನು ಆಟ ಸಾಧ್ಯವಿಲ್ಲವೆನ್ನುವಷ್ಟು ಕಪ್ಪು ಮುಸುಕಿದಾಗ ಎಲ್ಲಾ ಆಟ ನಿಲ್ಲಿಸಿ ಒಗ್ಗೂಡಿದರು. ಕಲಕಲ ಮಾತು. ಕಿಲಕಿಲ ನಗೆ. ನನ್ನನ್ನು ಯಾವ ಯಾವ ಬಗೆಯಲ್ಲಿ ಉಪಯೋಗಿಸಿಕೊಳ್ಳಬಹುದೆಂಬ ಚರ್ಚೆ, ಅಭಿಪ್ರಾಯಭೇದ, ಸಣ್ಣಪುಟ್ಟ ವೈಮನಸ್ಯ. ಎಳೆಯರ ಕನಸುಗಳಿಗೆ ಕಿವಿಗೊಟ್ಟು ಮೈಮರೆತಿದ್ದ ನನಗೆ ಅವರೆಲ್ಲಾ ಚೆದುರಿಹೋದ ಮೇಲೆ ಭಣಭಣವೆನ್ನಿಸುವಂತಹ ಖಾಲಿತನ. ಅವತ್ತು ಇಡೀ ದಿನ ಎಷ್ಟು ಹುರುಪಿನಿಂದ ಕಳೆದುಹೋಗಿತ್ತು ಅಂದರೆ ಕಾಲ ಸರಿದದ್ದು ಅದಕ್ಕಷ್ಟೇ ಗೊತ್ತು. ಇನ್ನು ಈ ಮುದ್ದು ಮುಖಗಳನ್ನು ನೋಡಲು ಮುದ್ದು ಮಾತುಗಳನ್ನು ಕೇಳಲು, ನಾಳೆ ಸಂಜೆಯವರೆಗೆ ಕಾಯಬೇಕಲ್ಲಾ ಎಂದು ನನಗರಿವಿಲ್ಲದೆ ನಿಟ್ಟುಸಿರ್ಗರೆದಿದ್ದೆ. ಬಾಯಲ್ಲಿಟ್ಟುಕೊಂಡ ಕಲ್ಲುಸಕ್ಕರೆಯ ಹರಳಿನಂತೆ ಸುಖದ ಕಾಲವೆನ್ನುವುದು ಎಷ್ಟು ಬೇಗ ಕರಗಿಹೋಯ್ತು ಎಂಬುದನ್ನು ನೆನೆದರೆ ವ್ಯಥೆಯಾಗುತ್ತದೆ. ಮಕ್ಕಳ ಕೇಕೆ, ಅಬ್ಬರಗಳು ನೆರೆಮನೆಯ ಗೃಹಸ್ಥನ ಅಸಹನೆಯನ್ನು ಕೆರಳಿಸುತ್ತಾ ಬಂದವು. ಬೆಳೆಯುತ್ತಾ ಹೋದಂತೆಲ್ಲಾ ಮನುಷ್ಯ ಯಾಕೆ ಸಿನಿಕನಾಗುತ್ತಾ ಹೋಗುತ್ತಾನೆ ಎಂದು ನನಗೆ ಅಚ್ಚರಿಯಾಗುತ್ತದೆ. ಒಬ್ಬರ ಸುಖ, ಸಂತೋಷಗಳು ಇನ್ನೊಬ್ಬರಲ್ಲಿ ಕಿಚ್ಚೆಬ್ಬಿಸುವುದು ಮಾನವ ಸಮಾಜದ ನಿಯಮವಾಗಿ ಬಿಟ್ಟಿದೆಯೇ? ಯಾರಿಗೆ ಗೊತ್ತು? ಅವನ ಅಸಹನೆ ಸಿಡಿಯಲು ಒಂದು ನೆಪವೂ ಸಿಕ್ಕಿಬಿಟ್ಟಿತು. ನೀವು ಊಹಿಸಿರುತ್ತೀರಿ, ಗೊತ್ತು. ಅದೇ, ಅವನ ಮನೆಯ ಕಿಟಕಿಯ ಗಾಜು ಚೆಂಡು ತಗುಲಿ ಸೀಳಿಬಿಟ್ಟಿತು. ಅವನು ರೌದ್ರಾವತಾರ ತಾಳಿದ. ಪರಿಣಾಮವಾಗಿ ಮಕ್ಕಳು ನನ್ನನ್ನು ಬಹಿಷ್ಕರಿಸಿದರು. ಮರಳಿ ನಾನು ಕೇಳುವವರಿಲ್ಲದ ಒಬ್ಬಂಟಿಯಾದೆ. ಯಾವತ್ತಿನ ಶೂನ್ಯದಲ್ಲಿ ಮುಳುಗಿದೆ. ಮಕ್ಕಳು ತಮ್ಮ ಕೋಮಲ ಕರಗಳಿಗೆ ಘಾಸಿ ಮಾಡಿಕೊಂಡು ಕಿತ್ತೆಸೆದಿದ್ದ ಗಿಡಗಂಟಿಗಳು ಮತ್ತೆ ನನ್ನ ಮೇಲೆ ಚಿಗಿತುವು. ಹೊರವಾಗಿ ಬೆಳೆದವು. ಸೋಕಿದರೆ ಕಿರುಕುಳ ಕೊಡುವ ಪಾರ್ಥೇನಿಯಂ ಗಿಡಗಳಿಗಂತೂ ನಾನೇ ಆಶ್ರಯಸ್ಥಾನ. ಊರ ಬಿಡಾಡಿ ಹಂದಿಗಳು ಗಿಡಗಳ ಗುಂಪಿನ ನಡುವೆ ತಮ್ಮ ವಿಶ್ರಾಂತಿ ಸ್ಥಳ ಕಲ್ಪಿಸಿಕೊಂಡವು. ಗಂಟೆಗಟ್ಟಲೆ ಮೂಳೆ ಜಗಿಯುವ ನಾಯಿಗಳು ಮೂಳೆ ಸಿಕ್ಕಿದಾಗ ನನ್ನೊಳಗೆ ಅವಿತಿಟ್ಟುಕೊಂಡು ಸಾವಕಾಶವಾಗಿ ಸುಖಿಸ ತೊಡಗಿದವು. ನಾನು ಒಂದು ಮೂಲೆಯಲ್ಲಿದ್ದುದರಿಂದ ಹಾಗೂ ನನ್ನಿಂದಾಚೆಗೂ ಊರು ಚಾಚಿಕೊಳ್ಳ ತೊಡಗಿದ್ದರಿಂದ ಪಕ್ಕದಲ್ಲೊಂದು ಓಡಾಡುವ ರಸ್ತೆಯಿದ್ದು ದಾರಿಹೋಕರು ಹೆಚ್ಚತೊಡಗಿದರು. ಎದೆಯೆತ್ತರಕ್ಕೆ ಬೆಳೆದ ಗಿಡಗಳು ತುಂಬಿದ್ದ ನನ್ನನ್ನು ನೋಡುತ್ತಿದ್ದಂತೆ ಹೆಚ್ಚಿನವರಿಗೆ ಮೂತ್ರಶಂಕೆಗೆ ಅವಸರವಾಗುತ್ತಿತ್ತು. ದ್ವಿಚಕ್ರವಾಹನ ಗಳವರು ವಾಹನ ನಿಲ್ಲಿಸಿ, ನಡೆದು ಹೋಗುತ್ತಿದ್ದವರು ಗಳಿಗೆ ನಿಂತು, ನನ್ನ ಮೇಲೆ ತೀರ್ಥ ಪ್ರೋಕ್ಷಣೆ ಮಾಡುವುದು ಮಾಮೂಲಿನ ಸಂಗತಿಯಾಯ್ತು. ಮೃದ್ಗಂಧ ದಿಂದ ಪರಿಮಳಿಸುತ್ತಿದ್ದ ನಾನು ನಾರತೊಡಗಿದೆ. ನನ್ನ ಮೇಲೆ ನನಗೇ ಹೇಸಿಗೆ ಹುಟ್ಟತೊಡಗಿತು. ನೆರೆಮನೆಯ ಹೆಂಗಸಂತೂ ವಿಸರ್ಜನೆಯ ಈ ನಿರ್ಲಜ್ಜ ದೃಶ್ಯ ಕಂಡರೆ ರಪ್ಪನೆ ಕಿಟಕಿ ಬಾಗಿಲು ಮುಚ್ಚುತ್ತಿದ್ದಳು. 'ಹಾಳು ಕಿಟಕಿ ತೆಗೆದರೆ ಉಚ್ಚೆಯ ವಾಸನೆ' ಎಂದು ಗೊಣಗುತ್ತಿದ್ದಳು. ಸ್ವಯಂಕೃತಾಪರಾಧ. ಮಕ್ಕಳ ಆಟದ ಬಯಲಾಗಿದ್ದರೆ ಎಷ್ಟು ಆಸ್ಥೆಯಿಂದ ನನ್ನನ್ನು ಶುಭ್ರವಾಗಿಟ್ಟು ಕೊಳ್ಳುತ್ತಿದ್ದರೋ? ಇಷ್ಟು ಸಾಲದೆಂಬಂತೆ ಇನ್ನೊಂದು ಕೀಟಲೆ ಶುರುವಾಗಿತ್ತು. ಕಸ ಎಸೆಯಲು ಸುತ್ತಮುತ್ತಲ ಮನೆಗಳವರಿಗೆ ನಾನೊಂದು ಸುಲಭದ ಸ್ಥಳವಾಗಿದ್ದೆ. ಎಲ್ಲರ ಮನೆಯ ತ್ಯಾಜ್ಯ ವಸ್ತುಗಳೂ ಬಕೆಟ್ಟುಗಟ್ಟಲೆ ಬಂದು ನನ್ನ ಮೇಲೆ ಬೀಳುತ್ತಿದ್ದವು. ನನ್ನ ಮೈತುಂಬಾ ಬಣ್ಣ ಬಣ್ಣದ ಪ್ಲಾಸ್ಟಿಕ್ ಕವರುಗಳ ಸಂತೆ. ಕೊಳೆಯುವ ಕಸಕ್ಕೆ ಮುತ್ತುವ ನೊಣಗಳು, ಇರುವೆಗಳು, ಗುಂಯ್ಗುಡುವ ಸೊಳ್ಳೆಗಳು. ನೆರೆಮನೆಯಾತನಿಗೆ ಮೈಪರಚಿಕೊಳ್ಳುವಷ್ಟು ಸಿಟ್ಟು. 'ಇಲ್ಲಿ ಕಸ ಎಸೆಯಬೇಡಿ' ಎಂದು ಅವನು ಕಿರುಚಾಡತೊಡಗಿದ ಮೇಲೆ ಕೆಲವರು ಉಪಾಯ ಕಂಡುಕೊಂಡರು. ರಾತ್ರಿ ಮಲಗುವ ಹೊತ್ತಿನಲ್ಲಿ, ಎಲ್ಲರ ಮನೆಯ ಕಿಟಕಿ, ಬಾಗಿಲುಗಳು ಮುಚ್ಚಿರುವಾಗ, ಕಳ್ಳರಂತೆ ಕಸವನ್ನು ತಂದು ಸುರಿದುಹೋಗತೊಡಗಿದರು. ಇನ್ನು ಕೆಲವರು, ಜಾಗ ನಿಮ್ದೇನ್ರೀ?' ಎಂದು ಬಾಯಿ ಮಾಡಿದರು. ನನ್ನ ಮಾಲೀಕನೂ ಇತ್ತಿತ್ತಲಾಗಿ ನನ್ನ ವ್ಯಾಮೋಹವನ್ನು ಕಡಿಮೆ ಮಾಡಿಕೊಂಡಂತಿತ್ತು. ಇದ್ದೊಬ್ಬ ಮಗನಿಗೆ ದೂರದ ಊರಿನಲ್ಲಿ ಕೆಲಸ ಸಿಕ್ಕಿ, ಮಗಳಿಗೆ ಮದುವೆಯಾಗಿ, ನನ್ನನ್ನು ಕೊಂಡವನಿಗೆ ಇಲ್ಲೊಂದು ಮನೆ ಕಟ್ಟುವ ಬಗ್ಗೆ ಹುಮ್ಮಸ್ಸು ಇಳಿದಿತ್ತು. ಹೀಗೆ ಇರುವಾಗ ಇನ್ನೊಂದು ತಮಾಷೆ ನಡೆಯಿತು. ನನ್ನ ಆಶ್ರಯದಲ್ಲಿ ಬಿಡಾರ ಹೂಡಿದ್ದ ಹಂದಿಯೊಂದು ಯಾವುದೋ ಖಾಯಿಲೆಯಿಂದ ತೀರಿಕೊಂಡಿತು. ಮೊದಲು ನೆರೆಮನೆಯವನಿಗೆ ಇದರ ಸುಳಿವು ಗೊತ್ತಾಗಲೇ ಇಲ್ಲ. ನಾಯಿಗಳು ಸತ್ತ ಹಂದಿಯನ್ನು ಕಿತ್ತಾಡಿದವು, ರುಚಿ ನೋಡಿದವು. ನಿಧಾನವಾಗಿ ಅಳಿದುಳಿದ ಮಾಂಸ ಕೊಳೆಯತೊಡಗಿತು. ದುರ್ವಾಸನೆ. ರಸ್ತೆಯಲ್ಲಿ ಓಡಾಡುವವರೆಲ್ಲಾ ನನ್ನ ಕಡೆ ನೋಡಿ ಕ್ಯಾಕರಿಸಿ ತುಪ್ಪಿ ಮುಂದೆ ಹೋಗತೊಡಗಿದರು. ನೆರೆಮನೆಯ ವರಂತೂ ತಟ್ಟೆಯ ಮುಂದೆ ಕೂತು ಉಣ್ಣುವಂತಿಲ್ಲ. ವಾಕರಿಕೆ. ನಗರಸಭೆಯ ಕೆಲಸಗಾರನೊಬ್ಬನಿಗೆ ಚೆನ್ನಾಗಿ ಕೈ ಬಿಸಿ ಮಾಡಿ ಅವಶೇಷಗಳನ್ನು ತೆಗೆಸುವ ಹೊತ್ತಿಗೆ ನೆರೆಮನೆಯವನಿಗೆ ತಲೆ ಕೆಟ್ಟುಹೋಯ್ತು. 'ಇದೊಂದು ನರಕ' ಎಂದು ಅವನು ನನಗೆ, ನನ್ನ ಮಾಲೀಕನಿಗೆ ಅದೆಷ್ಟು ಸಲ ಶಾಪ ಹಾಕಿದನೋ? ತಮಾಷೆ ಇರುವುದು ಮುಂದೆ. ನೋಟಿನ ರುಚಿ ನೋಡಿದ್ದ ಕೆಲಸಗಾರ ತಲೆ ಉಪಯೋಗಿಸಿ ಪದೇ ಪದೇ ಅದನ್ನು ಸಂಪಾದಿಸುವ ಮಾರ್ಗ ಕಂಡುಕೊಂಡ. ಎಲ್ಲಿ, ಯಾವ ಕೇರಿಯಲ್ಲಿ ಹಂದಿ, ನಾಯಿ, ಬೆಕ್ಕಿನ ಹೆಣ ಬಿದ್ದಿದ್ದರೂ ಇವನಿಗೆ ಪರಮಾನಂದ. ಅಲ್ಲಿಂದ ನನ್ನಲ್ಲಿಗೆ ಅದನ್ನು ಗುಟ್ಟಾಗಿ ರವಾನಿಸಿ, 'ಹಾಳು ನಾಯಿಗಳ ಕೆಲಸ' ಎಂದು ಶುನಕ ಸಮೂಹಗಳ ಮೇಲೆ ತಪ್ಪು ಹೊರಿಸಿ, ಯಥಾಪ್ರಕಾರ ನೆರೆಮನೆಯಾತನಿಗೆ ಹೊಲಸು ತೆಗೆಸುವ ಶಿಕ್ಷೆ. ದಕ್ಷಿಣೆಯ ಸಂದಾಯ. ನನಗಂತೂ ಅವನ ಮೇಲೆ ಬಹಳ ಸಿಟ್ಟಿತ್ತಲ್ಲ, 'ಆಗಬೇಕು ಹಾಗೆ' ಎಂದು ಮುಸಿನಗುತ್ತಿದ್ದೆ. ಹೇಳುತ್ತಾ ಹೋದರೆ ಇಂಥ ಹಲವಾರು ಅನುಭವಗಳ ಮೂಟೆ ಬಿಚ್ಚಬಲ್ಲೆ. ಆದರೆ ಕೇಳುವ ತಾಳ್ಮೆ ನಿಮಗಿರಬೇಕಲ್ಲ? ನನ್ನಂತೆ ನನ್ನ ಅನುಭವಗಳಿಗೂ ಅಂತ್ಯವೆಂಬುದಿಲ್ಲ. ಕಾಲ ಕಳೆದಂತೆ ಹೊಸಹೊಸತಾದುವು ಸೇರಿಕೊಳ್ಳುತ್ತಲೇ ಇರುತ್ತವೆ. ನನ್ನ ಇದುವರೆಗಿನ ಅನುಭವದಲ್ಲಿ ಇತ್ತೀಚೆಗೆ ನಡೆದ ಹೃದಯ ವಿದ್ರಾವಕವಾದುದೊಂದನ್ನು ತಮ್ಮ ಗಮನಕ್ಕೆ ತಂದು ವಿರಮಿಸುತ್ತೇನೆ, ಕೇಳಿ. ತಿಂಗಳ ಹಿಂದೆ ಒಂದು ದಿನ. ನಡುರಾತ್ರಿ ಕಳೆದಿತ್ತು, ಬೆಳಗಾಗಲು ಬಹಳ ಹೊತ್ತು ಮಿಕ್ಕಿತ್ತು. ಮುಖ ಮುಚ್ಚುವಂತೆ ಸೆರಗು ಹೊದ್ದಿದ್ದ ಸ್ತ್ರೀ ರೂಪವೊಂದು ಎರಡೂ ಕೈಲಿ ಏನನ್ನೋ ಎದೆಗಪ್ಪಿ ಹಿಡಿದು ಕಳ್ಳ ಹೆಜ್ಜೆ ಹಾಕುತ್ತಾ ನನ್ನವರೆಗೆ ಬಂದದ್ದೇ ಕೈಲಿದ್ದುದನ್ನು ನನ್ನ ಒಡಲ ಮೇಲಿಟ್ಟು ಸರಸರ ನಡೆದು ಹೋಗಿಬಿಟ್ಟಿತು. 'ಈ ವಸ್ತು ವಿಶೇಷ ಏನಿರಬಹುದು? ನಡುರಾತ್ರಿಯ ಹೊತ್ತಿಗೆ ತ್ಯಜಿಸಿ ಹೋಗುವಂಥಾದ್ದು?' ಎನ್ನುವ ಕುತೂಹಲದಿಂದ ಬಿಡುಗಣ್ಣರಳಿಸಿ ನೋಡಿದ ನಾನು ಕಂಪಿಸಿ ಹೋಗಿಬಿಟ್ಟೆ. 'ಹೃದಯ ಬಾಯಿಗೆ ಬಂದಂತಾಯ್ತು' ಎಂದು ನೀವೆನ್ನುತ್ತೀರಲ್ಲಾ, ಅದೇ ಥರದ ಅನುಭವ ನನಗಾಯ್ತು. ಅದೊಂದು ಆಗತಾನೇ ತಾಯಗರ್ಭದಿಂದ ಭುವಿಗಿಳಿದಿರಬಹುದಾದ ಹಸು ಗೂಸು. ಆಗತಾನೇ ಎಂದು ಯಾಕೆ ಹೇಳುತ್ತಿದ್ದೇನೆಂದರೆ, ಅದರ ಮೈಯಿಂದ ಸೂಸುತ್ತಿದ್ದ ಹಸಿ ರಕ್ತದ, ಗರ್ಭಜಲದ, ಹಸಿ ಹಸಿ ವಾಸನೆ ನನ್ನ ಮೂಗಿಗೆ ಅಡರುವಷ್ಟು ತೀಕ್ಷ್ಣವಾಗಿತ್ತು. ದುರಂತ ಎಂದರೆ ಆ ಶಿಶು ಜೀವಂತ ವಾಗಿತ್ತು. ಯಾವ ತಾಯಿ, ಯಾವ ಅಪಖ್ಯಾತಿಯ ಭಯ ದಿಂದ ಕರುಳ ತುಣುಕನ್ನು ದೂರೀಕರಿಸಬೇಕಾಗಿ ಬಂತೋ ನಾನೇನು ಬಲ್ಲೆ? ಮಾನವ ಸಮಾಜದ ನಿಯಮಗಳು ನನ್ನಂಥವರಿಗೆ ವಿಚಿತ್ರ ಎನಿಸುವುದಂತೂ ಸತ್ಯ. ವಾತಾವರಣದ ತಣ್ಪು, ನನ್ನ ಒರಟುತನ, ಮುತ್ತಿ ಕಡಿಯುತ್ತಿರುವ ಸೊಳ್ಳೆಗಳ ದಂಡಿನಿಂದ ಮಗು ಕ್ಷೀಣ ದನಿಯೆತ್ತಿ ಅತ್ತಿತು. ನಟ್ಟನಡುರಾತ್ರಿಯಲ್ಲಿ ಆ ದನಿ ಯಾರ ಕಿವಿಯವರೆಗೂ ತಲುಪಿರಲಿಕ್ಕಿಲ್ಲ ಅಥವಾ ತಲುಪಿದರೂ

ನಿದ್ದೆಗಣ್ಣಿನಲ್ಲಿರುವವರು ಬೆಕ್ಕೋ, ನಾಯಿಯೋ ಎಂದುಕೊಂಡು ನಿರ್ಲಕ್ಷಿಸಿರಲೂಬಹುದು. ನನ್ನ ಪಾಲಿಗಂತೂ ಅದೊಂದು ಘೋರರಾತ್ರಿ. ಎಂದೂ ಮುಗಿಯಲಾರದೆನ್ನಿಸಿದ ದೀರ್ಘರಾತ್ರಿ. ಅಸಹಾಯಕತೆಯಿಂದ ಒಂದು ಯಾತನಾಮಯ ದೃಶ್ಯಕ್ಕೆ ಸಾಕ್ಷಿಯಾಗಿರಬೇಕಾಗಿ ಬಂದಂಥಾ ರಾತ್ರಿ. ನನ್ನೊಳಗೆ ಗೂಡು ಕೊರೆದು ಮನೆ ಮಾಡಿಕೊಂಡಿದ್ದ ಕೆಂಜಿರುವೆಗಳು ನೆತ್ತರಿನ ವಾಸನೆಗೆ ದಂಡೆತ್ತಿ ಬಂದು ಮಗುವನ್ನು ಮುಕುರಿದುವು. ಕಚ್ಚಿ ಹಿಂಸಿಸಿದವು. ಮಗು ಅಳುವುದಕ್ಕೂ ಚೈತನ್ಯ ಸಾಲದೆ ಎಲ್ಲವನ್ನೂ ಸಹಿಸುತ್ತಾ ಮೂರ್ಛೆ ಹೋದಂತೆ ಬಿದ್ದುಕೊಂಡಿತ್ತು. ನಾಯಿಯೊಂದು ಮೂಸುತ್ತಾ, ಮೂಸುತ್ತಾ ಸನಿಹ ಬಂದು ತನ್ನ ನೀಳ ನಾಲಿಗೆಯಿಂದ ಮಗುವಿನ ಮೈ ನೆಕ್ಕಿ ಇನ್ನೇನು ಎಳೆಯ ದೇಹವನ್ನು ತನ್ನ ಹರಿದ ಹಲ್ಲುಗಳಿಂದ ಬಗೆಯುತ್ತದೆನ್ನುವ ನನ್ನ ಊಹೆಗೆ ವ್ಯತಿರಿಕ್ತವಾಗಿ ಮಗುವಿನ ಬೆಂಗಾವಲಾಗುವಂತೆ ಅಲ್ಲೇ ಸುತ್ತಿಕೊಂಡು ಮಲಗಿತು. ಬೆಳಗಾಗುವ ಸೂಚನೆ ಕಂಡುಬರುತ್ತಿದ್ದಂತೆ ಶುಭೋದಯಕ್ಕಾಗಿ ನಾನು ಹಾರೈಸಿದೆ. ಹಾಲಿನವರು, ಪೇಪರು ಹುಡುಗರು, ವ್ಯಾಯಾಮಕ್ಕಾಗಿ ನಡೆಯುವವರು ರಸ್ತೆಯಲ್ಲಿ ದಿನದಂತೆ ಸಂಚರಿಸತೊಡಗಿದರು. ಇರುವೆಗಳ ಕಡಿತದಿಂದ ದದ್ದರಿಸಿಹೋಗಿದ್ದ ಮಗು ಅಲುಗಾಡದೆ ಮಲಗಿತ್ತು. 'ಅಳು ಮಗೂ, ಒಂದಿಷ್ಟು ದನಿ ಎತ್ತಿ ಅಳು....' ಎಂದು ಹಂಬಲಿಸುತ್ತಾ ನಾನು ಚಡಪಡಿಸಿದೆ. ಸೂರ್ಯನ ಎಳೆ ಕಿರಣಗಳು ಮೈ ಸವರಿ ಎಚ್ಚರಿಸಿದುವೇನೋ, ಅರೆಸತ್ತ ಜೀವಕ್ಕೆ ಚೈತನ್ಯ ತುಂಬಿದುವೇನೋ ಎಂಬಂತೆ, ಬೆಳ್ಳಗೆ ಬೆಳಗಾಗುತ್ತಿದ್ದಂತೆ ಮಗು ಅಳಿದುಳಿದ ಶಕ್ತಿಯನ್ನು ಗಂಟಲಲ್ಲಿ ಒಗ್ಗೂಡಿಸಿಕೊಂಡು ಸಣ್ಣ ದನಿಯಿಂದ ರೋದಿಸತೊಡಗಿತು. ಬದಿಯ ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯಾರೋ ನಿಂತರು. ಆಲೈಸಿದರು. ಗಿಡಗಳ ಗುಂಪನ್ನು ಸರಿಸಿ ಹಸುಮಗುವನ್ನು ನೋಡಿ ಆಶ್ಚರ್ಯಾಘಾತದಿಂದ ನಿಂತರು. ಸುದ್ದಿ ಮಿಂಚಿನಂತೆ ಹರಡಿ ಜನ ಸೇರಿಬಿಟ್ಟರು. ಕೊನೆಗೂ ಮಗುವನ್ನು ಮೇಲೆತ್ತಿ, ಮುತ್ತಿದ ಇರುವೆಗಳನ್ನು ಕೊಡವಿ, ಮಡಿಲಿಗಿಟ್ಟುಕೊಂಡವರು ಯಾರು ಗೊತ್ತೇ? ಮಕ್ಕಳಿಲ್ಲದ ದಂಪತಿಗಳಲ್ಲ, ಹುಳಿತು ಹೋಗುವಷ್ಟು ಹಣ ಮಾಡಿಕೊಂಡಿದ್ದ ಶ್ರೀಮಂತರಲ್ಲ, 'ಅಯ್ಯೋ, ಪಾಪ...' ಎಂದು ಲೊಚಗುಟ್ಟುತ್ತಾ ಮಾತಲ್ಲಿ ಮರುಕ ಸುರಿಸುತ್ತಿದ್ದ [illegible] ಹಾಕಿಕೊಂಡು, ತನ್ನೆರಡು ಮಕ್ಕಳನ್ನು ಹಿಂದಿಟ್ಟುಕೊಂಡು ಬರುತ್ತಿದ್ದ, ಅದುವರೆಗೆ ನಾನು ಯಃಕಶ್ಚಿತ್ ಎಂದುಕೊಂಡಿದ್ದ ಹೆಣ್ಣು ಧಾವಿಸಿ ಮಗುವನ್ನೆತ್ತಿಕೊಂಡಳು. ಮಣ್ಣಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ಕವರುಗಳನ್ನು ಆಯ್ದುಕೊಂಡಷ್ಟೇ ಆಸ್ಥೆಯಿಂದ, ನಿಸ್ಸಂಕೋಚದಿಂದ ಯಾರಿಗೂ ಬೇಡವಾಗಿದ್ದ ಮಗುವನ್ನು ತನ್ನದಾಗಿಸಿಕೊಂಡಳು. 'ಚಿಂದಿ ಆಯುವ ಗುಂಪಿಗೆ ಇನ್ನೊಂದು ಸೇರ್ಪಡೆಯಾಯ್ತು' ಎಂದು ಮೂಗು ಮುರಿಯುತ್ತಿದ್ದೀರಾ? ನಿಲ್ಲಿ. ಯಾರ ಭವಿಷ್ಯ ಯಾರಿಗೆ ಗೊತ್ತು? ಸಾಯಲು ಬಿಡದೆ ಜೀವ ಉಳಿಸಿದ ಶಕ್ತಿ, ಉಳಿಸಿದ್ದನ್ನು ಹೇಗೆ ಬೆಳೆಸಬೇಕೆಂಬುದನ್ನೂ ನಿರ್ಧರಿಸಬೇಕಲ್ಲವೇ? ನಾನು ಹೇಳಬಯಸುತ್ತಿರುವುದು ಅದಲ್ಲ. ಸಂತಾಪದ ಸಾವಿರ ಮಾತುಗಳಿಗಿಂತಾ ಅನುಕಂಪದ ಒಂದು ಕ್ರಿಯೆ ಲೇಸಲ್ಲವೇ? ಸತ್ಯ ಹೇಳುತ್ತೇನೆ. ಅವತ್ತಿನಿಂದ ಚಿಂದಿ ಆಯುವ ಆ ಹೆಂಗಸು ನನ್ನ ದೃಷ್ಟಿಯಲ್ಲಿ ಅತ್ಯಂತ ಎತ್ತರಕ್ಕೆ ಬೆಳೆದುಬಿಟ್ಟಳು. ಗೌರವ ಕೊಡಬೇಕಾದ್ದು ಅಂತರಂಗಕ್ಕೆ, ಬಹಿರಂಗಕ್ಕಲ್ಲ ಎನ್ನುವ ಹೊಸ ಪಾಠ ನಾನು ಕಲಿತೆ. ಕಲಿಯುತ್ತಾ ಹೋಗುವುದೇ ಜೀವನ. ಮತ್ತು ಕಲಿಕೆಗೆ ಕೊನೆಯೆಂಬುದಿಲ್ಲ, ಅಲ್ಲವೇ?

ವಸುಮತಿ ಉಡುಪ
'ಗೌರಿ', ೪ನೇ ಕ್ರಾಸ್, ಗಾಂಧಿನಗರ 'A', ಶಿವಮೊಗ್ಗ - ೫೭೭ ೨೦೧

ನಾಡಿಗ ದರ್ಶನಿ

ವೈದ್ಯ ಉವಾಚ...







ಕರ್ನಾಟಕ ಸೂಫಿಗಳು

ಐ. ಆರ್. ಪ್ರಮೋದ್

ರಾಷ್ಟ್ರೀಯ ಸ್ವಯಂಸೇವಾ ಸಂಘದ ಸರಸಂಘ ಚಾಲಕ ಶ್ರೀ ಕು. ಸಿ. ಸುದರ್ಶನ ಇತ್ತೀಚೆಗೆ ''ಮಧ್ಯಕಾಲದಲ್ಲಿ ಮುಸ್ಲಿಮ್ ಆಕ್ರಮಣಕಾರರು ೨೫,೦೦೦ ದೇವಾಲಯ ಗಳನ್ನು ನಾಶಗೊಳಿಸಿದರು'' ಎಂದರು (ವಿಕ್ರಮ ಗಣರಾಜ್ಯೋತ್ಸವ ಸಂಚಿಕೆ ೨೦೦೦, ಪು.೬೬). ಇದೇ ಪತ್ರಿಕೆಯ ೨೦೦೦ ಫೆಬ್ರವರಿ ೬ರ ಸಂಚಿಕೆಯಲ್ಲಿ 'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪ್ರಕಟವಾದ ಲೇಖನವೊಂದರ ಅನುವಾದ ಪ್ರಕಟವಾಗಿದೆ. ಈ ಲೇಖನದಲ್ಲಿ ''ಹತ್ತು ಶತಮಾನಗಳ ಕಾಲ ಈ ಪವಿತ್ರ ಭೂಮಿ ಅಫ್ಘಾನಿಸ್ತಾನ ಮತ್ತು ಅದರಾಚೆಯ ಇಸ್ಲಾಮೀ ಆಕ್ರಮಿಕರಿಂದ ಅತ್ಯಾಚಾರಕ್ಕೊಳಗಾಗಿ ಲೂಟಿಯಾಯಿತು. ಭಾರತೀಯರು ಬಲಾತ್ಕಾರಕ್ಕೊಳಪಟ್ಟು ಮತಾಂತರಿತರಾದರು. ಅವರ ಮಹಿಳೆಯರು ಅತ್ಯಾಚಾರಕ್ಕೊಳಗಾದರು. ಅವರ ಮಕ್ಕಳು ಗುಲಾಮರಾಗಿ ಒಯ್ಯಲ್ಪಟ್ಟರು. ಅವರ ಪುರುಷರು ಬರ್ಬರವಾಗಿ ಕೊಲೆಯಾದರು'' ಎಂದು ಆರೋಪಿಸಲಾಗಿದೆ.

ಇದು ಇತಿಹಾಸವನ್ನು ಕುರೂಪಗೊಳಿಸಿ ಮುಸ್ಲಿಮ್ ದ್ವೇಷವನ್ನು ಹರಡುವ ಸಂಘ ಪರಿವಾರದ ಪ್ರಚಾರ ವೈಖರಿಗೊಂದು ಉದಾಹರಣೆ. ''ಈ ಧೋರಣೆ ಮಧ್ಯಯುಗದ ಭಾರತದ ಅನೇಕ ಮುಖ್ಯ ಸಂಗತಿಗಳತ್ತ ಕುರುಡಾಗಿದೆ. ಮುಸ್ಲಿಮ್ ರಾಜಕಾರಣ ಮತ್ತು ಇಸ್ಲಾಮ್ ಧರ್ಮ ಒಂದು ಇನ್ನೊಂದಕ್ಕೆ ಪರ್ಯಾಯವಲ್ಲ. ಇಸ್ಲಾಮ್ ಧರ್ಮದ ಒಳಗೆ ತಾತ್ವಿಕ ಸಂಘರ್ಷಗಳು ಇರಲಿಲ್ಲ ಎನ್ನುವುದು ಕೂಡ ಸತ್ಯವಲ್ಲ. ಕರ್ನಾಟಕದ ಮಧ್ಯಯುಗದ ಸೂಫಿ ಸಂತರ ಬಗ್ಗೆ ಕನ್ನಡದ ವಿದ್ವತ್ ಪ್ರಪಂಚದ ಗಾಢ ಅಜ್ಞಾನಕ್ಕೆ ಈ ಮತೀಯ ಪೂರ್ವಾಗ್ರಹವೇ ಕಾರಣ'' ಎನ್ನುತ್ತಾರೆ ಜಿ. ರಾಜಶೇಖರ್.

ರಿಚರ್ಡ್ ಮ್ಯಾಕ್‌ವೆಲ್ ಈಟನ್ ಬಿಜಾಪುರದ ಸೂಫಿಗಳ ಬಗ್ಗೆ ಬರೆದ ಪುಸ್ತಕವನ್ನು ೧೯೮೮ರಲ್ಲಿ ಪರಿಚಯಿಸುತ್ತ ಅವರು ಕನ್ನಡ ಸಾಹಿತ್ಯ ಸಾಂಸ್ಕೃತಿಕ ಪರಂಪರೆಗೆ ಸೂಫಿಗಳ ಕೊಡುಗೆಯ ಬಗ್ಗೆ ಚರ್ಚಿಸುತ್ತಾರೆ (ಸಂವಾದ ೬- ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ).

೧೯೯೮ರಲ್ಲಿ ಡಾ॥ ರಹಮತ್ ತರೀಕೆರೆಯವರು ಕರ್ನಾಟಕ ಸೂಫಿಗಳ ಬಗ್ಗೆ ಪುಸ್ತಕವನ್ನು ಬರೆದು ಇನ್ನಷ್ಟು ವ್ಯಾಪಕವಾದ ವಿಶ್ಲೇಷಣೆಯನ್ನು ಮಾಡಿದ್ದಾರೆ. ಹನ್ನೊಂದನೇ ಶತಮಾನದ ನಂತರ ಕರ್ನಾಟಕಕ್ಕೆ ಬಂದ ಇಸ್ಲಾಮಿನೊಡನೆ ''ಖಡ್ಗ ಹಾಗೂ ಕುದುರೆ ಗೊರಸುಗಳ ಜತೆಯಲ್ಲಿ ಸೂಫಿಗಳ ಕಂಬಳಿಯೂ ಭಿಕ್ಷಾಪಾತ್ರೆಯ ಜತೆಗೂಡಿ ಬಂದವು'' (ಪು. ೩೦). ''ಕನ್ನಡದ ವಚನ ಪರಂಪರೆಯೂ ನಾಥೀಕರಣ ಸೂಫೀಕರಣಕ್ಕೆ ಒಳಗಾಯಿತು. ಸೂಫಿ ಮತ್ತು ನಾಥ ದೊರೆಗಳು ಜೊತೆಗೆ ಬೆರೆತು ವಿಚಿತ್ರ ಸಂಕರದಿಂದ ಕರ್ನಾಟಕದ ಅನುಭಾವಿ ಪರಂಪರೆ ಆಕರ್ಷಕವಾಗಿದೆ'' (ಪು. ೭೪). ''ಕೊಡೆಕಲ್ ಬಸವಣ್ಣನ ಪರಂಪರೆ, ಶಿರಹಟ್ಟಿ ಫಕೀರೇಶನ ಪರಂಪರೆ, ಸಾವಳಗಿ ಶಿವಯೋಗಿ ಪರಂಪರೆ, ತಿಂತಿಣಿ ಮೋನಪ್ಪಯ್ಯನ ಪರಂಪರೆ, ಮಲೆಯ ಮಾದೇಶ್ವರನ ಪರಂಪರೆ, ಕಾಡ ಸಿದ್ದೇಶ್ವರನ ಪರಂಪರೆ, ದೀನದಾರ್ ಬಸವಣ್ಣನ ಪರಂಪರೆ - ಇವು ಕರ್ನಾಟಕದಲ್ಲಿ ಸೂಫೀಕರಣಗೊಂಡ ಕೆಲವು ಪರಂಪರೆಗಳು'' (ಪು. ೭೪).

ಕನ್ನಡದಲ್ಲಿ ವಚನಕಾರರ ಅಧ್ಯಯನವೆಂದರೆ ಲಿಂಗಾಯಿತ ಸಂಪ್ರದಾಯದ ಅಧ್ಯಯನವೆಂಬುದಾಗಿ ಬಿಟ್ಟಿದೆ. ಕರ್ನಾಟಕದ ಅನೇಕ ಸಂಕರ ರೂಪಿ ಅನುಭಾವಿ ಪರಂಪರೆಗಳನ್ನು ಹನ್ನೆರಡನೇ ಶತಮಾನದ ಶರಣರ ಜತೆಗಿಟ್ಟು ವ್ಯತ್ಯಾಸ ಹೋಲಿಕೆಗಳನ್ನು ಚರ್ಚಿಸುವುದು ಈ ಅಧ್ಯಯನಗಳ ಚಾಳಿಯಾಗಿಬಿಟ್ಟಿದೆ. ಕನ್ನಡದಲ್ಲಿ ಸೂಫಿಗಳ ಹಾಗೂ ಶರಣರ ಬಗ್ಗೆ ಮಾಡಲಾಗಿರುವ ತೌಲನಿಕ ಅಧ್ಯಯನಗಳೆಲ್ಲವೂ ಈ ಜಾಡಿನವು (ಪು. ೭೫). ಆದರೆ, ಕರ್ನಾಟಕದ ಜನಸಮುದಾಯವು ತನ್ನ ಬಾಳಿನ ಸಂದರ್ಭದಲ್ಲಿ ಪಂಥಗಳನ್ನಿಟ್ಟುಕೊಂಡು ಮಾಡಿರುವ ತಾತ್ವಿಕ ಪ್ರಯೋಗವನ್ನು ಕಾಣುವ ಸಾಂಸ್ಕೃತಿಕ ಬೆರಗು ಇಲ್ಲದಿದ್ದರೆ ಅಕಾಡೆಮಿಕ್ ಅಧ್ಯಯನ ಜಡವಾಗಿಬಿಡುತ್ತದೆ (ಪು. ೭೫).

ಈ ಎಚ್ಚರದಿಂದ ರಹಮತ್‌ರವರು ಸೂಫಿಗಳ ಪರಂಪರೆಯನ್ನು ಮತ್ತು ಪ್ರಭಾವವನ್ನು ಎಲ್ಲ ಆಯಾಮಗಳಿಂದ ನೋಡಲು ಯತ್ನಿಸಿದ್ದಾರೆ.

ಸೂಫಿಗಳ ಮತ್ತು ರಾಜ ಪ್ರಭುತ್ವದ ಸಂಬಂಧವನ್ನು ವಿವರಿಸುತ್ತ ''ಸಂಪತ್ತಿನ ವಿರೋಧದಲ್ಲಿ ಹುಟ್ಟಿದ ಸೂಫಿ [illegible] ಸಂಪತ್ತಿಗೂ ಸೋಲುತ್ತಾ ಹೋದವು. [illegible] ದೊರೆಗಳ ಬಿರುದು ಧರಿಸಿ ಸಂಪತ್ತಿಗೆ ಒಡೆಯರಾಗಿ ದೊರೆಗಳಂತೆ ದರ್ಬಾರು ನಡೆಸತೊಡಗಿದರು'' (ಪು. ೧೩೬).

''ಎಲ್ಲೀತನಕ ಅಮೀನ, ಅಲ್ಲೀತನಕ ಜಮೀನ.'' ಇದು ಫಕೀರೇಶನ ಗುರು ಅಮೀನುದ್ದೀನನ ಬಗ್ಗೆ ಬರುವ ವಾಡಿಕೆಯ ಮಾತು. ಯಾರ ಹಂಗಿಗೂ ಕೈ ಚಾಚದೆ ಬಾಳಿದ ಧೀಮಂತ ಸೂಫಿಯೊಬ್ಬರ ವಂಶಜರು ಇನಾಮುಗಳನ್ನು ಪಡೆಯುತ್ತಾ ಹೋದ ಪರಿಣಾಮಗಳೆಂದರೆ ಅಮೀನುದ್ದೀನನ ಖಾನಖಾ ಒಂದು ಭಾರೀ ಭೂಮಾಲಿಕ ವ್ಯವಸ್ಥೆಯಾಯಿತು (ಪು. ೧೪೩).

ಸೂಫಿ ಪಂಥವು ಮಠ ವ್ಯವಸ್ಥೆಯನ್ನು ಅನುಸರಿಸುವುದಕ್ಕೆ ವಿರುದ್ಧವಾದ ಚಲನೆಗಳು ಆದವು. ಅದೆಂದರೆ ರಾಜರು ಸೂಫೀಕರಣಗೊಳ್ಳಲು ಯತ್ನಿಸಿದ್ದು. ಭಿಕಾರಿಯಂತೆ ಬದುಕಿದ ಸಂತನನ್ನು ಜನ ದೈವವಾಗಿ ಆರಾಧಿಸುತ್ತಾರೆ. ಅವನ ಉರೂಸು ನಡೆಸುತ್ತಾರೆ. ದೊಡ್ಡ ದೊಡ್ಡ ದೊರೆಗಳ ಸಮಾಧಿಗಳನ್ನು ಕಣ್ಣೆತ್ತಿಯೂ ನೋಡುವುದಿಲ್ಲ (ಪು. ೧೪೫).

ಸೂಫಿ ಸಂತರ ಸಮಾಧಿಗಳು ದರ್ಗಾಗಳಾದವು. ವರ್ಷಕ್ಕೊಮ್ಮೆ ಉರೂಸುಗಳು ನಡೆಯುತ್ತವೆ. ಹರಕೆ ಹೊರುವುದು, ಎಡೆ ಬರಿಸುವುದು, ಕಾಣಿಕೆ ಒಪ್ಪಿಸುವುದು, ತಲೆ ಚೌಲ ಬಿಡುವುದು, ದೀಡ್ ನಮಸ್ಕಾರ ಹಾಕುವುದು. ಲೋಬಾನ ಊದುಬತ್ತಿ ಇಟ್ಟು ಫಾತೆಹಾ ಮಾಡಿಸುವುದು, ಉತ್ತತ್ತಿ ಕೊಡುವುದು, ಇತ್ಯಾದಿ ಆಚರಣೆಗಳು ಈ ಉರೂಸುಗಳಲ್ಲಿ ನಡೆಯುತ್ತವೆ.

ಸೂಫಿಗಳು ಸ್ಥಳೀಕರಣಗೊಂಡು ಜನಪ್ರಿಯರಾಗಿರುವುದನ್ನು ತೋರಿಸುವ ಎರಡನೆ ಸಂಗತಿಯೆಂದರೆ ಪವಾಡಗಳು (ಪು. ೧೫೬). ಅನೇಕ ಪವಾಡಗಳು ಆಯಾ ಪ್ರದೇಶದ ಜನರ ಸಾಮೂಹಿಕ ಸಮಸ್ಯೆಗಳಿಗೆ ಸಂಬಂಧಿಸಿದವು. ಮಳೆ ಕಡಿಮೆ ಬೀಳುವ ಪ್ರದೇಶದ ಸಂತರು ಬರಗಾಲ ನೀಗಿಸುವ ಪವಾಡ ಎಸಗುತ್ತಾರೆ. ನೀರಿಲ್ಲದ ಕಡೆ ಸದಾ ನೀರು ಚಿಮ್ಮುವ ಚಿಲುಮೆಯನ್ನು ಉಕ್ಕಿಸುತ್ತಾರೆ. ಕೆಲವರು ಸಾಂಕ್ರಾಮಿಕ ರೋಗಗಳು ಬಂದಾಗ ತಡೆಯುತ್ತಾರೆ (ಪು. ೧೫೭).

ಕರ್ನಾಟಕದ ಸೂಫಿಗಳಲ್ಲಿ ಸಾಮಾನ್ಯವಾಗಿರುವ ಪವಾಡವೆಂದರೆ ಕೊಂದು ತಂದ ದನಕ್ಕೆ ಮತ್ತೆ ಜೀವ ಬರಿಸುವುದು. ಹಸಿವು ತಾಳದೆ ಶಿಷ್ಯರು ದೇವರ ಗೂಳಿಯನ್ನೋ, ಹಸುವನ್ನೋ ಕಡಿದು ತಿಂದುಬಿಡುತ್ತಾರೆ. ಇದು ಒಬ್ಬರ ಹಸಿವಿನ ಸಮಸ್ಯೆ ಮಾತ್ರವಲ್ಲ. ಮತ್ತೊಬ್ಬರ ಶ್ರದ್ಧೆಯ ಪ್ರಶ್ನೆ ಕೂಡ. ಊರಜನ ದನವನ್ನು ಕೇಳಿಕೊಂಡು ಬಂದಾಗ, ಸಂತನು ಉಳಿದ ತಲೆ ಚರ್ಮ ಕೈಕಾಲುಗಳಿಂದ ಮತ್ತೆ ಜೀವ ಬರಿಸಿಕೊಡುತ್ತಾನೆ. ದನ ಪೂಜಿಸುವ ಸಂಸ್ಕೃತಿಯ ಒಳಗೆ ದನವನ್ನು ಆಹಾರವಾಗಿ ಬಳಸುವ ಸಂಸ್ಕೃತಿಯೊಂದು ಬಂದಾಗ ಉಂಟಾದ ಸಂಘರ್ಷವನ್ನು ಇದು [illegible] (ಪು. [illegible]).

[illegible]

ಭಗ್ನ ಪ್ರೇಮಿ

ಮಧುರ ಕಂಠದಿಂದ
ಹಾಡುತ್ತಿರುವ ಕೋಗಿಲೆಯೇ,
ನೀನೇಕೆ ಪ್ರೇಮಗೀತೆಗಳನ್ನೇ
ಹಾಡಿ ನೆನಪುಗಳ ಬಡಿದೆಬ್ಬಿಸುವೆ ?
ವಿರಹ ಗೀತೆಗಳನ್ನಾದರೂ
ಹಾಡಬಾರದೇ ?

ಎನ್. ಶ್ರೀನಿವಾಸ
ದ್ವಿ.ದ.ಸ., ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರ,
ವಿ.ಸಿ.ಫಾರಂ, ಮಂಡ್ಯ - ೫೭೧ ೪೦೫

ಗಳಂತೂ ಸಾಮಾನ್ಯ. ರಾಜ ವ್ಯವಸ್ಥೆಯಲ್ಲಿ ಸೇರಿಹೋದ ಸೂಫಿಗಳು ಇಂಥ ಪವಾಡಗಳನ್ನು ಮಾಡುವುದಿಲ್ಲ. ಜನರ ನಡುವೆ ಬದುಕಿದ ಫಕೀರರು ಈ ಪವಾಡ ಮಾಡುತ್ತಾರೆ. ಇಲ್ಲಿ ಧರ್ಮ, ಮಾರ್ಕ್ಸ್ ಹೇಳಿದಂತೆ ಹೃದಯಹೀನ ಜಗತ್ತಿನ ಹೃದಯವಾಗಿ ಕೆಲಸ ಮಾಡಿದಂತೆ ತೋರುತ್ತದೆ (ಪು. ೧೫೮).

ಸೂಫಿಗಳು ಕನ್ನಡ ಸಾಹಿತ್ಯ, ಸಂಗೀತವನ್ನು ಸಂಪನ್ನಗೊಳಿಸಿದರು. ಸೂಫಿಗಳನ್ನು ಕುರಿತು ಕನ್ನಡದಲ್ಲಿ ಶಾಹಿರರ ಕಟ್ಟಿ ಹಾಡಿರುವ ಸಾಹಿತ್ಯದಲ್ಲಿ ಸಮುದಾಯ ಸೃಜನಶೀಲನೆ ಚೆನ್ನಾಗಿ ವ್ಯಕ್ತವಾಗುತ್ತದೆ (ಪು. ೧೭೦). ಮುಸ್ಲಿಮ ಕವಿಗಳು ಹಿಂದೂ ಸಂತರ ಮೇಲೂ ಹಿಂದೂ ಲಾವಣಿಗಾರರು ಮುಸ್ಲಿಮ ಸಾಧುಸಂತರ ಮೇಲೂ ಹಾಡು ಕಟ್ಟಿ ಹಾಡುತ್ತಾರೆ. ''ಮುಸ್ಲಿಮ ಗಾಯಕರು ಹಿಂದುಗಳ ಪೌರಾಣಿಕ ಕಥೆಗಳನ್ನು, ತಾತ್ವಿಕ ಪರಿಕಲ್ಪನೆಗಳನ್ನು ಅದ್ಭುತವಾಗಿ ಬಳಸಿಕೊಳ್ಳುತ್ತಾರೆ ಎಂಬ ಧಾಟಿಯಲ್ಲಿ ಜನಪದ ವಿದ್ವಾಂಸರು ಬರೆಯುತ್ತಾರೆ. ಕೆಲವು ಸಂಗತಿಗಳಲ್ಲಿ ಹಿಂದೂ ಮುಸ್ಲಿಮ ಮೂಲತಃ ಬೇರೆ ಬೇರೆ ಎಂದು ಕೋಮುವಾದ ಒಪ್ಪಿಸಿಬಿಟ್ಟಿದೆ. ಇದನ್ನು ಒಪ್ಪಿಕೊಂಡು ಮನಸ್ಸುಗಳು ಈ ಕವಿಗಳನ್ನು ಹಾಗೂ ಅವರ ಹಾಡುಗಳನ್ನು ಹಿಂದೂ ಮುಸ್ಲಿಮ್ ಪರಿಭಾಷೆಯಲ್ಲಿ ವಿಂಗಡಿಸಿ ವಿಶ್ಲೇಷಿಸುತ್ತವೆ. ಇದು ಪರಂಪರೆಗೆ ಪರಕೀಯವಾಗಿ ಮಾಡಿದ ವಿಶ್ಲೇಷಣೆ (ಪು. ೧೭೭).

ಸೂಫಿ ಪಂಥವನ್ನು ಅನುಭಾವಿ ಪಂಥವಾಗಿ ನೋಡುವ ಬದಲು ಒಂದು ಪರಕೀಯ ಮ್ಲೇಚ್ಛ ಧರ್ಮವನ್ನಾಗಿ ನೋಡಿರುವ ದೃಷ್ಟಿಕೋನಗಳು ಕನ್ನಡದಲ್ಲಿವೆ. ಇವು ಇಸ್ಲಾಮ ಧರ್ಮ ಹಾಗೂ ಮುಸ್ಲಿಮ ಸಮುದಾಯಗಳನ್ನು ದೇಶೀಯ ಧರ್ಮ, ಸಂಸ್ಕೃತಿಗಳ ನಾಶಕ್ಕಾಗಿ ಬಂದ ವೈರಿಗಳಂತೆ ಗ್ರಹಿಸುತ್ತವೆ. ಮತೀಯ ಚಿಂತನೆಯ ಈ ಧಾರೆಯು ಇಸ್ಲಾಮ ಧರ್ಮ ಮತ್ತು ಸೂಫಿ ಅನುಭಾವಗಳ ನಡುವೆ, ಇಸ್ಲಾಮ ಮತ್ತು ಇಸ್ಲಾಮಿಯಾ ರಾಜಕಾರಣಗಳ ನಡುವೆ ಸೂಕ್ಷ್ಮ ವ್ಯತ್ಯಾಸ ಕೂಡ ಮಾಡಿಕೊಳ್ಳುವುದಿಲ್ಲ (ಪು. ೨೦೫).

ಕರ್ನಾಟಕದ ಸೂಫಿ ಜನಪದ ಸಾಹಿತ್ಯದಲ್ಲಿ ಎರಡು ಧಾರೆಗಳಿವೆ. ಒಂದು ಶಾಹಿರರದು, ಇನ್ನೊಂದು ರಚಿಸಿದವರ ಗುರುತಿಲ್ಲದೆ ತ್ರಿಪದಿಗಳ ರೂಪದಲ್ಲಿ ಹೆಂಗಸರಲ್ಲಿ ಉಳಿದಿರುವಂಥದ್ದು (ಪು. ೨೧೭). ಚಿಸ್ತಿಗಳು ಗಟ್ಟಿಯಾಗಿ ರಾಗಬದ್ಧವಾಗಿ ಹಾಡುತ್ತಿದ್ದ ನಾದವೇ ಲಯವಾಗಿ ಸೂಫಿ ಸಂಗೀತ ರೂಪುಗೊಂಡಿತು ಎನ್ನಲಾಗಿದೆ. ಭಾರತದ ಸಂಗೀತ ಪ್ರೇಮಿ ಸೂಫಿಗಳಿಗೆ ಪ್ರಭಾವ ಬೀರಿದವನು ಪರ್ಶಿಯನ್ ಕವಿ ಸೂಫಿ ದಾರ್ಶನಿಕ, ಜಲಾಲುದ್ದೀನ್ ರೂಮಿ. ರೂಮಿಯ ಕಾವ್ಯ (ಮಸ್ನವಿ) ಶುರುವಾಗುವುದೇ ನಾದದ ಮೂಲಕ (ಪು. ೨೨೬).

ರೂಮಿಯ ತಲ್ಲಣಗಳನ್ನು ಎಚ್. ಎಸ್. ಶಿವ ಪ್ರಕಾಶರ [illegible] ಕವನ [illegible] ಚಿತ್ರಿಸುತ್ತವೆ:

[illegible], ನಮಾಜನ್ನು [illegible],

ಎಲ್ಲಿ [illegible]

ಎಲ್ಲಿ ಹೂತುಹಾಕಿದರು ; ಅವನ ಕಣ್ಣ ಕದಿರನ್ನು,

ಕವಿತೆ ಜೇನಿಕ್ಕಿದ ಹೃದಯ ಕುಂಭವನ್ನು (ಪು. ೧೭೧)

ಯಾವ ಕಾವ್ಯ ಸಂಗೀತಗಳು ಪ್ರಭುತ್ವ ಹಾಗೂ ಉಲೇಮಾಗಳಿಗೆ ಧರ್ಮಬಾಹಿರ ಅನಿಸುತ್ತಿದ್ದವೋ ಅವೇ ಸೂಫಿಗಳನ್ನು ಈ ನಾಡಿನ ಜನತೆಯ ಜತೆ, ಅವರ ಸಂಸ್ಕೃತಿಯ ಜತೆ ಮುಖ್ಯವಾಗಿ ಭಕ್ತಿ ಪಂಥಗಳ ಜತೆ ಬೆರೆಯುವಂತೆ ಮಾಡಿದವು (ಪು. ೨೨೭). ಸೂಫಿಗಳ ಸಾಮ ಗೋಷ್ಠಿಗಳು ಬೀದಿಗೆ ಬಂದು ಖವ್ವಾಲಿಗಳಾಗಿ ಹೋದವು. ಕನ್ನಡದ ಸೂಫಿಗಳ 'ಖಯಾಲ್' ಗಾಯನವು ಖವ್ವಾಲಿ ಆಗಿ ಕನ್ನಡ ಲಾವಣಿಗಳಲ್ಲಿ 'ಖಾಲ' ಆಗಿರುವುದು (ಪು. ೨೩೩).

ಸೂಫಿಗಳು ಮತ್ತು ಮೂಲಭೂತವಾದ ಈ ಪುಸ್ತಕದ ಒಂದು ಮುಖ್ಯ ಅಧ್ಯಾಯ. ಇಸ್ಲಾಮಿನ ಮೂಲಭೂತ ತತ್ವಗಳಾದ ನಮಾಜು, ಉಪವಾಸ, ಹಜ್ ಇವನ್ನು ಸೂಫಿಗಳು ಬೇರೆ ಬಗೆಯಲ್ಲಿ ನೋಡಿದರು. ಖಲಂದರರು, ದರ್ವೇಶಿಗಳು ಹೃದಯದ ಭಾವನೆಗಳಿಗೆ ಪ್ರಾಮುಖ್ಯತೆ ಕೊಟ್ಟರು. ದೈವಕ್ಕೆ ಶರಣು ಹೋಗುವುದನ್ನು ಇಸ್ಲಾಮ ಹೇಳಿದರೆ ಸೂಫಿಗಳು ದೈವವನ್ನು ವಶಪಡಿಸಿಕೊಳ್ಳುವುದು ಸಾಧ್ಯವಾದರೆ, ತಾವೇ ದೈವತ್ವ ಪಡೆಯುವ ಹಾದಿಯನ್ನು ಅರಸುತ್ತಿದ್ದರು. ಭಿಕ್ಷಾಟನೆ ಮಾಡಿ ಬದುಕಿದ ವಿರಕ್ತ ಸೂಫಿಗಳಿಗೆ ಉಪವಾಸ ವ್ರತಗಳ ಅಥವಾ ಸಂಪತ್ತಿನ ತೆರಿಗೆಯ ಪ್ರಶ್ನೆಯೇ ಏಳಲಿಲ್ಲ (ಪು. ೧೧೧).

ಸಂಪ್ರದಾಯವಾದಿಗಳ ಜೊತೆ ನೇರ ಸಂಘರ್ಷಕ್ಕೆ ಇಳಿಯದ ಸೂಫಿಗಳೂ ಇದ್ದರು. ಸೂಫಿಗಳೆಂದರೆ ಸಾಮಾನ್ಯವಾಗಿ ಧಾರ್ಮಿಕ ಮೂಲಭೂತವಾದಕ್ಕಿಂತ ಭಿನ್ನವಾದ ಅನುಭಾವ 'ಪ್ರೇಮತತ್ವ' ಸೆಕ್ಯುಲರಿಸಮ್‌ಗಳು ನೆನಪಾಗುತ್ತವೆ. ಆದರೆ, ಸೂಫಿಗಳಲ್ಲಿ ಹಲವರು ಮತ ಪ್ರಚಾರಕ ಮಿಶನರಿಗಳೂ ಮತಾಂಧರೂ ಆಗಿದ್ದರು. ಎಂದು ಚರಿತ್ರೆ ಹೇಳುತ್ತದೆ (ಪು. ೧೨೨). ಕರ್ನಾಟಕದ ಪರಂಪರೆಯಲ್ಲಿ ಮೊದಮೊದಲು ಕಾಣಿಸಿಕೊಂಡವರೇ ಈ ಕದನರೂಪಿ ಸೂಫಿಗಳು (ಪು.೧೨೨).

ಭಾರತದಂತಹ ಬಹು ದೈವಗಳು, ಬಹು ಸಂಸ್ಕೃತಿಯ ಸಮಾಜದಲ್ಲಿ 'ಏಕ ದೇವತಾರಾಧನೆಯ ಇಸ್ಲಾಮ್' ಎಂಥ ವಿರೋಧಗಳನ್ನು ಸವಾಲುಗಳನ್ನು ಎದುರಿಸಿತು ಎನ್ನುವುದು ಆಸಕ್ತಿಯ ವಿಚಾರ. ಧರ್ಮವನ್ನು ಅದರ ಮೂಲರೂಪದಲ್ಲಿ ಇರಿಸಲು, ಅದರೊಳಗೆ ಸೇರಿರುವ ಸ್ಥಳೀಯ ಸಂಗತಿಗಳನ್ನು ತೆಗೆದು ಶುದ್ಧರೂಪಕ್ಕೆ ತರಲು ಪರಿಷ್ಕರಣವಾದಿಗಳು ಚರಿತ್ರೆಯುದ್ದಕ್ಕೂ ಯತ್ನಿಸಿದ್ದಾರೆ (ಪು. ೧೨೭).

ಸೂಫಿಗಳನ್ನು ಎದುರಿಸಿದ ಇಸ್ಲಾಮಿನ ಸನಾತನವಾದಿ ಪಂಥಗಳೆಂದರೆ ವಹಾಬಿಯಾ ಪಂಥ, ತಬ್ಲಿಗ್ ಪಂಥ ಮತ್ತು ಜಮಾತ್ ಇಸ್ಲಾಮಿ. ಈ ''ಸುಧಾರಣಾ ಚಳುವಳಿಗಳ ದೊಡ್ಡ ಅಪಾಯವಿರುವುದು ಸಾಂಸ್ಕೃತಿಕವಾಗಿ ಏಕರೂಪವನ್ನು ಒಪ್ಪಿಕೊಳ್ಳಲು ಒತ್ತಾಯಿಸುವುದರಲ್ಲಿ; ತನ್ನದಲ್ಲದ ಇನ್ನೊಂದನ್ನು ಸಹಿಸದ ಕಠಿಣ ಮನಃಸ್ಥಿತಿಯನ್ನು ಉಂಟುಮಾಡುವುದರಲ್ಲಿ. ಕುರಾನು ಹದೀಸುಗಳ ಅರಬ್ಬಿ ಪರಂಪರೆಯನ್ನು ಮಾತ್ರ ನಿಜವಾದ ಇಸ್ಲಾಮ ಎಂದು ಮೂಲಭೂತವಾದ ಹೇಳುತ್ತದೆ. ಈ ಸನ್ನಿವೇಶದಲ್ಲಿ ದೀನದಾರ್ ಪಂಥವು ಬದುಕುವುದು ಸಾಧ್ಯವೇ ಇಲ್ಲ (ಪು. ೧೩೩).

ಮುಸ್ಲಿಮ ಮೂಲಭೂತವಾದ ಅಪಾಯಕರವಾದ್ದು. ಅದು ಸ್ಥಳೀಯ ಹಬ್ಬಗಳಲ್ಲಿ, ಜಾತ್ರೆಗಳಲ್ಲಿ, ಉರೂಸುಗಳಲ್ಲಿ ಮುಸ್ಲಿಮರು ಭಾಗವಹಿಸಬಾರದೆಂದು ಆದೇಶಿಸುವುದರಲ್ಲಿ ಮಾತ್ರವಲ್ಲ; ಇಸ್ಲಾಮ ಒಂದು ಜೀವನ ಕ್ರಮ ಎಂದು ವ್ಯಾಖ್ಯಾನಿಸಿ ವೈಯಕ್ತಿಕ ಮತ್ತು ಸಾರ್ವಜನಿಕ ಬದುಕಿನ ಪ್ರತಿಯೊಂದು ಸಂಗತಿಯನ್ನು ಧರ್ಮ ನಿಯಂತ್ರಿಸಬೇಕು ಎನ್ನುವ ಆಗ್ರಹದಲ್ಲಿ ಮುಂದುವರಿಯುತ್ತದೆ. ಸೂಫಿ ಪರಂಪರೆಯ ಎಲ್ಲ ಅನುಭವವನ್ನು ನಮ್ಮ ನೆಲದ ಹೊರಗಿನದು ಎಂದು ತಿರಸ್ಕರಿಸುವ ಹಿಂದೂ ಮತೀಯವಾದ ಮತ್ತು ಸೂಫಿ ಆಚರಣೆಗಳು ಧರ್ಮಭ್ರಷ್ಟ ಎಂದು ಹೀಗಳೆಯುವ ಮುಸ್ಲಿಮ ಮೂಲಭೂತವಾದ, ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹೊರಟರೂ ಹೀಗೆ ಒಂದು ಅಂಶದಲ್ಲಿ ಸಂಧಿಸುವುದು ಗಮನಾರ್ಹ.

ಜಮಾತ್ ಇಸ್ಲಾಮ ಪಂಥದ ಮುಖ್ಯ ಪತ್ರಿಕೆಯಾದ (ಮಂಗಳೂರಿನಿಂದ ಪ್ರಕಟವಾಗುವ) **ಸನ್ಮಾರ್ಗ** ವಾರ ಪತ್ರಿಕೆಯಲ್ಲಿ ನಿತ್ಯಜೀವನದ ಪ್ರತಿಯೊಂದು ಸಂಗತಿಯನ್ನು ಧರ್ಮನಿಷ್ಠವೋ ನಿಷಿದ್ಧವೋ ಎಂಬುದನ್ನು ಇಸ್ಲಾಮಿಕ್ ದೃಷ್ಟಿಕೋನದಿಂದ ಉತ್ತರಿಸಲಾಗುತ್ತದೆ ! ತಲೆಗೂದಲು ಬೆಳ್ಳಗಾದರೆ ಕಪ್ಪು ಬಣ್ಣ ಹಚ್ಚಬಹುದೇ? ಮೂತ್ರ ವಿಸರ್ಜನೆಯನ್ನು ನಿಂತುಕೊಂಡು ಮಾಡಬಹುದೇ? ಎಂಬಂಥ ಸಾಮಾನ್ಯ ಸಂಗತಿಗಳಿಗೆ ಕೂಡ ಹದೀಸನ ಆಧಾರದಲ್ಲಿ ಉತ್ತರ ನೀಡಲಾಗುತ್ತದೆ!! ಮತೀಯ ವಾದದ ಈ ವೈಪರೀತ್ಯಗಳ ಪರಿಣಾಮವೆಂದರೆ, ಮುಸ್ಲಿಮ ಜನಸಾಮಾನ್ಯರು ಇಸ್ಲಾಮ ಧರ್ಮದ ನೆರಳಲ್ಲಿಯೇ ಸದಾ ಕಡ್ಡಾಯವಾಗಿ ಬದುಕಬೇಕೆನ್ನುವ ಉಗ್ರ ಹಠ.

ರಹಮತ್ ಅವರು ಸೂಫಿಗಳ ಬಗೆಗಿನ ಈ ಅಧ್ಯಯನವನ್ನು 'ಹುಡುಕಾಟ' ಎನ್ನುತ್ತಾರೆ. ಈ ಹುಡುಕಾಟದ ಮೂಲಕ ಎರಡು ಬಗೆಯ ಗ್ರಹಿಕೆಗಳನ್ನು ಒಡೆಯಲು ಯತ್ನಿಸಲಾಗಿದೆ. ಈ ಗ್ರಹಿಕೆಗಳೆಂದರೆ ''ಒಂದು, ಹಲವು ಧಾರ್ಮಿಕ ಸಮುದಾಯಗಳು ಚರಿತ್ರೆಯಲ್ಲಿ ಯಾವತ್ತೂ ಹಗೆಗಳಂತೆ ಬದುಕಿದವು ಎಂದು ಹೇಳುವ ಗ್ರಹಿಕೆ. ಎರಡು, ಈ ಸಮುದಾಯಗಳು ತಮ್ಮ ಐಡೆಂಟಿಟಿಗಳನ್ನು ಇಡಿಯಾಗಿ ಬಿಟ್ಟುಕೊಟ್ಟು ಸಂಘರ್ಷಗಳಿಲ್ಲದೆ ಮಧುರವಾಗಿ ಬೆರೆತುಬಿಟ್ಟವು, ಸೆಕ್ಯುಲರ್ ಮೌಲ್ಯವನ್ನು ಬದುಕಿದವು ಎಂದು ನಂಬುವ ಉದಾರವಾದಿ ಗ್ರಹಿಕೆ. ಒಂದು ಗ್ರಹಿಕೆಯಲ್ಲಿ ಯುದ್ಧ ತಂತ್ರವಿದೆ. ಇನ್ನೊಂದರಲ್ಲಿ ರೋಮಾಂಚಕ ಭೋಳೆತನವಿದೆ'' (ಪು. ೨೩೬).

''ಕರ್ನಾಟಕದ ಸೂಫಿಗಳು'' ಎನ್ನುವುದು ಈ ಪುಸ್ತಕದ ಹೆಸರಾದರೂ ಈ ಅಧ್ಯಯನವು ಬಿಜಾಪುರ ಸೀಮೆಯ ಸೂಫಿಗಳಿಗೆ ಸೀಮಿತವಾಗಿದೆ. ಕರಾವಳಿ ಮತ್ತು ಮಲೆನಾಡಿನ ಸೂಫಿ ಪರಂಪರೆಯ ಅಭ್ಯಾಸ ಈ ಪುಸ್ತಕದ ಸಮಗ್ರತೆಯನ್ನು ಇನ್ನಷ್ಟು ಹೆಚ್ಚಿಸುತ್ತಿತ್ತು.

ಐ. ಆರ್. ಪ್ರಮೋದ್
ಅಡ್ವೋಕೇಟ್, ವಿರಾಜಪೇಟೆ

ಲೋಕ ಕಲ್ಯಾಣಕ್ಕಾಗಿ ಮ್ಯಾಚ್ ಫಿಕ್ಸಿಂಗ್

ಪ್ರಿಯ ಯಜಮಾನಪ್ಪನವರಿಗೆ ನಮಸ್ಕಾರಗಳು. ಅದಾಗಿ, ಈ ವರೆಗೆ ಉಭಯ ಕುಶಲೋಪರಿ ಸಾಂಪ್ರತ.

ಒಟ್ಟಾರೆ ಯಾರದೋ ಗ್ರಹಚಾರ ಸರಿಯಿಲ್ಲ. ಇತ್ತೀಚೆಗೆ, ನನಗೆ ಅರ್ಧಂಬರ್ಧ ಜ್ಞಾನೋದಯವಾಗಿರುವಂತೆ ಭ್ರಮೆ, ಗೊಂದಲಪುರದ ಜನರು ನನ್ನನ್ನು ವಿಚಿತ್ರ ರೀತಿಯಲ್ಲಿ ಕೆಕ್ಕರಿಸಿ ನೋಡುತ್ತಿರುವಂತೆ ಭ್ರಮೆ! ನನ್ನಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದರೆ ನೀವೇ ಹೇಳಬೇಕು ಅಷ್ಟೆ.

ಹಿಂದೆಲ್ಲ, ದೇವರು ಯಾರದಾದರೂ ಕನಸ್ಸಿಗೆ ದಿಡೀರನೆ ನುಗ್ಗಿಬಿಡುತ್ತಿದ್ದ. ಆ ಟೆಕ್ನಿಕ್ ಬರುಬರುತ್ತ ಬೇಸರ ಉಂಟುಮಾಡಿರಬೇಕು. ಇತ್ತೀಚೆಗೆ, ದೇವರು ನಮ್ಮ ಪೂಜಾರಿ ಮಾಂತಪ್ಪನಿಗೆ ದರ್ಶನ ನೀಡಿದನಂತೆ! ಆತ ಪೂಜೆ ಮಾಡುತ್ತಿದ್ದಾಗ ಕತ್ತಲೆಯ ಮೂಲೆಯಿಂದ ಕಾಳಿಂಗಪ್ಪ ಬುಸ್ ಅಂತ ಹೆಡೆ ಎತ್ತಿತ್ತಂತೆ. ಹುಲುಮಾನವ ಮಾಂತಪ್ಪನ ಕೈಕಾಲು ನಡುಗಿ ಎದೆ ಒಡೆದು ಹೋಗುವಷ್ಟು ಗಾಬರಿಯಾಯಿತಂತೆ. ಈ ಮನುಷ್ಯ ಇನ್ನೇನು ಗರ್ಭಗುಡಿಯನ್ನೇ ಅಪವಿತ್ರಗೊಳಿಸಿಯಾನು ಎಂದು ದೇವರಿಗೇ ಹೆದರಿಕೆಯಾಗಿ, ಕೂಡಲೇ ಹಾರುವಯ್ಯನ ರೂಪದಲ್ಲಿ ಕಾಣಿಸಿಕೊಂಡನಂತೆ. ''ಮಾಂತಯ್ಯ, ಹೆದರಬೇಡ. ನಾನು ಲೋಕ ಕಲ್ಯಾಣಕ್ಕಾಗಿ ಇನ್ನು ಒಂದೇ ತಿಂಗಳಲ್ಲಿ ಅವತರಿಸಲಿದ್ದೇನೆ. ಆದರೆ ಇದು ಪ್ರಚಾರದ ಯುಗ. ಈ ವಿಷಯವನ್ನು ಯಾರು ೧೧೧೬ ಪ್ರತಿ ಮುದ್ರಿಸಿ ಹಂಚುತ್ತಾರೆಯೋ ಅವರಿಗೆ ೨೪ ಗಂಟೆಗಳಲ್ಲಿಯೇ ಸಕಲ ಇಷ್ಟಾರ್ಥಗಳೂ ಸಿದ್ಧಿಸುತ್ತವೆ. ಇದನ್ನು ಉಪೇಕ್ಷಿಸುವವರು ಕಷ್ಟ-ಕೋಟಲೆಗೀಡಾಗುತ್ತಾರೆ''. ಎಂದು ಹೇಳಿ ಸಿನಿಮೀಯ ರೀತಿಯಲ್ಲಿ ಮಂಗಮಾಯವಾದನಂತೆ. ಈ ವಿಷಯ ಆತನ ಭಾಮೈದ ಈರಭದ್ರನ ಮೂಲಕ ಗುಲ್ಲೂರಿನಲ್ಲಿ ಯಾರಿಗೋ ತಲುಪಿ, ಆತ ಕೂಡಲೇ ದೇವರ ಸಂದೇಶದ ೧೧೧೬ ಪ್ರತಿಗಳನ್ನು ಮುದ್ರಿಸಿ, ಹಂಚಿದನಂತೆ. ಮುಂದಿನ ವಾರವೇ ಲಾಟರಿಯಲ್ಲಿ ಆತನಿಗೆ ಹತ್ತು ಲಕ್ಷ ಹೊಡೆಯಿತಂತೆ. ನಿರುದ್ಯೋಗಿಯೊಬ್ಬ ಪತ್ರಿಕೆ ಅಚ್ಚು ಮಾಡಿಸಿ ಹಂಚಿದನಂತೆ. ಮರುವಾರವೇ ಅವನಿಗೆ ಉದ್ಯೋಗ ದೊರಕಿತಂತೆ. ಇದನ್ನು ಉಪೇಕ್ಷಿಸಿದ ಮನೆಪಾಠದ ಮೇಸ್ಟರು ಕೆಲಸ ಕಳೆದುಕೊಂಡನಂತೆ, ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಯೊಬ್ಬ ಠೇವಣಿ ಕಳೆದುಕೊಂಡನಂತೆ! ಹಿಂದೆ ಇಂಥ ದೇವರ ವಿಚಾರಗಳು ಬಾಯಿಂದ ಬಾಯಿಗೆ ಪ್ರಚಾರವಾಗುತ್ತಿದ್ದವು. ಈಗ ದೇವರು ಇಷ್ಟೇ ಪ್ರತಿ, ಇಂಥ ಪ್ರೆಸ್‌ನಲ್ಲೇ ಮುದ್ರಿಸಿ ಹಂಚತಕ್ಕದ್ದು ಎಂದು ಅಪ್ಪಣೆಕೊಡಿಸತೊಡಗಿದ್ದಾನೆ. ನನಗೂ ಒಂದು ಕ್ಷಣ ಚಪಲ ತಟ್ಟದೆ ಇರಲಿಲ್ಲ. ದೇವರ ಅಪ್ಪಣೆಯಂತೆ ಟ್ರೆಡಲ್ ಪ್ರೆಸ್ಸಿನಲ್ಲೇ ಪ್ರಿಂಟು ಮಾಡಿಸಿ ನನ್ನ ಪರಿಚಯದವರಿಗೆ, ಸಂತೆಯಲ್ಲಿ ಸಿಕ್ಕಿದ್ದವರಿಗೆಲ್ಲ ಹಂಚಿಬಿಡೋಣ ಅನ್ನಿಸಿತು. ನನಗೆ ಈಗೀಗ ಮರದ ನೆರಳಿನಲ್ಲಿ ಕುಳಿತಕೂಡಲೇ ತೂಕಡಿಕೆ, ತೂಕಡಿಕೆಯಲ್ಲೇ ಬಣ್ಣದ ಕನಸುಗಳು ಬೀಳುತ್ತವೆ. ಆಗ ನನ್ನ ಆಡು ಹಸು ಬೇರೆಯವರ ಹೊಲಕ್ಕೆ ನುಗ್ಗಿ ಮೂಳೆ ಮುರಿಸಿಕೊಳ್ಳದಂತೆ ದೇವರು ಸಹಾಯ ಮಾಡಿದರೆ ಸಾಕಾಗಿತ್ತು! ನನ್ನ ಅಂದಾಜಿನಂತೆ ಪೂಜಾರಿ ಮಾಂತಪ್ಪ ಮತ್ತು ಈರಭದ್ರ ಸೇರಿ ನಡೆಸಿರುವ 'ಮ್ಯಾಚ್ ಫಿಕ್ಸಿಂಗ್' ಪ್ರಕರಣ ಇದು. ಮಾಂತಪ್ಪನ ಕಿತಾಪತಿ ಅಥವಾ ಭಾನಗಡಿ.....

❖ ❖ ❖

ನನ್ನಷ್ಟಕ್ಕೆ ಆಲೋಚನೆಯಲ್ಲಿ ಮುಳುಗಿರಬೇಕಾದರೆ, ಪಕ್ಕದ ಪೊದೆಗಳಿಂದ ಆಡುಗಳು ಮಾತಾಡುವುದು ಕೇಳಿಸಿತು. ಅರೆ, ನನಗೆ ಪ್ರಾಣಿಗಳ ಭಾಷೆಯೂ ಅರ್ಥವಾಗುತ್ತದೆ. ನನಗೇ ಆಶ್ಚರ್ಯ! (ನೀವು ನಗಬೇಡಿ) ಮಣಕ ಹೇಳಿತು : ''ಸುಮ್ನೆ [illegible] ಒಂದೆನೇ ತಿರುಗ್ತ ತಲೆ ತಿನ್ ಬ್ಯಾಡ. ಗುಲ್ಲೂರ್ನಲ್ಲಿ ಯಾರೋ ಮ್ಯಾಚ್ ಫಿಕ್ಸಿಂಗ್ ಮಾಡ್ತಾರಂತಲ್ಲ.....''

''ಅದೇನ್ ಮಾರಾಯ್ತಿ ಅಂಗಂದ್ರೆ?'' ಹೋತ.

''ಅಯ್ಯ! ನೀನೇನು ಪೇಪರ್ - ಗೀಪರ್ ಓದೊಲ್ಲ ಅನುಸ್ತೆ. ಅದ್ಯಾರೋ ಜಿಂಕೆಗಳಿಗೆ ಮದುವೆ ಮಾಡಿ ಸ್ತಾರಂತಲ್ಲ! ನಂಗೂ ನಿನ್ ಕೈಲಿ ತಾಳಿ ಕಟ್ಟಿಸ್ಕೊಂಡು ಮನಸ್ಸಿಂಗೆ ಸಂಸಾರ ಮಾಡ್ಬೇಕು ಅನ್ನಿಸುತ್ತೆ....''

ಹೋತ ದೊಡ್ಡ ದನಿಯಲ್ಲಿ ನಗುತ್ತ, ''ಅಯ್ಯೋ! ಮಂಕೇ, ಹೆಣ್ಣಿನ್ ಪರವಾಗಿ ಪುರೋಹಿತ್ರೇ ತಾಳಿಕಟ್ಟಿದ್ರ ಮದ್ವೆ ಆದಂಗಾಯ್ತೆ! ಸುಮ್ನೆ ಇಷ್ಟ್ ದಿನ ಎಂಗಿದ್ವೋ! ಅಂಗಿರು. ಮನುಸ್ರು ಅಂಗ್ಮಾಡ್ತಾರೆ, ಇಂಗ್ಮಾಂಡ್ತಾರೆ ಅಂತ ಸಪ್ಪ ಕಾಣ್ ಬ್ಯಾಡ. ಏನಾದ್ರೂ ಮನುಸ್ರು ಮನುಸ್ರೇ ನಾವು ನಾವೇ!''

ಆಗ, ಅತ್ತ ಸುಳಿದ ಗುಲ್ಲೂರಿನ ಕಪ್ಪು ಹಂದಿಯ ಜೋಡಿ ಮಾತಾಡಿಕೊಂಡವು.

''ಕೇಳ್ಕೋ! ಮ್ಯಾಚ್ ಫಿಕ್ಸಿಂಗ್ ಪುರಾಣಾನ! ಸದ್ಯ ನೀನೂ ಆ ಆಡಮ್ನಂಗೆ ತಲೆ ಕೆಡಿಸ್ಕಂಡು ತಾಳಿಕಟ್ಟು ಅಂತ ಕೂತ್ಕಬ್ಯಾಡ! ಈ ಮನುಸ್ರು ವೇದ ಪುರಾಣನೆಲ್ಲ ಚೆನ್ನಾಗ್ ಓದ್ಕಂಡವ್ರು. ಎಂತೆಂತೆವೋ ಚಮತ್ಕಾರ, ಇಕಮತ್ತು, ಪವಾಡ ಮಾಡೋವ್ರು. ಅವ್ರ ಕಣ್ಣಿಗೆ ಬೀಳ್ದಂಗ್ ನಮ್ ಪಾಡಿಗ್ ನಾವಿದ್ಬುಡಾನ. ಅದ್ಯಾವ ಗ್ರಾಚಾರ. ಇಂಗೆ ಅಲಾಲ್ ಟೋಪಿಗಳಂಗೆ ಅಲ್ಡಾಡ್ತಾ ಇದ್ರೆ ಅದೆಂಥ ಸಂಸಾರ - ಅಂತ ಇಬ್ಬರ್ನೂ ಹಿಡ್ಕಂಡು ನೀರಿಗ್ ಮುಳುಗ್ಸಿ, ವರಾಹ-ವರಾಹಿ ಅಂತ ನಾಮ್ಕರ್ಣ ಮಾಡಿ, ಬಟ್ಟೆ ಬರೆ ತೊಡ್ಸಿ, ಮಂತ್ರಗಿಂತ್ರ ಏಳ್ತಾ, ವಾದ್ಯ ಡಮಗುಟುಸ್ತ, ಕಟ್ಟಯ್ಯ ಇವಳ್ ಕುತ್ಗೇಗೆ ತಾಳೀನ ಅಂದ್ರೆ.... ? ಅದ್ಯಾವ್ ಗ್ರಾಚಾರ...''

❖ ❖ ❖

ರಾಜಕೀಯ ಪಕ್ಷವೊಂದು ಗುಲ್ಲೂರು ನಗರದ ಕಟ್ಟಡ ನಿರ್ಮಾಣ ನಿಯಮಗಳನ್ನು ಶೇ. ೨೧೦ರಷ್ಟು ಉಲ್ಲಂಘಿಸಿ ಭವ್ಯ ಭವನವೊಂದನ್ನು ರಾಜಾರೋಷವಾಗಿ ನಿರ್ಮಿಸಿದೆಯಂತಲ್ಲ! ಅಜ್ಞ ಜನಸಾಮಾನ್ಯರು ತಿಳಿಯದೇ ಉಲ್ಲಂಘಿಸೋಣವೆಂದರೂ ಅದು ಒಂದೆರಡು ನಿಯಮಗಳನ್ನೂ ಉಳಿಸಿಲ್ಲವಂತಲ್ಲ! ಇದೇನು ನಿಜವಾಗಿಯೂ ನಿಜವೋ ? ಹಾಗಿದ್ರೆ ನಿಮ್ಮೂರ ಜನ ಏನ್ಮಾಡ್ತೀರಿ?

❖ ❖ ❖

ಯಜಮಾನಪ್ನೋರೆ, ನಂದೊಂದ್ ಕೆಲಸ ಮಾಡಿಕೊಡಬೇಕಲ್ಲ! ಎಲೆಟಿ.ಸಿಟಿಯೋರು ಬಾಡಿಗೆಗೆ ಕರೆಂಟ್ ಕೊಡ್ತಾರಂತಲ್ಲ. ಕರೆಂಟ್ ಬಾಡಿಗೆಗೆ ಸಿಕ್ಕುವಂತಿದ್ರೆ [illegible] ಒಂದು ದೀಪ ಹಾಕ್ಸಾಣ ಅಂತ. ಇದಾನ್‌ಸೋದ್‌ದಲ್ಲಿ ಕ್ಲಾಸ್ ಫೋರ್ [illegible] ನಮ್ ರಾಮಾಂಜಣಿ ಹೇಳ್ದ. ಚೀಫ್‌ಮಿನಿಸ್ಟ್ರಿಗೊಂದು ಈಮೆಯಿಲ್ ಕಳಿಸು ಅಂತ. [illegible] ಹೆಂಗೆ? ನಂಗೇನೂ ಬಿಟ್ಟಿ ಕೊಡಬೇಕಾಗಿಲ್ಲ. ಒಳ್ಳೆಯಕಾಲ ಬಂದಮೇಲೆ ವಾಪಸ್ ಕೊಡ್ತೀನಿ. ಸಬ್ಸಿಡಿ ಗಿಬ್ಸಿಡಿ ಬ್ಯಾಡ. ಹೆಲ್ಪ್ ಮಾಡ್ತೀರಾ? ಮನೆ ಪಾಠದ ಕಾನೂನಿನ [illegible] ನಿಮ್ಮಿಂದ ಪತ್ರಾನೇ ಬಂದಿಲ್ಲ. ಊರಲ್ಲಿದ್ದೀರಾ ಅಥವಾ ....

[illegible]

'ಉದಾತ್ತ' ವೃತ್ತಿ-ಕಳಂಕಿತ ನಿರ್ವಹಣೆ

ಹತ್ತು ವರ್ಷಗಳ ಹಿಂದೆ ನಡೆದ ಒಂದು ಘಟನೆ ನನಗೆ ನೆನಪಾಗುತ್ತಿದೆ. ಹೊಸದಾಗಿ ನೇಮಕವಾದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರು ಹತ್ತಿರದ ಜಿಲ್ಲೆಯೊಂದರ ಕೋರ್ಟುಗಳಿಗೆ ಭೇಟಿ ನೀಡಿದ್ದರು. ಒಂದು ಅನೌಪಚಾರಿಕ, 'ಬಾರ್ ಅಸೋಸಿಯೇಶನ್' ಏರ್ಪಡಿಸಿದ್ದ ಸಂತೋಷಕೂಟದಲ್ಲಿ ಅವರು ಸದಸ್ಯರೊಡನೆ ಕೇಳಿದ ಒಂದು ಪ್ರಶ್ನೆ: 'ನಿಮಗೆ ತಿಳಿದಂತೆ ಎಷ್ಟು ಜನ ಇಲ್ಲಿನ ನ್ಯಾಯಾಧೀಶರು ಭ್ರಷ್ಟರೆನಿಸುವವರು?' ಎಂದು. ಅದಕ್ಕೆ ಬಂದ ಎಲ್ಲ ಕೂಡಿ ಕೊಟ್ಟ ಉತ್ತರ ''ನೂರಕ್ಕೆ ನೂರರಷ್ಟು'' ಎಂದು. ಆ ನ್ಯಾಯವಾದಿಗಳೆಲ್ಲ ಇದೊಂದು ಸಾಧನೆ ಎಂಬಂತೆ ಈ ಅಭಿಪ್ರಾಯ ತಿಳಿಸಿದ್ದರು. ಆ ಹೈಕೋರ್ಟು ನ್ಯಾಯಾಧೀಶರು ತುಸು ಕೆಣಕುವ ದನಿಯಲ್ಲಿ ಮತ್ತೆ ಕೇಳಿದ್ದು, ''ಇಂತಹ ಭ್ರಷ್ಟ ನ್ಯಾಯಾಧೀಶರನ್ನು ತೆಗೆದು ನಿಮ್ಮ ಬಾರ್ ಅಸೋಸಿಯೇಶನ್‌ನ ಸದಸ್ಯರಿಂದಲೇ ಹೊಸ ನ್ಯಾಯಾಧೀಶರ ತಂಡವೊಂದನ್ನು ನೇಮಕ ಮಾಡಿದರೆ ಅವರನ್ನು ಭ್ರಷ್ಟರನ್ನಾಗಿ ಮಾಡಲು ನಿಮಗೆ ಎಷ್ಟು ಸಮಯ ಬೇಕಾದೀತು?'' ಎಂದು. ಆಗ ಉತ್ತರ ಬೇಗ ಬರಲಿಲ್ಲ. ಉತ್ತರಿಸಬೇಕಾದವರಲ್ಲಿ ಒಂದು ತಿಂಗಳಲ್ಲಿ ಅವರನ್ನು ಭ್ರಷ್ಟರನ್ನಾಗಿ ಮಾಡಬಹುದು ಎಂಬುದರಿಂದ ಮೂರು ತಿಂಗಳವರೆಗೆ ಬೇಕಾಗಬಹುದು ಎಂದು ಒಂದು ಚರ್ಚೆಯಾಗಿತ್ತು. ಇದನ್ನು ನನಗೆ ಹೇಳಿದ್ದು ಸ್ವತಃ ಆ ನ್ಯಾಯಾಧೀಶರೇ. ನ್ಯಾಯವಾದಿಗಳ ವೃತ್ತಿಯನ್ನು ಆಯ್ಕೆ ಮಾಡಿಕೊಂಡವರು ನ್ಯಾಯಾಂಗದ ಭ್ರಷ್ಟಾಚಾರಕ್ಕೆ ಹೇಗೆ ಕಾರಣರಾಗಬಹುದು ಎಂಬುದಕ್ಕೆ ಇದು ಒಂದು ಉದಾಹರಣೆ. ಆಸಕ್ತ ನ್ಯಾಯವಾದಿ ಇಂದಿರಾ ಜೈಸಿಂಗ್ ಒಮ್ಮೆ ಹೇಳಿದಂತೆ 'ಇಂದಿನ ಭ್ರಷ್ಟ ನ್ಯಾಯಾಧೀಶ ನಿನ್ನೆಯ ಭ್ರಷ್ಟ ನ್ಯಾಯವಾದಿ.'

ಹೆಚ್ಚು ವಿವರ ಕೊಡಲು ನಾನು ನನ್ನ ಕೆಲವು ಅನುಭವಗಳನ್ನೇ ನಿರೂಪಿಸಬೇಕು. ಆಗ ಓದುಗರು ತಾವೇ ಈ ನ್ಯಾಯಾಂಗಕ್ಕೆ ಸಂಬಂಧಿಸಿದವರು ತಮ್ಮ ವರ್ತನೆಗಳಿಂದ ಒಂದು 'ಉದಾತ್ತ'ವೆನಿಸಬೇಕಾದ ವೃತ್ತಿಯಲ್ಲಿರಲು ಅರ್ಹರೇ ಎಂದು ನಿರ್ಧರಿಸಬಹುದು.

ನಾನು ವಕೀಲ ವೃತ್ತಿಯ ಕಿರಿಯ ಸದಸ್ಯನಾಗಿದ್ದಾಗ ನನ್ನ ಸಹೋದ್ಯೋಗಿಯೊಬ್ಬರು ತೀವ್ರ ಆರ್ಥಿಕ ಅನಾನುಕೂಲತೆಯ ಹಿನ್ನೆಲೆಯಿಂದ ನಮ್ಮ ವೃತ್ತಿಗೆ ಬಂದಿದ್ದರು. ಕೆಲವು ಸಮಯ ಅವರಿಗೆ ಎರಡನೆಯ ದರ್ಜೆಯ ರೇಲ್ವೆ ಸೀಸನ್ ಟಿಕೇಟು ಪಡೆಯಲೂ ಸಾಧ್ಯವಾಗುತ್ತಿರಲಿಲ್ಲ, ಅವರು ತುಂಬ ಪರಿಶ್ರಮ ಪಡುವ ನ್ಯಾಯವಾದಿ ಕೂಡ ಆಗಿರಲಿಲ್ಲ. ತುಂಬ ಕಷ್ಟದ ಸಮಯ ಆದಾಗಿತ್ತು ಅವರಿಗೆ. ಆದರೆ ಅವರಿಗೆ ಅದೃಷ್ಟ ಲಕ್ಷ್ಮಿ ಒಮ್ಮೆಗೆ ಒಲಿದಂತಿತ್ತು. ಅವರ ದೂರದ ಸಂಬಂಧಿಯೊಬ್ಬರು

ನ್ಯಾಯಮೂರ್ತಿಗಳಿಗೆ ಒಂದು ನೀತಿಸಂಹಿತೆ ಇರಬೇಕೆಂಬ ಮಾತು ಈಚಿನದು. ವಕೀಲರಿಗೆ ಅನ್ವಯಿಸುವಂತೆ ನೀತಿಸಂಹಿತೆಯು ಬಹಳ ಕಾಲದಿಂದ ಜಾರಿಯಲ್ಲಿದೆ. ಆದರೆ ಅದು ಅವರಿಗೇ ತಿಳಿಯದು! ಕಾನೂನು ಪಾಲನೆಯ ಕ್ಷೇತ್ರದಲ್ಲಿ ಭ್ರಷ್ಟಾಚಾರವನ್ನು ತೊಲಗಿಸಲು ಸಮಗ್ರವಾದ ನೀತಿಸಂಹಿತೆಯೊಂದರ ಆವಶ್ಯಕತೆ ಹಿಂದೆಂದಿಗಿಂತಲೂ ಈಗ ಹೆಚ್ಚಿನದ್ದಾಗಿದೆ ಎನ್ನುತ್ತಾರೆ ಮುಂಬೈನಲ್ಲಿ ವಕೀಲರಾಗಿರುವ ಲೇಖಕ ಮೋರೆ ಅವರು.

ಅವರದೇ ಹಿಂದುಳಿದ ಜಾತಿಯವರು, ಆ ಹಿಂದುಳಿದ ಜಾತಿಯ ಪರವಾಗಿ ರಾಜ್ಯದ ಮಂತ್ರಿ ಮಂಡಳದಲ್ಲಿ ಸಹಾಯಕ ಮಂತ್ರಿಯಾಗಿ ಸ್ಥಾನ ಪಡೆದರು. ಆ ಕೂಡಲೇ ನನ್ನ ಸ್ನೇಹಿತರು ಮುನಿಸಿಪಲ್ ಕಾರ್ಪೊರೇಷನ್‌ನ ನ್ಯಾಯವಾದಿಗಳ ಪಟ್ಟಿಯಲ್ಲಿ ಸಿಟಿ ಸಿವಿಲ್ ಕೋರ್ಟ್‌ಗಳಲ್ಲಿ ಕೆಲಸ ನಡೆಸಲು ಸೇರಿಕೊಂಡರು. ಆರೇ ತಿಂಗಳಲ್ಲಿ ಅವರು ನಾಲ್ಕು ಚಿನ್ನದ ಉಂಗುರಗಳನ್ನೂ ಬೆಲೆ ಬಾಳುವ ಸ್ವಿಸ್ ವಾಚ್ ಒಂದನ್ನೂ ಧರಿಸಿಕೊಂಡು ತನ್ನದೇ ಮಾರುತಿ ಕಾರ್‌ನಲ್ಲಿ ತಿರುಗಾಡಲು ಸಮರ್ಥರಾದರು. ಎರಡೇ ವರ್ಷಗಳಲ್ಲಿ ಮುಂಬೈಯ ಪ್ರತಿಷ್ಠಿತರಿರುವ ಜಾಗದಲ್ಲಿ ಒಂದು ಭವ್ಯ ಅಪಾರ್ಟ್‌ಮೆಂಟನ್ನು ಖರೀದಿಸಲು ಸಮರ್ಥರಾದರು. ಅವರು ಒಮ್ಮೆ ನನ್ನನ್ನು ಭೆಟ್ಟಿಯಾಗಲು ಬಂದಿದ್ದರು. ಅವರ ತೀರ ಕಡಿಮೆ ಎನಿಸುವ ಸಂಬಳವನ್ನು ತಿಳಿದು ನನಗೆ ಆಶ್ಚರ್ಯವಾಯಿತು. ಹಾಗಾದರೆ ಈ ಸಂಪತ್ತಿನ ಜೀವನ ನಡೆಸಲು ಸಾಧ್ಯವಾದದ್ದಾರೂ ಹೇಗೆ? ನನ್ನ ಅಜ್ಞಾನದ ಬಗ್ಗೆ ಅವರಿಗೆ ನಗು ಬಂತು. ''ಇಲ್ಲಿ ನೋಡು, ನನ್ನ ಇದಿರಾಳಿಗಳಿಗೆ ನಾನು ತುಸು ಸಹಾಯ ಮಾಡುವಂತಿದ್ದರೆ ಅವರು ನನ್ನ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಕಾರ್ಪೊರೇಷನ್‌ನ ವಿರುದ್ಧ ನಿನಗೆ ಏನಾದರೂ ತಡೆಯಾಜ್ಞೆ ಬೇಕಾದರೆ ನನ್ನನ್ನು ಸಂಪರ್ಕಿಸು. ಅದನ್ನು ಆಗಮಾಡುವುದು ಸಾಧ್ಯ''. ''ಆದರೆ ಸಂಬಂಧಿಸಿದ ನ್ಯಾಯಾಧೀಶರು ಇದನ್ನೆಲ್ಲ ಗಮನಿಸುವುದಿಲ್ಲವೆ?'' ಎಂದು ನಾನು ಕೇಳಿದೆ. ''ಅರೆ ಬಾಬಾ, ಆ ಘನ ನ್ಯಾಯಾಧೀಶರು ತಿಳಿವಳಿಕೆಯುಳ್ಳವರು.

ರಾಜು ಜೆಡ್. ಮೋರೆ

ಅವರೂ ನ್ಯಾಯಾಧೀಶರಾಗುವುದಕ್ಕೆ ಮೊದಲು ನ್ಯಾಯವಾದಿಗಳಾಗಿದ್ದವರು. ಅಲ್ಲದೆ, ಕೇಸಿನಲ್ಲಿ ಹಿತರಕ್ಷಣೆಯ ಮಿತಿ ಹೆಚ್ಚಿರುವಾಗ ಸಂಬಂಧಿಸಿದ ಜನ ಅವರ ಸಹಕಾರವನ್ನು ಪಡೆದುಕೊಳ್ಳುತ್ತಾರೆ''. ಇನ್ನೊಂದು ಘಟನೆ ಹೀಗಿದೆ: ಒಂದು ಹೊಸ ಸರಕಾರ ಅಧಿಕಾರ ವಹಿಸಿದಾಗ ಆಸಕ್ತ ವಕೀಲರುಗಳಲ್ಲಿ 'ಸಹಾಯಕ ಸರಕಾರದ ವಕೀಲರು' ಮತ್ತು 'ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್'ಗಳಾಗಿ ಬೇರೆ ಬೇರೆ ಕೋರ್ಟುಗಳಲ್ಲಿ ಸೇರಿಕೊಳ್ಳಲು ತಾವೇ ಆಗಬೇಕು ಎಂಬ ಹೊಯ್ದಾಟವಿದೆ. ನನ್ನ ಸ್ನೇಹಿತರೊಬ್ಬರಿಗೆ ಪ್ರಾಸಿಕ್ಯೂಟರ್ ಆಗುವ ಆಸೆ. ಅವರಿಗೆ ಒಳ್ಳೆಯ ರಾಜಕೀಯ ಸಂಪರ್ಕವಿತ್ತು. ತುಂಬ ಸಮಯ ಮಂತ್ರಿಗಳು ಹಾಗೂ ಅವರ ಸಹಾಯಕರೊಂದಿಗೆ ಕಳೆದ ಮೇಲೆ ಅವರಿಗೆ ಬೇಕಾದ ಕೆಲಸ ಸಿಕ್ಕಿತು. ''ಕಡಿಮೆಯೆಂದು ತೋರಬಹುದಾದ ಹಣದಲ್ಲೆ ಸಿಕ್ಕಿತು. ಬರೇ ಒಂದು ಲಕ್ಷ'' ಎಂದರವರು ವಿಜಯದ ದನಿಯಲ್ಲಿ. ''ಇತರರು ಐದು ಲಕ್ಷಗಳ ತನಕ ಕೊಡಬೇಕಾಗಿತ್ತು''. ಕೆಲವು ಸ್ನೇಹಿತರು ಹೀಗೆ ನೇಮಕವಾದವರನ್ನು ಅಭಿನಂದಿಸಲು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಈ ಸತ್ಕಾರ ಕೂಟಕ್ಕಾಗಿ ಹಣ ಕೊಟ್ಟವರಿಗೆ ಈ ನ್ಯಾಯವಾದಿಗಳು ಕ್ಷಿಪ್ರ ಪ್ರಸಿದ್ಧಿ ಪಡೆದರೆಂದು ಸಂತೋಷ. ಪ್ರಾಸಿಕ್ಯೂಟರ್‌ರವರು ವಾದಿಸುವ ರೀತಿಯಲ್ಲೆ ಒಬ್ಬ ಆಪಾದಿತನಿಗೆ ಜಾಮೀನು ಸಿಗಬಹುದೇ ಇಲ್ಲವೇ ಎಂಬುದು ನಿರ್ಧಾರವಾಗುವುದು. ಆ ಕಾರಣ ಇಂಥವರಿಗಿರುವ ಕುಡಿಯುವ ಚಟಕ್ಕೆ ಸಹಾಯ ಮಾಡಿ ಅವರನ್ನು ಖುಷಿಯಾಗಿರಿಸುವುದರಲ್ಲಿ ಬುದ್ಧಿವಂತಿಕೆ ಇದೆ. ನನ್ನ ಸ್ನೇಹಿತರು ಇಂತಹ ನಡೆವಳಿಕೆಯ ಬಗ್ಗೆ ನನಗಿರುವ ಸ್ಪಷ್ಟ ಅಭಿಪ್ರಾಯಗಳನ್ನು ತಿಳಿದವರು ತನ್ನನ್ನು ಸಮರ್ಥಿಸಿಕೊಳ್ಳಲು ಹೇಳಿದ್ದು: 'ಇಲ್ಲಿ ನೋಡು, ನಾನು ಇದನ್ನು ಮಾಡಲೇಬೇಕಿತ್ತು. ಬೇರೆ ದಾರಿ ಇರಲಿಲ್ಲ. ಆ ಮಂತ್ರಿಯವರು ನೇರ ಹೇಳಿಯೇಬಿಟ್ಟಿದ್ದರು; ನಾಲ್ಕೈದು ಲಕ್ಷ ಹೆಚ್ಚಾಯಿತೆಂದು ತಿಳಿದು ವಾದಿಸಿದ ಇತರರಿಗೆ. ನೋಡಿ, ಒಮ್ಮೆ ಸರಕಾರೀ ವಕೀಲರೆಂದು ನೇಮಕವಾದ ಆರು ತಿಂಗಳಲ್ಲೇ ಹೀಗೆ ಕೊಟ್ಟ ಹಣವನ್ನು ಮರಳಿ ಪಡೆಯಲು ಅವರಿಗೆ ಸಾಧ್ಯವಾಗುತ್ತದೆ. ಆ ನಂತರ ಮೂರು ವರ್ಷಗಳ ಅವಧಿಯ ಉಳಿದ ಸಮಯದಲ್ಲಿ ಸಿಗುವುದೆಲ್ಲ ಲಾಭವೇ. ಇದನ್ನು ಕೇಳಿ ಎಲ್ಲ ಬೇಡಿದ ಹಣವನ್ನು ಕೊಟ್ಟವರೇ. 'ನನ್ನ ಮಾವನವರೊಬ್ಬರು ಎಂ.ಎಲ್.ಎ. ಆಗಿರುವುದರಿಂದ ನನ್ನ ನೇಮಕ ಬರೇ ಒಂದು ಲಕ್ಷಕ್ಕಾಯಿತು. ಮತ್ತೆ ನನ್ನನ್ನು ನಂಬು, ನಾನು ಹಾಕಿದ ಹಣವನ್ನು ನ್ಯಾಯವಾದಿಗಳಿಂದ ಲಂಚ ಪಡೆದು ಮರಳಿಸಿಕೊಳ್ಳುವುದಿಲ್ಲ. ನನ್ನನ್ನು ನೀನು ನಂಬುತ್ತೀಯಲ್ಲ!''

ನಾನು ಇನ್ನೊಂದು ತುಂಬ ಹಿರಿಯ ನ್ಯಾಯವಾದಿ

ಸಲಹೆಗಾರರ ವಿಚಾರ ಹೇಳಬಯಸುತ್ತೇನೆ. ಅವರಿಗಿರುವ ಭಾರತೀಯ ನ್ಯಾಯ ಸಂಹಿತೆಯ ಹಾಗೂ ಇಂಗ್ಲಿಷು ಭಾಷೆಯ ಜ್ಞಾನ ಹೇಳಿಕೊಳ್ಳುವಂಥದಲ್ಲ. ಆದರೆ ಅವರಿಗೆ ಅಂದವಾದ ಬಂಗ್ಲೆಯೊಂದು ಮುಂಬಯಿ ಸಮೀಪದ ಗಿರಿಧಾಮದಲ್ಲಿದೆ. ಬೇಕಾದ ಮದ್ಯಗಳಿರುವ ಬಾರ್ ಮತ್ತು ಚಂದದ ಈಜುಕೊಳ ಅಲ್ಲಿನ ಆಕರ್ಷಣೆ. ವಾರಾಂತ್ಯದ ವಿಹಾರಕ್ಕೆಂದು ನ್ಯಾಯಾಧೀಶರನ್ನು ಆಮಂತ್ರಿಸಿದಾಗ ಕರವೆಣ್ಣುಗಳ ತಂಡ ಕೂಡ ಅಲ್ಲಿರುವ ವ್ಯವಸ್ಥೆಯಿದೆ. ಈ ಸಂಪತ್ತು, ಮದ್ಯ, ಹೆಣ್ಣುಗಳಿಂದಾಗಿ ಅವರು ತನ್ನ ವೃತ್ತಿಯಲ್ಲಿ ಅತ್ಯುನ್ನತ ಸ್ಥಾನ ಗಳಿಸಿದ್ದಾರೆ. ಅವರು ಸೋಮವಾರ ಬೆಳಿಗ್ಗೆ ಕೋರ್ಟಿಗೆ ಬಂದಾಗ ಅದೇ ಭಾನುವಾರ ಅವರ ಈಜುಕೊಳದಲ್ಲಿ ಸುಖವಾಗಿ ಈಜಾಡುತ್ತಿದ್ದ ನ್ಯಾಯಾಧೀಶರು ದೊಡ್ಡದೊಂದು ನಗುವಿನಿಂದಲೇ ಅವರನ್ನು ಸ್ವಾಗತಿಸಿ ಅವರಿಗೆ ಸಿಗಬೇಕಾದ ಪರಿಹಾರವೇನೆಂದು ಕೇಳುತ್ತಾರೆ. ಈ ವಕೀಲರು ಸರಿಯಾಗಿ ಮಾತನಾಡುವ ಮೊದಲೇ ಅವರ ಕಕ್ಷಿದಾರನಿಗೆ ಬೇಕಾದ ಪರಿಹಾರ ಸಿಗುತ್ತದೆ. ಈ ಸಲಹೆಗಾರ ವಕೀಲರು ತಾನು ಕೋರ್ಟಿನಲ್ಲಿ ಹಾಜರಾದುದಕ್ಕೆ ಸಿಗಬೇಕಾದ ಹಣವನ್ನು ವಸೂಲು ಮಾಡಿ ವಕೀಲರ ತಂಡದಲ್ಲೂ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುತ್ತಾರೆ. ಇನ್ನು ನ್ಯಾಯಾಧೀಶರೋ ತನಗೆ ವಾರಾಂತ್ಯದಲ್ಲಿ ಸಿಕ್ಕಿದ ಆತಿಥ್ಯವನ್ನು ತುಸುವಾದರೂ ಮರಳಿ ಕೊಡಲು ಸಾಧ್ಯವಾಯಿತೆಂದು ಸಂತೋಷಿಸುತ್ತಾರೆ.

ಈಗ ನನಗೆ ಹೆಣ್ಣಿನ ಖಯಾಲಿ ತುಂಬ ಇದ್ದ ಒಬ್ಬ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೆನಪಾಗುತ್ತದೆ. ಅವರು ತುಂಬ ಬುದ್ಧಿವಂತರೆಂದೂ ತುಂಬ ಭ್ರಷ್ಟರೆಂದೂ ಹೆಸರು ಪಡೆದಿದ್ದರು. ವಕೀಲರ ಬಾರ್ ಅಸೋಸಿಯೇಶನ್ ಅವರನ್ನು ತುಂಬ ಮೆಚ್ಚಿಕೊಂಡುದರಲ್ಲಿ ಆಶ್ಚರ್ಯವಿಲ್ಲ. ''ಹೆಚ್ಚು ಬುದ್ಧಿವಂತನಾಗಿರದವನು ಭ್ರಷ್ಟನಾಗಲು ಸಾಧ್ಯವಿಲ್ಲ. ಭ್ರಷ್ಟನಾಗಿಯೂ ಸಿಕ್ಕಿಬೀಳದಿರುವುದಕ್ಕೆ ಬುದ್ಧಿವಂತಿಕೆ ಅಗತ್ಯ. ಈ ನ್ಯಾಯಾಧೀಶರು (ಹೆಸರು ಎಕ್ಸ್ ಎಂದಿಟ್ಟುಕೊಳ್ಳಿ) ತುಂಬ ಪ್ರಸಿದ್ಧರು'' ಎಂದು ಒಬ್ಬ ಹಿರಿಯ ನ್ಯಾಯವಾದಿ ನನ್ನೊಡನೆ ಹೇಳಿದ್ದಿದೆ. ಮುಂದೆ ಸ್ವಲ್ಪ ಸಮಯದ ಮೇಲೆ ಈ ನ್ಯಾಯಾಧೀಶರು ತುಸು ತಿರಸ್ಕಾರಕ್ಕೊಳಗಾಗಿ ಅವರ ಹಾಗೂ ಇನ್ನು ಕೆಲವು ಭ್ರಷ್ಟ ನ್ಯಾಯಾಧೀಶರ ಕೋರ್ಟುಗಳಿಗೆ ಬಹಿಷ್ಕಾರ ಹಾಕಲಾಗಿತ್ತು. ಅವರು ಪ್ರತಿದಿನ ಕೋರ್ಟಿಗೆ ಬಂದು ಕೆಲಸವಿರದೆ ತನ್ನ ಚೇಂಬರಲ್ಲಿ ಕುಳಿತಿರುತ್ತಿದ್ದರು. ಅವರನ್ನು ಆತ್ಮೀಯರಂತೆ ಕಾಣುತ್ತಿದ್ದ ಕೆಲವು ನ್ಯಾಯವಾದಿಗಳು ಅವರಿಗೆ ಸಂಗಾತಿಗಳಾಗಿ ಸಮಯ ಕಳೆಯಲು ಸಹಾಯ ಮಾಡುತ್ತಿದ್ದರು. ಕೆಲಸ ಮಾಡದೆಯೂ ಅವರು ಪೂರ್ತಿ ಸಂಬಳ ಪಡೆಯುತ್ತಿದ್ದರು. ಕೊನೆಗೆ ನಿವೃತ್ತರಾಗಬೇಕಾದಾಗ ಸರಿಯಾದ ಎಲ್ಲ ನಿವೃತ್ತಿಯ ಗಳಿಕೆಯೊಡನೆ ಕೋಟಿಗಟ್ಟಲೆ ಬೆಲೆಬಾಳುವ ನ್ಯಾಯಾಧೀಶರ ಸೊಸೈಟಿಯಲ್ಲಿ ಮನೆ ದೊರಕಿಸಿಕೊಂಡು ನಿವೃತ್ತರಾದರು. ಈ ನ್ಯಾಯಾಧೀಶರದೇ ಆದ ವಸತಿ ಸಮುಚ್ಚಯ ಕಟ್ಟಿದ್ದು ವಸತಿಹೀನರಿಗೆಂದು ಕಾದಿರಿಸಲಾಗಿದ್ದ ಜಾಗದಲ್ಲಿ.

ನ್ಯಾಯಾಂಗದ ಸದಸ್ಯರನ್ನು ಭ್ರಷ್ಟರನ್ನಾಗಿ ಮಾಡಲು ವಕೀಲರು ಅನುಸರಿಸುವ ಹಲವಾರು ವಿಧಾನಗಳಿವೆ. ಅಧಿಕಾರದಲ್ಲಿರುವ ನ್ಯಾಯಾಧೀಶರ ಹತ್ತಿರದ ಸಂಬಂಧಿಗಳನ್ನು ವಕೀಲರು ಸಹಾಯಕರಾಗಿ ನೇಮಿಸಿಕೊಳ್ಳುವುದು ಒಂದು ವಿಧಾನ. ವಕೀಲರ ಬಾರ್‌ಗೆ ಬಂದ ಹೊಸಬರೂ



ನ್ಯಾಯಾಧೀಶರ ಮಗನೋ ಮಗಳೋ ಆಗಿದ್ದರೆ ಹಿರಿಯ ಸಾಲಿಸಿಟರ್ಸ್‌ನವರಿಂದ ಕಕ್ಷಿದಾರರಿಗೆ ಬೇಕಾದ ಸಲಹೆಯ ಬ್ರೀಫ್ ಅಥವಾ ರಿಪೋರ್ಟು ತಯಾರಿಸಲು ಸಮರ್ಥರೆನಿಸಿಕೊಳ್ಳುತ್ತಾರೆ. ಇದಕ್ಕಾಗಿ ಎಷ್ಟು ಹಣ ಕೊಡಬೇಕಾದರೂ ಯಾರೂ ಆಕ್ಷೇಪಿಸುವುದಿಲ್ಲ. ಈ ಹಣ ನ್ಯಾಯಾಧೀಶರ ಕುಟುಂಬದ ಗಳಿಕೆಯಾಗುತ್ತದೆನ್ನುವುದೇ ಇದರಲ್ಲಿ 'ಏನೂ ತಪ್ಪಿಲ್ಲ' ಎನ್ನುವ ಸಮರ್ಥನೆಗೆ ಕಾರಣ. ಆ ನ್ಯಾಯಾಧೀಶರಾದರೋ ತನ್ನ ವಕೀಲಿ ವೃತ್ತಿಯ ಯಶಸ್ವೀ ಸಂಪಾದನೆಯನ್ನು ಬಿಟ್ಟು ನ್ಯಾಯಪಾಲನೆಗೆಂದು ನ್ಯಾಯಾಧೀಶರಾಗಲು ತ್ಯಾಗ ಮಾಡಿಲ್ಲವೆ? ಒಂದು ನಿವೇಶನವೋ ಅಪಾರ್ಟ್‌ಮೆಂಟೋ ಕಡಿಮೆ ಹಣದಲ್ಲಿ ದೊರೆಯುವುದು ಅವರಿಗೆ ಆಗಿರುವ ನಷ್ಟವನ್ನು ತುಸುವಾದರೂ ಭರಿಸಲೆಂದು. '' ಈ ಹುಡುಗ ಒಳ್ಳೆಯವನು, ಅವನಿಗೆ ಒಳ್ಳೆಯ ತೀರ್ಪು ಸರಿ'' ಎಂದಾಗ ಆ ಹೊಸ ವಕೀಲನ ಭವಿಷ್ಯ ನಿರ್ಧಾರವಾಯಿತು. ನ್ಯಾಯಾಧೀಶರಿಗೂ ಸಂತೋಷ, ತನ್ನದೇ ಮಗ ಬರುತ್ತಿರುವ ರೀತಿಯನ್ನು ಕಂಡು. ಹೀಗೆ ನ್ಯಾಯವಾದಿಗಳು ಇನ್ನೊಂದು ರೀತಿಯ ವಿಜಯ ಸಾಧಿಸಿದರು. ನ್ಯಾಯ ದೊರಕಿದೆಯಷ್ಟೇ ಅಲ್ಲ; ನ್ಯಾಯವಾದ ರೀತಿಯಲ್ಲಿ ದೊರಕಿದಂತಾಗಿದೆ.

ವಕೀಲರ ವೃತ್ತಿಯಲ್ಲಿ ಮದ್ಯಪಾನ ಗೋಷ್ಠಿಗಳನ್ನು ಏರ್ಪಡಿಸುವವರು, ತಮ್ಮ ಬಳಿ ಕಲಿಯಲು ಉತ್ಸುಕರಾಗಿರುವ ಕಿರಿಯರು, ನ್ಯಾಯಾಧೀಶರ ಮಕ್ಕಳನ್ನು ವಕೀಲಿ ತರಬೇತಿಯಲ್ಲಿ ಕೆಲಸ ನಿರ್ವಹಿಸಲು ಸಹಕರಿಸಿ ಚೆನ್ನಾಗಿ ಫೀಸು ಕೊಡುವವರು, ಇಂಥವರೆಲ್ಲ ತುಂಬ 'ಪರಿಣಾಮಕಾರಿ ಕೆಲಸ ಮಾಡುವ ಯಶಸ್ವೀ ವಕೀಲರು' ಎಂದು ಹೆಸರು ಗಳಿಸುತ್ತಾರೆ. ಈಗ ಬೇಕಾಗಿರುವುದು ನ್ಯಾಯಜ್ಞಾನವಲ್ಲ, ನ್ಯಾಯಾಧೀಶರ ಪರಿಚಯವಿದೆಯೇ ಎನ್ನುವುದು. ನೀವು ವಕೀಲರ ಬಾರ್ ಅಸೋಸಿಯೇಶನ್‌ನಲ್ಲಿ ವಕೀಲ ಸಹೋದ್ಯೋಗಿಗಳಿಗಾಗಿ ಏನನ್ನೂ ಮಾಡದಿರಬಹುದು. ಆದರೆ ನೀವು ಮುಖ್ಯ ನ್ಯಾಯಾಧೀಶರೊಡನೆ ಗಾಲ್ಫ್ ಆಡಲು ಸಮರ್ಥರಾದರೆ ಬಾರ್ ಅಸೋಸಿಯೇಶನ್‌ನ ಅಧ್ಯಕ್ಷರಾಗಲು ವಿಶಿಷ್ಟ ಅರ್ಹತೆ ಪಡೆಯುತ್ತೀರಿ. ಈಗಿನ ಮಂತ್ರ 'ಅಧಿಕಾರದಲ್ಲಿರುವವರನ್ನು ಯಾವುದೇ ರೀತಿಯಲ್ಲಾದರೂ ಖುಷಿಯಲ್ಲಿಡುವುದು, - ಇದನ್ನು ಸಾಧಿಸುವ ವಕೀಲರು ತುಂಬ ಯಶಸ್ಸನ್ನು ಗಳಿಸುತ್ತಾರೆ. ಅಂಥವರು ಒಂದು ದಿನ ನ್ಯಾಯಾಧೀಶರೂ ಆಗಬಹುದು. ಅಲ್ಲಿಗೆ ತಲುಪಿದ ಮೇಲೆ ಅವರೂ ತಾವು ಹಿಂದೆ ನ್ಯಾಯಾಧೀಶರನ್ನು ಸತ್ಕರಿಸುತ್ತಿದ್ದ ರೀತಿಯಲ್ಲಿ ತಮ್ಮನ್ನು ವಕೀಲರು ಸತ್ಕರಿಸಲು ಸಿದ್ಧರಾಗಬೇಕೆಂದು ಬಯಸುತ್ತಾರೆ. ಹೀಗೆ ಹೊಸ ಪೀಳಿಗೆಯ ಭಟ್ಟಂಗಿಗಳು ಹಾಗೂ ಏನೂ ಮಾಡಲು ಸಿದ್ಧರಿರುವ ಒಂದು ತಂಡ ನಿರ್ಮಾಣವಾಗುತ್ತದೆ. ವಿಷಚಕ್ರ ಮುಂದುವರೆಯುತ್ತದೆ.

ನ್ಯಾಯಾಧೀಶರಿಗೆ ಇರಬೇಕಾದ ನೀತಿಸಂಹಿತೆ ಇತ್ತೀಚೆಗಿನ ಬೆಳವಣಿಗೆ. ಆದರೆ ವಕೀಲರಿಗೆ ನೀತಿ ಸಂಹಿತೆಯೊಂದು ದೀರ್ಘಕಾಲದಿಂದ ಇದೆ. ಹೆಚ್ಚಿನ ವಕೀಲರಿಗೆ ಇದರ ತಿಳಿವಳಿಕೆಯೇ ಇಲ್ಲ. ವಕೀಲಿ ವೃತ್ತಿಯಲ್ಲಿ ಭ್ರಷ್ಟಾಚಾರ ನಿರ್ಮೂಲನಕ್ಕೆಂದು ಈ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಆಚರಣೆಯಲ್ಲಿ ತರಬಹುದು. ಅದರಲ್ಲಿ ಕೆಲವು ಪರಿಣಾಮಕಾರಿ ನಿಯಮಗಳಿವೆ. ಒಂದು ನಿಯಮದಂತೆ ನ್ಯಾಯಾಧೀಶರ ಹತ್ತಿರದ ಸಂಬಂಧಿಗಳು ಅದೇ ಕೋರ್ಟಿನಲ್ಲಿ ವ್ಯವಹರಿಸಬಾರದು. ಆದರೆ ಇದನ್ನು ಪಾಲಿಸುವವರೇ ಇಲ್ಲ. ಈಗಲೂ ಕಾಲ ಮಿಂಚಿಲ್ಲ. ಎಲ್ಲ ಭ್ರಷ್ಟಾಚಾರವನ್ನು ಕಿತ್ತೊಗೆಯಲು ನ್ಯಾಯವಾದಿಗಳ ನೀತಿ ಸಂಹಿತೆ (ಹಾಗೂ ನ್ಯಾಯಾಧೀಶರದೂ ಕೂಡ) ಕಟ್ಟುನಿಟ್ಟಾಗಿ ಆಚರಿಸುವಂತಾದರೆ ನ್ಯಾಯಾಂಗದ ಕ್ಷೇತ್ರದಲ್ಲಿ ಸರಿಯಾದ ಕೆಲಸ ನಿರ್ವಹಣೆ ಸಾಧ್ಯವಾಗಬಹುದು.

ಅನುವಾದ : ಪ.ವಾ.


ಕೃಪೆ: One India One people

ನಮ್ಮ ಸಾಧನೆ?

ಹೆಣ್ಣು ದೇವತೆ ಎಂದು ಹೊಗಳುತ್ತ ಬಂದು
ವರದಕ್ಷಿಣೆಯ ಪಡೆದೆ ಹೆಣ್ಣನ್ನು ತಂದು
ಸೀಮೆಎಣ್ಣೆಯ ಸುರಿದು ಮೈಗೆ ಕಿಚ್ಚಿಟ್ಟು
ದೇವಲೋಕಕೆ ಅವಳ ಕಳಿಸುವವೊ ಕೆಟ್ಟು

ಪಳಕಳ ಸೀತಾರಾಮ ಭಟ್ಟ
ಮಿತ್ತಬೈಲು-೫೭೪ ೨೨೭

ಲೇಖಕಿ, ಶರಣೆ, ಸಂಘಟಕಿ, ಅಕ್ಕ, ಅವ್ವ ಇವೆಲ್ಲ ಆಗಿಯೂ ಊರಮುಂದಿನ ಕಟ್ಟೆಯ ಮೇಲೆ ಕುಳಿತ ಊರ ಜನರ ಪ್ರೀತಿಯ ಅಜ್ಜಿಯಂತೆ, ಸದ್ದಿಲ್ಲದೆ ಸುಳಿವಿಲ್ಲದೆ ಹರಿವ ಶಾಲ್ಮಲಾ ನದಿಯಂತೆ, ಪ್ರಶಾಂತ ಬದುಕಿನ ಪ್ರತೀಕವಾಗಿರುವ ಧಾರವಾಡದ ಶಾಂತಾದೇವಿ ಮಾಳವಾಡ ೬೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ. ೧೯೧೫ರ ಮೇ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರಥಮ ಸಮ್ಮೇಳನದಿಂದ ಕಳೆದ ವರ್ಷದ ಕನಕಪುರ ಸಮ್ಮೇಳನದವರೆಗಿನ ಸುಮಾರು ಎಂಭತ್ತೈದು ವರ್ಷದ ಸುದೀರ್ಘ ಕನ್ನಡ ಸಾಹಿತ್ಯ ಪರಿಷತ್ತಿನ ಪಯಣದಲ್ಲಿ ಸಮ್ಮೇಳನಗಳ ಅಧ್ಯಕ್ಷ ಪದವಿಗೇರಿದ ಏಕೈಕ ಮಹಿಳೆ ಜಯದೇವಿತಾಯಿ ಲಿಗಾಡೆ. ಅದು ೧೯೭೪ರಲ್ಲಿ ಮಂಡ್ಯದಲ್ಲಿ ನಡೆದ ೪೮ನೇ ಸಮ್ಮೇಳನದಲ್ಲಿ. ಈಗ ಎರಡನೇ ಮಹಿಳೆಯಾಗಿ ಆಯ್ಕೆಯಾಗಿದ್ದಾರೆ ಶಾಂತಾದೇವಿ ಮಾಳವಾಡ. ಅವರಿಗೆ 'ಹೊಸತು' ಶುಭಾಶಯಗಳು.



ಶಾಂತಾದೇವಿ ಮಾಳವಾಡ ೧೯೨೨ರ ಡಿಸೆಂಬರ್ ೧೦ರಂದು ಬೆಳಗಾವಿಯಲ್ಲಿ ಜನಿಸಿದರು. ಅದು ಅವರ ತಾಯಿಯ ತವರು ಮನೆ. ತಂದೆ ಮುರಿಗೆಪ್ಪ ಶೆಟ್ಟಿಯವರ ಊರು ಗದಗ. ಶಾಂತಾದೇವಿ ಹುಟ್ಟಿದ ಎರಡು ವರ್ಷದಲ್ಲಿಯೇ ತಂದೆ ನಿಧನರಾದರು. ತಾಯಿ ಜಯವಂತಿದೇವಿ ಏಕೈಕ ಮಗಳನ್ನು ಕರೆದುಕೊಂಡು ತವರು ಮನೆಯಲ್ಲಿಯೇ ತಮ್ಮ ವೈಧವ್ಯದ ಜೀವನ ಮುಂದುವರೆಸಿದರು. ಹೀಗಾಗಿ ಶಾಂತಾದೇವಿಯವರು ತಮ್ಮ ಬಾಲ್ಯವನ್ನು ಬೆಳಗಾವಿಯಲ್ಲಿಯೇ ಕಳೆದರು. ಧಾರ್ಮಿಕ ಸಂಪ್ರದಾಯಗಳ ವಾತಾವರಣದಲ್ಲಿ ಬೆಳೆದ ಶಾಂತಾದೇವಿ ಬಾಲ್ಯದಲ್ಲೇ ವಿಧವೆಯಾದ ತಾಯಿಯ ವೈರಾಗ್ಯದ ಬದುಕನ್ನು ಕಂಡವರು. ತಾಯಿಯ ತಾಯಿ ನೀಲಗಂಗಮ್ಮ. ಆ ಅಜ್ಜಿಯ ಪ್ರೀತಿ ಇವರ

ಕಥೆ, ಕಾದಂಬರಿ, ಜೀವನ ಚರಿತ್ರೆ, ಭಾಷಾಂತರ, ಸಂಕಲನ, ಹೀಗೆ ಸಾಹಿತ್ಯ ಕ್ಷೇತ್ರದಲ್ಲಿ ಸುಮಾರು ನಲವತ್ತು ಗ್ರಂಥಗಳನ್ನು ಪ್ರಕಟಿಸಿದ್ದಾರೆ. **ಕೆಳದಿಯ ಚನ್ನಮ್ಮ** ಎಂಬ ಮಕ್ಕಳ ಪುಸ್ತಕದಿಂದ ಹಿಡಿದು **ಮೊಗ್ಗೆಯ ಮಾಲೆ, ಕುಂಕುಮ ಬಲ, ಅಕ್ಕನ ಸೌರಭ**ದಂಥ ಕಥಾ ಸಂಕಲನಗಳು, **ಬಸವ ಪ್ರಕಾಶ, ದಾನ ದಾಸೋಹಿ ದಾನಮ್ಮ, ಶೂರರಾಣಿ ಕೆಳದಿ ಚೆನ್ನಮ್ಮಾಜಿ** ಇಂಥ ಕಾದಂಬರಿಗಳು, ಇವಲ್ಲದೆ ನಾಡು-ನುಡಿ, ಮಹಿಳೆ, ವಚನಕಾರರು, ಕುಟುಂಬ, ಆಧ್ಯಾತ್ಮ ಹೀಗೆ ಹಲವಾರು ವಿಷಯ ಕುರಿತು ಸಾಹಿತ್ಯ ರಚನೆ ಮಾಡಿದ್ದಾರೆ. ೧೯೫೧ರಿಂದ ಆರಂಭವಾದ ಇವರ ಸಾಹಿತ್ಯ ಕೃಷಿ ಇಂದಿನವರೆಗೆ ನಿರಂತರವಾಗಿ ನಡೆದುಬಂದಿದೆ. ಶ್ರೀಕಂಠಯ್ಯ, ಮಾಸ್ತಿ, ಸೀತಾರಾಮಯ್ಯ, ಮುಗಳಿ, ಗೋಕಾಕ ಇಂಥ ಹಿರಿಯ ಸಾಹಿತಿಗಳ ಜೊತೆ ಆತ್ಮೀಯ ಒಡನಾಟ ಹೊಂದಿದ ಹಿರಿಯ ಅಜ್ಜಿ ಮಹಿಳೆಯರ ಸಾಧನೆಯ ಸಂಕೇತವಾಗಿ ನಮ್ಮ ಮುಂದಿದ್ದಾರೆ.

೧೯೮೦ರ ಆಗಸ್ಟ್ ತಿಂಗಳಲ್ಲಿ ಮಾಳವಾಡರ ನಿಧನಾನಂತರ ಶಾಂತಾದೇವಿಯವರು ಹೆಚ್ಚಾಗಿ ತಮ್ಮನ್ನು ಸಾರ್ವಜನಿಕ, ಸಾಹಿತ್ಯಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಅಖಿಲ ಕರ್ನಾಟಕ ಲೇಖಕಿಯರ ಸಂಘ, ಉತ್ತರ ಕರ್ನಾಟಕ ಲೇಖಕಿಯರ ಸಂಘ ಇಂಥ ಸಾಹಿತ್ಯ

ಸಹಬಾಳ್ವೆ ಬದುಕಿನ ಗುರಿಯಾಗಬೇಕು

ಬೆಳವಣಿಗೆಗೆ ಸ್ಫೂರ್ತಿ ತುಂಬಿದೆ. ಪ್ರಾಥಮಿಕ ಅಭ್ಯಾಸ ಮುಗಿಸಿ ಹೈಸ್ಕೂಲು ಮೆಟ್ಟಿಲು ಏರುವುದರೊಳಗಾಗಿ ಮದುವೆ ಸಿದ್ಧತೆ ನಡೆದಿದೆ. ಇವರು ಹೈಸ್ಕೂಲ್ ಎರಡನೇ ವರ್ಷ ಓದುವಾಗ, ಅಂದರೆ ಹದಿನಾಲ್ಕನೇ ವಯಸ್ಸಿನಲ್ಲಿಯೇ, ಧಾರವಾಡದ ಎಸ್. ಎಸ್. ಮಾಳವಾಡರೊಡನೆ ಮದುವೆ ನಿಶ್ಚಯವಾಯಿತು. ಮುಂದೆ ಆರು ತಿಂಗಳಲ್ಲಿ ಮದುವೆಯಾಗಿ ವಿದ್ಯಾಭ್ಯಾಸ ಬದಿಗಿಟ್ಟು ಧಾರವಾಡಕ್ಕೆ ಬಂದು ಗೃಹಿಣಿಯಾದರು ಶಾಂತಾದೇವಿ ಮಾಳವಾಡ.

ಸಾಹಿತಿ, ವಿದ್ವಾಂಸ ಎಸ್. ಎಸ್. ಮಾಳವಾಡ ಅವರ ಮನೆ ವೈಚಾರಿಕ ವಾತಾವರಣದಿಂದ ತುಂಬಿತ್ತು. ಹೀಗಾಗಿ ಸಾಹಿತಿ, ಬುದ್ಧಿಜೀವಿಗಳ ಒಡನಾಟದ ಆ ಮನೆ ಸಹಜವಾಗಿಯೇ ಶಾಂತಾದೇವಿಯವರನ್ನು ಸಾಹಿತ್ಯಿಕ ಚಿಂತನೆಗೆ ಹಚ್ಚಿದೆ. ಪತಿ ಎಸ್. ಎಸ್. ಮಾಳವಾಡರು ಪತ್ನಿಯ ಭಾವನೆಗಳಿಗೆ ಅಡ್ಡಿಯಾಗದೇ ಸಹಕಾರ ನೀಡಿದರು. ಈ ಹಿನ್ನೆಲೆಯಲ್ಲಿ ಶಾಂತಾದೇವಿಯವರೊಳಗಿನ ಲೇಖಕಿ, ಚಿಂತಕಿ, ಸಂಘಟಕಿ ಮೂರ್ತರೂಪ ಪಡೆದು ಕ್ರಿಯಾಶೀಲರಾಗಿದ್ದಾರೆ.

೧೯೪೮ರಲ್ಲಿ ಧಾರವಾಡದ ಮಾಳಮಡ್ಡಿ ಅಕ್ಕನ ಬಳಗದ ಸಂಘಟನೆಯ ಕೆಲಸಕ್ಕೆ ತೊಡಗಿ ಮುಂದೆ ಜಿಲ್ಲಾ ಮಹಿಳಾ ಮಂಡಲಗಳ ನಾಯಕತ್ವ ವಹಿಸಿ ದುಡಿದರು. ೧೯೫೯ರಲ್ಲಿ ಅಖಿಲ ಭಾರತ ಮಹಿಳಾ ಪರಿಷತ್ತಿನ ಧಾರವಾಡ ಜಿಲ್ಲಾ ಸಂಘಟಕಿಯಾಗಿ ಕೆಲಸ ಮಾಡಿದರು. ಹೀಗೆ ಸಾರ್ವಜನಿಕ ಬದುಕಿನಲ್ಲಿ ಕಾಲಿಟ್ಟ ಶಾಂತಾದೇವಿಯವರು ರಾಜ್ಯದ, ರಾಷ್ಟ್ರದ ಹಲವಾರು ಸಾಹಿತ್ಯಿಕ, ಸಾಮಾಜಿಕ ಸಂಘಟನೆಗಳಲ್ಲಿ ದುಡಿದವರು. ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷೆಯಾಗಿ (೧೯೭೪-೭೮), ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯೆಯಾಗಿ (೧೯೭೩-೭೮), ರಾಜ್ಯ ಸಾಹಿತ್ಯ ಅಕಾಡೆಮಿ ಸದಸ್ಯೆಯಾಗಿ (೧೯೮೬-೯೧) ಹೀಗೆ ನಾಡಿನ ಹಲವಾರು ಸಂಘಟನೆಗಳಲ್ಲಿ ಕೆಲಸ ಮಾಡಿ ಅನುಭವ ಪಡೆದವರು.

ಸಂಘಟನೆಗಳಲ್ಲಿ ತೊಡಗಿಕೊಂಡು ಲೇಖಕಿಯರ ಸಮೂಹವನ್ನು ಬೆಳೆಸುತ್ತಾ ತಾವೂ ಬೆಳೆಯುತ್ತ ಬಂದವರು ಶಾಂತಾದೇವಿಯವರು. ಮಾಧ್ಯಮಿಕ ಶಾಲೆಯನ್ನೂ ಮುಗಿಸದೇ ಬಾಲ್ಯದಲ್ಲಿಯೇ ಮದುವೆಯಾಗಿ, ಸಿಕ್ಕ ಸಮಯ ಮತ್ತು ಅವಕಾಶಗಳನ್ನು ಬಳಸಿಕೊಂಡು ಸಾಹಿತ್ಯ ಕೃಷಿ ಮಾಡಿದ ಶಾಂತಾದೇವಿ ಮಾಳವಾಡ ಇಂದು ಅತ್ತಿಮಬ್ಬೆ ಪ್ರಶಸ್ತಿ, ಅನುಪಮಾ ಪ್ರಶಸ್ತಿ ಪಡೆದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಗೇರಿದ ಸಾಹಸಿ ಮಹಿಳೆ. ಧಾರವಾಡದ ಕಲ್ಯಾಣ ನಗರದ 'ಪ್ರಶಾಂತ'ದಲ್ಲಿ ಶಾಂತನಿವಾಸಿಯಾಗಿರುವ ಈ ಶಾಂತಜ್ಜಿ 'ಹೊಸತು' ಜೊತೆ ಮನಬಿಚ್ಚಿ ಮಾತನಾಡಿದ್ದಾರೆ.

ಹೊಸತು : ಅಜ್ಜಿ , ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಆದಾಗ ಏನನ್ನಿಸ್ತು?

ಶಾಂತಾದೇವಿ : ಏನನ್ನಸ್ತದ..... ಖುಷಿ ಆತು. ನನಗ ಅನ್ನೂಕಿಂತಾ ಮಹಿಳೆಯರಿಗಿ ಈ ಸಲಾ ಕೊಡಬೇಕೂ ಅಂತ ಕೊಟ್ಟಾರ.

ಹೊ : ಅಂದ್ರ ಮಹಿಳೆಯರಿಗೆ ಮೀಸಲಾತಿ ಬೇಕು ಅಂತ ರಿಯಾಯಿತಿ ಕೇಳತೀರೇನು?

ಶಾಂ : ಹಂಗೇನಿಲ್ಲ, ರಿಯಾಯಿತಿ ಯಾಕ ಬೇಕು? ಮಹಿಳೆಯರೂ ಸಾಕಷ್ಟು ಕೆಲಸಾ ಮಾಡ್ಯಾರ. ಅವರ ಕೆಲಸ ಗುರ್ತಿಸಿ ಕೊಡಬೇಕು.

ಹೊ : ಈಗ ನಿಮ್ಮ ಸಾಧನೆಯ ಮೇಲೆಯೇ ನಿಮಗ ಈ ಸ್ಥಾನ ದೊರಕೇದಂತ ಸಮಾಧಾನ ಐತಿ ನಿಮಗ?

ಶಾಂ : ಹೌದು. ಆ ಕಾಲದಿಂದ ಬರೀತಿದೀವಿ. ನಾನು ಸರಸ್ವತಿಗೌಡ ಆವಾಗ ಬರೀಲಾಕ ಆರಂಭಿಸಿದ್ವಿ. ಈಗ ಸರಸ್ವತಿ ಇಲ್ಲ, ನಾನೊಬ್ಬಾಕಿ ಉಳಿದೀನಿ.

ಹೊ : ನಿಮ್ಮ ಬಾಲ್ಯದೊಳಗ ನಿಮ್ಮ ಕ್ರಿಯಾಶೀಲ ಮನಸಿನ ಮೇಲೆ ಆದ ಪ್ರಭಾವಗಳ್ಯಾವವು?

ಸಂದರ್ಶನ : ಡಾ|| ಸಿದ್ಧನಗೌಡ ಪಾಟೀಲ

ಶಾಂ : ನಮ್ಮದು ಸಂಪ್ರದಾಯಸ್ಥ ಮನಿತನ. ನಮ್ಮಪ್ಪ ನಾ ಎರಡ ವರ್ಷದಕ್ಕಿದ್ದಾಗ ತೀರಿಕೊಂಡ. ನಾನ

ಮೊದಲನೇ ಮಗಳು. ವಿಧವೆಯಾದ ನನ್ನ ತಾಯಿಯ ವೈರಾಗ್ಯ ಜೀವನ ನನ್ನ ಮ್ಯಾಲೆ ದೊಡ್ಡ ಪರಿಣಾಮ ಮಾಡಿತು. ನನ್ನಜ್ಜಿ , ಅಂದ್ರ ನನ್ನ ತಾಯಿಯ ತಾಯಿ ನೀಲಗಂಗಮ್ಮ, ನನ್ನ ಭಾಳ ಕಾಳಜಿಯಿಂದ ಬೆಳೆಸಿದ್ಲು. ಇನ್ನೊಂದು ಘಟನೆ ಐತಿ. ನನ್ನ ಅಜ್ಜಿಯ ತಂಗಿ ಶಿವಗಂಗವ್ವ ಅಂತ ಇದ್ಲು. ಆಕಿ ಹೆರಿಗೆ ಸಲುವಾಗಿ ತವರ ಮನೀಗಿ ಬಂದಾಗ ಆಕಿ ಗಂಡ ಬೇರೆ ಹೆಣ್ಣಿನ ಜೊತೆ ಸಂಬಂಧ ಇಟಗೊಂಡ. ಇದನ್ನು ಕೇಳಿದ ಶಿವಗಂಗವ್ವ ಗಂಡನ ಮನೀಗಿ ಹೋಗ್ದೆ ಇಲ್ಲೇ ಉಳದಳು. ಆದರೆ ಆಕಿ ತಾಳ್ಮೆ, ಸಹನೆ, ಶಾಂತತೆ ಇವೆಲ್ಲ ಆಗ ನನ್ನ ಮ್ಯಾಲ ಭಾಳ ದೊಡ್ಡ ಪರಿಣಾಮ ಮಾಡಿದ್ವು.

ಹೊ : ಹದಿನಾಲ್ಕ ವರ್ಷಕ್ಕ ಮದಿವಿ ಆದ್ರಿ. ಆಗ ನಿಮಗ ಇನ್ನೂ ಓದಬೇಕು ಅನ್ನಿಸಲಿಲ್ಲಾ?

ಶಾಂ : ಅನ್ನಿಸ್ತಿತ್ತು. ಆದರೇನ ಮಾಡೂದು, ಆಗಿನ ಕಾಲದಾಗ ಹಂಗ. ಹುಡುಗಿ ಸ್ವಲ್ಪ ದೊಡ್ಡಾಕಿ ಆದಗಳೀನ ಮದಿವಿ ಮಾಡಿಬಿಡ್ತಿದ್ರು. ನನಗ ಹದಿನಾಲ್ಕು ವರ್ಷಕ್ಕ ನಿಶ್ಚಯ ಮಾಡಿದ್ರು. ಮುಂದ ಆರು ತಿಂಗಳದಾಗ ಮದಿವಿ ಗೊತ್ತ ಮಾಡಿದ್ರು. ಮಾಳವಾಡರು ಆಗ ನನಗ ಹಲವಾರು ಪುಸ್ತಕಾ ಕಳಸ್ತಿದ್ರು ಧಾರವಾಡದಿಂದ. ಡಾಲ್ಸ ಹೌಸ್ (ಸೂತ್ರದ ಗೊಂಬೆ) ಇಂಥಾ ಪುಸ್ತಕಾ ಕಳಸ್ತಿದ್ರು. ಮುಂದ ಮದಿವಿ ಆತು. ಆಗ ನನಗ ಹದಿನಾಲ್ಕು ವರ್ಷ, ಮಾಳವಾಡರಿಗಿ ಇಪ್ಪತ್ತಾರು ವರ್ಷ.

ಹೊ : ನಿಮ್ಮ ಬಾಲ್ಯದೊಳಗ ಸ್ವಾತಂತ್ರ್ಯ ಹೋರಾಟದ ಅನುಭವ ಏನರ ಐತಿ?

ಶಾಂ : ಹೂಂ, ಸಣ್ಣವರಿದ್ದಾಗ ಪ್ರಭಾತ ಫೇರೀಗಿ ಹೋಗತಿದ್ವಿ ಅಷ್ಟೆ. ಆದರ ೧೯೪೭ರೊಳಗ ಒಮ್ಮೆ ಬಾಂಬೇಕ್ ಹೋಗಿದ್ವಿ. ಸಂಬಂಧಿಕರ ಮನೀಗಿ. ಆಗ ಗಾಂಧೀ ಬಂದಾರಾ ಅಂದ್ರು, ನೋಡಾಕ ಹೋದ್ವಿ. ಲಕ್ಷಾಂತರ ಜನಾ. ಗದ್ದಲೋ ಗದ್ದಲ. ಮೈಕ್‌ನ್ಯಾಗ ಹೇಳ್ತಿದ್ರು ಗದ್ದಲ ಮಾಡಬ್ಯಾಡ್ರಿ ಶಾಂತರಾಗಿರಿ ಅಂತ. ಯಾರ ಕೇಳಬೇಕು. ಸ್ವಲ್ಪ ಹೊತ್ತಿನ ನಂತರ ಗಾಂಧೀಜಿ ಬಂದ್ರು. ಸುಮ್ಮನೆ ಒಂದು ಬಟ್ಟು ಮುಂದ ಮಾಡಿ ಶಾಂತರಾಗಿರಿ ಅಂತ ಸೂಚನಾ ಕೊಟ್ಟರು. ಇಡೀ ಲಕ್ಷಾಂತರ ಜನ ಶಾಂತವಾದರು. ಒಂದು ಸೂಜಿ ಬಿದ್ದರೂ ಸಪ್ಪಳ ಆಗ್ತಿತ್ತು. ಗಾಂಧೀಜಿ ಒಂದು ಮಾತ ಮಾತಾಡದ ಇಡೀ ಸಭಾ ಶಾಂತ ಮಾಡಿದ್ರು. ಅದು ನನ್ನ ಮ್ಯಾಲೆ ಭಾಳ ದೊಡ್ಡ ಪರಿಣಾಮ ಮಾಡೇದ.

ಹೊ : ನಿಮ್ಮ ಸಾಹಿತ್ಯಿಕ ಚಿಂತನೆಗೆ ಪ್ರಭಾವ ಏನು?

ಶಾಂ : ಮೊದಲನೇದಾಗಿ ನಮ್ಮ ಮನಿ ವಾತಾವರಣ. ಅಂದ್ರ ನಮ್ಮ ಮನಿಯವರ ಪ್ರಭಾವ ಏನಿಲ್ಲ. ಆವರದು ಯಾವತ್ತೂ ಗಂಭೀರ ಚಿಂತನೆ. ನನಗ ಅಂಥಾ ಗಾಂಭೀರ್ಯ ಒಗ್ಗಿದ್ದಿಲ್ಲ. ಆದರ ನಮ್ಮ ಮನಿಗೆ ಹಲವಾರು ಜನಾ ಸಾಹಿತಿಗಳು ಬರ್ತಿದ್ರು. ಮಾಳವಾಡರು ನನಗ ಬೇರೆ ಬೇರೆ ಪುಸ್ತಕಾ ಓದಾಕ ತಂದಕೊಡತಿದ್ರು. ಇಂಥಾ ವಾತಾವರಣದಾಗ ನಾನು ಮೊದಲು ಕತಿ ಬರೀಯಾಕ ಶುರುಮಾಡಿದೆ. ನನ್ನ ಮೊದಲನೆ ಕಥಾ ಸಂಕಲನ **ಮೊಗ್ಗೆಯ** **ಮಾಲೆ**. ಅದಕ ಮುಗಳಿಯವರು. ಮಾಸ್ತಿಯವರು ಮುನ್ನುಡಿ ಬರೆದು ಬೆಂಬಲಿಸಿದರು.

ಹೊ : ನಿಮಗ ತೃಪ್ತಿ ತಂದ ನಿಮ್ಮ ಕೃತಿಗಳ್ಯಾವವು?

ಶಾಂ : **ಬಸವ ಪ್ರಕಾಶ** ಕಾದಂಬರಿ. ಅದನ್ನ ಬರಿಯಾಕ ನಾನು ಭಾಳ ಕಷ್ಟಾಪಟ್ಟೆ. ಒಂದು ಪವಾಡ, ಮೂಢನಂಬಿಕೆಯಿಂದ ತುಂಬಿದ್ದ ಬಸವಣ್ಣನವರ ಕುರಿತ ಕಥೆಗಳಿಗೆ ಬದಲಾಗಿ ವಾಸ್ತವ ವಿಷಯ ಹೇಳಬೇಕಿತ್ತು. ಅಂಥ ಒಂದು ಪ್ರಯತ್ನಾ ನಾನು ಮಾಡಿದೀನಿ. ಅದೇ ರೀತಿ **ಶೂರರಾಣಿ ಕೆಳದಿ ಚನ್ನಮ್ಮಾ** ಅನ್ನೂ ಕಾದಂಬರಿ. ಇವು ತೃಪ್ತಿ ತಂದ ಕೃತಿಗಳು.

ಹೊ : ಇಂದಿನ ಸ್ತ್ರೀವಾದಿ ಚಿಂತನೆ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಶಾಂ : ಸ್ತ್ರೀವಾದಿ ಅನ್ನೊ ಶಬ್ದಾ ನಾನು ಒಪ್ಪೂದಿಲ್ಲ. ಅದು ಸಮಾನತೆಯನ್ನು ಸೂಚಿಸೂದಿಲ್ಲ, ಪ್ರತ್ಯೇಕತೆಯನ್ನು ಹೇಳ್ತದ. ಬದುಕಿಗೆ ಸ್ಪರ್ಧಾ ಇರಬಾರದು. ಸಹಬಾಳ್ವೆ ಬದುಕಿನ ಗುರಿ ಆಗಬೇಕು. ಪಾಶ್ಚಾತ್ಯ ಪರಿಕಲ್ಪನೆಯ ಸ್ವಾತಂತ್ರ್ಯವನ್ನು ನಾನು ಒಪ್ಪೂದಿಲ್ಲ. ಸಮಾನತೆ ಸಹಬಾಳ್ವೆಯ ಸ್ವಾತಂತ್ರ್ಯದ ಆಶಯವನ್ನು ನಾನು ಬಯಸ್ತೀನಿ.

ಹೊ : ಇಂದಿನ ಮಹಿಳಾ ಸಾಹಿತ್ಯದ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಶಾಂ : ಇಂದಿನ ಲೇಖಕಿಯರು ಪ್ರತಿಭಾವಂತರದಾರ. ಆದರೆ ಯಾಕೋ ಆಳ ಮತ್ತು ಅನುಭವ ಕಡಿಮಿ ಅನಸ್ತದ. ಅಧ್ಯಯನ ಇನ್ನೂ ಬೇಕು. ಸಾಮಾಜಿಕ ಅನುಭವ ಕೊರತೆ, ಭಾವನಾತ್ಮಕತೆ ಜಾಸ್ತಿ, ಅನಸ್ತದ.

ಹೊ : ಈ ಮಾತುಗಳನ್ನು ಒಟ್ಟು ಸಾಹಿತ್ಯ ಕ್ಷೇತ್ರಕ್ಕೂ ಅನ್ವಯಿಸಬಹುದಲ್ಲ?

ಶಾಂ : ಹೌದು. ಮೊದಲ ಮಹಿಳೆಯರಿಗಿ ಶಿಕ್ಷಣ ಇರಲಿಲ್ಲ. ಸಾಮಾಜಿಕ ಅನುಭವದ ಕೊರತೆ ಇತ್ತು. ಆದರ ಈಗ ಸ್ತ್ರೀಯರ ಬದುಕು, ಅನುಭವ ಗಮನಿಸಿದರ ಪ್ರತ್ಯೇಕವಾಗಿ ಸ್ತ್ರೀ ಸಾಹಿತ್ಯ ನೋಡುವ ಅವಶ್ಯಕತೆ ಇಲ್ಲ.

ಅನುಪಮಾ, ಎಂ. ಕೆ. ಇಂದಿರಾ, ತ್ರಿವೇಣಿ ಇವರೆಲ್ಲ ಮಾಡಿದ ಸಾಧನೆ ಅಪಾರ. ಇಂಥ ಅನುಭವ ವಿಸ್ತಾರ ಆಳವನ್ನು ಒಟ್ಟಾರೆ ಸಾಹಿತ್ಯ ಕ್ಷೇತ್ರ ಪಡೀಬೇಕು.

ಹೊ : ಕನ್ನಡ ಭಾಷೆಯ ಬೆಳವಣಿಗೆ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಶಾಂ : ಭಾಳ ಕೆಟ್ಟ ಅನಸ್ತದ. ಕನ್ನಡ ಮರೀಲಿಕ್ಕ ಹತ್ತಿದೀವಿ. ಪಾಶ್ಚಾತ್ಯ ಸಂಸ್ಕೃತಿ, ಇಂಗ್ಲಿಷ್ ಇವೆಲ್ಲ ಪ್ರಗತಿಯ ಸಂಕೇತ ಅಂತ ತಿಳಕೊಂಡಾರಾ. ಎಲ್ಲಾ ಆಂಟಿ- ಅಂಕಲ್ ಸಂಸ್ಕೃತಿ. ಈ ಆಂಟಿ-ಅಂಕಲ್ ಶಬ್ದಾ ನೋಡ್ರಿ ನಮ್ಮ ಕಾಕಾ. ಚಿಕ್ಕಪ್ಪ, ಚಿಗವ್ವ, ಮಾವ, ಅತ್ತಿ ಇಂಥಾ ಎಲ್ಲಾ ಸಂಬಂಧ ಸೂಚಕ ಪದಗಳನ್ನು ಹೊಡ ಹಾಕ್ಯಾವು. ಆದರ ಜೊತೀನ ಸಂಬಂಧಗಳು ಸಹಿತ ದೂರ ಆಗ್ತಾ ಇದಾವು.

ಹೊ : ಇದಕ ಪರ್ಯಾಯ ಏನು ಅನಸ್ತದ ನಿಮಗ?

ಶಾಂ : ಶಾಲೆಗಳಲ್ಲಿ ಈ ಕೆಲಸ ನಡೀಬೇಕು. ಪಾಲಕರು ಶಿಕ್ಷಕರು ಜವಾಬ್ದಾರಿಯಿಂದ ನಮ್ಮ ಭಾಷೆ ಸಂಸ್ಕೃತಿ ಉಳಸೂ-ಬೆಳಸೂ ಕೆಲಸಾ ಮಾಡಬೇಕು. ಇವತ್ತಿನ ಟಿ.ವಿ. ಸಂಸ್ಕೃತಿ ನಮ್ಮನ್ನು ಪೂರ್ತಿ ಹಾಳ ಮಾಡ್ತಾ ಐತಿ. ಹೆಣ್ಮಕ್ಕಳು ಅಂದ್ರ ಬರೀ ಜಾಹಿರಾತಿಗೆ ತೋರಿಸೂ ಗೊಂಬಿ ಅಂತ ತಿಳಕೊಂಡಾರ. ಹೆಣ್ಮಕ್ಕಳು ದುಡಿಯೂದು ಅನಿವಾರ್ಯ ಐತಿ. ಆದರ ಅವರ ಅನಿವಾರ್ಯತೆನ ಸಮಾಜ ದುರುಪಯೋಗ ಮಾಡ್ಕೋತದ.

ಹೊ : ಕನ್ನಡ ಅಭಿವೃದ್ಧಿ ಹೆಂಗ ಆಗಬೇಕು ಅಂತ ನಿಮ್ಮ ಅಭಿಪ್ರಾಯ?

ಶಾಂ : ಸರಕಾರ, ಜನ ಮತ್ತು ಯುವಕರು ಸೇರಿ ಯೋಚಿಸಬೇಕು. ಕನ್ನಡದ ಸಲುವಾಗಿ ಜನ ಚಳುವಳಿ ರೂಪಿಸಬೇಕು. ಪಾಶ್ಚಾತ್ಯ ಸಂಸ್ಕೃತಿಗಿ ಪರ್ಯಾಯವಾಗಿ ಈ ನಾಡಿನ ಸಂಸ್ಕೃತಿ ರೂಪಿಸಬೇಕು. ಈ ನಾಡಿನ ಜನರ ಬದುಕು ಶ್ರೀಮಂತ ಆಗಬೇಕು. ಆವಾಗ ಈ ನಾಡಿನ ಭಾಷೇನೂ ಶ್ರೀಮಂತ ಆಗತದ.


ಶಾಂತಾದೇವಿ ಮಾಳವಾಡ

'ಪ್ರಶಾಂತ', ವಿನಾಯಕ ಕ್ರಾಸ್, ಪ್ರೊ|| ಮಾಳವಾಡ ಮಾರ್ಗ, ಕಲ್ಯಾಣನಗರ ಧಾರವಾಡ

ಡಾ|| ಸಿದನಗೌಡ ಪಾಟೀಲ

ದೃಷ್ಟಿ ಭ್ರಮೆ

'X' ಗುರುತಿನಿಂದ ಆಗುವ ಏರುಪೇರು



ಮೇಲಿನಿಂದ ಚಿತ್ರದಲ್ಲಿರುವ 'X' ಗುರುತನ್ನೇ ಗಮನವಿಟ್ಟು ನೋಡಿದಾಗ ಎಡಭಾಗದ ಚೌಕದಲ್ಲಿರುವ ಚುಕ್ಕೆಗಳು **ಸಾಲಿನಂತಿರುವಂತೆ** ಕಾಣಿಸಿದರೆ ಬಲಭಾಗದ ಚೌಕದಲ್ಲಿರುವ ಚುಕ್ಕೆಗಳು ಕಂಬಗಳ ಆಕೃತಿಯಲ್ಲಿರುವಂತಿವೆ.

ವಿವರಣೆ : ಇದು ವಿಚಿತ್ರ ; ಆದರೂ ನಿಜ

ಆರೋಗ್ಯಾಭಿವೃದ್ಧಿ

ವಿಶ್ವ ಆರೋಗ್ಯ ಸಭೆಯ ೯೯ನೇ ಅಧಿವೇಶನದಲ್ಲಿ ನೊಬೆಲ್ ಪುರಸ್ಕಾರ ವಿಜೇತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಮಾಡಿದ್ದ ಆಶಯ ಭಾಷಣ.

ನಾನು ಚರ್ಚಿಸಬೇಕೆಂದಿರುವ ವಿಷಯ ''ಆರೋಗ್ಯ ಹಾಗೂ ಬೆಳವಣಿಗೆಗೆ ಇರುವ ಸಂಬಂಧ''. ಇದೊಂದು ಜಟಿಲ ಸಮಸ್ಯೆ. ಒಂದು ದೃಷ್ಟಿಯಲ್ಲಿ ನೋಡಿದರೆ ಈ ಪ್ರಶ್ನೆಗೆ ಸುಲಭ ಉತ್ತರ ಹೊಳೆಯುತ್ತದೆ. ಜನರ ಆರೋಗ್ಯ ಸುಧಾರಣೆಯೇ ಪ್ರಗತಿಯ ಪ್ರಧಾನ ಧ್ಯೇಯ ಎಂಬುದನ್ನು ಸಾರ್ವತ್ರಿಕವಾಗಿ ಜಗತ್ತಿನಾದ್ಯಂತ, ಎಲ್ಲರೂ ಒಪ್ಪಿಕೊಳ್ಳಲೇ ಬೇಕಾದ ವಿಷಯ. ಆದರೆ ಈ ಪ್ರಾಥಮಿಕ ಜ್ಞಾನ ನಮ್ಮನ್ನು ಹೆಚ್ಚು ದೂರ ಒಯ್ಯಲಾರದು. ನಾವು ಇನ್ನೂ ಅನೇಕ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಪ್ರಗತಿಯ ಧ್ಯೇಯಗಳ ಪೈಕಿ ಆರೋಗ್ಯ ಎಷ್ಟು ಮಹತ್ವದ್ದು? ವಾರ್ಷಿಕ ತಲಾ ಆದಾಯ ಹೆಚ್ಚಿಸುವ ಮೂಲಕ ಆರ್ಥಿಕ ಪ್ರಗತಿ ಸಾಧಿಸಿದ್ದೇ ಆದರೆ ಜನಾರೋಗ್ಯವನ್ನು ಸಾಧಿಸಲು ಆರ್ಥಿಕ ಬೆಳವಣಿಗೆ ಸಾಕೇ? ಅಥವಾ ಆರ್ಥಿಕ ಬೆಳವಣಿಗೆಯಿಂದ ಭಿನ್ನವಾದ ಗುರಿ ಆರೋಗ್ಯ ಸುಧಾರಣೆಯದ್ದೇ? ಬೆಳವಣಿಗೆಯು ಎಲ್ಲ ಒಳ್ಳೆಯ ವಿಷಯಗಳನ್ನು ಒಳಗೊಂಡಿದೆಯೇ ಅಥವಾ ಅಲ್ಲಿಯೂ ಯಾವುದಕ್ಕೆ ಆದ್ಯತೆ ನೀಡಬೇಕೆಂಬುದನ್ನು ಹುಡುಕಾಡಬೇಕೆ? ನಮ್ಮ ಕಾಳಜಿಯಾದ ಸಮಾನತೆಯು ಎಷ್ಟರಮಟ್ಟಿಗೆ ಆರೋಗ್ಯ ಪಾಲನೆಯಲ್ಲಿ ಬಿಂಬಿತವಾಗಿದೆ?

ಸಮೃದ್ಧಿಗೂ, ಆರೋಗ್ಯ, ದೀರ್ಘಾಯುಷ್ಯ ಹಾಗೂ ಇತರ ಸಾಧನೆಗೂ ಸಂಬಂಧವಿದೆ ಎನ್ನಬಹುದು. ಆದರೆ ಇನ್ನೊಂದು ರೀತಿ ನೋಡಿದರೆ ಈ ಸಂಬಂಧ ಬಲವಾದು ದೇನಲ್ಲ ಹಾಗೂ ಆ ಸಂಬಂಧವು ಇನ್ನೂ ಕೆಲವು ವಿಷಯಗಳನ್ನು ಅವಲಂಬಿಸಿದೆ. ಇಲ್ಲಿ ಮುಖ್ಯ ವಿಷಯ ಅಜರಾಮರರಾಗುವುದಲ್ಲ; ನೋವು ಬಾಧೆಗಳಿಲ್ಲದೆ ಸ್ವಚ್ಛಂದ ಬಾಳನ್ನು ಆಜೀವಪರ್ಯಂತ ನಡೆಸುವುದು.

ಸಂಪತ್ತು ನಮಗೆ ಸುದೀರ್ಘ, ಆರೋಗ್ಯಕರ ಹಾಗೂ ಸುಖಜೀವನ ನಡೆಸಲು ಅನುವುಮಾಡಿಕೊಡುತ್ತದೆ. ಸಂಪತ್ತಲ್ಲದೆ ಇನ್ನೂ ಅನೇಕ ವಿಷಯಗಳು ನಮ್ಮ ಮೇಲೆ ಪರಿಣಾಮ ಬೀರುವ ಕಾರಣ ಕೇವಲ ಸಂಪತ್ತಿನಿಂದಲೇ ಆರೋಗ್ಯ ವರ್ಧಿಸದು. ಆದ್ದರಿಂದ ಬೆಳವಣಿಗೆ ಎಂಬುದು ಸಂಪತ್ತು, ಗಳಿಕೆ, ಒಟ್ಟಾರೆ ರಾಷ್ಟ್ರೀಯ ಉತ್ಪನ್ನ ಹಾಗೂ ಆದಾಯಕ್ಕೆ ಸಂಬಂಧಪಟ್ಟ ವಿಷಯಗಳು ಬೀರುವ ಪ್ರಭಾವವನ್ನು ಮೀರಿದ್ದು.

ಅಮೆರಿಕಾದ ಪ್ರಜೆಗಳಾಗಿರುವ ಆಫ್ರಿಕನ್‌ರ ಸಾಪೇಕ್ಷ ಹಾಗೂ ನಿರಪೇಕ್ಷ ವಂಚನೆ :

ಶ್ರೀಮಂತ ದೇಶದ ಕೆಲವು ಗುಂಪುಗಳು ಅನಭಿವೃದ್ಧ ದೇಶಗಳ ಜನರಿಗಿಂತ ಹೆಚ್ಚು ವಂಚಿತರಾಗಿದ್ದಾರೆ ಎಂಬುದು ಗಮನಾರ್ಹ ಅಂಶ. ಉದಾಹರಣೆಗೆ, ಅಮೆರಿಕದ ಪ್ರಜೆಗಳಾದ ಆಫ್ರಿಕನ್ನರು ಮೂರನೇ ಜಗತ್ತಿನ ಜನರಿಗಿಂತಲೂ (ಚೀನ, ಭಾರತ, ಕೇರಳ, ಶ್ರೀಲಂಕಾ, ಜಮೈಕಾ, ಕೋಸ್ಟಾರಿಕಾ) ಹೆಚ್ಚು ವರ್ಷ ಜೀವಿಸಲು ಅಸಮರ್ಥ ರಾಗಿದ್ದಾರೆ. ಅಮೆರಿಕಾ ಪ್ರಜೆಗಳಾದ ಆಫ್ರಿಕನ್ನರ ತಲಾ ಆದಾಯ ಬಿಳಿ ಅಮೆರಿಕನ್ನರ ಆದಾಯಕ್ಕಿಂತಲೂ ಕಡಿಮೆ ಇದ್ದರೂ, ಚೀನ ಅಥವಾ ಕೇರಳ ಜನರ ಆದಾಯಕ್ಕಿಂತ (ಜೀವನ ವೆಚ್ಚದ ವ್ಯತ್ಯಾಸಕ್ಕೆ ಸರಿಪಡಿಸಿದ ನಂತರವೂ) ಹೆಚ್ಚು. ಈ ಸನ್ನಿವೇಶದಲ್ಲಿ ಅಮೆರಿಕಾವಾಸಿ ಆಫ್ರಿಕನ್ನರ ಹಾಗೂ ಬಡ ಚೀನಿಯರ ಹಾಗೂ ಕೇರಳ ಜನರ ಆಯುಸ್ಸಿನ ಹೋಲಿಕೆ ಕುತೂಹಲಕರವಾಗಿದೆ. ಅದರಲ್ಲೂ ಅಮೆರಿಕಾವಾಸಿ ಆಫ್ರಿಕನ್ನರ ಮಕ್ಕಳ ಮರಣ ಸಂಖ್ಯೆ ಭಾರತ ಅಥವಾ ಚೀನಾದ ಮಕ್ಕಳ ಸಾವಿನ ಸಂಖ್ಯೆಗಿಂತ ಕಡಿಮೆ ಇದ್ದರೂ ಕ್ರಮೇಣ ಪ್ರೌಢರನ್ನು ಪರಿಗಣಿಸಿದಾಗ ಆ ಚಿತ್ರ ಬದಲಾಗುತ್ತದೆ.

ಚೀನದ ಹಾಗೂ ಕೇರಳದ ಗಂಡಸರು ಅಮೆರಿಕದ ಕಪ್ಪು ಜನರಿಗಿಂತ ದೀರ್ಘಾಯುಷಿಗಳು. ಅಮೆರಿಕಾವಾಸಿ ಆಫ್ರಿಕಾದ ಮಹಿಳೆ ಬಡ ಚೀನಾದ ಮಹಿಳೆಯಷ್ಟೇ ಆಯುಸ್ಸು ಹೊಂದಿದ್ದರೂ ಕೇರಳದ ಮಹಿಳೆಗಿಂತ ಅಲ್ಪಾಯುಷಿ. ಅಮೆರಿಕಾ ನಿವಾಸಿ ಆಫ್ರಿಕನ್ನರನ್ನು ಅಮೆರಿಕದ ಬಿಳಿ ಜನಾಂಗಕ್ಕೆ ಹೋಲಿಸಿದಲ್ಲಿ, ತಲಾ ಆದಾಯದಲ್ಲಿ ವಂಚಿತರಾಗಿದ್ದಾರೆ ಮತ್ತು ಕೇರಳದ ಮಹಿಳೆ ಮತ್ತು ಪುರುಷರಿಗೆ ಹಾಗೂ ಚೀನದ ಪುರುಷರಿಗೆ ಹೋಲಿಸಿದಲ್ಲಿ ಆಯುರ್ಮಾನದಲ್ಲಿ ವಂಚಿತರಾಗಿದ್ದಾರೆ.



ಈ ವೈರುಧ್ಯವು ದೊಡ್ಡ ಗುಂಪಾದ ಕೊಲಂಬಿಯಾದ ಅಮೆರಿಕಾವಾಸಿ ಆಫ್ರಿಕನ್ನರಲ್ಲೂ ಕಂಡುಬರುತ್ತದೆ. ಕೊಲಂಬಿಯಾ ಪ್ರಾಂತ್ಯದ ಸೇಂಟ್ ಲೂಯಿಸ್ ನಗರ, ನ್ಯೂಯಾರ್ಕ್ ಅಥವಾ ಸ್ಯಾನ್‌ಫ್ರಾನ್ಸಿಸ್ಕೋದ ಅಮೆರಿಕಾವಾಸಿ ಆಫ್ರಿಕನ್ ಪುರುಷರು, ಚೀನದ ಅಥವಾ ಕೇರಳದ ಪುರುಷರಿಗಿಂತ ಅಲ್ಪಾಯುಷಿಗಳು. ಬೆಳವಣಿಗೆ ಹಾಗೂ ವಿಕಾಸದ ಅಧ್ಯಯನದಲ್ಲಿ ತಲಾ ಆದಾಯವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅಮೆರಿಕವಾಸಿ ಆಫ್ರಿಕನ್ನರು ಚೀನದ ಅಥವಾ ಭಾರತದ ಜನರಿಗೆ ಹೋಲಿಸಿದಲ್ಲಿ ಶ್ರೀಮಂತರಾಗಿದ್ದರೂ ಅಲ್ಪಾಯುಷಿಗಳು. ಇವು ಎದ್ದು ಕಾಣುವ ಉದಾಹರಣೆಗಳು. ಹೀಗಿರುವಾಗ ದೀರ್ಘ ಆಯಸ್ಸು ತಲಾ ಆದಾಯವನ್ನು ಅವಲಂಬಿಸುತ್ತದೆಯೆಂದು ಹೇಗೆ ಹೇಳುವುದು? ಇದು ಯಾವುದೇ ದೇಶದ ವ್ಯಕ್ತಿಗಳಲ್ಲಿ ಹಾಗೂ ಸಮುದಾಯಗಳಲ್ಲಿ ಕಂಡುಬರುವ ಸತ್ಯ. ಇಲ್ಲಿ ಅಸಂಗತತೆಯೇನೂ ಇಲ್ಲ, ತಲಾ ಆದಾಯ ಹೆಚ್ಚಿದ್ದಲ್ಲಿ ಅಕಾಲ ಮರಣ ಹಾಗೂ ಅನಾರೋಗ್ಯವನ್ನು ತಡೆಗಟ್ಟಬಹುದಾಗಿದೆ. ಆದಾಯ ಖಚಿತವಾದ ಪ್ರಭಾವ ಬೀರುತ್ತದೆ. ಆದರೂ ಇತರೇ ವ್ಯತ್ಯಾಸಗಳಾದ ವೈದ್ಯಕೀಯ ಸೌಲಭ್ಯ, ಜನಾರೋಗ್ಯ ರಕ್ಷಣೆ, ಶಿಕ್ಷಣ ಸೌಲಭ್ಯ, ಇರದಿದ್ದಲ್ಲಿ ಶ್ರೀಮಂತನ ಆಯಸ್ಸು ಕಡಿಮೆಯಾಗಬಹುದು ಹಾಗೂ ಬಡಜನರ ಆಯಸ್ಸು ಶ್ರೀಮಂತರಿಗಿಂತ ಹೆಚ್ಚಿಗೆ ಇರಬಹುದು. ಒಳ್ಳೆ ಆರೋಗ್ಯ ಹಾಗೂ ಉಳಿವು ಹೆಚ್ಚು ಆದಾಯ ಗಳಿಕೆಗೆ ಸಹಾಯ ಮಾಡುತ್ತದೆ ಎಂದೂ ಹೇಳಬಹುದು.

ಬೆಳವಣಿಗೆಯಿಂದಾದ ಆರೋಗ್ಯ ವರ್ಧನೆ

ದೀರ್ಘಾಯುಷ್ಯ ಹಾಗೂ ತಲಾ ಆದಾಯದ ಸಂಬಂಧದ ಬಗ್ಗೆ ಒಮ್ಮತ ಇಲ್ಲದಿದ್ದರೂ, ದೇಶದ ಮಟ್ಟದಲ್ಲಿ ಆದಾಯ ಹಾಗೂ ಆಯುಷ್ಯದ ಸಂಬಂಧವನ್ನು ಸಾಧಿಸಬಹುದಾಗಿದೆ. ಈ ಸಾರ್ವತ್ರೀಕರಣದಿಂದ ಕೆಲವರು ಆರ್ಥಿಕ ವಿಷಯಗಳೇ ಆರೋಗ್ಯ ಹಾಗೂ ಆಯುಷ್ಯವನ್ನು ಸುಧಾರಿಸುತ್ತವೆ ಎಂಬ ಸುಲಭ ತೀರ್ಮಾನಕ್ಕೆ ಬರುತ್ತಾರೆ. ದೇಶದೊಳಗಿನ ಅಂಕಿ ಸಂಖ್ಯೆ ಒಂದನ್ನು ನೋಡಿದಲ್ಲಿ ಅದು ಸರಿ ಎನಿಸಬಹುದು. ಆದರೆ ಆರ್ಥಿಕ ವಿಷಯಗಳು ಆರೋಗ್ಯ ಹಾಗೂ ಆಯುಷ್ಯವನ್ನು ಸುಧಾರಿಸುತ್ತವೆ ಅನ್ನುವುದನ್ನು ಸಮರ್ಥಿಸಲು ಇನ್ನೂ ಹೆಚ್ಚು ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಸುಧೀರ್ ಅಹಮದ್ ಹಾಗೂ ಮಾರ್ಟಿನ್ ರೆಸೆಲಿಯಾನ್ ಅವರ ಕೆಲವು ಅಂಕಿ ಸಂಖ್ಯೆಗಳ ವಿಶ್ಲೇಷಣೆ ಆಶ್ಚರ್ಯ ಉಂಟುಮಾಡುತ್ತವೆ. ದೇಶದೊಳಗಿನ ಅಂಕಿ ಸಂಖ್ಯೆಗಳನ್ನು ಹೋಲಿಸಿದಾಗ ಆಯುನಿರೀಕ್ಷಣೆ ಹಾಗೂ ತಲಾ ಒಟ್ಟಾರೆ ರಾಷ್ಟ್ರೀಯ ಉತ್ಪನ್ನಗಳ ನಡುವೆ ನಿರ್ದಿಷ್ಟವಾದ ಸಂಬಂಧವಿದೆ. ಆದರೆ ಈ ಸಂಬಂಧ ಮುಖ್ಯವಾಗಿ ಬಡಜನರ ಆದಾಯ ಹಾಗೂ ಜನಾರೋಗ್ಯದ ಮೇಲೆ ಖರ್ಚಾದ ಒಟ್ಟಾರೆ ರಾಷ್ಟ್ರೀಯ ಉತ್ಪನ್ನವನ್ನು ಅವಲಂಬಿಸುತ್ತದೆ. ಈ ಎರಡು ವ್ಯತ್ಯಯನೀಯ ಅಂಶಗಳನ್ನು ಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದ ಪ್ರಯೋಗದಲ್ಲಿ ಅಳವಡಿಸಿಕೊಂಡಾಗ, ತಲಾ ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ ಅನಿಶ್ಚಿತತೆಯ ಪ್ರಭಾವದ ಹೆಚ್ಚಿನ ವಿವರಣೆಯನ್ನು ದೊರಕಿಸಿಕೊಳ್ಳಬಹುದು. ಇದರರ್ಥ ಆಯು ನಿರೀಕ್ಷಣೆ ಹೆಚ್ಚಳ ತಲಾ ಒಟ್ಟಾರೆ ರಾಷ್ಟ್ರೀಯ ಉತ್ಪನ್ನದ ಹೆಚ್ಚಳದಿಂದ ಆಗುತ್ತದೆ ಎಂದಲ್ಲ, ಅದು ಜನಾರೋಗ್ಯಕ್ಕೆ ಮಾಡುವ ಖರ್ಚು ಹಾಗೂ ಬಡತನ ನಿರ್ಮೂಲನೆಯಿಂದ ಆಗಲು ಸಾಧ್ಯ. ಇದು ಆರ್ಥಿಕ ಬೆಳವಣಿಗೆಯ ಪ್ರತಿಫಲವನ್ನು ಅವಲಂಬಿಸುತ್ತಿದೆ.

ಕನಿಷ್ಠ ಶಿಕ್ಷಣ, ಅಗತ್ಯ ಆರೋಗ್ಯ, ಪ್ರಾಯೋಜಿಕ ಭೂಸುಧಾರಣೆಯನ್ನು ಕೂಡಲೆ ಪೂರ್ಣಗೊಳಿಸುವುದು ಮುಂತಾದವುಗಳನ್ನೊಳಗೊಂಡ ಅನೇಕ ಐತಿಹಾಸಿಕ ಕಾರಣಗಳಿಂದಾಗಿ ಭಾರತವು ಬ್ರೆಜಿಲ್, ಪಾಕಿಸ್ತಾನದಂತಹ ದೇಶಗಳಿಗಿಂತ ಹೆಚ್ಚಾಗಿ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ವ್ಯಾಪಕವಾಗಿ ಆರ್ಥಿಕ ವ್ಯವಹಾರಗಳಲ್ಲಿ ಭಾಗವಹಿಸಲು ಸಾಧ್ಯವಾಯಿತು. ಭಾರತ, ಬ್ರೆಜಿಲ್ ಹಾಗೂ ಪಾಕಿಸ್ತಾನಗಳಲ್ಲಿ ಸಾಮಾಜಿಕ ಅವಕಾಶವನ್ನು ಕಲ್ಪಿಸುವುದು ನಿಧಾನವಾಗಿ ಸಾಗಿದೆ. ಇದರಿಂದಾಗಿ ಆರ್ಥಿಕ ಬೆಳವಣಿಗೆಗೆ ಅಡೆತಡೆಯೂ

ಆಗಿದೆ. ಸಾಮಾಜಿಕ ಅವಕಾಶ ಹೆಚ್ಚಿಸುವುದರಿಂದ ಆರ್ಥಿಕ ಉದ್ಯೋಗ ಮತ್ತು ಆರ್ಥಿಕ ಬೆಳವಣಿಗೆಯು ಸಾಧ್ಯವಾಗಿದೆ ಹಾಗೂ ಆಯುನಿರೀಕ್ಷಣೆ ಹೆಚ್ಚು ಮಾಡಿ ಮರಣ ಸಂಖ್ಯೆ ಕಡಿಮೆ ಮಾಡಿ ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಲಾಗಿದೆ. ಬೇರೆಡೆ ಕೆಲವು ದೇಶಗಳಲ್ಲಿ ತೀರ ಸಾಮಾಜಿಕ ಅಸಮಾನತೆ, ನಿರುದ್ಯೋಗ, ಜನಾರೋಗ್ಯ ಸಾಧನೆಯಲ್ಲಿ ಅಲಕ್ಷ್ಯ ಕಂಡು ಬಂದರೂ ಈ ದೇಶಗಳು ತಲಾ ಒಟ್ಟಾರೆ ರಾಷ್ಟ್ರೀಯ ಆದಾಯದ ಬೆಳವಣಿಗೆಯನ್ನು ಹೊಂದಿವೆ. ಹೆಚ್ಚು ಆರ್ಥಿಕ ಬೆಳವಣಿಗೆಯುಳ್ಳ ದೇಶಗಳ ಜನಾಯುಷ್ಯದ ಹೆಚ್ಚಳ ನಿಧಾನವಾಗಿ ಸಾಗಿದೆ.

ಸಾರ್ವಜನಿಕ ಸರಬರಾಜು, ಕಡಿಮೆ ಆದಾಯ ಸಂಬಂಧಿತ ಬೆಲೆ

ಅಪೇಕ್ಷಿಸಿದ ಅಭಿವೃದ್ಧಿಯನ್ನು ಅನುಸರಿಸಲಾಗುವ ಮಾರ್ಗವು ತಲಾ ನಿಜ ಆದಾಯದ ಕೌತುಕ ಉಂಟು ಮಾಡುವ ಹೆಚ್ಚಳವನ್ನು ಅವಲಂಬಿಸಿದೆ, ಸಾವು ತಡೆಗಟ್ಟುವ ಹಾಗೂ ಜೀವನ ಮಟ್ಟ ಹೆಚ್ಚಿಸುವ ಸಾಮಾಜಿಕ ಸೇವೆಯನ್ನು ಅವಲಂಬಿಸಿದೆ. ಉದಾಹರಣೆಗೆ, ನಾವು ತಲಾ ಒಟ್ಟಾರೆ ರಾಷ್ಟ್ರೀಯ ಉತ್ಪಾದನೆ ಹಾಗೂ ಹುಟ್ಟಿದ ಸಮಯದಲ್ಲಿನ ಆಯುನಿರೀಕ್ಷಣೆಯನ್ನು ಆರು ದೇಶಗಳಲ್ಲಿ (ಚೀನ, ಶ್ರೀಲಂಕಾ, ನಮೀಬಿಯಾ, ಬ್ರೆಜಿಲ್, ದಕ್ಷಿಣ ಆಫ್ರಿಕಾ, ಗೇಬನ್ ಹಾಗೂ ಭಾರತದ ೩.೦ ದಶಲಕ್ಷ ಜನರಿರುವ ಕೇರಳ ರಾಜ್ಯ) ನೋಡೋಣ. ಕಡಿಮೆ ಆದಾಯವಿದ್ದರೂ ಕೇರಳ, ಚೀನ ಹಾಗೂ ಶ್ರೀಲಂಕಾದ ಜನರ ಆಯು ನಿರೀಕ್ಷಣೆ ಶ್ರೀಮಂತ ರಾಷ್ಟ್ರಗಳಾದ ಬ್ರೆಜಿಲ್ ದಕ್ಷಿಣ ಆಫ್ರಿಕಾ ಹಾಗೂ ನಮೀಬಿಯಾಗಿಂತ ಹೆಚ್ಚಿದೆ. ನಾವು ಕೇರಳ, ಚೀನಾ ಹಾಗೂ ಶ್ರೀಲಂಕಾವನ್ನು ಬ್ರೆಜಿಲ್, ದಕ್ಷಿಣ ಆಫ್ರಿಕಾ, ನಮೀಬಿಯಾ ಹಾಗೂ ಗೇಬನ್‌ಗೆ ಹೋಲಿಸಿದಾಗ ಅಸಮಾನತೆಯ ಮಾರ್ಗದರ್ಶಿ ಸಹ ವಿರುದ್ಧ ದಿಕ್ಕಿನಲ್ಲಿದೆ. ಆಯು ನಿರೀಕ್ಷಣೆಯ ಬದಲಾವಣೆಗಳು ಅನೇಕ ಸಾಮಾಜಿಕ ಅವಕಾಶಗಳನ್ನು ಅವಲಂಬಿಸಿದರೂ ಬೆಳವಣಿಗೆಯನ್ನು ಸಂಪೂರ್ಣ ಅರ್ಥಮಾಡಿಕೊಳ್ಳಲು ಆದಾಯ ಕೇಂದ್ರಿತ ದೃಷ್ಟಿಯನ್ನು ಕೂಡಲೆ ಬಲಪಡಿಸಿದಾಗ ಮಾತ್ರ ಬೆಳವಣಿಗೆಯ ವಿಧಾನ ಅರ್ಥವಾಗಲು ಸಾಧ್ಯ. ಬಡರಾಷ್ಟ್ರದ ಜನರು ಮೇಲಿಂದ ಮೇಲೆ ಪ್ರತಿಕೂಲತೆಗೆ ಈಡಾಗಿ ಅನಾನುಕೂಲತೆಗಳನ್ನು ಅನುಭವಿಸಿದ್ದಾರೆ; ಆದರೂ ಆರೋಗ್ಯ ಹಾಗೂ ಉಳಿವಿನ ವಿಷಯಕ್ಕೆ ಬಂದರೆ, ಈ ಬಡರಾಷ್ಟ್ರಗಳಲ್ಲಿ ವೈದ್ಯಕೀಯ ಸೌಲಭ್ಯ ಹಾಗೂ ಆರೋಗ್ಯ ರಕ್ಷಣೆ ಇಲ್ಲದಿರುವುದು ಮುಖ್ಯ ವಿಷಯವಾಗುತ್ತದೆ.

ಆರೋಗ್ಯ ರಕ್ಷಣೆಯ ಆರ್ಥಿಕತೆ ಹಾಗೂ ರಾಜಕಾರಣ

ಆರ್ಥಿಕ ದೂರದೃಷ್ಟಿ ಇರುವುದು ತಪ್ಪಲ್ಲ; ಆದರೆ ಜನಸಂಪತ್ತನ್ನು ಜನೋಪಯೋಗಕ್ಕೆ ಬಳಸದೆ ಇರುವುದು ತಪ್ಪು ಹಾಗೂ ಆರ್ಥಿಕ ರಕ್ಷಣೆಗೆ ಆಪತ್ತು ಉಂಟು ಮಾಡಬಹುದಾಗಿದೆ. ಬಡದೇಶಗಳ ಜನಸಂಪನ್ಮೂಲಗಳನ್ನು ಸಮಾಜದ ಒಳಿತಿಗೆ ಉಪಯೋಗಿಸದೆ ಕೇವಲ ಯುದ್ಧ ಮಾಡಲು, ಸೈನ್ಯಶಕ್ತಿಯನ್ನು ವೃದ್ಧಿಸಲು ಉಪಯೋಗಿಸಲಾಗುತ್ತಿದೆ. ಇದು ತಿರುವು ಮುರುವಿನ ತೀರ್ಮಾನದಿಂದ ಉಂಟಾದ ಗೊಂದಲದ ಸಂಕೇತ. ಈ ಜಗತ್ತಿನಲ್ಲಿ ವೈದ್ಯ, ಶಾಲಾಶಿಕ್ಷಕ ಹಾಗೂ ದಾದಿಯರು ಪ್ರಸ್ತುತ ಸುಧಾರಣೆ ವಿರೋಧಿ ಆರ್ಥಿಕ ನೀತಿಯಿಂದಾಗಿ ಸೇನಾಧಿಕಾರಿಗಳಿಗಿಂತ ಹೆಚ್ಚು ಚಿಂತಿತರಾಗಿದ್ದಾರೆ. ಇದನ್ನು ಸರಿಪಡಿಸಲು ಆರ್ಥಿಕ ಮುಂದಾಲೋಚನೆಯನ್ನು ಖಂಡಿಸುವ ಬದಲು ಈ ಖರ್ಚು ವೆಚ್ಚದ ಪುನರ್ವಿಮರ್ಶೆ ಮಾಡುವುದು ಅಗತ್ಯ.

ಈ ಮುಖ್ಯ ವಿಷಯ ಸಾಮಾಜಿಕ ಜೀವನದ ಎರಡು ವಿಷಯಗಳಿಗೆ ಸಂಬಂಧಿಸಿದೆ: ಒಂದು ಸಕ್ರಿಯ ರಾಜಕಾರಣದ ಪಾತ್ರವನ್ನು ಗುರುತಿಸುವುದು; ಎರಡು ಆರ್ಥಿಕ ವಿಧಾನಗಳನ್ನು ಮುಕ್ತಮನಸ್ಸಿನಿಂದ ಪರಾಮರ್ಶೆ ಮಾಡುವುದು. ಸಂಪನ್ಮೂಲಗಳನ್ನು ಹಂಚುವಾಗ ಯುದ್ಧದ ಸಿದ್ಧತೆಗೆ ಆರೋಗ್ಯ ಹಾಗೂ ಶಿಕ್ಷಣಕ್ಕಿಂತ ಹೆಚ್ಚಿನ ಮಹತ್ವ ಕೊಟ್ಟಲ್ಲಿ ಅದು ಅಪಾಯವನ್ನು ಉಂಟುಮಾಡಬಲ್ಲದು. ಈ ಅಪಾಯವನ್ನು ತಡೆಗಟ್ಟಲು ಪ್ರಬುದ್ಧ ಸಾರ್ವಜನಿಕ ಚರ್ಚೆ ಸಹಾಯಕವಾಗಬಲ್ಲದು. ಜನರು ಸಮರ್ಥ ಕೊಲೆಯ ಬದಲು ಸಮರ್ಥ ಜೀವನ ನಡೆಸಲು ಪ್ರಮುಖ ಅಗತ್ಯತೆಗಳನ್ನು ಕಂಡುಹಿಡಿಯಬೇಕಾಗುತ್ತದೆ. ಪ್ರಜಾಪ್ರಭುತ್ವದ ವಿಧಾನ ಲಭ್ಯವಿರುವುದರಿಂದ ಜನರ ಅಗತ್ಯಗಳನ್ನು ಗೊತ್ತುಪಡಿಸಿ ಸಂಪನ್ಮೂಲಗಳನ್ನು ಸರಿಯಾಗಿ ಬಳಸಲು ಮುಕ್ತ ಮಾಹಿತಿ ಹಾಗೂ ಚರ್ಚೆ ಅಗತ್ಯ. ಆರೋಗ್ಯ ರಕ್ಷಣೆಯ ಚರ್ಚೆಯಲ್ಲಿ ಹುಸಿ ಆರ್ಥಿಕತೆಯನ್ನು ಗುರುತಿಸಬಹುದಾಗಿದೆ. ಸಂಪನ್ಮೂಲಗಳ ಕೊರತೆಯಿಂದ ಆರೋಗ್ಯ ಹಾಗೂ ಶಿಕ್ಷಣದಂತಹ ಸಾಮಾಜಿಕ ಅಗತ್ಯತೆಗಳಿಗೆ ರಾಷ್ಟ್ರ ಶ್ರೀಮಂತವಾಗುವತನಕ ಬಂಡವಾಳವನ್ನು ಮುಂದೂಡಬೇಕು ಎಂದು ಹೇಳಲಾಗುತ್ತದೆ. ಆರೋಗ್ಯ ಹಾಗೂ ಶಿಕ್ಷಣ ಸೇವೆಗಳು ದುಡಿಮೆ ಆಧಾರಿತ ಹಾಗೂ ಕಡಿಮೆ ಖರ್ಚಿನವು. ಆದ್ದರಿಂದ ಬಡದೇಶದಲ್ಲಿ ಆರೋಗ್ಯ ಹಾಗೂ ಶಿಕ್ಷಣದ ಸೇವೆಗಳನ್ನು ಅಳವಡಿಸಲು ಸಂಪನ್ಮೂಲದ ಕೊರತೆ ಅಡ್ಡಿ ಬರಬೇಕಾಗಿಲ್ಲ.

ಉಪಸಂಹಾರ


ಒಳ್ಳೆಯ ಆರೋಗ್ಯವು ಒಳ್ಳೆ ಬೆಳವಣಿಗೆಗೆ ಪೂರಕವೇ ಎಂದು ಪ್ರಶ್ನಿಸುವವರು ಒಳ್ಳೇ ಆರೋಗ್ಯವು ಬೆಳವಣಿಗೆಯ ಅವಿಭಾಜ್ಯ ಅಂಗ ಎಂಬುದನ್ನು ನಿರ್ಲಕ್ಷಿಸುತ್ತಾರೆ. ಆರೋಗ್ಯ ರಕ್ಷಣೆಯನ್ನು ಸಾಧನವಾಗಿಸಿ ಪ್ರಗತಿ ಸಾಧಿಸಿ, ಆರ್ಥಿಕ ಬೆಳವಣಿಗೆಗೆ ಅದು ಪೂರಕವೆಂದು ಸಾಧಿಸಬೇಕಾಗಿಲ್ಲ. ಸಂದರ್ಭ ಒಳ್ಳೆಯದಾಗಿದ್ದಲ್ಲಿ ಒಳ್ಳೇ ಆರೋಗ್ಯ ಹಾಗೂ ಆರ್ಥಿಕ ಸಂಪತ್ತು ಪರಸ್ಪರ ಪೂರಕ. ಆರೋಗ್ಯವಂತ ಮಾನವರು ಹೆಚ್ಚು ಗಳಿಸಬಲ್ಲರು, ಹೆಚ್ಚು ಗಳಿಸಿದವರು ಆರೋಗ್ಯ ಸೌಲಭ್ಯವನ್ನು ದೊರಕಿಸಿಕೊಳ್ಳಬಲ್ಲರು, ಒಳ್ಳೇ ಪೌಷ್ಟಿಕ ಆಹಾರವನ್ನು ಉಪಯೋಗಿಸಬಲ್ಲರು, ಹಾಗೂ ಆರೋಗ್ಯಕರ ಜೀವನ ನಡೆಸಲು ಸ್ವತಂತ್ರರು.

ಆರೋಗ್ಯ ಸುಧಾರಿಸಲು ಪೂರಕ ಸಂದರ್ಭವಿಲ್ಲದಿದ್ದಲ್ಲಿ ಸಾರ್ವಜನಿಕ ಆರೋಗ್ಯ ನೀತಿಯೂ ಸೇರಿದಂತೆ ಅನೇಕ ಕಾರ್ಯಗಳನ್ನು ಕೈಗೊಳ್ಳಬಹುದು. ಆರ್ಥಿಕ ಪ್ರಗತಿ ಹಾಗೂ ಆರೋಗ್ಯ ಸುಧಾರಣೆಗೆ ಸಂಬಂಧವಿದ್ದರೂ, ಈ ಸಂಬಂಧ ಕೆಲವು ಸಾರ್ವಜನಿಕ ನೀತಿಗಳಿಂದ ಸಡಿಲಗೊಳ್ಳುತ್ತದೆ. ಆರ್ಥಿಕ ಬೆಳವಣಿಗೆಯಿಂದ ಉತ್ಪನ್ನವಾದ ಹೆಚ್ಚಿನ ಆದಾಯವನ್ನು ಜನಾರೋಗ್ಯ ಸುಧಾರಿಸಲು ಹಾಗೂ ಬಡತನ ಕಡಿಮೆ ಮಾಡಲು ಹೇಗೆ ಉಪಯೋಗಿಸಲಾಗುವುದು ಎಂಬುದರ ಮೇಲೆ ಆರೋಗ್ಯ ಸುಧಾರಣೆ ಸಾಧ್ಯ. ಬೆಳವಣಿಗೆ ಆಧಾರಿತ ಆರೋಗ್ಯಸಾಧನೆ ಕೇವಲ ಆರ್ಥಿಕ ಬೆಳವಣಿಗೆಗಿಂತ ಹೆಚ್ಚು ಪ್ರಯೋಜನಕಾರಿ. ಆರ್ಥಿಕ ಪರಿಸ್ಥಿತಿ ಅನುಕೂಲಕರವಾಗಿಲ್ಲದಿದ್ದರೂ, ಪ್ರಾಥಮಿಕ ಜನ ಆರೋಗ್ಯಕ್ಕೆ ಲಭ್ಯವಿರುವ ಸಂಪನ್ಮೂಲಗಳನ್ನು ಬಳಕೆ ಮಾಡಿ ಸಾಮಾಜಿಕವಾಗಿ ಸುಧಾರಣೆಗಳನ್ನು ಮಾಡಲು ಉಪಯೋಗಿಸಬಹುದಾಗಿದೆ. ವೈದ್ಯಕೀಯ ಚಿಕಿತ್ಸೆ ಹಾಗೂ ಆರೋಗ್ಯ ರಕ್ಷಣೆಯನ್ನು ಜನರಿಗೆ ತಲುಪಿಸುವುದಕ್ಕೆ ಸಂಬಂಧಿಸಿದ ಖರ್ಚಿನ ಆರ್ಥಿಕ ವಿಷಯಗಳ ಬಗ್ಗೆ ಗಮನಹರಿಸುವುದು ಅತಿಮುಖ್ಯ. ಆರೋಗ್ಯ ರಕ್ಷಣೆ ಹೆಚ್ಚು ದುಡಿಮೆ ಆಧಾರಿತ ಪ್ರಕ್ರಿಯೆಯಾಗಿರುವುದರಿಂದ ಕಡಿಮೆ ಕೂಲಿ ಆರ್ಥಿಕತೆಯವರು ಆರೋಗ್ಯದ ಬಗ್ಗೆ ಹೆಚ್ಚು ಏಕಾಗ್ರತೆ ವಹಿಸಬೇಕು.

ಕೊನೆಯದಾಗಿ, ಆರ್ಥಿಕ ಸಂಪನ್ಮೂಲವನ್ನು ಸಾಮಾಜಿಕವಾಗಿ ಹಂಚುವಲ್ಲಿ ಸಕ್ರಿಯ ರಾಜಕಾರಣ ಹಾಗೂ ಪ್ರಬುದ್ಧ ಸಾರ್ವಜನಿಕ ಚರ್ಚೆಯು ಅದರ ಅವಿಭಾಜ್ಯ ಅಂಗ. ಆರ್ಥಿಕತೆಯ ಸಂರಕ್ಷಣೆಯು ವೈದ್ಯನ, ದಾದಿಯ ಹಾಗೂ ಶಾಲಾಶಿಕ್ಷಕನ ಬದಲು ಸೇನಾಧಿಕಾರಿಗೆ ದುಷ್ಪಪ್ಪವಾಗಲು ಸಾಧ್ಯ. ಸೇನಾಧಿಕಾರಿಗಿಂತ ವೈದ್ಯ, ಶಾಲಾಶಿಕ್ಷಕ ಅಥವಾ ನರ್ಸಿಗೆ ಸಂಪನ್ಮೂಲದ ಕೊರತೆ ಪರಿಗಣನೆಯಾದರೆ, ಆ ಸ್ಥಿತಿಗೆ ಕಾರಣರಾದ ಅಪವಾದಕ್ಕೆ ಸಾರ್ವಜನಿಕರಾದ ನಾವು ಹೊಣೆಗಾರರು. ಏಕೆಂದರೆ ಸೈನ್ಯ ಮುಂತಾದವಕ್ಕೆ ಆದ್ಯತೆಗಳನ್ನು ಅದಲು ಬದಲು ಮಾಡಲು ನಾವೇ ಕಾರಣರಾಗುತ್ತೇವೆ. ಪ್ರಬುದ್ಧ ಸಾರ್ವಜನಿಕ ಚರ್ಚೆ ಮತ್ತು ಜನರ ಭಾಗವಹಿಸುವಿಕೆಯಿಂದ ಮಾತ್ರ ನಮ್ಮ ಜೀವನಕ್ಕೆ ಹಾಗೂ ಸ್ವಾತಂತ್ರ್ಯಕ್ಕೆ ರಕ್ಷಣೆ ನೀಡಬಲ್ಲ ಬದಲಾವಣೆ ತರಲು ಸಾಧ್ಯ. ಜನರು ಕೇವಲ ರೋಗಿಗಳಂತೆ ನಿಷ್ಕ್ರಿಯರಾಗದೆ ಬದಲಾವಣೆಯಲ್ಲಿ ಹರಿಕಾರರಾಗಬೇಕು. ನಿಷ್ಕ್ರಿಯೆಯ ಫಲ ರೋಗ ಹಾಗೂ ಸಾವು.

[illegible]

ಜೀವಂತ



ಪುರುಷೋತ್ತಮ-
-ನಾಗಿದ್ದರೂ ಶ್ರೀ-
-ರಾಮನಿಗೆ ಹಿಡಿದಿತ್ತು
ರಾವಣನ 'ಭೂತ'!
ಅದಕ್ಕೆ ಸೀತೆ
ಸೇರಿದ್ದು ಭೂತಾಯಿ
ಮಡಿಲು 'ಜೀವಂತ'!!

ಶ್ರೀ ಅಶೋಕ ಯ. ಪತ್ತಾರ
ಸ. ಹಿ. ಪ್ರಾ. ಶಾಲೆ., ಡೋಣಿ

ಎಸ್ಮಾ ಕಾಯ್ದೆ – ಒಂದು ಒಳನೋಟ

ದಿನೇಶ್ ಹಾಸನ್

ದುಡಿವ ಜನತೆಯ ಹೋರಾಟಗಳು, ಕಾರ್ಮಿಕ ಚಳುವಳಿಗಳು, ಆಳುವ ವರ್ಗದ ಕಾರ್ಮಿಕ ವಿರೋಧಿ ಮತ್ತು ದಮನಕಾರಿ ನೀತಿ, ಮುರಿದು ಬೀಳುವ ಸಂಧಾನ, ಮಾತುಕತೆಗಳು, ಒಡಂಬಡಿಕೆ ಇವೆಲ್ಲವೂ ಇಂದಿನ ಸಮಾಜ ವ್ಯವಸ್ಥೆಯಲ್ಲಿನ ದಿನನಿತ್ಯದ ಆಗುಹೋಗುಗಳು.

ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಕರ್ನಾಟಕದಲ್ಲಿ ಪದಪಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಕಳೆದ ಹದಿನಾಲ್ಕು ವರುಷಗಳಿಂದಲೂ ನೆನೆಗುದಿಗೆ ಬಿದ್ದಿದ್ದ ತಮ್ಮ ನ್ಯಾಯ ಯುತವಾದ ಬೇಡಿಕೆಗಳನ್ನು ಒತ್ತಾಯಿಸಿ ಪಿ.ಯು.ಸಿ. ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಅನ್ಯಮಾರ್ಗವಿಲ್ಲದೆ ಬಹಿಷ್ಕರಿಸಿದ್ದು, ಅನಂತರ ಕೃಷ್ಣರ ಸರಕಾರ ಎಸ್ಮಾ ಕಾಯ್ದೆಯನ್ನು ಘೋಷಿಸಿ ಮುಷ್ಕರವನ್ನು ಬಗ್ಗು ಬಡೆದದ್ದು ಈಗಾಗಲೇ ಒಂದು ಮುಗಿದ ಅಧ್ಯಾಯ. ಆದರೂ ಈ ಬೆಳವಣಿಗೆ ವಿದ್ಯಾ ಕ್ಷೇತ್ರದಲ್ಲಿ, ಸಾರ್ವಜನಿಕರಲ್ಲಿ ಮತ್ತು ಕಾರ್ಮಿಕ ರಂಗದಲ್ಲಿ ಪ್ರಶ್ನೆಗಳ ಅಲೆಯನ್ನೇ ಎಬ್ಬಿಸಿದೆ.

ಇಂದಿನ ಸಂದರ್ಭದಲ್ಲಿ ಇದಕ್ಕೆ ಸಂಬಂಧಿಸಿದಂತೆ ಒಂದು ಸಮಗ್ರ ಅವಲೋಕನದ ಅಗತ್ಯವಿದೆ. ಈ ನಿಟ್ಟಿನಲ್ಲಿ ಚರ್ಚಿಸುವುದಕ್ಕೆ ಮುಂಚೆ ನನ್ನನ್ನು ದಂಗು ಬಡಿಸಿದ ಎರಡು ವಿಷಯಗಳನ್ನು ಓದುಗರ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊದಲನೆಯದಾಗಿ, ಉಪನ್ಯಾಸಕರ ಬಂಡಾಯದ ಬಗ್ಗೆ ತತ್ವಶಾಸ್ತ್ರಜ್ಞರೂ ಎರಡು ವರುಷಗಳ ಹಿಂದೆ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗೂ ವಿಜೃಂಭಿಸಿದ ಪ್ರೊ॥ ಎಸ್. ಎಲ್. ಭೈರಪ್ಪನವರ ಬಾಯಿಂದ ಹೊರಬಿದ್ದ ನುಡಿಮುತ್ತುಗಳು. ಎರಡನೆಯದು, ಎಸ್ಮಾ ಎಂಬ ಕರಾಳ ಕಾಯ್ದೆಯನ್ನು ಘೋಷಿಸಿದ ಕರ್ನಾಟಕ ಸರಕಾರದ ಅಮಾನವೀಯ ಹಾಗೂ ಕಾರ್ಮಿಕ ವಿರೋಧಿ ಧೋರಣೆ.

ಉಪನ್ಯಾಸಕರು ಕೇಂದ್ರ ಮತ್ತು ರಾಜ್ಯ ಸರಕಾರದ ಅಧಿಕಾರಿಗಳ ವೇತನಗಳಿಗೆ ಸರಿಸಮಾನವಾದ ವೇತನವನ್ನು ಕೊಡಬೇಕೆಂದು ಒತ್ತಾಯಿಸುವುದು ಅನುಚಿತ ಎಂದು ಶ್ರೀ ಭೈರಪ್ಪನವರು ಅಪ್ಪಣೆ ಕೊಡಿಸಿದ್ದಾರೆ. ತಾವೂ ಒಂದು ಕಾಲದಲ್ಲಿ ಉಪನ್ಯಾಸಕರಾಗಿದ್ದರೆಂಬುದನ್ನು ಈ ಮಹನೀಯರು ಮರೆತಿರುವುದು ಸ್ವಾರಸ್ಯಕರವಾಗಿದೆ. ಅಲ್ಲದೆ ತಮ್ಮ ವೃತ್ತಿಯನ್ನು ತಾವೇ ತುಚ್ಛವಾಗಿ ಕಾಣುವ ಅವರ ಚಿಂತನಾಲಹರಿ ವಿಚಿತ್ರವೆನಿಸುತ್ತದೆ. ''ನೀವು ಯಾಕೆ ಹೆಚ್ಚು ವೇತನ ಬೇಕೆಂದು ಬೇಡಿಕೆಗಳನ್ನು ಮುಂದಿಟ್ಟು ನಿಮ್ಮ ವೃತ್ತಿಗೆ ಅಪಮಾನವನ್ನೆಸಗುತ್ತೀರಿ?'' ಎಂದು ಶಿಕ್ಷಕರನ್ನು ಜರೆಯುತ್ತಾರೆ ಅವರು. ಹಿಂದೊಮ್ಮೆ ಎಲ್ಲ ಶಿಕ್ಷಕರೂ, ಉಪನ್ಯಾಸಕರೂ ನೌಕರಿಯಲ್ಲಿ ತಮ್ಮ ತಮ್ಮ ಅರ್ಹತೆಯನ್ನು ದೃಢಪಡಿಸಲು ದೈಹಿಕ ಹಾಗೂ ಮಾನಸಿಕ ಪರೀಕ್ಷೆಗೆ ಒಳಗಾಗಬೇಕು ಎನ್ನುವ ಸುಭಾಷಿತವನ್ನು ನುಡಿದವರೂ ಅವರೇ. ಅವರು ಯಾರ ಪರವಾಗಿ, ಯಾವ ವರ್ಗದ ಪರವಾಗಿ ಹೀಗೆ ಬಡಬಡಿಸುತ್ತಾರೆಂದು ಇಲ್ಲಿ ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ. ಅವರ ಈ ಧೋರಣೆಯ ಹಿಂದೆ ಬೇರುಬಿಟ್ಟಿರುವ ಸೈದ್ಧಾಂತಿಕ ಸೆಲೆಗಳು ಯಾವುದೆಂಬುದು ಎಲ್ಲರಿಗೂ ತಿಳಿದ ವಿಷಯವೇ.

ಸಮಾಜದ ವಿವಿಧ ಕಾರ್ಯಕ್ಷೇತ್ರಗಳ ಎಲ್ಲ ಸ್ತರಗಳಲ್ಲಿಯೂ ಸಮರ್ಥರೂ, ಅಸಮರ್ಥರೂ ಇರುವುದಂತೂ ವಾಸ್ತವದ ಸಂಗತಿ. ಅನಿವಾರ್ಯವೂ ಕೂಡ. ಈ ಮಾತು ಶಾಲಾಕಾಲೇಜುಗಳ ಶಿಕ್ಷಕ ವರ್ಗಕ್ಕೂ ಅನ್ವಯಿಸುತ್ತದೆ. ಹಾಗೆಂದು ವೇತನ ಹೆಚ್ಚಳದ ಪ್ರಶ್ನೆ ಬಂದಾಗಲೆಲ್ಲಾ, ತಮ್ಮ ದುಡಿಮೆಗೆ ತಕ್ಕಂತೆ ಶಿಕ್ಷಕರು ಬೇಡಿಕೆಗಳನ್ನು ಮುಂದಿಟ್ಟಾಗಲೆಲ್ಲಾ ಅದನ್ನು ಖಂಡಿಸುವುದಾಗಲಿ, ಹೀಯಾಳಿಸುವುದಾಗಲಿ ಅಸಂಬದ್ಧವೆನಿಸುತ್ತದೆ. ಈ ಶಿಕ್ಷಕರು ಯು.ಜಿ.ಸಿ. ಗ್ರೇಡಿನ ವೇತನ ತಮಗೂ ಅನ್ವಯವಾಗಬೇಕು ಎಂದು ಕೇಳಿದರೆ ತಪ್ಪೇನು? ಕಾಲೇಜು ಶಿಕ್ಷಕರೇ ಅವರ ಈಗಿನ ''ಘನ'' ವೇತನವನ್ನು ದಕ್ಕಿಸಿಕೊಳ್ಳಲು ಒಂದು ಯುಗದಷ್ಟು ಕಾಲವೇ ಹೋರಾಡಬೇಕಾಯಿತು. ಮೊನ್ನಿನ ಮೌಲ್ಯಮಾಪನವನ್ನು ಶಿಕ್ಷಕರು ಬಹಿಷ್ಕರಿಸಿದ ಸಂದರ್ಭದಲ್ಲಿ ಇದೇ ಮೇಲ್ವರ್ಗದ ಉಪನ್ಯಾಸಕರು ತಮ್ಮ ಸೌಹಾರ್ದತೆಯನ್ನು ವ್ಯಕ್ತಪಡಿಸಿ ದನಿಗೂಡಿಸಿದ್ದಿದ್ದರೆ ಆ ಹೋರಾಟದ ಆಯಾಮವೇ ಬೇರೆಯಾಗುತ್ತಿತ್ತೋ ಏನೋ. ಸಮಾಜಕಲ್ಯಾಣ ಯೋಜನೆಗಳಿಗೇ ಹಣದ ಕೊರತೆ ಇರುವಾಗ ಈ ಬೇಡಿಕೆಗಳನ್ನು ಪೂರೈಸಲು ಸಾಧ್ಯವೇ ಇಲ್ಲ ಎನ್ನುವುದು ಸರಕಾರದ ವಾದ. ಅಖಂಡ ವಾಸ್ತು ಪ್ರಜ್ಞೆಯ ಫಲವಾಗಿ ಲಕ್ಷಾಂತರ ರೂಪಾಯಿಗಳ ಸಾರ್ವಜನಿಕರ ಹಣವನ್ನು ತಮ್ಮ ವಾಸಗೃಹದ ಪುನರ್‌ವಿನ್ಯಾಸಕ್ಕಾಗಿ ವ್ಯಯ ಮಾಡಿ ನವಗ್ರಹಗಳನ್ನು ಸಂತೃಪ್ತಿಗೊಳಿಸಿರುವ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮತ್ತು ಸಹೋದ್ಯೋಗಿ ಮಂತ್ರಿಗಳ ಸವಲತ್ತುಗಳ ಬಗ್ಗೆ ಇದೇ ನಿಲುವನ್ನು ತಾಳುತ್ತಾರೆಯೇ? ಇದೇ ಸರಕಾರ ಮುಖ್ಯ[illegible]ಗಳನ್ನು ಮತ್ತು ಅವರ ಪರಿವಾರದವರನ್ನು ಗೋಗರೆದು [illegible] ರಾಜ್ಯದಲ್ಲಿ [illegible] ಮಾಡಿಕೊಟ್ಟಿದೆ. ಈ [illegible] ಗಳಿಸಿದ [illegible] ಬೇರೆಡೆಗೆ [illegible] ಕಂಪೆನಿಗಳಿಗೆ ದೇಣಿಗೆ ನೀಡುವುದು ಹೊಸ ವಿಷಯವೇನಲ್ಲ. ಈ ಬಂಡವಾಳಿಗರ ಆದಾಯದ ಮೇಲೆ ವಿಶೇಷ ತೆರಿಗೆ ವಿಧಿಸಿ ಆ ಹಣವನ್ನು ಇತರ ಜನಪರ ಯೋಜನೆಗಳ ಜೊತೆಗೆ ವಿದ್ಯಾಕ್ಷೇತ್ರದ ಬೆಳವಣಿಗೆಗೂ ಮೀಸಲಾಗಿಡುವ ಕ್ರಮದ ಬಗ್ಗೆ ಮುಖ್ಯಮಂತ್ರಿಗಳು ಒಂದು ಯೋಜನೆಯನ್ನು ಯಾಕೆ ರೂಪಿಸಬಾರದು? ಹಣದ ಕೊರತೆ, ಹಣದ ಕೊರತೆ ಎಂದು ಬೊಬ್ಬೆ ಹಾಕುವ ಮಂತ್ರಿಮಹೋದಯರು ತಮ್ಮ ತೆವಲುಗಳನ್ನು ತೀರಿಸಿಕೊಳ್ಳಲು ಸಮ್ಮೇಳನಗಳ ನೆಪದಲ್ಲಿ ವಿದೇಶಯಾತ್ರೆ, ಪಕ್ಷದ ಆಂತರಿಕ ಕಿತಾಪತಿಗಳ ಪರಿಹಾರಕ್ಕೆ ಇಚ್ಛಾನುಸಾರ ದೆಹಲಿಗೆ ಹಾರುವುದನ್ನು ಕಡಿತಗೊಳಿಸುವ ಬಗ್ಗೆ ಸರಕಾರ ಗಮನ ಹರಿಸುವುದೇ ಇಲ್ಲ. ಕೋಟ್ಯಂತರ ರೂಪಾಯಿಗಳ ತೆರಿಗೆ ಬಾಕಿ ಇಟ್ಟುಕೊಂಡಿರುವ ಭಾರಿ ಕುಳಗಳೊಂದಿಗೆ ಶಾಮೀಲಾಗುತ್ತಲೇ ಬಂದಿರುವ ಈ ಆಡಳಿತ ವರ್ಗ ಹಣದ ಕೊರತೆಯ ಬಗ್ಗೆ ಭಜನೆ ಮಾಡುವುದು ಹಾಸ್ಯಾಸ್ಪದವಾಗಿದೆ.



ಚಿತ್ರ ಕೃಪೆ: 'ವಿ ಹಿಂದು'

ನಮ್ಮ ವ್ಯವಸ್ಥೆಯಲ್ಲಿ ನೀಚ ಜಾತಿ ಪದ್ಧತಿಯು ತೀವ್ರ ವಿಶ್ಲೇಷಣೆಗೆ ಗುರಿಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಸರಕಾರವೇ ಶಿಕ್ಷಣ ಕ್ಷೇತ್ರದಲ್ಲಿ ಒಂದು ಬಗೆಯ ಜಾತಿ ಪದ್ಧತಿಯನ್ನು ಪ್ರೋತ್ಸಾಹಿಸುತ್ತಿದೆ ಎನ್ನಬಹುದು. ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಾಲಾ ಶಿಕ್ಷಕರು ಮತ್ತು ಕಾಲೇಜು ಉಪನ್ಯಾಸಕರ ವೇತನಗಳಲ್ಲಿರುವ ಅಸಮಾನತೆ ಇದಕ್ಕೆ ನಿದರ್ಶನ.

ಅಂಗನವಾಡಿ ಶಿಕ್ಷಕರ ಪಾಡಂತೂ ಒಂದು ದುರಂತವೆಂದೇ ಹೇಳಬೇಕು. ಆರ್ಥಿಕ ನ್ಯಾಯವಿಲ್ಲದೆ ಸಾಮಾಜಿಕ ನ್ಯಾಯವನ್ನು ಹೇಗೆ ತಾನೆ ಅನುಷ್ಠಾನಕ್ಕೆ ತರಲು ಸಾಧ್ಯ?

ಶಿಕ್ಷಕರ ಬಗ್ಗೆಯಾಗಲಿ, ಸಮಾಜಕ್ಕೆ ಅವರು ಸಲ್ಲಿಸುತ್ತಿರುವ ಸೇವೆಯ ಬಗ್ಗೆಯಾಗಲಿ ಎಷ್ಟರ [illegible] ಮನೋಭಾವ ಇದೆಯೆಂಬುದು ಒಂದು ಸಾರ್ವಜನಿಕ [illegible] ಅಣೆಕಟ್ಟುಗಳಲ್ಲಿ ದುಡಿಯುವ ನೌಕರರಾಗಲಿ, [illegible] ನಲ್ಲಿ ಹೋರಾಡಿದ ಯೋಧರಾಗಲಿ, ಒಂದು [illegible] ಹಳ್ಳಿಯಲ್ಲಿ ದುಡಿಯುತ್ತಿರುವ ಶಾಲಾ ಶಿಕ್ಷಕರಾಗಲಿ, ಎಲ್ಲರೂ ಆಯಾಕ್ಷೇತ್ರಗಳಲ್ಲಿ ಸಮಾಜಕ್ಕೆ ತಮ್ಮ ತಮ್ಮ ಸೇವೆ ಸಲ್ಲಿಸುತ್ತಾರೆ. ಅವರ ದುಡಿಮೆಗೆ [illegible] ದೊರಕುವಂತಹ ರಾಜಕೀಯ ಮತ್ತು ಸಾಮಾಜಿಕ [illegible] ನಿರ್ಮಾಣವಾಗಬೇಕು. [illegible] ಎನ್ನುವ ತರ್ಕ [illegible]

ಟೊಮಿಗೆ, ವಕೀಲರ ಕೆಲಸ ನ್ಯಾಯಾಂಗದ ಕಟಕಟೆಗೆ ಮಾತ್ರ ಮೀಸಲಾಗಿರಬೇಕು ಎನ್ನುವಷ್ಟೆ ಮೂರ್ಖತನದಿಂದ ಕೂಡಿದೆ. ''ಗುರು ದೇವೋ ಭವ'' ಎಂಬ ಮಂತ್ರ ಉದ್ಘರಿಸಿ ಸಮಾಜದಲ್ಲಿ ಉಪಾಧ್ಯಾಯರ ಸ್ಥಾನ ಪವಿತ್ರವಾದುದೆಂದು ವೈಭವೀಕರಿಸುವವರು ಅವರ ಕನಿಷ್ಠ ಅಗತ್ಯಗಳ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸದೇ ಇರುವುದು ಶೋಚನೀಯವಾಗಿದೆ. ಸ್ವಾತಂತ್ರ್ಯ ಗಳಿಸಿ ಐವತ್ತು ಮೂರು ವರುಷಗಳು ಕಳೆಯುತ್ತಾ ಬಂದಿದ್ದರೂ ಬ್ರಿಟಿಷರ ಬಳುವಳಿಯಾದ ಹಳಸು ಆಡಳಿತ ವಿಧಾನಗಳನ್ನೇ ನಮ್ಮ ಸರಕಾರಗಳು ಅನುಸರಿಸುತ್ತಾ ಬಂದಿವೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನೇ ನಗಣ್ಯಗೊಳಿಸುವ ಎಸ್ಮಾದಂತಹ ಕರಾಳ ಕಾಯ್ದೆಗಳು ಅವರ ಕೈಗಳಲ್ಲಿ ಪ್ರಬಲ ಅಸ್ತ್ರಗಳಾಗಿ ಪರಿಣಮಿಸಿವೆ. ಈ ಉಗ್ರ ಕಾಯ್ದೆ ಎಸ್ಮಾಗೆ ಬಲಿಯಾದ ಶಿಕ್ಷಕರು ಮಾಡಿದ ತಪ್ಪಾದರೂ ಏನು? ಕೃಷ್ಣ ಸರಕಾರ ಮಾತುಕತೆಗೂ ಕರೆಯದೆ ಇಲ್ಲಸಲ್ಲದ ಆರೋಪಗಳನ್ನು ಅವರ ಮೇಲೆ ಹೊರಿಸಿದ್ದು ನಾಚಿಕೆಗೇಡಿನ ವಿಷಯ. ಉಪಾಧ್ಯಾಯರ ಬಂಡಾಯದಿಂದ ವಿದ್ಯಾರ್ಥಿಗಳ ತಂದೆತಾಯಂದಿರ ಮತ್ತು ಪೋಷಕರ ಬವಣೆಯನ್ನು ಸಹಿಸಲಾರದೆ ಸಮಸ್ಯೆಗೆ ಪರಿಹಾರ ಒದಗಿಸುವ ನೆಪದಲ್ಲಿ ವಿದ್ಯಾಮಂತ್ರಿಗಳು ತಾವೇ ಖುದ್ದಾಗಿ ಉಪವಾಸ ಸತ್ಯಾಗ್ರಹ ಕೈಗೊಳ್ಳಬೇಕೆಂದಿದ್ದ ನಾಟಕವಂತೂ ಖಂಡನೀಯ. ಎಲ್ಲೋ ಕೆಲವು ಪ್ರಗತಿಪರ ಗುಂಪುಗಳು, ಸಂಘಟನೆಗಳು ಹೋರಾಟಕ್ಕೆ ಬೆಂಬಲ ಸೂಚಿಸಿದ್ದನ್ನು ಬಿಟ್ಟರೆ ಬೇರಾವ ದೊಡ್ಡ ಕಾರ್ಮಿಕ ಸಂಘಟನೆಗಳೂ ಮುಂದೆ ಬಾರದೆ ಇದ್ದದ್ದು ಅವರ ಇಡೀ ಚಳುವಳಿಯ ಸಂಘಟನಾ ಕೊರತೆ ಮತ್ತು ವರ್ಗ ಪ್ರಜ್ಞೆಯ ಅಭಾವವನ್ನು ತೋರಿಸುತ್ತದೆ.

ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಉಪಾಧ್ಯಾಯರು, ಉಪನ್ಯಾಸಕರು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಒಂದಾಗಿ ಪರಸ್ಪರ ಬೆಂಬಲ, ಸಹಕಾರ, ಸೌಹಾರ್ದತೆಗಳ ಆಧಾರದ ಮೇಲೆ ತಮ್ಮ ಚಳುವಳಿಯನ್ನು ರೂಪಿಸಬೇಕಾದ ಅಗತ್ಯತೆಯನ್ನು ಇಂತಹ ಘಟನೆಗಳು ಒತ್ತಿ ಹೇಳುತ್ತವೆ. ಮಂತ್ರಿಗಳು, ಶಾಸಕರು ಮತ್ತಿತರ ರಾಜಕೀಯ ಪುಢಾರಿಗಳಿಂದ ಸಮಸ್ಯೆಗಳಿಗೆ ಪರಿಹಾರವನ್ನು ನಿರೀಕ್ಷಿಸಿದರೆ ತಪ್ಪಾಗುತ್ತದೆ. ಈ ಲಾಬಿ ಸಂಸ್ಕೃತಿ ಅತಿ ಹಾನಿಕರ. ಏಕೆಂದರೆ ರಾಜಕೀಯ ವ್ಯಕ್ತಿಗಳು ಇಂತಹ ಸಮಸ್ಯೆಗಳನ್ನು ತಮ್ಮ ಸ್ವಹಿತಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. ಅವರು ಎಲ್ಲವನ್ನೂ ನೋಡುವುದು ಚುನಾವಣೆಯ ದೃಷ್ಟಿಯಿಂದ, ಓಟು ಗಳಿಸುವ ಓರೆನೋಟದಿಂದ.

ಒಟ್ಟಾರೆ ವಿದ್ಯಾರ್ಥಿಗಳ ಮತ್ತು ಇಡೀ ಸಮಾಜದ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಶಿಕ್ಷಕ ಸಮುದಾಯ ತಮ್ಮ ಚಳುವಳಿಯನ್ನು ಕಟ್ಟಬೇಕಾಗುತ್ತದೆ. ಇತರ ಕಾರ್ಮಿಕ ಸಂಘಟನೆಗಳ ಜೊತೆ ಕೈಜೋಡಿಸಿ ಜನಪರ ಹೋರಾಟಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಉದಾಹರಣೆಗೆ, ಇಲ್ಲಿ ಅಂದರೆ ಅಮೆರಿಕದಲ್ಲಿ, ಕಾಲೇಜು ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯದ ಪ್ರೊಫೆಸರುಗಳು ಅಮೆರಿಕನ್ ಫೆಡರೇಶನ್ ಆಫ್ ಲೇಬರ್ ಎಂಬ ಸಂಘಟನೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದಾರೆ. ಅಮೆರಿಕದ ಯಾವ ಮೂಲೆಯಲ್ಲಿಯೇ ಆಗಲಿ ಕಾರ್ಮಿಕ ವರ್ಗಕ್ಕೆ ಸಂಬಂಧಪಟ್ಟ ಸಮಸ್ಯೆ ನಮ್ಮ ಸಮಸ್ಯೆಯೂ ಹೌದು, ಎನ್ನುವ ಉದಾತ್ತ ಧ್ಯೇಯದೊಂದಿಗೆ ಈ ಫೆಡರೇಶನ್ ತನ್ನ ಚಳುವಳಿಯನ್ನು ರೂಪಿಸುತ್ತಿದೆ.

ಭಾರತದಲ್ಲಿ ಕಾರ್ಮಿಕ ಕಟ್ಟಳೆಗಳು, ಕಾರ್ಮಿಕ ಸರಕಾರಿ ಸಂಬಂಧಗಳು ಬಹಳ ಸಂಕೀರ್ಣವಾದುವೆಂದು ನನ್ನ ಅನಿಸಿಕೆ. ಕಾರ್ಮಿಕರ ಮುಷ್ಕರ, ಪ್ರತಿಭಟನೆ, ಮೆರವಣಿಗೆಗಳೆಂದರೆ ಕೂಡಲೇ ಪೊಲೀಸ್, ಲಾಠಿ, ಸುಳ್ಳು ಕೇಸುಗಳು, ನ್ಯಾಯಾಂಗ, ಸರಕಾರದ ದಮನಕಾರಿ ಕ್ರಮಗಳು, ಇವೆಲ್ಲವನ್ನೂ ದುರುಪಯೋಗಪಡಿಸಿಕೊಂಡು ಅಧಿಕಾರಶಾಹಿಯು ತಾನು ರಾರಾಜಿಸುವ ಸಂದರ್ಭ ರಚಿಸಿಕೊಳ್ಳುತ್ತದೆ. ಇಂತಹ ಬೆಳವಣಿಗೆಗಳನ್ನು ಒಂದು ಸಾಮಾಜಿಕ ಪ್ರಕ್ರಿಯೆಯೆಂದು ಪರಿಗಣಿಸಿ ಮಾನವೀಯ ದೃಷ್ಟಿಯಿಂದ ಸಮಸ್ಯೆಯನ್ನು ಪರಿಹರಿಸಬೇಕು ಎನ್ನುವ ಕನಿಷ್ಠ ಪ್ರಜ್ಞೆಯನ್ನು ಸರಕಾರ ತೋರಿಸುವುದಿಲ್ಲ. ಏಕೆಂದರೆ ಅದರ ವರ್ಗಧೋರಣೆ ಹಾಗಿರುತ್ತದೆ.

ಅದೇನೇ ಇರಲಿ, ಯಾವುದೇ ವೃತ್ತಿಯಾಗಲಿ ಅದನ್ನು ಪ್ರತ್ಯೇಕವಾಗಿ ವಿಮರ್ಶಿಸಿ ಸಮಾಜದಲ್ಲಿ ತಕ್ಕ ಸ್ಥಾನ ಕೊಡುವುದು ಸರಿಯಾದ ಧೋರಣೆ. ಒಂದು ವೃತ್ತಿಯನ್ನು ಬೇರೊಂದು ವೃತ್ತಿಗೆ ಹೋಲಿಸಿ ಮೌಲ್ಯಮಾಪನ ಮಾಡುವುದು ಖಂಡಿತ ಸಮಂಜಸವೆನಿಸಲಾರದು. ಡಾ॥ ಸ. ರಾಧಾಕೃಷ್ಣನ್ ಅವರ ಹುಟ್ಟುಹಬ್ಬವನ್ನೇ ತೆಗೆದುಕೊಳ್ಳಿ. ಅದನ್ನು ಶಿಕ್ಷಕರ ದಿನಾಚರಣೆಯೆಂದು ಆಚರಿಸಲಾಗುತ್ತಿದೆ. ಅಂದು ಶಿಕ್ಷಕರು ಸಮಾಜಕ್ಕೆ ತಮ್ಮ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ''ಕೃತಜ್ಞತಾ'' ಭಾವದಿಂದ ಸ್ಮರಿಸುವ ದಿನವೆಂದು ಸರಕಾರ ಘೋಷಿಸಿದೆ. ಈ ಪ್ರಹಸನ ಕೂಡಲೇ ನಿಲ್ಲಬೇಕಾಗಿದೆ. ಬದಲು ಅವರಿಗೆ ಸಲ್ಲಬೇಕಾದ ಸವಲತ್ತುಗಳು ಮತ್ತು ಪುನರ್‌ವಿಮರ್ಶೆಯ ಬಗ್ಗೆ ಸೂಕ್ತವಾದ ನೀತಿ ನಿಯಮಗಳನ್ನು ರೂಪಿಸಲು ಸರಕಾರ ಮುಂದೆ ಬರಬೇಕಾಗಿದೆ. ಶಿಕ್ಷಕ ಸಮುದಾಯದ ನ್ಯಾಯಯುತವಾದ ಬೇಡಿಕೆಗಳಿಗೆ, ಆಶೋತ್ತರಗಳಿಗೆ ಸ್ಪಂದಿಸಬೇಕಾಗಿದೆ.

ದಿನೇಶ್ ಹಾಸನ್
ಇಂಗ್ಲಿಷ್ ಪ್ರಾಧ್ಯಾಪಕರು, ಸೆಂಟ್ರಲ್ ಸ್ಟೇಟ್ ವಿಶ್ವವಿದ್ಯಾನಿಲಯ,
ಒಹಾಯೊ, ಅಮೆರಿಕ

ಸಾದರ ಸ್ವೀಕಾರ

ಸಾಹಿತ್ಯ ವಿಮರ್ಶೆ ೧೯೯೮
ಸಂ. ಡಾ॥ ಜಿ. ಎಂ. ಹೆಗಡೆ
ಪುಟ : ೨೭೮ ಬೆಲೆ : ರೂ. ೫೦

ಯುವ ಕಾವ್ಯ ೧೯೯೮
ಸಂ. ಡಾ॥ ಗಿರಡ್ಡಿ ಗೋವಿಂದರಾಜು
ಪುಟ : ೧೫೮ ಬೆಲೆ : ರೂ. ೩೦

ವಿಜ್ಞಾನ ಸಾಹಿತ್ಯ ೧೯೯೮
ಸಂ. ಸುಭಾಷ್ ಎನ್. ನೆಳಗೆ
ಪುಟ : ೩೮೦ ಬೆಲೆ : ರೂ. ೬೫

ಸಂರಚನಾವಾದ *ಡಾ॥ ಬಸವರಾಜ ನಾಯ್ಕರ*
ಪುಟ : ೧೦೯ ಬೆಲೆ : ರೂ. ೩೦

ವಿಂಧ್ಯ ನರ್ಮದೆಯರ ನಾಡಿನಲ್ಲಿ (ಪ್ರವಾಸ ಕಥನ)
ಪಿ. ವಿ. ಕೃಷ್ಣಮೂರ್ತಿ
ಪುಟ : ೯೨ ಬೆಲೆ : ರೂ. ೨೫

ಮಕ್ಕಳ ಸಾಹಿತ್ಯ ೧೯೯೮
ಸಂ. ಜಯವಂತ ಕಾಡದೇವರ
ಪುಟ : ೧೨೫ ಬೆಲೆ : ರೂ. ೩೦

ವಸಾಹತೋತ್ತರ ಚಿಂತನೆ (ಲೇಖನಗಳು)
ಡಾ॥ ಸಿ. ಎನ್. ರಾಮಚಂದ್ರನ್
ಪುಟ : ೧೩೦ ಬೆಲೆ : ರೂ. ೩೫

ಜನ್ನ *ಆಯ್ಕೆ : ಪ್ರೊ॥ ಜಿ. ಎಸ್. ಸಿದ್ಧಲಿಂಗಯ್ಯ*
ಪುಟ : ೯೬ ಬೆಲೆ : ರೂ. ೨೫

ಸೀತಾಕಾಂತ ಮೊಹಾಪಾತ್ರ (ಒರಿಯಾ ಕವಿ)
ಡಾ॥ ಶುಭೇಂದು ಮುಂಡ
ಅನು : ಡಾ॥ ರಾಜಶೇಖರ ನಿರಮಾನ್ವಿ
ಪುಟ : ೯೬ ಬೆಲೆ : ರೂ. ೨೦

ಮೇಲಿನ ಏಳು ಪುಸ್ತಕಗಳ ಪ್ರಕಾಶಕರು
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು - ೫೬೦ ೦೦೨

ಕಲ್ಲಂಗಡಿ ಹಣ್ಣಿನ ಕಂಕನರಿ (ಜಾನಪದ ಕಥೆಗಳ ಸಂಕಲನ)
ಸಂ. ಜೀನಹಳ್ಳಿ ಸಿದ್ಧಲಿಂಗಪ್ಪ
ಪುಟ : ೨೦೦ ಬೆಲೆ : ರೂ. ೮೦
ಪ್ರೇಮ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ,
ಶಿವಮೊಗ್ಗ ಜಿಲ್ಲೆ - ೫೭೭ ೨೨೩.

ಶ್ರೀ ರಾಮ ಕಥಾಮಂಜರಿ
ಕೆ. ಎಂ. ಬಾಲಕೃಷ್ಣಭಟ್
ಪುಟ : ೪೫೮ ಬೆಲೆ : ರೂ. ೧೭೦
ವಿದ್ವಾನ್ ಎಸ್. ಬಿ. ಖಂಡಿಗೆ,
ಪೆರ್ಲ ಅಂಚೆ - ೬೭೧ ೫೫೨, ಕಾಸರಗೋಡು ಜಿಲ್ಲೆ

ಅವಳ ಸೂರ್ಯ (ಕೆನೆಡಿಯನ್ ಕಥೆಗಳು)
ಅನು: ಉಮಾರಾವ್
ಪುಟ : ೧೧೨ ಬೆಲೆ : ರೂ. ೫೦
ಮಹಿಳಾ ಸಾಹಿತ್ಯಕ ಕಣ, ನವನಗರ, ಹುಬ್ಬಳ್ಳಿ

ಹೊಸ ಹುಡುಗನ ಹಾಡುಗಳು
ಯು. ರಾಮು ಸಿರಿಗೆರೆ
ಪುಟ : ೬೪ ಬೆಲೆ : ರೂ. ೩೦
ಸಿರಿ ಪ್ರಕಾಶನ, ರೂಪ ಹೋಟೆಲ್,
ಸಿರಿಗೆರೆ - ೫೭೭ ೫೪೧, ಚಿತ್ರದುರ್ಗ.

ಏನ ಹೇಳಲವ್ವ ಗೆಳತಿ (ಕವನ ಸಂಕಲನ)
ಹಾ.ವೀ. ಮಂಜುಳಾ ಶಿವಾನಂದ್
ಪುಟ : ೮೦ ಬೆಲೆ : ರೂ. ೩೦
ಚೇತನ ಪಬ್ಲಿಕೇಷನ್ಸ್, ೩೬, ಎರಡನೇ ಮುಖ್ಯರಸ್ತೆ,
ಶೇಷಾದ್ರಿಪುರಂ. ಬೆಂಗಳೂರು - ೫೬೦ ೦೨೦

ಪ್ರಾಥಮಿಕ ಶಿಕ್ಷಣ - ಆರ್ಥಿಕ ಚಿಂತನ

ಒಂದು ದೇಶದ ಪ್ರಗತಿಯಲ್ಲಿ ಶಿಕ್ಷಣದ ಪಾತ್ರ ಪ್ರಮುಖವಾದುದು. ಈ ಶಿಕ್ಷಣವು ಮೂರು ಹಂತಗಳಲ್ಲಿ ಕೊಡಲ್ಪಡುತ್ತದೆ – ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣ. ಇಂಥ ಶಿಕ್ಷಣವನ್ನು ಗೋಪುರ ಆಕಾರಕ್ಕೆ ಹೋಲಿಸಿದರೆ, ಪ್ರಾಥಮಿಕ ಶಿಕ್ಷಣವು ಅಡಿಪಾಯ. ಮಾಧ್ಯಮಿಕ ಶಿಕ್ಷಣವು ಮಧ್ಯಭಾಗ ಮತ್ತು ಉನ್ನತ ಶಿಕ್ಷಣವು ಮೇಲ್ಭಾಗ. ಪ್ರಾಥಮಿಕ ಶಿಕ್ಷಣವೆಂಬ ಅಡಿಪಾಯವು ಭದ್ರವಾಗಿದ್ದರೆ ಇಡೀ ಶಿಕ್ಷಣ ಗೋಪುರವು ಭದ್ರವಾಗಿರಲು ಸಾಕು. ಆದ್ದರಿಂದಲೇ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾಥಮಿಕ ಹಂತಕ್ಕೆ ಹೆಚ್ಚಿನ ಮಹತ್ವ. ನಮ್ಮ ಸಂವಿಧಾನವು ಎಲ್ಲರಿಗೂ ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿರಲೆಂದು ಆಶಿಸಿದೆ. ಆದರೆ ಸ್ವಾತಂತ್ರ್ಯ ಬಂದು ಐದು ದಶಕಗಳು ಕಳೆದಿದ್ದರೂ ಆ ಆಶೆ ಈಡೇರಿಲ್ಲ. ಸ್ವಾತಂತ್ರ್ಯ ಪಡೆದಾಗ ದೇಶದಲ್ಲಿದ್ದ ನಿರಕ್ಷರಿಗಳ ಸಂಖ್ಯೆಗಿಂತಲೂ ಹೆಚ್ಚು ನಿರಕ್ಷರಿಗಳು ಈಗ ಭಾರತದಲ್ಲಿದ್ದಾರೆ. 'ಜಗತ್ತಿನ ನಕಾಶೆಯಲ್ಲಿ ನಿರಕ್ಷರಿಗಳಿರುವ ಸ್ಥಳವನ್ನು ಕಪ್ಪು ಬಣ್ಣದಿಂದ ಗುರ್ತಿಸಿದರೆ ಭಾರತವು ಒಂದು ಕಪ್ಪು ಖಂಡದಂತೆ ಕಾಣುತ್ತದೆ' ಎಂಬ ಮಾತು ನಮ್ಮ ಶಿಕ್ಷಣದ ವೈಫಲ್ಯಕ್ಕೆ ಕೈಗನ್ನಡಿ. ಇದಕ್ಕೆ ಹಣಕಾಸಿನ ಕೊರತೆಯೂ ಒಂದು ಪ್ರಮುಖ ಕಾರಣ.

ಶಿಕ್ಷಣದಲ್ಲಿ ಹಣ ತೊಡಗಿಸುವುದು ಹೂಡಿಕೆಯಿದ್ದಂತೆ. ಅದು ಪ್ರತ್ಯಕ್ಷವಾಗಿ ವ್ಯಕ್ತಿಗೆ ಮತ್ತು ಪರೋಕ್ಷವಾಗಿ ಇಡೀ ಸಮಾಜಕ್ಕೆ ಉತ್ತಮ ಫಲಗಳನ್ನು ಕೊಡುತ್ತದೆ. ಆದ್ದರಿಂದ ಅದು ಬಹು ಉಪಯುಕ್ತ. ಇದೇ ಕಾರಣಕ್ಕಾಗಿ ಶಿಕ್ಷಣವನ್ನು ಒಂದು ಸಾರ್ವಜನಿಕ ವಸ್ತುವೆಂದು ನಂಬಲಾಗಿದೆ. ಅದರಲ್ಲಿ ಪ್ರಾಥಮಿಕ ಶಿಕ್ಷಣವು ಮೂಲವಾದುದು. ಕಾರಣ ಅದು ಶುದ್ಧ ಸಾರ್ವಜನಿಕ ವಸ್ತು. ಆದ್ದರಿಂದಲೇ ಭಾರತದ ಸಂವಿಧಾನ, ವಿಶ್ವ ಸಂಸ್ಥೆ ಮತ್ತು ಯುನೆಸ್ಕೋದ ನಿರ್ಣಯಗಳು ಎಲ್ಲರಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕೊಡಬೇಕೆಂದು ಹೇಳುತ್ತಿವೆ. ಇದು ಮಾನವ ಹಕ್ಕುಗಳಲ್ಲಿ ಒಂದು. ಹೀಗಿರುವಾಗ ಶಿಕ್ಷಣಕ್ಕೆ ಹಣಕಾಸು ಒದಗಿಸುವಲ್ಲಿ ಯೋಗ್ಯ ನೀತಿಯನ್ನು ರೂಪಿಸಬೇಕಿದೆ. ಇನ್ನುಳಿದ ಕ್ಷೇತ್ರಗಳಿಗೆ ಹಣ ಒದಗಿಸುವುದು ಮತ್ತು ಶಿಕ್ಷಣಕ್ಕೆ ಹಣ ಒದಗಿಸುವುದು. ಇದರಲ್ಲಿ ಭಾರಿ ಅಂತರವಿದೆ. ಈ ವಿಷಯದಲ್ಲಿ ಖಾಸಗಿ ಸಂಪನ್ಮೂಲಗಳನ್ನು ಅವಲಂಬಿಸ ಬಾರದು. ಈ ಕ್ಷೇತ್ರಕ್ಕೆ ಕಡಿಮೆ ಹಣ ಕೊಟ್ಟರೆ ಅದರಿಂದಾಗುವ ದುಷ್ಪರಿಣಾಮಗಳಿಂದಾಗಿ ದೇಶವು ಹೆಚ್ಚು ಬೆಲೆ ತೆತ್ತಬೇಕಾಗುತ್ತದೆ. ಈಗ ಭಾರತದಲ್ಲಿ ಇದರ ಲಕ್ಷಣಗಳನ್ನು ಕಾಣುತ್ತಿದ್ದೇವೆ. ಜನಸಂಖ್ಯಾ ಸ್ಫೋಟ, ಅನಾರೋಗ್ಯ, ಕಡಿಮೆ ಉತ್ಪಾದಕತೆ, ನಿರುದ್ಯೋಗ, ಮಂದಗತಿಯ ಆರ್ಥಿಕ ಬೆಳವಣಿಗೆ, ಆದಾಯದ ಅಸಮಾನತೆ ಮುಂತಾದವುಗಳ ರೂಪದಲ್ಲಿ ದೇಶವು ಈಗ ದಂಡ ತೆರುತ್ತಿದೆ. ಶಿಕ್ಷಣದಲ್ಲಿ ಹಣ ಹೂಡಿಕೆಯ ಲಾಭಗಳು ಮತ್ತು ಕಡಿಮೆ ಹೂಡಿಕೆಯ ದೋಷಗಳು ತಿಳಿದರೆ ಸರಕಾರವು ಈ ಕ್ಷೇತ್ರಕ್ಕೆ ಆದ್ಯತೆ ಕೊಡುತ್ತದೇನೋ. ಅಂದರೆ, ಈ ಮಾತು ಭಾರತ ಸರಕಾರ ಮತ್ತು ರಾಜ್ಯ ಸರಕಾರಗಳಿಗೆ ತಿಳಿದಿಲ್ಲವೆ?

ಪ್ರಾಥಮಿಕ ಶಿಕ್ಷಣಕ್ಕಾಗಿ ಸರಕಾರಿ ವೆಚ್ಚವು ಗಣನೀಯವಾಗಿ ಹೆಚ್ಚಿಲ್ಲವೆಂಬುದಂತೂ ನಿಜ. ಅದಕ್ಕೆ ಬದಲಾಗಿ ಅದು ಕಡಿಮೆಯಾಗಿದೆ. ೧೯೯೪-೯೫ರಲ್ಲಿ ೧೯೯೦-೯೧ರ ವೆಚ್ಚಕ್ಕಿಂತಲೂ ಶೇ.೩ರಷ್ಟು ಕಡಿಮೆಯಾಗಿದೆ. ೧೯೯೦-೯೧ರಲ್ಲಿ ಒಟ್ಟು ದೇಶೀ ವೆಚ್ಚದ ಶೇ.೧.೬೪ರಷ್ಟು ವೆಚ್ಚ ಮಾಡಲಾಗಿತ್ತು. ೧೯೯೪-೯೫ರಲ್ಲಿ ಅದು ಶೇ.೧.೫೦ಗೆ ಇಳಿಯಿತು. ಶಿಕ್ಷಣಕ್ಕಾಗಿ ರಾಜ್ಯ ಸರಕಾರಗಳೇ ಹೆಚ್ಚು ವೆಚ್ಚ ಮಾಡುತ್ತವೆ. ಒಂದು ವಿಚಿತ್ರ ಸಂಗತಿಯೆಂದರೆ ಕೆಲ ಬಡರಾಜ್ಯಗಳು ಎಷ್ಟೋ ಶ್ರೀಮಂತ ರಾಜ್ಯಗಳಿಗಿಂತಲೂ ಹೆಚ್ಚು ವೆಚ್ಚ ಮಾಡುತ್ತಿವೆ. ಉದಾಹರಣೆಗೆ, ಪ್ರತಿ ವಿದ್ಯಾರ್ಥಿಯ ಸರಕಾರಿ ವೆಚ್ಚವು ಬಡರಾಜ್ಯವಾದ ರಾಜಸ್ಥಾನದಲ್ಲಿ ೧೧೬೭ರೂ. ಆದರೆ ಪಂಜಾಬದಲ್ಲಿ ಅದು ೧೧೧೯ರೂ. ಬಿಹಾರದಲ್ಲಿ ಆ ವೆಚ್ಚವು ೯೫ರೂ. ಆದರೆ ತಮಿಳುನಾಡಿನಲ್ಲಿಯೂ ೯೫ರೂ. ಜೊತೆಗೆ ೧೯೯೫-೯೬ ರಲ್ಲಿ ಪ್ರತಿ ವಿದ್ಯಾರ್ಥಿಯ ಕೌಟುಂಬಿಕ ಶಾಲಾ ವೆಚ್ಚವು ತಮಿಳುನಾಡಿನಲ್ಲಿ ೪೬೪ರೂ. ಆದರೆ ಉತ್ತರ ಪ್ರದೇಶದಲ್ಲಿ ೫೦೭ರೂ. ಇತ್ತು. ರಾಜಸ್ಥಾನದಲ್ಲಿ ೫೧೮ರೂ. ಆದರೆ ಕರ್ನಾಟಕದಲ್ಲಿ ೨೯೪ರೂ. ಅದು ಬಿಹಾರದಲ್ಲಿ ೩೩೦ರೂ. ಮಧ್ಯಪ್ರದೇಶದಲ್ಲಿ ೩೩೫ರೂ. ಮತ್ತು ಒರಿಸ್ಸಾದಲ್ಲಿ ೨೮೪ರೂ.

ಉಚಿತವೆಂದು ಕರೆಸಿಕೊಳ್ಳುವ ಪ್ರಾಥಮಿಕ ಶಿಕ್ಷಣವು ಮಕ್ಕಳಿಗೆ ಪುಕ್ಕಟೆಯಾಗಿ ದೊರೆಯುತ್ತಿಲ್ಲ. ಖಾಸಗಿ ಶಾಲೆಗಳಲ್ಲಿ ಭಾರವಾದ ಫೀ ಇದೆ. ಸರಕಾರಿ ಮತ್ತು ಅರೆ ಸರಕಾರಿ ಶಾಲೆಗಳೂ ಇಂಥ ಶುಲ್ಕಗಳಿಂದ ಮುಕ್ತವಾಗಿಲ್ಲ. ಪ್ರವೇಶ, ಪರೀಕ್ಷೆ, ವರ್ಗಾವಣೆ, ಸಮಾರಂಭ ಮುಂತಾದ ಸಮಯದಲ್ಲಿ ಈ ಹಣ ವಸೂಲು ಮಾಡಲಾಗುತ್ತದೆ. ವಸ್ತ್ರ ಪುಸ್ತಕ ಸಮವಸ್ತ್ರ ಮಧ್ಯಾಹ್ನದ ಊಟ ಮುಂತಾದವು ಕೆಲವೇ ವಿದ್ಯಾರ್ಥಿಗಳಿಗೆ ಉಚಿತವಾಗಿ ದೊರೆಯುತ್ತವೆ. ಇನ್ನುಳಿದವರ ಪಾಲಕರು ವೆಚ್ಚ ಮಾಡುವುದು ಅನಿವಾರ್ಯ. ಆದರೆ ಕೆಲವು ಕುಟುಂಬಗಳಿಗೆ ಹೊಟ್ಟೆ ತುಂಬಿಸಿಕೊಳ್ಳುವುದೇ ಕಠಿಣವಾಗಿರುವಾಗ ಶಿಕ್ಷಣಕ್ಕಾಗಿ ಹಣ ಕೊಡಲು ಹೇಗೆ ಸಾಧ್ಯ? ಈಗ ಭಾರತದಲ್ಲಿ ಸುಮಾರು ೫ ಕೋಟಿ ಕುಟುಂಬಗಳು ಇಂಥ ಸ್ಥಿತಿಯಲ್ಲಿವೆ. ಈ ಕುಟುಂಬಗಳು ಮಕ್ಕಳನ್ನು ಶಾಲೆಗೆ ಕಳಿಸುವ ಬದಲಾಗಿ ದುಡಿಯಲು ಕಳಿಸುತ್ತವೆ. ಆದ್ದರಿಂದಲೇ ಮಕ್ಕಳು ಬಾಲಕಾರ್ಮಿಕರಾಗುವುದನ್ನು ತಪ್ಪಿಸುವುದು ಸಾಧ್ಯವಾಗುತ್ತಿಲ್ಲ.

ಪ್ರಾಥಮಿಕ ಶಿಕ್ಷಣದ ಸುಧಾರಣೆಗಾಗಿಯೇ ಜಿಲ್ಲಾಮಟ್ಟದ ಶಿಕ್ಷಣ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಅವುಗಳಿಗಾಗಿ ವೆಚ್ಚ ಮಾಡಲು ವಿದೇಶಿ ಸಹಾಯ ಪಡೆಯಲಾಗುತ್ತಿದೆ. ಅದರಿಂದಾಗಿ ವಿದೇಶಿ ಅಧಿಕಾರಿಗಳು ಈ ಕಾರ್ಯಕ್ರಮದ ಮೇಲ್ವಿಚಾರಣೆಗಾಗಿ ಭಾರತಕ್ಕೆ ಬರುತ್ತಾರೆ. ಅವರ ಎಲ್ಲ ವೆಚ್ಚವನ್ನು ಆ ಸಾಲದ ಹಣದಲ್ಲಿಯೇ ಭರಿಸಲಾಗುತ್ತದೆ. ನಮ್ಮ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯ ಬಗ್ಗೆ ವಿದೇಶಿ ಸಲಹೆಗಾರರ ಅವಶ್ಯಕತೆ ಇದೆಯೆ? ಶಾಲಾ ಶಿಕ್ಷಣಕ್ಕೆ ಹಣದ ಕೊರತೆಯಿದೆ ಎಂಬುದು ನಿಜ. ಆದರೆ ಆ ಹಣದಲ್ಲಿಯೇ ದುಂದು ವೆಚ್ಚಗಳೂ ನಡೆಯುತ್ತವೆ. ರಾಷ್ಟ್ರಮಟ್ಟದಲ್ಲಿ ನಮ್ಮ ಶಿಕ್ಷಣ ಸುಧಾರಣೆಯ ಬಗ್ಗೆ ವಿಚಾರ ಸಂಕಿರಣಗಳು ಪಂಚತಾರಾ ಹೋಟೆಲ್‌ಗಳಲ್ಲಿ ಏರ್ಪಡಿಸಲ್ಪಟ್ಟಿರುತ್ತವೆ. ಅಲ್ಲಿ ಒಂದು ಊಟಕ್ಕಾಗಿ ಮಾಡುವ ವೆಚ್ಚವು ಒಂದು ಶಾಲೆಯ ಒಂದು ವರ್ಷದ ಸಾದಿಲ್ವಾರ ವೆಚ್ಚವನ್ನು ಮೀರುತ್ತದೆ. ಇನ್ನೂ ವಿಚಿತ್ರವೆಂದರೆ, ಇಂಥ ವಿಚಾರ ಸಂಕಿರಣಗಳಲ್ಲಿ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು. ಪ್ರವಾಚಕರು ಮತ್ತು ಉನ್ನತಾಧಿಕಾರಿಗಳು ಪಾಲ್ಗೊಂಡಿರುತ್ತಾರೆ. ಇವರಾರಿಗೂ ಶಾಲಾ ಬೋಧನೆಯ ಅನುಭವವೇ ಇರುವುದಿಲ್ಲ. ನಮ್ಮ ಕೆಲವು ವೆಚ್ಚದ ಸಂಗತಿಗಳು ನಿರುಪಯೋಗಿ ಅನಿಸುತ್ತಿವೆ. ಉದಾಹರಣೆಗೆ, ಅನೇಕ ಶಾಲೆಗಳಿಗೆ ದೂರದರ್ಶನ ಸೆಟ್‌ಗಳನ್ನು ಕೊಡಲಾಗಿದೆ. ಆದರೆ ಅದನ್ನಿಡಲು ಸ್ಥಳ ಮತ್ತು ಅದನ್ನು ನಡೆಸಲು ಬೇಕಾಗುವ ವಿದ್ಯುತ್ ಸಂಪರ್ಕ ಆ ಶಾಲೆಯಲ್ಲಿದೆಯೆ ಎಂಬುದನ್ನು ವಿಚಾರಿಸಲಿಲ್ಲ! ಹೀಗಾಗಿ ಆ ಟಿ.ವಿ. ಸೆಟ್ ಮುಖ್ಯಾಧ್ಯಾಪಕರ ಮನೆ ಅಥವಾ ಶಾಲಾ ಸಮಿತಿಯ ಮುಖ್ಯಸ್ಥನ ಮನೆ ಸೇರಿವೆ. ಕೆಲವೆಡೆ ವಿಜ್ಞಾನದ ಉಪಕರಣಗಳನ್ನು ಕೊಡಲಾಗಿದೆ. ಆದರೆ ಅವುಗಳನ್ನು ಉಪಯೋಗಿಸುವುದರ ಬಗ್ಗೆ ಶಿಕ್ಷಕರಿಗೆ ಸರಿಯಾದ ತರಬೇತಿಯಿಲ್ಲ. ಆ ಉಪಕರಣಗಳಿಗೆ ಧಕ್ಕೆಯಾದರೆ ಅದನ್ನು ಮುಖ್ಯಾಧ್ಯಾಪಕರು ಭರಿಸಬೇಕಾಗುವುದೆಂಬ ಕಾರಣಕ್ಕಾಗಿ ಅವರು ಅವುಗಳನ್ನು ಹೊರತೆಗೆಯುವುದೇ ಇಲ್ಲ. ಇದೇ ಸ್ಥಿತಿ ಶಾಲಾ ಗ್ರಂಥಾಲಯಕ್ಕೂ ಬಂದಿದೆ. ಕಪಾಟಿನಲ್ಲಿಯ ಪುಸ್ತಕಗಳು ಧೂಳು ತಿಂದು ಹಾಳಾಗುತ್ತಿವೆ ಹೊರತು, ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಉಪಯೋಗಿಸಲು ಲಭ್ಯವಾಗುತ್ತಿಲ್ಲ. ಈ ಎಲ್ಲ ಬೋಧನಾ ಸಾಧನಗಳಲ್ಲಿ ಹೂಡಿದ ಹಣವು ವ್ಯರ್ಥವಲ್ಲವೆ?

ಹುಲ್ಲು ಮೆದೆಯ ಬಳಿ ಅಭ್ಯಾಸ

ಒಂದು ಅಂದಾಜಿನ ಪ್ರಕಾರ, ಪುಕ್ಕಟೆ ಮತ್ತು ಉತ್ತಮ ಪ್ರಾಥಮಿಕ ಶಿಕ್ಷಣವನ್ನು ಎಲ್ಲರಿಗೂ ಒದಗಿಸಲು ಭಾರತಕ್ಕೆ ಮುಂದಿನ ಹತ್ತು ವರ್ಷಗಳಲ್ಲಿ ೧,೩೭.೦೦೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ನಮ್ಮ ಸಂವಿಧಾನದ ನಿರ್ದೇಶಕ ತತ್ವವನ್ನು ಪೂರ್ತಿಗೊಳಿಸಲು ಈ ದೇಶವು ಇಷ್ಟು ಹಣ ವ್ಯಯಿಸಬಲ್ಲದೆ? ಸರಕಾರವು ಬಹುದಿನಗಳಿಂದ ಸಮಗ್ರರಾಷ್ಟ್ರೀಯ ಉತ್ಪಾದನೆಯ ಶೇ.೬ ರಷ್ಟು ಹಣವನ್ನು ಶಿಕ್ಷಣಕ್ಕಾಗಿ ವ್ಯಯಿಸುವ ಉದ್ದೇಶವನ್ನು ಹೇಳುತ್ತಲೇ ಬಂದಿದೆ. ಅದನ್ನು ಕಾರ್ಯರೂಪಕ್ಕೆ ತಂದರೆ ಅನುಷ್ಠಾನವು ಸುಲಭವಾದೀತು. ಶಿಕ್ಷಣ ಮತ್ತು ಆರೋಗ್ಯಕ್ಕೆ ಹಣವಿಲ್ಲವೆಂದು ಹೇಳಿದರೆ ಅದು ಮೂರ್ಖತನವಾದೀತು.

ಎಂ. ಎಸ್. ಬದಾಮಿ
ಅರ್ಥಶಾಸ್ತ್ರ ಉಪನ್ಯಾಸಕರು, ಶ್ರೀ [illegible] ಕಾಲೇಜು [illegible]

ಜೀವ ಬೆಳಕಿನ ಸತ್ಯ

*ನಿನಗೂ ವಯಸ್ಸಾಯಿತು ಇಳೆ
ಹೇಗೆ ನಮ್ಮ ಭಾರವನ್ನು ತಡೆದುಕೊಳ್ಳುತ್ತೀ ?
ಅಗ್ನಿ, ಹಿಮ, ಗಾಳಿಯನ್ನು ಎದೆಯಲ್ಲಿಟ್ಟುಕೊಂಡು
ಕೋಟಿ ಕೋಟಿ ವರುಷಗಳೂ
ಹೀಗೆ ನಿರಂತರ ಬದುಕಿದವಳು*

*ಕೋಪಗೊಂಡಾಗ ಕೆಂಪಾಗಿ
ಸಂತಸವಾದಾಗ ತಂಪಾಗಿ
ಮೈಯ ತುಂಬೆಲ್ಲ ಹಸಿರ ಮೆದ್ದವಳು*

*ಮುಗಿಲಿನವರು ನಿನಗೆ ಬಿಸಿಲಕೊಟ್ಟರು
ಬೆಳದಿಂಗಳ ಕೊಟ್ಟರು
ಮುಡಿಯ ತುಂಬೆಲ್ಲ ಬೆಳ್ಳಿ ಚುಕ್ಕಿ ಇಟ್ಟರು
ನಿನ್ನ ಬಿಸಿಯುಸಿರನ್ನೆಲ್ಲ ಮೋಡವಾಗಿಸಿಕೊಂಡು
ಹಳ್ಳ-ಕಣಿವೆ, ಗಿರಿ ಕಂದರಗಳ ದಾಟಿ
ನದಿ-ಸಾಗರಗಳನು ಸೇರಿ ಹೋದರು*

*ಆ ಯುಗಗಳು
ನಮಗಾಗಿ ಪಟ್ಟಪಾಡು ಯಾರಿಗೂ ಬೇಡ
ಒಂದು ಸಣ್ಣ ಗಳಿಗೆಗೆ
ಪುಟ್ಟ ಜೀವಿಗೆ
ನನ್ನಂಥ ಮನುಷ್ಯ ರೂಪದ ಪ್ರಾಣಿ ಸಂಕುಲಕೆ
ಎಷ್ಟೊಂದು ಜೀವನದ ಧಾರೆ ಎರೆದೆ*

*ಮೈಯ ತುಂಬಿದ್ದ ಕಲ್ಲು , ಮಣ್ಣು , ಧೂಳು ಕೊಡವಿ
ಫಲವತ್ತಾದ ಹಸಿರ ಪಾಚಿಯನ್ನು ಬೆಳೆಸಿಕೊಂಡವಳು
ಪಾಚಿಯೊಂದಿಗೇ ಜೀವ ಬೆಳಕನ್ನು ಹೊತ್ತಿಸಿದವಳು.*

*ಆ ಒಂದು ಬೆಳಕು
ಎಷ್ಟು ಹಸಿವೆಗಳನು ಬೆಳಗಿಸಿತು
ಕತ್ತಲೆಯೊಳಗೂ ಎಷ್ಟೊಂದು ಬದುಕ ತುಂಬಿಸಿಬಿಟ್ಟಿತು.*

*ನಿನಗೋ ಈಗ ಲೆಕ್ಕವಿಲ್ಲದ ಆಯುಷ್ಯ
ನಮಗೆ ಅದೇ ಜೀವ-ಮರಣಗಳ ಭಯ
ಆದರೂ ಇಲ್ಲೊಂದು ಪರಿವರ್ತನೆ ಶಕೆ*



*ನಾವು ಸತ್ತ ಕ್ಷಣದಲ್ಲೇ ಹುಟ್ಟುವ
ಜೀವ ಸೃಷ್ಟಿಯ ಫಲ!
ಎಷ್ಟೊಂದು ಶಕ್ತಿ ವಿಸ್ಮಯಗಳಿವೆ ನಿನ್ನಲ್ಲಿ
ನಿಜ ನಿನಗೂ ಒಂದು ಸಾವಿದೆ !
ಅದು ಬಿರುಗಾಳಿಯಂತೆ, ಕಾಡ್ಗಿಚ್ಚಿನಂತೆ
ಪ್ರವಾಹ ಭೂಕಂಪನಗಳಂತೆ
ಬಂದು ಹೋಗುವ ಕಟ್ಟಕಡೆಯ ಪ್ರಳಯ !!*

*ಆದರೂ ಅದು ಹೊಸ ಸೃಷ್ಟಿಗೆ, ಹೊಸ ಬದುಕಿಗೆ
ಕಾತರಿಸುತ್ತಲೇ ಇರುವ
ನನ್ನ ನಿನ್ನೊಳಗಿನ ಸತ್ಯ*


ನಿಂಗಪ್ಪ ಮುದೇನೂರ
ಕನ್ನಡ ವಿಶ್ವವಿದ್ಯಾಲಯ-ಹಂಪಿ
ವಿದ್ಯಾರಣ್ಯ - ೫೮೩೨೭೬ ಕಮಲಾಪುರ



ನವ ಶಿವಾಲಯ

*ನೀನು ತಪ್ಪು ಭಾವಿಸದಿದ್ದರೆ
ಒಂದು ಸತ್ಯ ಹೇಳುವೆ ಓ! ಬ್ರಾಹ್ಮಣ:
ಗರ್ಭ ಗುಡಿಯಲಿಹ ನಿನ್ನ ಮೂರ್ತಿಗಳು
ಬಹಳ ಹಳೆಯವಾದವು,
ನಿನ್ನವರೊಂದಿಗೇನೇ ಭೇದವೆಣಿಸುವುದ
ಈ ಮೂರ್ತಿಗಳಿಂದಲೇ ಕಲಿತೆ ನೀನು!*

*ಜಗಳ, ಕಾದಾಟ - ಈ ಮೌಲ್ವಿ
ಈ ಪ್ರವಚನಕಾರನಿಗೆ ದೇವರೇ ಕಲಿಸಿದ!*



*ಇವೆರಡರಿಂದಲೂ ಬೇಸತ್ತ ನಾನು
ಮಂದಿರ ಮಸೀದಿ ಎರಡನೂ ತ್ಯಜಿಸಿದೆ!
ಪ್ರವಚನಕಾರನ ಪ್ರವಚನ ಬಿಟ್ಟೆ
ನಿನ್ನ ಪುರಾಣ ತ್ಯಜಿಸಿದೆ!*

*ಕಲ್ಲಿನ ಮೂರ್ತಿಗಳಲಿ
ದೇವರಿದ್ದಾನೆಂದು ನೀನು ತಿಳಿದಿರುವೆ
ಆದರೆ ನನಗೆ ತಾಯ್ನಾಡಿನ ಮಣ್ಣಿನ
ಕಣ ಕಣ ನನ್ನ ಪಾಲಿನ ದೇವರು ಕಣಾ!
ಬಾ, ಇವನಾರವ ಇವನಾರವ
ಎನ್ನುವ ಪರದೆ ತೊಡೆ!*

*ಅನ್ಯತೆಯ ಕಳೆದು ಅಗಲಿದವರ
ಮತ್ತೆ ಒಂದುಗೂಡಿಸು!
ಹೃದಯದ ಊರು ಬಹಳ
ಕಾಲವಾಯ್ತು ಶೂನ್ಯವಾಗಿದೆ
ಬಾ, ಈ ಊರಿನಲಿ ಹೊಸದೊಂದು
ಶಿವಾಲಯ ಕಟ್ಟೋಣ!*

*ಲೋಕದ ಎಲ್ಲ ತೀರ್ಥಕಿಂತಲೂ
ನಮ್ಮ ತೀರ್ಥ ಪವಿತ್ರವಾಗಿರಲಿ!
ಆಕಾಶದಂಗಳಕೆ ಇದರ ಕಲಶ ತಲುಪಿಸು
ಪ್ರತಿ ಬೆಳಗಿನ ಜಾವ
ಮಧುರಮಯ ಮಂತ್ರಗಳು ಕೇಳಿಬರಲಿ!
ಪೂಜಾರಿಗಳಿಗೆಲ್ಲ ಪ್ರೇಮದ
ಮದಿರೆ ಕುಡಿಸು!
ಶಕ್ತಿ ಶಾಂತಿ ಈ ಭಕ್ತರ ಗೀತಗಳಲಿದೆ
ಈ ನೆಲದ ನಿವಾಸಿಗಳ
ಮುಕ್ತಿ ಕೂಡ ಪ್ರೇಮದಲಿದೆ!*

ಮೂಲ ಉರ್ದು : ಡಾ|| ಇಕ್ಬಾಲ್
ಕನ್ನಡ : ಡಾ|| ಪಂಚಾಕ್ಷರಿ ಹಿರೇಮಠ

ಸ್ವಾವಲಂಬನ ಕರೆ

*ಎಲ್ಲೆ ಮೀರಿದ ಕನಸ ಗೋಪುರ
ಗಗನ ಚುಂಬಿಸಿ ನಿಂತಿದೆ
ಅಲ್ಲೆ ಎಡಬಲ ಬೀಸಿ ಚಾಮರ
ಮನಕೆ ಮುದವನು ತಂದಿದೆ*

*ಸುಖದ ಶಿಖವದು ಏರಿ ಸಿರಿವರ
ವಿಶ್ವದಗಲದಿ ದೃಷ್ಟಿ ಹಾಯ್ದಿದೆ
ಬಕದ ಹಸ್ತವು ಚಾಚಿ ಬಡವರ
ಬೆವರ ಗಳಿಕೆಯ ನುಂಗಿದೆ*

*ಆತುಕೊಳ್ಳುತ ಮಾತು ಜನಪರ
ನಾಟ್ಯ ನಾಟಕವಾಡಿದೆ
ಪೊಳ್ಳು ಮುಗುಡದ ಮಾತು ಪರಪರ
ಒಣಗಿ ಬೇಡದ ಕಸಗಳೆನ್ನುತ ದಾಟಿದೆ*

*ಛಿದ್ರ ಮನಸದು ದಿನವು ಗುರುತರ
ಕೆಲಸ ಕಾರ್ಯವ ತೊರೆದಿದೆ
ನಾಕ-ನರಕವು ಎಲ್ಲ ದೇವರ
ಆಟವೆನ್ನುತ ಮರೆದಿದೆ*

*ಶೂನ್ಯ ನಡತೆಗೆ ಬಾನ ಚಂದಿರ
ಬಯಸಿ ಗೆಳೆತನ ಸಾರಿದೆ
ಒಂಟಿ ಜೀವದ ಒಂಟಿ ಸಮರ-
ವ ಹೂಡು ಬಾ ಕರೆದಿದೆ*



ಎ. ಸುಬ್ರಹ್ಮಣ್ಯ ಭಟ್
ತುಂಬೆ ಪ. ಪೂ. ಕಾಲೇಜು, ತುಂಬೆ - ೫೭೪ ೧೨೦

ನಿಖಿಲ್‌ದಾ - ಭಾರತ ಪತ್ರಿಕಾರಂಗದ ದಿಗ್ಗಜ

ಎರಡು ವರ್ಷಗಳ ಹಿಂದೆ ಜೂನ್ ೨೭ರಂದು ನವದೆಹಲಿಯಲ್ಲಿ ಕೊನೆಯುಸಿರೆಳೆದ ನಿಖಿಲ್ ಚಕ್ರವರ್ತಿಯವರದು ನಮ್ಮ ದೇಶದ ಪತ್ರಿಕಾರಂಗದಲ್ಲಿ ವಿಶಿಷ್ಟ ಸ್ಥಾನ. ಐದು ದಶಕಗಳ ಕಾಲ ತಮ್ಮ ಸುರಿತ ಬರವಣಿಗೆಗಳಿಂದ ದೇಶದ ಹಾಗೂ ಅಂತರರಾಷ್ಟ್ರೀಯ ಮಟ್ಟದ ಆಗುಹೋಗುಗಳ ಬಗ್ಗೆ ಸ್ಪಂದಿಸಿದ ಧೀಮಂತ ಪತ್ರಕರ್ತ ಹಾಗೂ ಖ್ಯಾತ ಅಂಕಣಕಾರ. ಅಪಾರ ಓದುಗರ ಹಾಗೂ ಜನರ ಮನ್ನಣೆ ಗಳಿಸಿದ್ದ ಹಳೆ ತಲೆಮಾರಿನ ವ್ಯಕ್ತಿ.

ಇವರ ನಿಧನದ ಸುದ್ದಿ ಹೆಚ್ಚಿನ ಪತ್ರಿಕೆಗಳಲ್ಲಿ ಎರಡು-ಮೂರು ವಾಕ್ಯಗಳಿಗಷ್ಟೇ ಸೀಮಿತವಾಯಿತು. ಸಾರ್ವಜನಿಕ ಜೀವನಕ್ಕೆ ಅವರಿತ್ತ ಅಮೂಲ್ಯ ಕೊಡುಗೆಗಳು ಹಾಗೂ ಅವರು ಪ್ರತಿಪಾದಿಸಿದ ಸಿದ್ಧಾಂತದ ಬಗ್ಗೆ ಹೆಚ್ಚಿನ ಪತ್ರಿಕೆಗಳು ಗಮನ ಹರಿಸಲಿಲ್ಲ. ಸುದ್ದಿಯನ್ನು ಸರಕುಗಳನ್ನಾಗಿ ಪರಿಗಣಿಸಿ, ವ್ಯಾಪಾರಿ ದೃಷ್ಟಿಕೋನದಿಂದ ಮಾತ್ರ ಪತ್ರಿಕೆಗಳನ್ನು ಪ್ರಕಟಿಸುವವರ ಪಾಲಿಗೆ ಇವರು ನಗಣ್ಯರಾದದ್ದು ಅಚ್ಚರಿಯ ವಿಷಯವೇನಲ್ಲ.

ಹಲವರಿಗೆ ನಿಖಿಲ್‌ದಾ ಎಂದೇ ಪರಿಚಯವಿದ್ದ ನಿಖಿಲ್ ಚಕ್ರವರ್ತಿ, ಅಸ್ಸಾಮಿನ ಸಿಲ್ಚಾರ್‌ನಲ್ಲಿ ೧೯೧೩ರ ನವೆಂಬರ್ ೩ರಂದು ಜನಿಸಿದರು. ತಂದೆ ನರೇಂದ್ರನಾಥ್ ಕಲ್ಕತ್ತದಲ್ಲಿ ಆಂಗ್ಲಭಾಷೆಯ ಪ್ರಾಧ್ಯಾಪಕರಾಗಿದ್ದರು. ಆ ನಗರದ ಹಿಂದೂ ಸ್ಕೂಲ್‌ನಲ್ಲಿ ನಿಖಿಲ್‌ರ ವಿದ್ಯಾಭ್ಯಾಸ. ನಂತರ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪದವಿ ಶಿಕ್ಷಣ. ಪ್ರಥಮ ದರ್ಜೆಯಲ್ಲಿ ತೇರ್ಗಡೆ. ಕಲ್ಕತ್ತ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಓದು ಮುಗಿಸಿ ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡ್‌ಗೆ ಪಯಣ. ಆಕ್ಸ್‌ಫರ್ಡ್‌ನ ಮೆರ್‌ಟನ್ ಕಾಲೇಜಿನಲ್ಲಿ ಕಲಿಕೆಯ ಮುಂದುವರಿಕೆ. ಆ ಕಾಲದಲ್ಲೇ ಮಾರ್ಕ್ಸ್‌ವಾದದಿಂದ ಪ್ರಭಾವಿತ. ಮೋಹನ್ ಕುಮಾರ ಮಂಗಳಂ, ಜ್ಯೋತಿ ಬಸು, ಭೂಪೇಶ್ ಗುಪ್ತ, ಇಂದ್ರಜಿತ್ ಗುಪ್ತ, ಪಿ. ಎನ್. ಹಕ್ಸರ್ ಮುಂತಾದವರು ಬ್ರಿಟನ್‌ನಲ್ಲಿ ಇವರ ಸಮಕಾಲೀನರು. ಎಡಪಂಥ ವಿಚಾರಧಾರೆ ಇವರ ನಡುವಿನ ಸ್ನೇಹಸೇತುವಾಗಿತ್ತು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದ ಡಾ॥ ಬಿ. ಸಿ. ರಾಯ್‌ರ ಅಕ್ಕನ ಮಗಳಾದ ರೇಣು ರಾಯ್‌ರನ್ನು ಭೇಟಿಯಾದದ್ದು ಇಲ್ಲೇ. ನಂತರ ಪ್ರೇಮಾಂಕುರವಾಗಿ ವಿವಾಹವಾದದ್ದು ೧೯೪೨ರಲ್ಲಿ.

೧೯೪೩ರಲ್ಲಿ ಭಾರತಕ್ಕೆ ಹಿಂದಿರುಗಿ, ಕಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ ಚರಿತ್ರೆಯ ಉಪನ್ಯಾಸಕರಾದರು. ಭಾರತೀಯ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಪಿ.ಸಿ. ಜೋಶಿಯವರಿಂದ ೧೯೪೩ರಲ್ಲಿ ಪಕ್ಷದ ಪೂರ್ಣಾವಧಿಯ ಕಾರ್ಯಕರ್ತನಾಗಲು ಕರೆ. ಅಂತೆಯೇ, ಪಕ್ಷದ ಪತ್ರಿಕೆ 'ಪೀಪಲ್ಸ್ ವಾರ್'ನ ಬಂಗಾಳದ ವರದಿಗಾರನಾಗಿ ಪತ್ರಿಕಾರಂಗಕ್ಕೆ ಪಾದಾರ್ಪಣ. ಆ ಕಾಲದಲ್ಲಿ ಬಂಗಾಳದ ಬರ ತೇಭಾಗ ಆಂದೋಳನ. ವಸಾಹತುಶಾಹಿ ವಿರುದ್ಧ ಜನಜಾಗೃತಿ ಮುಂತಾದ ವಿಷಯಗಳ ಬಗ್ಗೆ ಇವರ ಲೇಖನಿಯಿಂದ ಬರಹಗಳು ಹರಿದವು. ರಾಷ್ಟ್ರೀಯ ಆಂದೋಳನವನ್ನು ಹತ್ತಿಕ್ಕುವ ಬ್ರಿಟಿಷರ ಕಾರಸ್ಥಾನವನ್ನು ಬಹಿರಂಗಗೊಳಿಸಿದ್ದಕ್ಕೆ ೧೯೪೬ರಲ್ಲಿ ಬಂಧನ. ದಕ್ಷಿಣ ಏಷ್ಯಾಗೆ ಸೈನ್ಯ ಕಳುಹಿಸಲು ಪಿತೂರಿ ನಡೆಸಿದ್ದ ಬ್ರಿಟಿಷ್ ಸರಕಾರದ ತೀರ್ಮಾನದ ಬಗ್ಗೆ ಸುಳಿವು ಪಡೆದದ್ದು ಇವರ ಮೇಲಿದ್ದ ಇನ್ನೊಂದು ಆಪಾದನೆ. ಸ್ವಾತಂತ್ರ್ಯ ಸಿಕ್ಕಿದ ನಂತರ ಈ ಮೊಕದ್ದಮೆಗಳು ರದ್ದಾದವು.

೧೯೪೮ರಲ್ಲಿ ಸಿ.ಪಿ.ಐ. ಭೂಗತವಾದಾಗ ಇವರದು ಪ್ರಮುಖ ಪಾತ್ರ. ಆದರೆ ಆ ಪಕ್ಷದಲ್ಲಿ ಯಾವ ಹುದ್ದೆಯಲ್ಲೂ ಇರಲಿಲ್ಲ. ನೇಪಥ್ಯದಲ್ಲೇ ಕೆಲಸ ಮಾಡುವ ನಿರ್ಧಾರ. ೧೯೫೨ರಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆದಾಗ ದೆಹಲಿಗೆ ಸ್ಥಳಾಂತರ. ಇವರ ಪತ್ನಿ ಸಿ.ಪಿ.ಐ. ಎಂ. ಪಿ. ಅಭ್ಯರ್ಥಿಯಾಗಿ ಲೋಕಸಭೆಗೆ ಪಶ್ಚಿಮ ಬಂಗಾಳದಿಂದ ಚುನಾಯಿತರಾದರು. ಪಕ್ಷದ ಪತ್ರಿಕೆ ನ್ಯೂ ಏಜ್‌ನ (ಮುಂಚಿನ ಹೆಸರು ಪೀಪಲ್ಸ್ ವಾರ್) ಸಂಪಾದಕರಾಗಿ ಕೆಲವು ಸಮಯ ದುಡಿದರು. ೧೯೫೭ರಲ್ಲಿ ಇಂಡಿಯ ಪ್ರೆಸ್ ಏಜೆನ್ಸಿ (IPA) ಸಂಸ್ಥೆಯನ್ನು ಪ್ರಾರಂಭಿಸಿದರು. ಜವಹರ್‌ಲಾಲ್ ನೆಹರುರ ವೈಯಕ್ತಿಕ ಸಹಾಯಕರಾಗಿದ್ದ ಎಂ. ಒ. ಮಥಾಯ್‌ರ ಚಟುವಟಿಕೆಗಳ ಬಗ್ಗೆ ಬರೆದ ಇವರ ಲೇಖನ ಸಂಸದ್‌ನಲ್ಲಿ ತೀವ್ರವಾದ ಚರ್ಚೆಗೆ ಒಳಪಟ್ಟಿತು. ಕೊನೆಗೆ ಮಥಾಯ್‌ರ ಕೆಲಸಕ್ಕೇ ಮುಳ್ಳಾಯಿತು.

೧೯೬೨ರಲ್ಲಿ ''ಮೇನ್‌ಸ್ಟ್ರೀಮ್'' ಎಂಬ ವಾರಪತ್ರಿಕೆಯನ್ನು ಶುರುಮಾಡಿದರು. ಇದು ಸಮಕಾಲೀನ ರಾಜಕೀಯ, ಸಾಮಾಜಿಕ, ಆರ್ಥಿಕ, ಹಾಗೂ ಅಂತರ ರಾಷ್ಟ್ರೀಯ ವಿಷಯಗಳ ವೇದಿಕೆಯಾಯಿತು. ಜನರ ಅಭಿಪ್ರಾಯ ಮೂಡಿಸುವುದರಲ್ಲಿ ಗಣನೀಯ ಪಾತ್ರ ವಹಿಸಿತು. ಸುಮಾರು ೨೫ ವರ್ಷಗಳ ಕಾಲ ಇದರ ಸಂಪಾದಕರಾಗಿದ್ದರು.

''ಮೇನ್‌ಸ್ಟ್ರೀಮ್''ನಲ್ಲಿ ನಿರ್ದಯವಾಗಿ ತುರ್ತು ಪರಿಸ್ಥಿತಿಯನ್ನು (೧೯೭೫-೭೭) ಖಂಡಿಸಿದರು. ಇತರ ಕೆಲವು ಪತ್ರಕರ್ತರು ಸೊಲ್ಲೇ ಎತ್ತದಿದ್ದಾಗ, ಇವರದು ದಿಟ್ಟ ಪ್ರತಿಭಟನೆ. ಪತ್ರಿಕಾ ಸ್ವಾತಂತ್ರ್ಯದ ಮೇಲೆ ದೊಡ್ಡ ದಾಳಿಯಾದ ಆ ಸಂದರ್ಭದಲ್ಲಿ ಕುಖ್ಯಾತ ನಿರ್ಬಂಧಗಳಿದ್ದುದರಿಂದ ಕೆಲಸಮಯ ಈ ಪತ್ರಿಕೆಯ ಪ್ರಕಟನೆಯನ್ನು ನಿಲ್ಲಿಸಲಾಯಿತು. ಆ ಅವಧಿಯಲ್ಲಿ ಬರೆದ ''ಮಾರುತಿಯಿಂದ ಮಾಫಿಯಾವರೆಗೆ'' ಎಂಬ ಲೇಖನ ಆಡಳಿತದ ಚುಕ್ಕಾಣಿ ಹಿಡಿದವರನ್ನು ಹಾಗೂ ಜನರನ್ನು ಹೊಡೆದೆಬ್ಬಿಸುವಂತೆ ಇತ್ತು.

ಸಿ.ಪಿ.ಐ.ಯನ್ನು ೧೯೭೮ರಲ್ಲಿ ಬಿಟ್ಟರು. ಆದರೆ ನಂತರವೂ ಎಡಪಂಥದ ವಿಚಾರಧಾರೆಯಿಂದ ವಿಮುಖರಾಗಲಿಲ್ಲ. ಇವರಿಗೆ ಎಲ್ಲಾ ಪಕ್ಷಗಳ ನಾಯಕರ ಹಾಗೂ ಸಕ್ರಿಯ ಕಾರ್ಯಕರ್ತರೊಡನೆ ಒಳ್ಳೆಯ ಸಂಬಂಧವಿತ್ತು.

ರಾಷ್ಟ್ರೀಯ ರಂಗ ಸರ್ಕಾರ ೧೯೯೦ರಲ್ಲಿ ಪದ್ಮ ಭೂಷಣ ಪ್ರಶಸ್ತಿ ಘೋಷಿಸಿದಾಗ, ಇವರು ಒಬ್ಬ ಪತ್ರಕರ್ತ ಯಾವುದೇ ಒಂದು ವ್ಯವಸ್ಥೆಯ ಅಂಗವಾಗಿ ಗುರುತಿಸಲ್ಪಡಬಾರದಾಗಿ, ಅದನ್ನು ವಿನಯದಿಂದ ತಿರಸ್ಕರಿಸಿದರು. ಇವರು ಪತ್ರಕರ್ತರಾಗಿ ಜರ್ಮನಿ, ಪೋಲೆಂಡ್, ಚೀನ, ಅಮೆರಿಕ, ಬಾಂಗ್ಲದೇಶ, ಪಾಕಿಸ್ತಾನ, ಆಫ್‌ಘಾನಿಸ್ಥಾನ, ದಕ್ಷಿಣ ಆಫ್ರಿಕ, ಶ್ರೀಲಂಕ ಮುಂತಾದ ದೇಶಗಳಿಗೆ ಭೇಟಿಯಿತ್ತರು. ಮಾವೋ, ಜಿಯಾಉಲ್ ಹಕ್, ಮುಜಿಬೂರ್ ರೆಹಮಾನ್ ಇತ್ಯಾದಿ ನಾಯಕರ ಸಂದರ್ಶನ ಮಾಡಿದರು. ಹಂಗೇರಿಗೆ ೧೯೫೬ರಲ್ಲಿ ಭೇಟಿ ನೀಡಿ, ಅಲ್ಲಿ ಜರುಗಿದ ವಿದ್ಯಮಾನಗಳು ಪ್ರತಿಕ್ರಾಂತಿ ಕಾರಕವಲ್ಲವೆಂದು ''ಮೇನ್‌ಸ್ಟ್ರೀಮ್''ನಲ್ಲಿ ಪ್ರತಿಪಾದಿಸಿದರು. ಈ ನಿಲುವು ಬಿಸಿ ಬಿಸಿ ಚರ್ಚೆಗೆ ಕಾರಣವಾಯಿತು. ೧೯೬೨ರಲ್ಲಿ ಭಾರತದ ಮೇಲೆ ಚೀನಾ ದಾಳಿ ಮಾಡಿದಾಗ, ಆಗಿದ್ದ ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ ''ಪ್ರಾವ್ದ''ದ ಮೌನವನ್ನು ತಮ್ಮ ಅಂಕಣದಲ್ಲಿ ತೀವ್ರವಾಗಿ ಖಂಡಿಸಿದರು. ಇಂದಿರಾ ಗಾಂಧಿ ರಾಜೀವ್‌ರನ್ನು ತೀವ್ರವಾಗಿ ಟೀಕಿಸಿದರೂ, ವೈಯಕ್ತಿಕ ದ್ವೇಷವೇನೂ ಇರಲಿಲ್ಲ.

ಇವರ ಬಿಚ್ಚು ಮನಸ್ಸಿನ, ನೇರ ನುಡಿಗಳ, ಪ್ರಖರ ವಿಶ್ಲೇಷಣೆಗಳ, ಸರಳ ಶೈಲಿಯ ಲೇಖನಗಳು ಓದುಗರ ಗಮನ ಸೆಳೆದಿದ್ದವು. ಹಿರಿಯ ಸಂಪಾದಕರಾಗಿದ್ದರೂ ತಮ್ಮನ್ನು ವರದಿಗಾರನೆಂದೇ ಗುರುತಿಸಿಕೊಳ್ಳುತ್ತಿದ್ದರು. ಎಂಬತ್ತರ ಇಳಿವಯಸ್ಸಿನಲ್ಲೂ ಸಂಚಾರ ಮಾಡಿ ವೈಯಕ್ತಿಕವಾಗಿ ಘಟನಾವಳಿಗಳ ನೇರ ಅನುಭವ ಪಡೆಯುವ ಹುಮ್ಮಸ್ಸಿತ್ತು. ೧೯೮೯ರಲ್ಲಿ ಚೀನಾದ ಟಿಯನನ್ ಮೆನ್ ಚೌಕದ ಘಟನೆಗಳು ಹಾಗೂ ಪೂರ್ವ ಯುರೋಪಿನ ಸಮಾಜವಾದಿ ರಾಷ್ಟ್ರಗಳ ಪತನ ಕುರಿತ ಬರಹಗಳು ವಿಚಾರ ಪ್ರಚೋದಕವಾಗಿದ್ದವು. ಕಾಶ್ಮೀರದ ಬಗ್ಗೆ ಪೂರ್ವಾಗ್ರಹ ಪೀಡಿತವಲ್ಲದ ವಿಷಯ ಮಂಡನೆಯೂ ಗಮನಾರ್ಹವಾದದ್ದು. ಭಾರತ - ಪಾಕ್ ಬಾಂಧವ್ಯ ಬೆಳೆಯಬೇಕೆಂಬ ಅವರ ನೈಜ ಕಳಕಳಿಯನ್ನು ಪಾಕಿಸ್ತಾನದಲ್ಲೂ ಸ್ವಾಗತಿಸಲಾಯಿತು.

೧೯೮೩ರಲ್ಲಿ ಸ್ಥಾಪಿಸಲ್ಪಟ್ಟ ಅಲಿಪ್ತ ರಾಷ್ಟ್ರಗಳ ಸಮೂಹ ಮಾಧ್ಯಮಗಳ ಸಂಸ್ಥೆ – ನಮೀಡಿಯ ಪ್ರತಿಷ್ಠಾನದ (Namedia Foundation) ಚೇರ್‌ಮನ್‌ರಾಗಿದ್ದರು. ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ರಾಷ್ಟ್ರೀಯ ಭಾವೈಕ್ಯತಾ [illegible] (National Integration Council) [illegible] ಕೌನ್ಸಿಲ್‌ನ ಸದಸ್ಯರಾಗಿದ್ದರು. [illegible]

[illegible]

ಮ. ಶ್ರೀ. ಮುರಳಿ ಕೃಷ್ಣ

ಬೆಳಗುಂಬ ನಾರಾಯಣಪ್ಪ

ಬಗಿನಗೆರೆ ಕುಣಿಗಲ್ ತಾಲ್ಲೂಕಿನ ಒಂದು ಗ್ರಾಮ. ಒಂದು ದಿನ ಊರವರೆಲ್ಲ ಸೇರಿ ಕೂಡೊಕ್ಕಲು ಕೈಗೊಳ್ಳಲು ನಿರ್ಧರಿಸಿದರು. ಎಲ್ಲ ಮನೆಯವರೂ ತಮ್ಮ ಎಲ್ಲ ಜಮೀನು, ಎತ್ತು, ಗಾಡಿ, ನೇಗಿಲು, ಕೂರಿಗೆ, ಹಾರೆ, ಗುದ್ದಲಿ, ಪಿಕಾಸಿ ಎಲ್ಲವನ್ನೂ ಗ್ರಾಮಸಭೆಯ ವಶಕ್ಕೆ ಕೊಟ್ಟರು. ಊರಿನ ಜಮೀನನ್ನೆಲ್ಲ ಒಂದು ಕಡೆಯಿಂದ ಉತ್ತುಕೊಂಡು ಬರುವುದು, ಗೊಬ್ಬರ ಗೋಡು ಹೊಡೆಯುವುದು, ಬೀಜ ಬಿತ್ತುವುದು, ಕಳೆ ಕೀಳುವುದು, ಪೈರು ಕಟಾವು ಮಾಡುವುದು, ಒಕ್ಕಣೆ ಮಾಡುವುದು ಹೀಗೆ ಸಮಸ್ತವನ್ನೂ ಕೂಡಿ ಮಾಡಿದರು. ಈ ಪವಾಡ ಎರಡು-ಮೂರು ವರ್ಷಗಳ ಕಾಲ ನಡೆಯಿತು. ಆದರೆ ಕಾಲ ಪಕ್ವವಾಗಿರಲಿಲ್ಲವಾದ ಕಾರಣದಿಂದ, ಹಳ್ಳಿಗರಲ್ಲಿ ತಿಳುವಳಿಕೆಯ ಕೊರತೆ ಇದ್ದುದರಿಂದ ಈ ಯೋಜನೆ ಬಹಳಕಾಲ ನಡೆಯಲಿಲ್ಲ. ಈ ಕೂಡೊಕ್ಕಲು ಪವಾಡ ಆಗ ಮಾಡಿದವರು ಬೆಳಗುಂಬದ ನಾರಾಯಣಪ್ಪನವರು. ಹಳ್ಳಿಗರೊಡನೆ ಅವರಿಗಿದ್ದ ತಾದಾತ್ಮ್ಯತೆ, ಎಷ್ಟೆಂಬುದನ್ನು ಈ ಘಟನೆ ನೆನಪು ಮಾಡಿಕೊಡುತ್ತದೆ.

ಬೆಳಗುಂಬದ ನಾರಾಯಣಪ್ಪನವರು ಹಳ್ಳಿಗರಿಗೆಲ್ಲ 'ಅಣ್ಣಾವರು'. ಅಣ್ಣಾವರು ಹುಟ್ಟಿದ್ದು ಬಡರೈತ ಕುಟುಂಬದಲ್ಲಿ, ಅವರ ಸೋದರಮಾವ ಸುಸಂಸ್ಕೃತರು. ನಾರಣಪ್ಪನ ಭಾರತದ ಯಾವ ಸಂಧಿಯ ಯಾವ ಪದ್ಯವನ್ನಾದರೂ ಅವರು ಸುಶ್ರಾವ್ಯವಾಗಿ, ಪುಸ್ತಕ ತೆರೆಯದೆಯೇ ಹೇಳುತ್ತಿದ್ದರು. ಸೋದರಮಾವನ ಸದ್ಗುಣಗಳಾದ ವಿನಯ, ಸನ್ನಡತೆ, ಅನುಕಂಪ ಇವು ನಾರಾಯಣಪ್ಪನವರಲ್ಲೂ ಪ್ರತಿಫಲಿಸುತ್ತಿದ್ದವು.

ನಾರಾಯಣಪ್ಪನವರು ಬಿ. ಇ. ಪದವೀಧರರಾದರು. ಶಿವನಸಮುದ್ರದಲ್ಲಿ ಆಗತಾನೇ ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪಿತವಾಗಿತ್ತು. ಅಲ್ಲಿ ಜೂನಿಯರ್ ಇಂಜಿನಿಯರಾಗಿ ಇವರು ಸೇರಿಕೊಂಡರು. ನಾರಾಯಣಪ್ಪನವರು ಕಾಲೇಜಿನಲ್ಲಿ ಓದುವಾಗಲೇ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾತ್ಮಾ ಗಾಂಧಿ, ಟಾಲ್‌ಸ್ಟಾಯ್, ಥೋರೋ, ಎಸ್. ರಾಧಾಕೃಷ್ಣನ್ ಎಲ್ಲರ ಗ್ರಂಥಗಳನ್ನು ಓದಿದ್ದರು. ಈ ಪುಸ್ತಕ ಓದುವ ಹುಚ್ಚು ಕೊನೆಯುಸಿರೆಳೆಯುವವರೆಗೂ ಇತ್ತು. ಅನೇಕ ದಿನ ಅವರು ಮೆಜೆಸ್ಟಿಕ್‌ನ ಹಳೆಯ ಪುಸ್ತಕಗಳ ಮಾರಾಟದಂಗಡಿಗಳ ಮುಂದೆ ನಿಂತು ಪುಸ್ತಕಗಳನ್ನು ಕೊಳ್ಳುತ್ತಿದ್ದುದನ್ನು ನಾನು ಕಂಡಿದ್ದೇನೆ.

ಬಿ. ಟಿ. ತಿಮ್ಮರಾಯಪ್ಪನವರು (ಪ್ರೊ|| ಬಿ. ಟಿ. ಪಾರ್ಥಸಾರಥಿಯವರ ತಂದೆ), ಬಿ. ಟಿ. ಕೆಂಪಣ್ಣನವರು, ಬೆಂಗಳೂರಿನ ಪ್ರತಿಷ್ಠಿತ ಜನ. ಬಿ. ಟಿ. ಕೆಂಪಣ್ಣನವರು ಮೈಸೂರಿನ ಸರ್ಕಾರದ ಸೇವೆಯಲ್ಲಿದ್ದು ಡಿವಿಷನಲ್ ಕಮಿಷನರಾಗಿ ನಿವೃತ್ತರಾದರು. ಬಿ.ಇ. ಮಾಡಿ ಸರ್ಕಾರದಲ್ಲಿ ಜ್ಯೂನಿಯರ್ ಇಂಜಿನಿಯರಾಗಿದ್ದ ಬೆಳಗುಂಬದ ನಾರಾಯಣಪ್ಪ ಎಂದಿದ್ದರೂ ಚೀಫ್ ಇಂಜಿನಿಯರ್ ಆಗುವವರು ಎಂದು ಯೋಚಿಸಿ, ತಮ್ಮ ಮಗಳು ಬಿ. ಕೆ. ಸರಸ್ವತಮ್ಮನವರನ್ನು ನಾರಾಯಣಪ್ಪನವರಿಗೆ ಕೊಟ್ಟು ವಿವಾಹ ಮಾಡಿದರು. ಸರಸ್ವತಮ್ಮನವರೂ ಪದವೀಧರೆಯಾಗಿದ್ದರು.

ನಾರಾಯಣಪ್ಪನವರಿಗೆ ಏಕೋ ಸರ್ಕಾರಿ ಸೇವೆ ರುಚಿಸಲಿಲ್ಲ. ಗಾಂಧೀಜಿಯ ಪ್ರಭಾವ ಅವರ ಮೇಲೆ ತುಂಬಾ ಪರಿಣಾಮ ಬೀರಿತು. ಒಂದು ದಿನ ಇದ್ದಕ್ಕಿದ್ದಂತೆ ತಮ್ಮ ಕೆಲಸಕ್ಕೆ ರಾಜೀನಾಮೆ ಇತ್ತು ಹೊರಬಿದ್ದರು. ಬಿ. ಟಿ. ಕೆಂಪಣ್ಣನವರಿಗೆ ಸಹಜವಾಗಿ ಇದು ಆಘಾತವೆನಿಸಿತು. ತಮ್ಮ ಕನಸು ನುಚ್ಚುನೂರಾಯಿತೆಂದು ಅವರು ಪರಿತಪಿಸಿರಬಹುದು. ಹೆಣ್ಣು ಹೆತ್ತ ಯಾರಿಗಾದರೂ ಹಾಗೆ ಅನ್ನಿಸುವುದು ಸ್ವಾಭಾವಿಕ.

ನಾರಾಯಣಪ್ಪನವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದವರು ನೇರವಾಗಿ ಹೋಗಿ ಕೆಂಗೇರಿ ಗುರುಕುಲಾಶ್ರಮದಲ್ಲಿ ನಡೆಯುತ್ತಿದ್ದ ಶಿಕ್ಷಣ ಶಿಬಿರದಲ್ಲಿ ಶಿಬಿರಾರ್ಥಿಯಾಗಿ ಸೇರಿಕೊಂಡರು. ಈ ಶಿಬಿರ ಅವರ ಜೀವನ ಪಥವನ್ನೇ ಬದಲಾಯಿಸಿತು. ಗಾಂಧೀಜಿಯ ಕನಸಿನ ಗ್ರಾಮ ವಿಕಾಸ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಬಟ್ಟೆಯ ಸ್ವಾವಲಂಬನೆ ಸಾಧಿಸಿದರು. ಸರಳ ಜೀವನ ಹಮ್ಮಿಕೊಂಡರು. ಗ್ರಾಮೀಣ ಯುವಕರಿಗೆ ಊರೊಟ್ಟಿನ ಕೆಲಸಕ್ಕೆ ಪ್ರೇರಣೆ ನೀಡಿದರು. ನೂರಾರು ಯುವ ಪುನಶ್ಚೇತನ ಶಿಬಿರಗಳನ್ನು ಕರ್ನಾಟಕದ ಉದ್ದಗಲಕ್ಕೂ ನಡೆಸಿದರು.

ಗಾಂಧೀಜಿಯ ಕೊಲೆಯಾದ ಮೇಲೆ, ಅವರ ಜೀವಿತೋದ್ದೇಶಗಳನ್ನು ಮುಂದುವರಿಸಲು ವಿನೋಬ ಭಾವೆಯವರ ನೇತೃತ್ವದಲ್ಲಿ ಸರ್ವೋದಯ ಸಮಾಜ ರಚನೆಯ ಕಾರ್ಯ ಆರಂಭವಾಯಿತು. ಪೂಜ್ಯ ವಿನೋಬಾ ಅವರು ಭೂಸಮಸ್ಯೆಯ ಪರಿಹಾರಕ್ಕಾಗಿ ಭೂದಾನ ಪಾದಯಾತ್ರೆ ಆರಂಭಿಸಿದರು. ಭೂಮಿ ಒಂದು ಉತ್ಪಾದನೆಯ ಸಾಧನ, ಅದೂ ದುಡಿಯುವವನ ಕೈಲಿರಬೇಕು. ಭೂಮಿ ಮಾರಾಟದ ವಸ್ತುವಲ್ಲ. ಭೂಮಿಯ ಒಡೆತನ ಸಮಾಜದ್ದಾಗಿರಬೇಕು. ಭೂ ವಿತರಣೆಯ ಅಸಮಾನತೆ ತೊಲಗಬೇಕು. ದುಡಿಯುವ ಎಲ್ಲರಿಗೂ ಭೂಮಿ ದೊರೆಯಬೇಕು. ಈ ಸಂದೇಶವನ್ನು ಸಾರುವುದು ಭೂದಾನ ಯಾತ್ರೆಯ ಉದ್ದೇಶವಾಗಿತ್ತು. ಅವರು ಹೊಡೆಯದೆ, ಬಡಿಯದೆ, ಕಾನೂನಿನ ಮೊರೆ ಹೋಗದೆ ಭಾರತಾದ್ಯಂತ ೪೦ ಲಕ್ಷ ಎಕರೆ ಜಮೀನನ್ನು ದಾನವಾಗಿ ಪಡೆದರು.

ವಿನೋಬಾ ಅವರ ಈ ಪ್ರಯೋಗಕ್ಕೆ ಮನಸೋತ ನಾರಾಯಣಪ್ಪನವರು, ಅವರ ಜೊತೆಗೆ ಪಾದಯಾತ್ರೆ ಮಾಡಿ, ಸರ್ವೋದಯ ಸಮಾಜದ ರೂಪು ರೇಷೆಗಳ ಬಗೆಗೆ ವಿನೋಬಾರವರೊಡನೆ ಚರ್ಚಿಸಿದ ನಂತರ, ಕರ್ನಾಟಕದಲ್ಲಿ ಭೂದಾನ ಕಾರ್ಯದ ಸಂಘಟನೆಗೆ ಗಮನವಿತ್ತರು. ಇವರ ಪ್ರೇರಣೆಯಿಂದ ನನ್ನಂತಹ ೪೦-೫೦ ಮಂದಿ ಶ್ರದ್ಧಾವಂತರಾದ ಸರ್ವೋದಯ ಕಾರ್ಯಕರ್ತರು ಪೂರ್ಣಸಮಯ ದಾನಿಗಳಾಗಿ ಈ ಕೆಲಸದಲ್ಲಿ ತೊಡಗಿಕೊಂಡರು. ನಾರಾಯಣಪ್ಪನವರು ತುಂಬು ಜೀವನ ನಡೆಸಿ ತಮ್ಮ ೯೦ನೇ ವಯಸ್ಸಿನಲ್ಲಿ, ಹೋದ ತಿಂಗಳು ಕೊನೆಯುಸಿರೆಳೆದರು.

ಕೊನೆಯ ಹತ್ತು ವರ್ಷಗಳ ಕಾಲ ಅವರು ವಿದ್ಯಾರ್ಥಿಗಳು ಮತ್ತೆ ಯುವಕರ ಚಾರಿತ್ರ್ಯ ಬೆಳೆಸುವ ದೃಷ್ಟಿಯಿಂದ ಶಾಲಾ ಕಾಲೇಜುಗಳ ಭೇಟಿಯ ಕಾರ್ಯಕ್ರಮವನ್ನು ಪ್ರಧಾನವಾಗಿ ಹಮ್ಮಿಕೊಂಡಿದ್ದರು. ಭಾವಿ ಜನಾಂಗದ ಚಾರಿತ್ರ್ಯವರ್ಧನೆ ತೀರ ಅಗತ್ಯವೆಂದು ಅವರು ಭಾವಿಸಿದ್ದರು.

ಸೋದರಿ ಬಿ. ಕೆ. ಸರಸ್ವತಮ್ಮನವರ ಮನಸ್ಸಿನಲ್ಲಿ ನಾರಾಯಣಪ್ಪನವರು ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಇತ್ತು, ಸಮಾಜಾಭಿಮುಖರಾದದ್ದು ಎಂತಹ ತುಮುಲ ಉಂಟು ಮಾಡಿತೋ ಅದು ಯಾರಿಗೂ ಇಂದಿಗೂ ಗೊತ್ತಿಲ್ಲ. ಆದರೆ ಗಂಡನ ಬಗೆಗೆ ಒಂದು ದಿನ ಒಂದು ಕೆಟ್ಟ ಮಾತನ್ನಾಡಿದವರಲ್ಲ ಸರಸ್ವತಮ್ಮ. ಪಾಲಿಗೆ ಬಂದದ್ದು ಪಂಚಾಮೃತ ಎಂದುಕೊಂಡು ನಾರಾಯಣಪ್ಪನವರ ಕಷ್ಟ ಸುಖಗಳನ್ನು ಅವರು ನಗುಮೊಗದಿಂದ ಹಂಚಿಕೊಂಡರು. ಕಾಲಕ್ರಮದಲ್ಲಿ ಸರಸ್ವತಮ್ಮನವರು ಸಮಾಜ ಸೇವೆಯಲ್ಲಿ ತೊಡಗಿಕೊಂಡರು. ಆರ್ಥಿಕ ಸಂಕಟವನ್ನನುಭವಿಸುವ ಹೆಣ್ಣು ಮಕ್ಕಳಿಗೆ ದುಡಿಮೆ ಒದಗಿಸಿಕೊಟ್ಟು ತಮ್ಮ ಕಾಲಮೇಲೆ ತಾವು ನಿಲ್ಲುವಂತೆ ಮಾಡಿದ್ದಾರೆ. ಕಸ್ತೂರ್ ಬಾ ಟ್ರಸ್ಟಿನ ರಾಜ್ಯ ಮಟ್ಟದ ಸಂಚಾಲಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಗಂಡನಿಗೆ ತಕ್ಕ ಹೆಂಡತಿ ಎನಿಸಿಕೊಂಡಿದ್ದಾರೆ

ಎಚ್. ಎಸ್. ದೊರೆಸ್ವಾಮಿ
[illegible]

(41ನೇ ಪುಟದಿಂದ)

ಮಸೂದೆಯನ್ನು ತಡೆಗಟ್ಟುವುದರಲ್ಲಿ ಅತೀವ ಶ್ರಮಪಟ್ಟರು.

ಭಾರತದ ಐವತ್ತನೆ ಸ್ವಾತಂತ್ರ್ಯ ಜಯಂತಿಯನ್ನು ಆಚರಿಸುವ ಸಮಿತಿಯಲ್ಲಿ ಭ್ರಷ್ಟಾಚಾರ ಕಳಂಕಿತ ಅನೇಕರು ಇರುವರೆಂದು ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಕೆಲವು ಮಹನೀಯರು, ಸಂಘ ಸಂಸ್ಥೆಗಳನ್ನು ಕೈಬಿಡಲಾಗಿದೆಯೆಂದು ಅಭಿಪ್ರಾಯ ಮಂಡಿಸಿ ಆ ಸಮಿತಿಯಿಂದ ಹೊರಬಂದರು. ನವೆಂಬರ್ ೧೯೯೭ರಲ್ಲಿ, ದೂರದರ್ಶನ ಹಾಗೂ ಆಕಾಶವಾಣಿಗೆ ಸ್ವಾಯತ್ತತೆ ನೀಡುವ ದಿಕ್ಕಿನಲ್ಲಿ ರಚಿಸಿದ ''ಪ್ರಸಾರ ಭಾರತಿ''ಯ ಅಧ್ಯಕ್ಷರಾದರು.

ಹೀಗೆ ಅನೇಕ ಸ್ತರಗಳಲ್ಲಿ ಕೆಲಸ ಮಾಡಿದ ನಿಖಿಲ್ ದಾರ ಕೊಡುಗೆ ಅಪಾರ. ನಮ್ಮ ದೇಶದ ಪತ್ರಿಕಾರಂಗದಲ್ಲಿ ಇವರು ಅವಿಸ್ಮರಣೀಯರು. ಇವರ ನಿರ್ಗಮನದಿಂದ ನಮ್ಮ ದೇಶ ಬಡವಾಗಿದೆ ಎಂದರೆ ಕ್ಲೀಷೆಯಾಗಲಾರದು.

ಮ. ಶ್ರೀ. ಮುರಳಿ ಕೃಷ್ಣ
ನಂ. ೧೦೦, ೨ ನೇ ''ಎ''ಕ್ರಾಸ್, ಗವಿಪುರಂ ಬಡಾವಣೆ
ಬೆಂಗಳೂರು - ೫೬೦ ೦೧೯

ವೈಜ್ಞಾನಿಕ ಸಾಕ್ಷರತೆ

ಡಿ. ಆರ್. ಬಳೂರಗಿ

ವೈಜ್ಞಾನಿಕ ಸಾಕ್ಷರತೆ ಇತ್ತೀಚೆಗೆ ಬಹು ಚರ್ಚಿತ ವಿಷಯಗಳಲ್ಲೊಂದಾಗಿದೆ. ವೈಜ್ಞಾನಿಕ ಸಾಕ್ಷರತೆ ಯೆಂದರೇನು? ನಮಗೆ ಅದರ ಅಗತ್ಯವಿದೆಯೆ? ಅಗತ್ಯವಿದ್ದರೆ, ಏಕೆ ಅಗತ್ಯವಿದೆ? ಸಾಂಸ್ಕೃತಿಕ ಸಾಕ್ಷರತೆ ಗಿಂತ ಅದು ಯಾವ ರೀತಿಯಲ್ಲಿ ಭಿನ್ನವಾಗಿದೆ? ಮುಂತಾದ ಪ್ರಶ್ನೆಗಳು ಬುದ್ಧಿಜೀವಿಗಳನ್ನು ಕಾಡುತ್ತಿವೆ.

ಒಂದು ಕಾಲದಲ್ಲಿ ವಿಜ್ಞಾನ ಕೇವಲ ವಿಜ್ಞಾನಿಗಳ ಅಧ್ಯಯನದ ವಿಷಯವಾಗಿತ್ತು. ಜನಸಾಮಾನ್ಯರು ಅದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಇಂದು ನಾವು ವಿಜ್ಞಾನ ಕುರಿತು ಅದೇ ರೀತಿ ನಿರ್ಲಿಪ್ತರಾಗಿರಲು ಸಾಧ್ಯವಿಲ್ಲ. ಯಾಕೆಂದರೆ ಕಳೆದ ಅರ್ಧಶತಮಾನದಲ್ಲಿ ವೈಜ್ಞಾನಿಕ ಕ್ಷೇತ್ರದಲ್ಲಿ ನಡೆದ ಸಂಶೋಧನೆಗಳು, ತತ್ಪರಿಣಾಮವಾಗಿ ಅಭಿವೃದ್ಧಿಗೊಂಡ ತಂತ್ರಜ್ಞಾನ, ರೂಪಗೊಂಡ ಸಾಧನಗಳು ನಮ್ಮ ಜೀವನದ ಮೇಲೆ, ನಮ್ಮ ಸಮಾಜದ ಮೇಲೆ, ಸಾಮಾಜಿಕ ಮೌಲ್ಯಗಳ ಮೇಲೆ ಬೀರಿದ ಪ್ರಭಾವ ಅಪಾರವಾದದ್ದು. ಇಂದು ವಿಜ್ಞಾನ-ತಂತ್ರಜ್ಞಾನಗಳು ನಮ್ಮ ಜೀವನದ ಅನಿವಾರ್ಯ ಮತ್ತು ಅವಿಭಾಜ್ಯ ಅಂಗಗಳು.

ಇತ್ತೀಚೆಗೆ ವೃತ್ತಪತ್ರಿಕೆಗಳಲ್ಲಿ ''ಅತಿವಾಹಕಗಳ ಸಂಶೋಧನೆಯಲ್ಲಿ ಜಪಾನಿನ ಮುನ್ನಡೆ'', ''ಕೈಗಾ ಅಣುಶಕ್ತಿ ಸ್ಥಾವರ ಕಾರ್ಯಾರಂಭ'', ''ನಾನ್‌ವೆಜ್ ಟೊಮ್ಯಾಟೋಗಳ ಸೃಷ್ಟಿ'' ಮುಂತಾದ ವಿಷಯಗಳು ದಪ್ಪಕ್ಷರಗಳಲ್ಲಿ ಅನೇಕ ಸಲ ಮೊದಲ ಪುಟದಲ್ಲಿ ಕಾಣಿಸಿಕೊಳ್ಳುವುದುಂಟು. ಅತ್ಯಂತ ರೋಚಕವಾಗಿ ದ್ದರೂ, ವೈಜ್ಞಾನಿಕ ಸುದ್ದಿ-ಸಮಾಚಾರಗಳನ್ನು ಬಹುತೇಕ ಸಾಮಾನ್ಯ ಜನ ಗಮನಿಸುವುದಿಲ್ಲ. ಒಂದು ವೇಳೆ ಗಮನಿಸಿದರೂ ಕೂಡ ಅವರ ಓದು ಕೇವಲ ತಲೆ ಬರಹಕ್ಕಷ್ಟೇ ಸೀಮಿತವಾಗಿರುತ್ತದೆ. ಇದರರ್ಥ ಸಾಮಾನ್ಯ ಜನ ವಿಜ್ಞಾನವನ್ನು ದ್ವೇಷಿಸುತ್ತಾರೆಂದಲ್ಲ. ಅವರು ವೈಜ್ಞಾನಿಕ ಸಮಾಚಾರಗಳನ್ನು ಓದದಿರುವುದಕ್ಕೆ ಕಾರಣ, ಅವರಿಗೆ ಅವು ಅರ್ಥವಾಗುವುದಿಲ್ಲ. ಅವರು ವೈಜ್ಞಾನಿಕ ವಾಗಿ ಸಾಕ್ಷರರಾಗಿದ್ದರೆ ಮಾತ್ರ ಇಂತಹ ವಿಷಯಗಳು ಅವರಿಗೆ ಅರ್ಥವಾಗುತ್ತವೆ.

ವೈಜ್ಞಾನಿಕ ಸಾಕ್ಷರತೆಯೆಂದರೇನು?

ವೈಜ್ಞಾನಿಕ ಸಮಸ್ಯೆಗಳನ್ನು, ವಿಜ್ಞಾನದ ಸಾಧನೆಗಳನ್ನು ಅರ್ಥಮಾಡಿಕೊಳ್ಳುವಷ್ಟು ಮಟ್ಟಿಗಿನ ಜ್ಞಾನ ನಿಮಗಿದ್ದರೆ ನೀವು ವೈಜ್ಞಾನಿಕ ಸಾಕ್ಷರರೆಂದು ಹೇಳಬಹುದು. ಈ ಸಂದರ್ಭದಲ್ಲಿ ಉದ್ಭವಿಸುವ ಬಹುಮುಖ್ಯವಾದ ಪ್ರಶ್ನೆ, ಜನಸಾಮಾನ್ಯರು ವೈಜ್ಞಾನಿಕ ಸಾಕ್ಷರತೆಯನ್ನು ಗಳಿಸಿ ಕೊಳ್ಳಲು ಸಾಧ್ಯವೆ, ಎಂಬುದು. ಸ್ವಲ್ಪ ಶ್ರಮ ವಹಿಸಿದರೆ ಖಂಡಿತವಾಗಿಯೂ ಸಾಧ್ಯ. ನಾವು ಸೊಗಸಾದ ಸಂಗೀತ ವನ್ನಾಲಿಸಿ ಆನಂದಿಸಲು, ಅದೇ ಮಟ್ಟದ ಸಂಗೀತಗಾರ ರಾಗಬೇಕಿಲ್ಲ. ಉತ್ತಮ ಕಾವ್ಯವನ್ನೋದಿ ಸಂತೋಷ ಪಡಲು ಅದೇ ಮಟ್ಟದ ಕಾವ್ಯಸೃಷ್ಟಿ ಮಾಡುವ ಸಾಮರ್ಥ್ಯ ನಮಗಿರಬೇಕಿಲ್ಲ. ಅದೇ ರೀತಿ ವಿಜ್ಞಾನದ ಸಾಧನೆಗಳ ನ್ನರಿತುಕೊಳ್ಳಲು ಆಳವಾದ ವೈಜ್ಞಾನಿಕ ಸಂಶೋಧನೆ ಯಲ್ಲಿ ನಿರತರಾದ ವಿಜ್ಞಾನಿಗಳೇ ಆಗಿರಬೇಕಿಲ್ಲ. ವಿಜ್ಞಾನದ ಅಧ್ಯಯನ ಹಾಗೂ ಸಂಶೋಧನೆ ಬೇರೆ, ಮತ್ತು ವಿಜ್ಞಾನದ ಸಾಧನೆಗಳ ಕುರಿತು ತಿಳುವಳಿಕೆ ಪಡೆಯುವುದು ಬೇರೆ ಎಂದು ಸ್ಪಷ್ಟವಾಗಿ ಅರ್ಥಮಾಡಿಕೊಂಡರೆ ಯಾವ ಗೊಂದಲವೂ ಉದ್ಭವಿಸುವುದಿಲ್ಲ. ವಿಜ್ಞಾನವನ್ನು ಅರಿತುಕೊಳ್ಳುವುದು ಬೇರೆ, ವಿಜ್ಞಾನದ ಬಳಕೆ ಬೇರೆ. ಆದರೆ ಬಹಳಷ್ಟು ಜನ ಅವೆರಡೂ ಒಂದೇ ಎಂದು ಭಾವಿಸಿಕೊಂಡು ಗೊಂದಲಕ್ಕೊಳಗಾಗುತ್ತಾರೆ.

ವಿಜ್ಞಾನಿ ಬದುಕುತ್ತಿರುವ ಪ್ರಪಂಚದಲ್ಲಿಯೇ ಸಾಮಾನ್ಯ ಮನುಷ್ಯನೂ ಬದುಕುತ್ತಾನೆ. ಇಬ್ಬರ ಜಗತ್ತೂ ಒಂದೇ. ಆದರೆ ವಿಜ್ಞಾನಿ ತಿಳಿದಿರುವುದೆಲ್ಲವನ್ನೂ ಸಾಮಾನ್ಯ ಮನುಷ್ಯ ತಿಳಿದುಕೊಂಡಿರಬೇಕಾದ ಅಗತ್ಯವಿಲ್ಲ. ವಿಜ್ಞಾನಿ ಬಸ್ಸು, ವಿಮಾನಗಳ ವಿನ್ಯಾಸ ರೂಪಿಸುತ್ತಾನೆ. ತಂತ್ರಜ್ಞಾನಿ ಅವನ್ನು ನಿರ್ಮಿಸುತ್ತಾನೆ. ಸಾಮಾನ್ಯ ಪ್ರಜೆ ಅವನ್ನು ಬಳಸುತ್ತಾನೆ. ಸಾಮಾನ್ಯ ಪ್ರಜೆಗೆ ವಿಜ್ಞಾನಿ ಮತ್ತು ತಂತ್ರಜ್ಞಾನಿಗಳಿಗಿರುವಷ್ಟು ಆಳವಾದ ಜ್ಞಾನ ಅಗತ್ಯವಿಲ್ಲ. ಆದರೆ ಬಸ್ಸು-ವಿಮಾನಗಳ ಕಾರ್ಯತಂತ್ರದ ಸ್ಥೂಲ ಪರಿಚಯವಿದ್ದರೆ ಆತ ವೈಜ್ಞಾನಿಕವಾಗಿ ಸಾಕ್ಷರನಿದ್ದಂತೆ. ಈಗ ಇನ್ನೊಂದು ಉದಾಹರಣೆಯನ್ನು ಪರಿಗಣಿಸುವಾ. ಅತಿವಾಹಕ ಅಥವಾ ಸುಪರ್ ಕಂಡಕ್ಟರ್ ಇತ್ತೀಚೆಗೆ ಹೆಚ್ಚು ಗಮನ ಸೆಳೆದ ಸಂಶೋಧನೆ. ಅತಿವಾಹಕವು ನಷ್ಟವಿಲ್ಲದೆ ವಿದ್ಯುತ್ತನ್ನು ಸಾಗಿಸುವ ಒಂದು ವಸ್ತು ಅಥವಾ ವಾಹಕ. ಅದು ತೀರ ಕಡಿಮೆ ಉಷ್ಣತೆಯಲ್ಲಿ ಮಾತ್ರ ಈ ಗುಣವನ್ನು ಪ್ರದರ್ಶಿಸುತ್ತದೆ. ಒಬ್ಬ ಸಾಮಾನ್ಯ ನಾಗರಿಕ ಅತಿವಾಹಕದ ಕುರಿತು ಇಷ್ಟು ವಿವರ ತಿಳಿದುಕೊಂಡರೆ ಸಾಕು, ಆತ ವೈಜ್ಞಾನಿಕ ಸಾಕ್ಷರತೆಯನ್ನು ಗಳಿಸಿಕೊಂಡಂತೆಯೆ. ಅತಿವಾಹಕ ವಸ್ತುವನ್ನು ಸಂಶ್ಲೇಷಿಸುವುದು ಹೇಗೆ? ಅದು ಅತಿವಾಹಕವಾಗಿ ಏಕೆ ವರ್ತಿಸುತ್ತದೆ? ಮುಂತಾದ ವಿಷಯಗಳನ್ನು ತಿಳಿದುಕೊಳ್ಳದೆಯೇ ನಾವು ವೈಜ್ಞಾನಿಕ ವಾಗಿ ಸಾಕ್ಷರರಾಗಬಲ್ಲೆವು. ಅತಿವಾಹಕಕ್ಕೆ ಸಂಬಂಧಿಸಿದ ಸಂಶೋಧನಾ ಕಾರ್ಯವನ್ನು ವಿಜ್ಞಾನಿಗಳಿಗೆ ಬಿಟ್ಟುಬಿಡೋಣ.

ವೈಜ್ಞಾನಿಕ ಸಾಕ್ಷರತೆಯ ಅಗತ್ಯ

ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ನಮ್ಮದು. ಆಧುನಿಕ ಜಗತ್ತಿನಲ್ಲಿ ಪ್ರಜಾಸತ್ತೆಯನ್ನು ಒಂದು ಉತ್ತಮ ಆಡಳಿತ ವ್ಯವಸ್ಥೆಯೆಂದು ಪರಿಗಣಿಸಲಾಗಿದೆ. ಆಲೋಚನಾ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಪರಧರ್ಮ ಸಹಿಷ್ಣುತೆ, ಇವು ಪ್ರಜಾಸತ್ತೆಯ ಆಧಾರ ಸ್ತಂಭಗಳು. ವಿಜ್ಞಾನವು ಕೂಡ ಇವುಗಳ ಅಡಿಪಾಯದ ಮೇಲೆಯೇ ನಿಂತು ಬೆಳೆದಿದೆ. ಹಾಗಾಗಿ ಪ್ರಜಾಸತ್ತೆ ಮತ್ತು ವಿಜ್ಞಾನ ಎರಡೂ ಪರಸ್ಪರ ಪೂರಕ ವ್ಯವಸ್ಥೆಗಳಾಗಿವೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರಜಾಪ್ರತಿನಿಧಿಗಳು ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ರಾಷ್ಟ್ರೀಯ ನೀತಿ ಮತ್ತು ಧೋರಣೆಗಳನ್ನು ರೂಪಿಸುತ್ತಾರೆ. ಸರಕಾರದ ನೀತಿ ಮತ್ತು ಧೋರಣೆಗಳು ದೇಶದ ಅಭಿವೃದ್ಧಿ ಹಾಗೂ ಹಿತಕ್ಕೆ ಪೂರಕವಾಗಿರಬೇಕೆಂದು ಪ್ರತಿಯೊಬ್ಬ ಪ್ರಜೆಯ ನಿರೀಕ್ಷೆಯಾಗಿರುತ್ತದೆ ಮತ್ತು ರಾಷ್ಟ್ರೀಯ ನೀತಿಯನ್ನು ನಿರ್ದೇಶಿಸುವ ಹಕ್ಕು ಪ್ರತಿಯೊಬ್ಬ ಪ್ರಜೆಗೆ ಇರುತ್ತದೆ. ಅಲ್ಲದೆ ಅದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೂ ಹೌದು. ಹೀಗೆ ಪ್ರಜಾಸತ್ತೆಯಲ್ಲಿ ಸರಕಾರ ಒಂದೊಂದು ಕ್ಷೇತ್ರದಲ್ಲಿ ತಾಳುವ ಧೋರಣೆ ದೇಶಕ್ಕೆ ತಾರಕವಾಗಿದೆಯೇ ಅಥವಾ ಮಾರಕವಾಗಿದೆಯೇ ಎಂಬುದನ್ನು ತಿಳಿಯಲು ಪ್ರಜೆಗಳಿಗೆ ಆ ಕ್ಷೇತ್ರದ ಸ್ಥೂಲ ಜ್ಞಾನವಾದರೂ ಅವಶ್ಯಕ. ಉದಾಹರಣೆಗೆ, ವೈಜ್ಞಾನಿಕ ಕ್ಷೇತ್ರಕ್ಕೆ ಸಂಬಂಧಿಸಿದ ಅಣೆಕಟ್ಟು ನಿರ್ಮಾಣ, ಬೃಹತ್ ಉದ್ದಿಮೆಗಳ ಸ್ಥಾಪನೆ, ಅಣುಶಕ್ತಿ ಸ್ಥಾವರಗಳು, ಹೀಗೆ ಅನೇಕ ವಿಷಯಗಳ ಕುರಿತು ಸರಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಅಣೆಕಟ್ಟುಗಳ ನಿರ್ಮಾಣ, ಬೃಹತ್ ಉದ್ದಿಮೆಗಳು ದೀರ್ಘಾವಧಿಯಲ್ಲಿ ನೈಸರ್ಗಿಕ ಪರಿಸರದ ಮೇಲೆ ಪ್ರಭಾವ ಬೀರುತ್ತವೆ. ಅಣುಶಕ್ತಿ ಸ್ಥಾವರಗಳು ಎಷ್ಟು ಸುರಕ್ಷಿತವೆಂಬುದಿನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ಇಂತಹ ವಿಷಯಗಳ ಕುರಿತು ಸ್ಥೂಲವಾದ ತಿಳುವಳಿಕೆಯಿದ್ದರೆ, ಒಬ್ಬ ಸಾಮಾನ್ಯ ಪ್ರಜೆ ಸರಕಾರದ ಧ್ಯೇಯ-ಧೋರಣೆಗಳ ಬಗ್ಗೆ ತನ್ನ ಅಭಿಪ್ರಾಯವನ್ನು ಆತ್ಮವಿಶ್ವಾಸದಿಂದ ವ್ಯಕ್ತಪಡಿಸಲು ಸಾಧ್ಯವಾಗುತ್ತದೆ. ಇಂತಹ ಆತ್ಮವಿಶ್ವಾಸವನ್ನು ತಂದು ಕೊಡುವುದು ವೈಜ್ಞಾನಿಕ ಸಾಕ್ಷರತೆ. ಆದ್ದರಿಂದ ವೈಜ್ಞಾನಿಕ ಸಾಕ್ಷರತೆ ನಮಗೆ ತುಂಬಾ ಅಗತ್ಯ.

ಮೌನ



ನಕ್ಕು ಕ್ಷಣ ಮೌನವಾದಾಗ
ಜಗತ್ತೇ ಮೌನವಾಗುತ್ತದೆ
ಗೆಳತಿ !

- ಹರ್ಷಾದ್ ವರ್ಕಾಡಿ

ಸಮಸ್ಯೆಯ ಮೂಲ

ಹಾಗಾದರೆ ನಮ್ಮಲ್ಲೇಕೆ ವೈಜ್ಞಾನಿಕ ಸಾಕ್ಷರತೆ ಬೆಳೆದು ಬಂದಿಲ್ಲ? ನಮ್ಮಲ್ಲಷ್ಟೇ ಏಕೆ, ಜಗತ್ತಿನ ಯಾವ ದೇಶವನ್ನು ತೆಗೆದುಕೊಂಡರೂ ಇದೇ ಪರಿಸ್ಥಿತಿಯಿದೆ. ಅತ್ಯಂತ ಮುಂದುವರಿದ ದೇಶ ಅಮೆರಿಕೆಯಲ್ಲಿಯೇ ಈ ಬಗ್ಗೆ ಅನೇಕ ಪ್ರಯೋಗಗಳನ್ನು ಕೈಗೊಂಡಿದ್ದಾರೆ. ಒಮ್ಮೆ ಹಾರ್ವರ್ಡ್ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ, ''ಬೇಸಿಗೆ ಕಾಲ ಮತ್ತು ಚಳಿಗಾಲಗಳು ಏಕೆ ಉಂಟಾಗುತ್ತವೆ?'' ಎಂದು ಪ್ರಶ್ನಿಸಲಾಯಿತು. ನೂರಾರು ಜನರಲ್ಲಿ ಕೇವಲ ಬೆರಳೆಣಿಕೆಯಷ್ಟು ಜನ ಸಮರ್ಪಕ ಉತ್ತರ ನೀಡಿದರು. ಅನೇಕ ಪದವೀಧರರಿಗೆ ಹಾಗೇಕೆಂಬುದೇ ಗೊತ್ತಿರಲಿಲ್ಲ. ಇದು ನಿಜಕ್ಕೂ ವಿಸ್ಮಯವನ್ನುಂಟುಮಾಡುವ ಸಂಗತಿಯಲ್ಲವೆ? ಇದೇ ಪ್ರಯೋಗವನ್ನು ಇನ್ನಷ್ಟು ಮುಂದುವರಿಸಿದಾಗ ಹೆಚ್ಚೆಚ್ಚು ಸ್ವಾರಸ್ಯಕರ ಫಲಿತಾಂಶಗಳು ಬೆಳಕಿಗೆ ಬಂದವು. ಹೀಗೆ ಮುಂದುವರಿಸಿದ ಪ್ರಯೋಗದಲ್ಲಿ ವಿಜ್ಞಾನಿಗಳಿಗೇನೇ ವೈಜ್ಞಾನಿಕ ಪ್ರಶ್ನೆಗಳನ್ನು ಕೇಳಲಾಯಿತು. ಆದರೆ ಅವರಿಗೆ ಕೇಳಲಾದ ಪ್ರಶ್ನೆಗಳು ಅವರ ಸಂಶೋಧನಾ ಕ್ಷೇತ್ರಕ್ಕೆ ಹೊರತಾದವು.

ಭೌತ ಮತ್ತು ಭೂ ವಿಜ್ಞಾನಿಗಳ ಇಪ್ಪತ್ನಾಲ್ಕು ಜನರ ತಂಡವೊಂದನ್ನು ಆಯ್ಕೆಮಾಡಿ, ಅವರಿಗೆ ಡಿ.ಎನ್.ಎ. ಮತ್ತು ಆರ್.ಎನ್.ಎ.ಗಳ ನಡುವಿನ ವ್ಯತ್ಯಾಸವನ್ನು ಹೇಳುವಂತೆ ಕೇಳಲಾಯಿತು. ಅವರಲ್ಲಿ ಕೇವಲ ಮೂರು ಜನ ಮಾತ್ರ ಸಮರ್ಪಕವಾಗಿ ಉತ್ತರಿಸಿದರು. ಆ ವಿಜ್ಞಾನಿಗಳಿಗೆ ಉತ್ತರಿಸಲು ಸಾಧ್ಯವಾದುದೇಕೆಂದರೆ, ಅವರು ನಡೆಸುತ್ತಿದ್ದ ಸಂಶೋಧನೆಗೆ ಈ ವಿವರದ ಅಗತ್ಯವಿದ್ದ ಕಾರಣ ಅವರದನ್ನು ಮುಂಚಿತವಾಗಿಯೇ ತಿಳಿದುಕೊಂಡಿದ್ದರು. ಹಾಗೆಯೇ ಅತಿವಾಹಕ ಮತ್ತು ಅರೆವಾಹಕಗಳ ವ್ಯತ್ಯಾಸ ಕುರಿತು ಜೀವ ವಿಜ್ಞಾನಿಗಳನ್ನು ಪ್ರಶ್ನಿಸಿದಾಗ ಇದೇ ವಿಧವಾದ ಫಲಿತಾಂಶ ದೊರೆಯಿತು. ಆದ್ದರಿಂದ ವೃತ್ತಿನಿರತ ವಿಜ್ಞಾನಿಗಳೂ ಸಹ ವೈಜ್ಞಾನಿಕ ಸಾಕ್ಷರರೆನ್ನುವಂತಿಲ್ಲ. ಇದಕ್ಕೆ ಕಾರಣವಿಲ್ಲದಿಲ್ಲ. ಆರಂಭದಲ್ಲಿ ಒಂದು ಸಸ್ಯದಂತೆ ಹುಟ್ಟಿಕೊಂಡ ವಿಜ್ಞಾನ ಕಾಲಾನುಕ್ರಮದಲ್ಲಿ ಅನೇಕ ಶಾಖೋಪಶಾಖೆಗಳಾಗಿ ಬೆಳೆಯಿತು. ಅನಂತರ ಜೀವರಸಾಯನಶಾಸ್ತ್ರ, ಖಭೌತ ವಿಜ್ಞಾನ, ಭೂಭೌತ ವಿಜ್ಞಾನ ಹೀಗೆ ಅಂತರ್‌ಶಿಸ್ತೀಯ ಶಾಖೆಗಳು ಹುಟ್ಟಿಕೊಂಡವು. ಇಂದು ಸಂಶೋಧನೆಯ ವೇಗ ಎಷ್ಟು ಹೆಚ್ಚಿದೆಯೆಂದರೆ, ಪ್ರತಿದಿನ ಒಂದೊಂದು ಉಪಶಾಖೆಯಲ್ಲೂ ಸಾವಿರಾರು ಸಂಶೋಧನಾ ಪ್ರಬಂಧಗಳು ಪ್ರಕಟವಾಗುತ್ತಿವೆ. ಒಬ್ಬ ವಿಜ್ಞಾನಿ ತಾನು ಸಂಶೋಧನೆ ನಡೆಸುತ್ತಿರುವ ಕ್ಷೇತ್ರದಲ್ಲಿ ನಡೆಯುವ ಎಲ್ಲಾ ಬೆಳವಣಿಗೆಗಳನ್ನೂ ಅರಿತುಕೊಳ್ಳುವುದು ಸಾಧ್ಯವಿಲ್ಲ. ಇನ್ನು ಬೇರೆ ಶಾಖೆಯಲ್ಲಿ ನಡೆಯುವ ಬೆಳವಣಿಗೆಗಳನ್ನು ಅಧ್ಯಯನ ಮಾಡುವುದಂತೂ ದೂರದ ಮಾತಾಯಿತು. ಅಷ್ಟು ವಿಶೇಷೀಕೃತವಾಗಿದೆ ಇಂದಿನ ವಿಜ್ಞಾನ.

ವೈಜ್ಞಾನಿಕ ಅನಕ್ಷರತೆಗೆ ಇನ್ನೊಂದು ಕಾರಣ, ನಮ್ಮ ಸಾಂಪ್ರದಾಯಿಕ ಶಿಕ್ಷಣ ವಿಧಾನ. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಪ್ರೌಢಶಾಲೆಯ ಹಂತದವರೆಗೆ ಭಾಷೆ, ಸಮಾಜ ವಿಜ್ಞಾನ, ಚರಿತ್ರೆ, ಗಣಿತ, ವಿಜ್ಞಾನ ಹೀಗೆ ಎಲ್ಲ ವಿಷಯಗಳನ್ನೂ ಬೋಧಿಸಲಾಗುತ್ತದೆ. ಪದವಿ ತರಗತಿಯಲ್ಲಿ ಕಲೆ, ವಾಣಿಜ್ಯ, ವಿಜ್ಞಾನ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಹೀಗೆ ತಮಗಿಷ್ಟವಾದ ಯಾವುದೇ ಕೋರ್ಸಿಗೆ ಸೇರಿದ ವಿದ್ಯಾರ್ಥಿಗಳು ಕಲಿತುಕೊಳ್ಳಬಹುದು. ಸ್ನಾತಕೋತ್ತರ ಪದವಿಯಲ್ಲಂತೂ ವಿಷಯ ಇನ್ನಷ್ಟು ವಿಶೇಷೀಕೃತಗೊಳ್ಳುತ್ತದೆ. ವಿಜ್ಞಾನದ ಸ್ನಾತಕೋತ್ತರ ಪದವೀಧರ ಒಂದು ನಿರ್ದಿಷ್ಟ ಶಾಖೆಯನ್ನು ಕುರಿತು ಆಳವಾಗಿ ಅಧ್ಯಯನ ಮಾಡುತ್ತಾನಾದರೂ ವಿಜ್ಞಾನದ ಇತರ ಶಾಖೆಗಳ ಜ್ಞಾನದಿಂದ ಆತ ದೂರ. ಇನ್ನು ಕಲೆ-ಸಾಹಿತ್ಯ ಹಾಗೂ ವಾಣಿಜ್ಯ ಪದವೀಧರರಿಗೆ ವಿಜ್ಞಾನದ ಸಂಪರ್ಕ ಬರುವುದು ಸಾಧ್ಯವೇ ಇಲ್ಲ. ಹೀಗೆ ಒಬ್ಬ ವಿದ್ಯಾರ್ಥಿ ಗಳಿಸಿದ ಜ್ಞಾನ ಮತ್ತು ಪ್ರಚಲಿತ ವಿಜ್ಞಾನ ಇವುಗಳ ನಡುವೆ ಒಂದು ಕಂದರವೇ ಏರ್ಪಡುತ್ತದೆ. ಸರ್ವರಲ್ಲಿ ವೈಜ್ಞಾನಿಕ ಸಾಕ್ಷರತೆ ಬೆಳೆದುಬರಬೇಕಾದರೆ ಈ ಕಂದರ ತುಂಬಿಕೊಳ್ಳಬೇಕು.

ವೈಜ್ಞಾನಿಕ ಸಾಕ್ಷರತೆಯ ಪ್ರಾಮುಖ್ಯತೆ

ಕೆಲ ವೈಜ್ಞಾನಿಕ ಆವಿಷ್ಕಾರಗಳು ತ್ವರಿತಗತಿಯಲ್ಲಿ ನಮ್ಮ ಜೀವನದ ಮೇಲೆ ಪ್ರಭಾವ ಬೀರಿದರೆ, ಮತ್ತೆ ಕೆಲವು ಕೇವಲ ಬೌದ್ಧಿಕ ಮಟ್ಟದಲ್ಲಿ ಉಳಿದುಕೊಂಡುಬಿಡುತ್ತವೆ. ಉದಾಹರಣೆಗೆ, ಎಕ್ಸ್-ಕಿರಣಗಳು ಆವಿಷ್ಕಾರಗೊಂಡ ಕೇವಲ ಮೂರು ತಿಂಗಳಲ್ಲಿ ಅವು ಆಸ್ಪತ್ರೆಗಳಲ್ಲಿ ಬಳಕೆಗೆ ಬಂದವು. ಮೊದಲು ಭೂಮಿ ಕೇಂದ್ರದಲ್ಲಿದ್ದು ಸೂರ್ಯನ ಸಹಿತ ಇತರ ಗ್ರಹಗಳೆಲ್ಲ ಭೂಮಿಯನ್ನು ಸುತ್ತುತ್ತವೆಂದು ನಂಬಲಾಗಿತ್ತು. ಆದರೆ ಕೊಪರ್ನಿಕಸ್ ಈ ಸಿದ್ಧಾಂತವನ್ನು ತಳ್ಳಿಹಾಕಿ, ಸೌರ ವ್ಯವಸ್ಥೆಯಲ್ಲಿ ಸೂರ್ಯ ಕೇಂದ್ರದಲ್ಲಿದ್ದು ಭೂಮಿ ಸಹಿತ ಇತರ ಗ್ರಹಗಳೆಲ್ಲ ಸೂರ್ಯನನ್ನು ವಿವಿಧ ಕಕ್ಷೆಗಳಲ್ಲಿ ಸುತ್ತುಹಾಕುತ್ತವೆಂದು ಪ್ರತಿಪಾದಿಸಿದ. ಆದರೆ ಒಬ್ಬ ಸಾಮಾನ್ಯನ ದೃಷ್ಟಿಯಲ್ಲಿ ಈ ಆವಿಷ್ಕಾರ ಅಷ್ಟು ರೋಚಕವೇನಲ್ಲ. ಭೂಮಿಯು ಸುತ್ತ ಸೂರ್ಯ ತಿರುಗಿದರೇನು [illegible] ಭೂಮಿ ತಿರುಗಿದರೇನು? ಇದರ [illegible] ಯಾವ ವ್ಯತ್ಯಾಸವನ್ನುಂಟುಮಾಡಬಲ್ಲದು? ಆದರೆ ಐನ್‌ಸ್ಟೀನ್ ಪ್ರತಿಪಾದಿಸಿದ ಸಾಪೇಕ್ಷ ಸಿದ್ಧಾಂತ ಮತ್ತು ಚಾರ್ಲ್ಸ್ ಡಾರ್ವಿನ್ ಪ್ರತಿಪಾದಿಸಿದ [illegible] ಸಿದ್ಧಾಂತಗಳು, ಅವರ [illegible] ಸಂಶೋಧನೆಗಳು ಮಾನವನ ಬೌದ್ಧಿಕ ಸ್ಥಿತಿಯನ್ನು ವಿಸ್ತರಿಸುತ್ತವೆಂಬುದನ್ನು ಮರೆಯುವಂತಿಲ್ಲ.

ಕಲೆ-ಸಾಹಿತ್ಯಗಳಿಗಿರುವಂತೆ ವಿಜ್ಞಾನಕ್ಕೂ ಸಹ ಅದರದೇ ಆದ ಸಹಜ ಸೌಂದರ್ಯವಿದೆ. ಕೇವಲ ಕೆಲವೇ ನಿಯಮಗಳು ನಿಸರ್ಗದಲ್ಲಿ ನಡೆಯುವ ನೂರಾರು ಭೌತಿಕ ವಿದ್ಯಮಾನಗಳನ್ನು ವಿವರಿಸಬಲ್ಲವು. ತರ್ಕಬದ್ಧವಾಗಿ ರೂಪುಗೊಂಡ ವೈಜ್ಞಾನಿಕ ನಿಯಮಗಳು ಮನುಷ್ಯನನ್ನು ತರ್ಕಬದ್ಧ ಯೋಚನೆಗೆ ತೊಡಗಿಸಬಲ್ಲವು. ತನ್ಮೂಲಕ ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಬಲ್ಲವು. ಈ ಹಿನ್ನೆಲೆಯಿಂದ ನೋಡಿದರೆ ವೈಜ್ಞಾನಿಕ ಅನಕ್ಷರತೆ ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಬೆದರಿಕೆಯಾಗಿದೆ.

ಈಗ ಮಾಡಬೇಕಾದುದೇನು?

ಜನಸಾಮಾನ್ಯರಿಗೆ, ತಾವು ವಿಜ್ಞಾನವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಿದವರಲ್ಲ, ಆದ್ದರಿಂದ ತಮಗೆ ವಿಜ್ಞಾನ ಅರ್ಥವಾಗುವಂಥದಲ್ಲ ಎಂಬ ಅಳುಕು ಇರುತ್ತದೆ. ಅವರು ಅದರಿಂದ ಮುಕ್ತರಾಗಿ, ವಿಜ್ಞಾನದ ವಿವಿಧ ಶಾಖೆಗಳ ಕುರಿತು ಸ್ವಲ್ಪ ಮಟ್ಟಿಗಾದರೂ ಅರಿತುಕೊಳ್ಳಲು ಯತ್ನಿಸಬೇಕು. ಅದಕ್ಕಾಗಿ ಅವರು ಈಗಿರುವ ಸ್ಥಾನದಿಂದ ನಾಲ್ಕು ಹೆಜ್ಜೆ ಮುಂದೆ ಬರಬೇಕು. ಅದೇ ರೀತಿ ವಿಜ್ಞಾನ ವಿಷಯಗಳ ಪರಿಣಿತರು ನಾಲ್ಕು ಹೆಜ್ಜೆ ಮುಂದೆ ಬಂದು ಅವುಗಳನ್ನು ಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ, ಭಾಷೆಯಲ್ಲಿ ಹೇಳಲು ಪ್ರಯತ್ನಿಸಬೇಕು. ಹಾಗಾದಲ್ಲಿ ಮಾತ್ರ ನಮ್ಮ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆ ರೂಪಿಸಿದ ವೈಜ್ಞಾನಿಕ ಅನಕ್ಷರತೆಯೆಂಬ ಕಂದರ ಮುಚ್ಚಿಕೊಂಡೀತು. ಮತ್ತು ಹೆಚ್ಚು ಜನ ವೈಜ್ಞಾನಿಕ ಸಾಕ್ಷರತೆಯನ್ನು ಗಳಿಸಿಕೊಂಡಾರು.

ಅದಕ್ಕಾಗಿ ವಿಪುಲವಾಗಿ ಜನಪ್ರಿಯ ವಿಜ್ಞಾನ ಸಾಹಿತ್ಯದ ಸೃಷ್ಟಿಯಾಗಬೇಕು. ನಿಯತಕಾಲಿಕೆಗಳಲ್ಲಿ ವಿಜ್ಞಾನದ ವಿವಿಧ ಶಾಖೆಗಳ ಕುರಿತು ಜನಸಾಮಾನ್ಯರ ಆಸಕ್ತಿ ಕೆರಳಿಸುವಂತಹ ಲೇಖನಗಳು ಹೆಚ್ಚಾಗಿ ಪ್ರಕಟವಾಗಬೇಕು. ಒಟ್ಟಾರೆ, ವಿಜ್ಞಾನವನ್ನು ಜನಸಾಮಾನ್ಯರತ್ತ ಒಯ್ಯುವ ಒಂದು ಚಳುವಳಿಯೇ ಆರಂಭವಾಗಬೇಕು. ಆಗ ಸಾಮಾನ್ಯ ಜನ ವೈಜ್ಞಾನಿಕ ಕ್ಷೇತ್ರಕ್ಕೆ ಸಂಬಂಧಿಸಿದ [illegible] [illegible] ಅರ್ಥಪೂರ್ಣವಾಗಿ ಸ್ವೀಕರಿಸಲು ಸಾಧ್ಯವಾಗುತ್ತದೆ.

ಪ್ರೊ|| ಡಿ. ಆರ್. ಬಳೂರಗಿ
ಜವಾಹರನಗರ ಹೈಸ್ಕೂಲು ಎದುರು ರಾಯಚೂರು - [illegible]

ಕೃಷಿಯಲ್ಲಿ ಬಾಧಕ ಕೀಟಗಳ ಸಮಗ್ರ ನಿರ್ವಹಣೆ

ಪ್ರಕೃತಿಯಲ್ಲಿ ಪ್ರತಿಯೊಂದು ಸಸ್ಯವೂ ಒಂದಲ್ಲಾ ಒಂದು ರೀತಿಯ ಕೀಟಗಳ ಹಾವಳಿಗೆ ತುತ್ತಾಗುವುದು ಸಹಜ. ವಾಣಿಜ್ಯ ಬೆಳೆಗಳಾಗಲಿ (ಉದಾಹರಣೆಗೆ : ಕಾಫಿ, ಟೀ, ಮೆಣಸು, ಹತ್ತಿ ಇತ್ಯಾದಿ) ಅಥವಾ ಆಹಾರ ಬೆಳೆಗಳಾಗಲಿ (ಅಕ್ಕಿ, ಗೋಧಿ, ಜೋಳ, ರಾಗಿ, ಹಣ್ಣು, ತರಕಾರಿಗಳು ಇತ್ಯಾದಿ) ಕೀಟಗಳ ಹಾವಳಿಗೆ ತುತ್ತಾಗುವುದನ್ನು ತಡೆಗಟ್ಟಲು ಮಾನವನು ಸಾಂಪ್ರದಾಯಿಕ ಪದ್ಧತಿಗಳನ್ನು ತೊರೆದು ಮಾರಕ ಕೀಟನಾಶಕಗಳ ಮೊರೆ ಹೋಗುವುದು ಇತ್ತೀಚಿನ ದಿನಗಳಲ್ಲಿ ಸರ್ವೇಸಾಮಾನ್ಯವಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆಯನ್ನಾಧರಿಸಿದ ತ್ವರಿತ ಬೇಸಾಯ ಕ್ರಮಗಳಲ್ಲಿ, ಅಧಿಕವಾದ ಆಹಾರ ಮತ್ತು ವಾಣಿಜ್ಯ ಬೆಳೆಗಳ ಉತ್ಪಾದನೆಯ ದೃಷ್ಟಿಯಿಂದ ರಾಸಾಯನಿಕ ಕೀಟನಾಶಕಗಳನ್ನು ಅತಿಯಾಗಿ ಬಳಸಿಕೊಳ್ಳಲಾಯಿತು. ಕೀಟನಾಶಕಗಳ ಬಳಕೆಯಿಂದ ಅತ್ಯಂತ ಶೀಘ್ರವಾಗಿ ಕೀಟಗಳನ್ನು ನಿಯಂತ್ರಿಸಲು ಸಾಧ್ಯವಾಗಿದ್ದು, ಹೆಚ್ಚಿನ ಉತ್ಪತ್ತಿ ಬೇಸಾಯದಲ್ಲಿ ಲಭಿಸತೊಡಗಿತು. ಭಾರತದಲ್ಲಿ ೧೯೬೦ರ ನಂತರ ಹಸಿರುಕ್ರಾಂತಿಯಲ್ಲಿ ಅತಿಯಾದ ರಾಸಾಯನಿಕ ಗೊಬ್ಬರಗಳನ್ನೂ ಕೀಟನಾಶಕಗಳನ್ನೂ ಬಳಸಿಕೊಳ್ಳಲಾಗಿದ್ದು, ವರ್ಷದಲ್ಲಿ ಸುಮಾರು ೮೦,೦೦೦ ಟನ್‌ಗಳಷ್ಟು ಕೀಟನಾಶಕಗಳ ಉಪಯೋಗವಾಗುತ್ತಿದ್ದು, ಇದರಲ್ಲಿ ಭಾಗಶಃ ನಿಷೇಧಿಸಿದ ಅತ್ಯಂತ ಹಾನಿಕಾರಕ ಕೀಟನಾಶಕಗಳಾದ ಬಿಹೆಚ್‌ಸಿ ಮತ್ತು ಡಿಡಿಟಿಯ ಬಳಕೆ ಶೇ. ೪೦ರಷ್ಟಿದೆ. ತಾತ್ಕಾಲಿಕವಾಗಿ ಕೀಟನಾಶಕಗಳ ಬಳಕೆಯಿಂದ ಪರಿಹಾರ ಕಂಡುಬಂದರೂ ಕಾಲಕ್ರಮೇಣ ಅವುಗಳ ಸಿಂಪರಣೆಯಿಂದ ಉಂಟಾಗುವ ದುಷ್ಪರಿಣಾಮ ಗಳು ಬಾಧಕ ಕೀಟಗಳ ಹಾವಳಿಗಿಂತ ಹಲವು ಪಟ್ಟು ಹಾನಿಕಾರಕವಾಗಿರುವುದು ಗಮನಿಸಬೇಕಾದ ಅಂಶ. ಅತಿಯಾದ ಕೀಟನಾಶಕಗಳ ಬಳಕೆಯಿಂದ ಹಲವು ಕೀಟಗಳು ಕೀಟನಾಶಕ ನಿರೋಧಕ ಶಕ್ತಿಯನ್ನು ತಮ್ಮಲ್ಲಿ ಬೆಳೆಸಿಕೊಂಡು ಅತ್ಯಂತ ಬಾಧಕಗಳಾಗಿ ಉಲ್ಬಣಿಸಿ ಪ್ರಕೃತಿಯಲ್ಲಿ ಇವುಗಳ ನಿಯಂತ್ರಣ ಅಸಾಧ್ಯವಾಗಿರುವುದಲ್ಲದೆ ಕೀಟನಾಶಕಗಳ ಬಳಕೆಯಿಂದ ಪ್ರಕೃತಿಯಲ್ಲಿ ಆಹಾರ, ಮಣ್ಣು, ನೀರು ಮತ್ತು ವಾಯು ಅತ್ಯಂತ ಮಲಿನಗೊಳ್ಳುತ್ತಿದ್ದು, ಇದರ ದುಷ್ಪರಿಣಾಮಗಳು ಆಹಾರ ಸರಪಳಿಯಲ್ಲಿ ಮಾನವನ ದೇಹವನ್ನು ಸೇರಿ ಅವನ ಆರೋಗ್ಯವನ್ನು ಹಲವು ರೀತಿಯಲ್ಲಿ ಹದಗೆಡಿಸುತ್ತಿರುವುದು ಎಲ್ಲೆಡೆ ಕಂಡುಬರುತ್ತಿದೆ.



ಕೀಟಗಳ ನಿರೋಧಕ್ಕೆ ಯತ್ನ

ಪ್ರಕೃತಿಯಲ್ಲಿ ರಾಸಾಯನಿಕ ಕೀಟನಾಶಕಗಳ ಬಳಕೆಯಿಂದಾಗುವ ದುಷ್ಪರಿಣಾಮಗಳನ್ನು ಮಿತಗೊಳಿಸುವ ನಿಟ್ಟಿನಲ್ಲಿ ಸಮಗ್ರ ಕೀಟ ನಿಯಂತ್ರಣ ಕ್ರಮವನ್ನು ಅಳವಡಿಸಿಕೊಳ್ಳಲಾಯಿತು. ಈ ಕ್ರಮಗಳಲ್ಲಿ ಕೀಟನಾಶಕಗಳ ಬಳಕೆಯನ್ನು ಸರಿಯಾದ ಕಾಲದಲ್ಲಿ ಮಿತವಾಗಿ ಬಳಸಿಕೊಂಡು ಇತರ ಸಾಧ್ಯವಾಗುವ ಹಲವು ನಿಯಂತ್ರಣ ಕ್ರಮಗಳನ್ನು ಬಳಸಿಕೊಳ್ಳಲಾಗುತ್ತದೆ. ಈ ದಿನಗಳಲ್ಲಿ ಸಮಗ್ರ ಹತೋಟಿ ಕ್ರಮಗಳನ್ನು ಕೃಷಿಯಲ್ಲಿ ಪ್ರಸಿದ್ಧಿಗೊಳಿಸಲು ದೇಶದ ಹಲವು ಕೃಷಿ ಸಂಶೋಧನಾ ಸಂಸ್ಥೆಗಳು ಶ್ರಮಿಸುತ್ತಿವೆ.

ಸಮಗ್ರ ಕೀಟ ಹತೋಟಿಯಲ್ಲಿ ಅನುಸರಿಸಬೇಕಾದ ಕ್ರಮಗಳು ಕೆಳಕಂಡಂತಿವೆ :

೧. **ಬೇಸಾಯ ಪದ್ಧತಿ** : ಇದರಲ್ಲಿ ವ್ಯವಸ್ಥಿತವಾಗಿ ಬೇಸಾಯ ಪದ್ಧತಿಗಳನ್ನು ಅನುಸರಿಸಿ ಉಳುವುದು, ಸರಿಯಾದ ಪ್ರಮಾಣದಲ್ಲಿ ಗೊಬ್ಬರವನ್ನು ಬಳಸುವುದು, ಸ್ವಚ್ಛತೆಯನ್ನು ಕಾಪಾಡುವುದು, ಸಸ್ಯಗಳನ್ನು ಸರಿಯಾಗಿ ಕಸಿ ಮಾಡುವುದು, ನೀರಿನ ತೇವಾಂಶ ಮತ್ತು ನೆರಳನ್ನು ಕಾಪಾಡಿಕೊಂಡು ಬರುವುದು ಮುಖ್ಯವಾದವು.

೨. **ಯಾಂತ್ರಿಕ ವಿಧಾನ** : ಈ ವಿಧಾನದಲ್ಲಿ ಸಸ್ಯಗಳಲ್ಲಿದ್ದ ಕೀಟಗಳನ್ನು ಕೈಯಿಂದ ನಾಶಪಡಿಸುವುದು, ಮಣ್ಣಿನಲ್ಲಿರುವ ಕೀಟಗಳನ್ನು ನೀರನ್ನು ಹಾಯಿಸಿ ಹತೋಟಿಯಲ್ಲಿ ಇಡುವುದು, ಸಸ್ಯಗಳ ಕಾಂಡಗಳಿಗೆ ಅಂಟುಪಟ್ಟಿಯನ್ನು ಕಟ್ಟಿ ಕೀಟಗಳ ಚಲನೆಯನ್ನು ನಿಯಂತ್ರಿಸುವುದು, ರಾತ್ರಿಯಲ್ಲಿ ಹಾರಾಡುವ ಕೀಟಗಳನ್ನು ಬೆಳಕಿನ ಬೋನುಗಳನ್ನಿಟ್ಟು ಆಕರ್ಷಿಸಿ ಕೊಲ್ಲುವುದು ಮುಖ್ಯವಾದ ಕ್ರಮಗಳಾಗಿವೆ.

೩. **ಜೈವಿಕ ವಿಧಾನ** : ಈ ಕ್ರಮವು ಕೀಟಗಳ ಹತೋಟಿಯಲ್ಲಿ ಇತ್ತೀಚೆಗೆ ಅತ್ಯಂತ ಮಹತ್ವವನ್ನು ಪಡೆಯುತ್ತಿದ್ದು, ವೈಜ್ಞಾನಿಕವಾಗಿ ಈ ನಿಯಂತ್ರಣ ಕ್ರಮವನ್ನು ಬಳಸಿಕೊಳ್ಳುವುದು ಮುಖ್ಯವಾಗಿದೆ. ಇಲ್ಲಿ ಪರೋಪಜೀವಿಗಳನ್ನು ಮತ್ತು ಭಕ್ಷಕಗಳನ್ನು ಅಲ್ಲದೆ ಸೂಕ್ಷ್ಮಜೀವಿಗಳಾದ ಬ್ಯಾಕ್ಟೀರಿಯಾ, ವೈರಸ್ ಮತ್ತು ಶಿಲೀಂಧ್ರಗಳನ್ನು ಬಳಸಿ ಬಾಧಕ ಕೀಟಗಳನ್ನು ನಿಯಂತ್ರಣದಲ್ಲಿಡಲಾಗುತ್ತದೆ. ಮನೆಗಳಲ್ಲಿ ಬೆಕ್ಕನ್ನು ಬಳಸಿ ಇಲಿಗಳನ್ನು ನಿಯಂತ್ರಿಸುವುದು ಜೈವಿಕ ನಿಯಂತ್ರಣಕ್ಕೆ ಒಂದು ಸಾಮಾನ್ಯ ಉದಾಹರಣೆ. ಪರೋಪಜೀವಿಗಳ ಮತ್ತು ಭಕ್ಷಕಗಳ ಬಳಕೆಯಲ್ಲಿ ರಾಸಾಯನಿಕ ಕೀಟನಾಶಕಗಳನ್ನು ಬಹಳ ಸೂಕ್ಷ್ಮತೆಯಿಂದ ಬಳಸಿಕೊಳ್ಳಬೇಕಾಗುತ್ತದೆ. ಜೈವಿಕ ನಿಯಂತ್ರಣವು ಪ್ರಕೃತಿಗೆ ಹಿತಕರವಾಗಿದ್ದು ಇಲ್ಲಿ ಯಾವುದೇ ರೀತಿಯ ದುಷ್ಪರಿಣಾಮಗಳೂ ಕಂಡು ಬರುವುದಿಲ್ಲ. ಜೈವಿಕ ನಿಯಂತ್ರಣದಲ್ಲಿ ಹಲವು ಬಗೆಯ ಬಾಧಕ ಕೀಟಗಳ ಶತ್ರುಕೀಟಗಳಾದ ದುಂಬಿಗಳು, ಜೀರುಂಡೆಗಳು, ಹಲ್ಲಿಗಳು, ಜೇಡಗಳು, ಪಕ್ಷಿಗಳು, ಇತ್ಯಾದಿ ಮುಖ್ಯ ಪಾತ್ರ ವಹಿಸುತ್ತವೆ. ಇವುಗಳ ಬಳಕೆಯಲ್ಲಿ ವೈಜ್ಞಾನಿಕ ಮಾಹಿತಿಗಳ ತಿಳುವಳಿಕೆ ಅತ್ಯಂತ ಮುಖ್ಯವಾದದ್ದು. ಜೈವಿಕ ನಿಯಂತ್ರಣದಲ್ಲಿ ಕೆಲವು ಬಾಧಕ ಕೀಟಗಳನ್ನು ಹತೋಟಿಯಲ್ಲಿಡಲು ಶತ್ರುಕೀಟಗಳನ್ನು ಆಮದು ಮಾಡಿಕೊಂಡು ಬಳಸಿಕೊಳ್ಳಲಾಗುತ್ತದೆ. ಶತ್ರುಕೀಟಗಳ ಬಳಕೆಯಲ್ಲಿ ಸಾವಯವ ರಾಸಾಯನಿಕ ಕೀಟನಾಶಕಗಳ ಬಳಕೆ ಅತ್ಯಂತ ಪ್ರಾಮುಖ್ಯತೆ ಪಡೆದಿದೆ.

ಜೈವಿಕ ನಿಯಂತ್ರಣದಲ್ಲಿ ಪ್ರಕೃತಿಯಲ್ಲಿರುವ ಹಲವು ಬಾಧಕ ಕೀಟಗಳ ಶತ್ರುಗಳನ್ನು ಬಳಸಿಕೊಳ್ಳುವುದರೊಂದಿಗೆ ಲಿಂಗಾಕರ್ಷಕ ರಾಸಾಯನಿಕಗಳನ್ನು ಬೋನುಗಳಲ್ಲಿ ಬಳಸಿ ಕೀಟಗಳನ್ನು ಕೊಲ್ಲುವುದು ಅತ್ಯಂತ ವೈಜ್ಞಾನಿಕ ಕೀಟನಾಶಕ ಕ್ರಮವಾಗಿದೆ. ಈ ಲಿಂಗಾಕರ್ಷಕ ವಿಧಾನ ಭಾರತದಲ್ಲಿ ಇದೀಗ ಹೆಜ್ಜೆ ಇಟ್ಟಿದ್ದು ಇದೊಂದು ಅತ್ಯಂತ ಮಹತ್ವದ ವೈಜ್ಞಾನಿಕ ನಿಯಂತ್ರಣ ಕ್ರಮವಾಗಿದೆ.

೪. **ರಾಸಾಯನಿಕ ವಿಧಾನ** : ಸಮಗ್ರ ಕೀಟ ನಿಯಂತ್ರಣದ ಉದ್ದೇಶ ಹಾನಿಕಾರಕ ಕೀಟನಾಶಕಗಳ ಬಳಕೆಯನ್ನು ಮಿತಗೊಳಿಸುವುದಾಗಿದ್ದು, ಕೀಟನಾಶಕಗಳನ್ನು ವರ್ಷವೆಲ್ಲಾ ಉಪಯೋಗಿಸದೆ ಸರಿಯಾದ ಕಾಲದಲ್ಲಿ ಮತ್ತು ಸರಿಯಾದ ಪ್ರಮಾಣದಲ್ಲಿ ಮಾತ್ರ ಬಳಸಿಕೊಳ್ಳಲಾಗುವುದು. ಈ ನಿಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ಹಾನಿಕಾರಕವಲ್ಲದ ಸಸ್ಯ ಕೀಟನಾಶಕಗಳು ಅತ್ಯಂತ ಪ್ರಾಮುಖ್ಯತೆ ಪಡೆದಿವೆ.

ಸಮಗ್ರ ನಿಯಂತ್ರಣ ಕ್ರಮವು ಬಾಧಕ ಕೀಟಗಳ ಹತೋಟಿಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದು, ರೈತರಿಗೆ ಇದರ ಬಳಕೆಯ ಬಗ್ಗೆ ಸರಿಯಾದ ಮಾಹಿತಿ ನೀಡಿ ವ್ಯವಸಾಯದಲ್ಲಿ ಅಳವಡಿಸಿಕೊಳ್ಳುವಂತೆ ಮಾಡುವುದು ಭಾರತದ ಕೃಷಿ ವಿಜ್ಞಾನಿಗಳ, ಸಂಪರ್ಕ ಅಧಿಕಾರಿಗಳ ಮತ್ತು ಸಂಪರ್ಕ ಮಾಧ್ಯಮಗಳ ಆದ್ಯ ಕರ್ತವ್ಯವಾಗಿದೆ.

ಡಾ|| ಎಂ. ಜಿ. ವೆಂಕಟೇಶ
ಉಪನ್ಯಾಸಕರು, ಪ್ರಾಣಿಶಾಸ್ತ್ರ ವಿಭಾಗ, ಬೆಂಗಳೂರು
ವಿಶ್ವವಿದ್ಯಾನಿಲಯ, ಜ್ಞಾನಭಾರತಿ, ಬೆಂಗಳೂರು - ೫೬೦ ೦೫೬

ಸ್ತ್ರೀವಾದ



ಡಾ|| ಬಿ. ಎನ್. ಸುಮಿತ್ರಾಬಾಯಿ

ಪುಟ : 134 **ಬೆಲೆ : ರೂ. 35**

ಕರ್ನಾಟಕ ಸಾಹಿತ್ಯ ಅಕಾಡೆಮಿ, 'ಕನ್ನಡ ಭವನ', ಜೆ. ಸಿ. ರಸ್ತೆ, ಬೆಂಗಳೂರು - 560 002

''ಪೆಣ್ಣಾಗಿ ಜನಿಸಿ ತನ್ನೊಡಲಂ ಪೊರೆವುದೆನ್ನೊಳಪರಾಧ ಮುಂಟು'' ಎಂದು ತೀರ್ಮಾನಿಸಿದ ಸ್ತ್ರೀ ಅಂದಿನಿಂದ ಇಂದಿನ ತನಕ ಕಾಲ-ದೇಶ-ಜನಾಂಗಗಳಲ್ಲಿ ವಿಭಿನ್ನವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಸ್ತ್ರೀವಾದವು ಪುರುಷ ವಿರೋಧಿಯಾದಾಗ ಸಮಸ್ಯೆಗಳು ಪರಿಹಾರ ಕಾಣುವ ಬದಲು ಉಲ್ಬಣಗೊಳ್ಳುತ್ತವೆ. ಸ್ತ್ರೀಗೆ ಅನುಕಂಪವೂ ಅವಳ ಪ್ರಗತಿಗೆ ಮಾರಕವಾಗಬಹುದು. ಇಂಥ ಅನೇಕ ವಿಚಾರಗಳನ್ನು ಇಲ್ಲಿ ಮುಕ್ತವಾಗಿ ಚರ್ಚಿಸಲಾಗಿದೆ.

ವಿಸ್ಮಯಗಳ ನಾಡಿನಲ್ಲಿ




ವಿ. ಜಿ. ಕುಲಕರ್ಣಿ, ವಿ. ಜಿ. ಗಂಭೀರ್, ಆರ್. ಎಂ. ಭಾಗವತ್. ಅನು : ಟಿ. ಆರ್. ಅನಂತರಾಮು

ಪುಟ : 112 **ಬೆಲೆ : ರೂ. 40**

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 1

ಪ್ರಯೋಗಗಳ ಮೂಲಕ ಹೊಸ ರಹಸ್ಯವನ್ನು ಕಂಡು ಹಿಡಿದಾಗ ಮಕ್ಕಳ ಆನಂದ ಅವರ್ಣನೀಯ. ಆತ್ಮವಿಶ್ವಾಸವನ್ನು ಮೂಡಿಸುವ ಈ ಪುಸ್ತಕದಲ್ಲಿ ವಿವರಿಸಲಾದ ಸರಳ ಪ್ರಯೋಗಗಳು ಮುಂದೆ ವಿಜ್ಞಾನಿಯಾಗಲಿರುವ ನಿಮ್ಮ ಮಕ್ಕಳ ಸಾಧನೆಗೆ ಮೊದಲ ಮೆಟ್ಟಿಲಾಗಬಹುದು. ಮೊದಲೇ ಚುರುಕಾದ ಪುಟಾಣಿಗಳಿಗೆ ಚಿತ್ರಗಳು ಇನ್ನಷ್ಟು ಸಹಾಯಮಾಡುತ್ತವೆ. ಕುತೂಹಲ ತಣಿಸುವ ಅನೇಕ ಪ್ರಯೋಗಗಳಿವೆ.

೧೯೯೮ ಕವಿತೆ



ಸಂಪಾದಕ : ಲಕ್ಷ್ಮೀಪತಿ ಕೋಲಾರ

ಪುಟ : 141 **ಬೆಲೆ : ರೂ. 35**

ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು- 560 001

ಒಂದರಿಂದ ಇನ್ನೊಂದು ಶತಮಾನಕ್ಕೆ ಜಗಿಯುವ ಕಾಲಘಟ್ಟದಲ್ಲಿ ಕಳೆಹಾಕಿದ ಒಂದು ವರ್ಷದ ಸಾಹಿತ್ಯ ಪ್ರಕಾರಗಳಲ್ಲಿ ಇಡೀ ಶತಮಾನದ ಸಾರವಿರುತ್ತದೆ. ಎಪ್ಪತ್ತೈದು ಕವಿಗಳ ಒಂದೊಂದು ಕವಿತೆಯಿರುವ ಈ ಕಾವ್ಯಧಾರೆಯನ್ನು ವಿಶೇಷವಾದ ದೃಷ್ಟಿಕೋನದಿಂದ ನೋಡಿದಾಗ ಮಾತ್ರ ಕವಿ ಹೃದಯದ ಭಾವನೆ ಓದುಗನನ್ನು ತಲುಪಬಹುದು.

ಗಣಪತಿ



ಮೂಲ : ಪುರಾಣಂ ಸುಬ್ರಹ್ಮಣ್ಯ ಶರ್ಮಾ


ಕನ್ನಡಕ್ಕೆ : ಸಿದ್ಧರಾಮ ರೆಡ್ಡಿ, ಇಟಗಿ.

ಪುಟ : 48 **ಬೆಲೆ : ರೂ. 12**

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 1

ಏಕದಂತನ ಅನೇಕ ದಂತಕಥೆಗಳನ್ನು, ''ಪೂರ್ವ ಪೂಜಿತನ'' ಪೂರ್ವೇತಿಹಾಸವನ್ನು ಲೋಕಾಯತ ಆಧಾರಿತ ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಚಾರಿತ್ರಿಕ ಹಿನ್ನೆಲೆಯಿಂದ ನೋಡಿದಾಗ ಅಂದಿನ ಒಂದು ಗಣದ ಅಧಿಪತಿಯನ್ನು ಇಂದಿನ ಒಬ್ಬ ಪ್ರಭಾವಿ ದೇವತೆಯನ್ನಾಗಿ ಪರಿವರ್ತಿಸಲು ಒಂದು ವರ್ಗ ಅದೆಷ್ಟು ಅಸಂಬದ್ಧ ಕತೆಗಳನ್ನು ಪುರಾಣಗಳಲ್ಲಿ ಸೇರಿಸಿರಬಹುದೆಂದು ತಲೆದೂಗುವಂತೆ ನಿರೂಪಿಸಲಾಗಿದೆ.

ಗೋದಾವರಿಯ ಆಸುಪಾಸಿನಲ್ಲಿ...



(ಪ್ರವಾಸ ಕಥನ)

ಡಾ|| ಎಚ್. ಎಸ್. ಗೋಪಾಲರಾವ್

ಪುಟ : 40 **ಬೆಲೆ : ರೂ. 30**

ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು -560 002

ಇದು ಇಂದಿನ ಮಹಾರಾಷ್ಟ್ರಕ್ಕೆ ಲೇಖಕರು ನೀಡಿದ ಭೇಟಿಯ ಪ್ರವಾಸ ಕಥನವಾದರೂ ಚರಿತ್ರೆಯ ಅಂಶಗಳನ್ನು ತಿಳಿಸುವುದಕ್ಕೆ ಹೆಚ್ಚು ಮಹತ್ವ, ಒಲವು ನೀಡಲಾಗಿದೆ. ಕಾವೇರಿಯಿಂದ-ಗೋದಾವರಿಯವರೆಗೆ ಹರಡಿದ್ದ ಕನ್ನಡದ ಇತಿಹಾಸ-ಭಾಷೆ-ಸಂಸ್ಕೃತಿಗಳನ್ನು ಒಬ್ಬ ಕನ್ನಡಿಗನಾಗಿ, ಚರಿತ್ರಕಾರನಾಗಿ ಲೇಖಕರು ಮಹಾರಾಷ್ಟ್ರದಲ್ಲಿರುವ ಕನ್ನಡದ ಕಂಪನ್ನು ಆಘ್ರಾಣಿಸಿ ನಮಗೂ ಹಂಚಿದ್ದಾರೆ.

ಸಣ್ಣಕೂಸ ಹೇಳಿದ ಕಥೆಗಳು




ಡಾ|| ಎಲ್. ಆರ್. ಹೆಗಡೆ

ಪುಟ : 100 **ಬೆಲೆ : ರೂ. 45**

ಡಾ|| ಎಲ್. ಆರ್. ಹೆಗಡೆ ಕೃತಿ ಪ್ರಕಾಶನ ಸಮಿತಿ, ಶಿರಸಿ, ಉತ್ತರ ಕನ್ನಡ

ಊರೂರು ಅಲೆಯುತ್ತ, ಭಿಕ್ಷೆ ಬೇಡುತ್ತ, ಜೀವನಾನುಭವಗಳನ್ನೇ ಕಥೆಗಳನ್ನಾಗಿಸುತ್ತ ಓಡಾಡಿಕೊಂಡಿದ್ದ ಸಣ್ಣಕೂಸ ಎಂಬ ಜಾನಪದ ಕಥೆಗಾರನೊಬ್ಬನಿಂದ ಸಂಗ್ರಹಿಸಿದ ಇಲ್ಲಿನ ಕಥೆಗಳು ಸ್ವಾರಸ್ಯಕರವಾಗಿವೆ. ಉತ್ತರ ಕನ್ನಡದ ಆಡುಭಾಷೆಯಲ್ಲಿರುವುದರಿಂದ ಕ್ಲಿಷ್ಟ ಪದಗಳ ಅರ್ಥಗಳನ್ನೂ ಪುಸ್ತಕದ ಕೊನೆಯಲ್ಲಿ ಕೊಡಲಾಗಿದೆ.

೧೯೯೮ ಸಣ್ಣಕಥೆ



ಸಂಪಾದಕ : ಡಾ|| ಕರೀಗೌಡ ಬೀಚನಹಳ್ಳಿ

ಪುಟ : 177 **ಬೆಲೆ : ರೂ. 35**

ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು- 560 001

1998ರಲ್ಲಿ ಪ್ರಕಟವಾದ ನೂರಾರು ಸಣ್ಣಕಥೆಗಳಿಂದ ಅತ್ಯುತ್ತಮವಾದುದನ್ನು ಆಯ್ಕೆ ಮಾಡಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಈ ಸಂಕಲನವನ್ನು ಹೊರತಂದಿದೆ. ಪ್ರಸಿದ್ಧ ಲೇಖಕರ ಸಾಮಾಜಿಕ ಕಾಳಜಿ ಕಥೆಗಳಲ್ಲಿ ನಿಚ್ಚಳವಾಗಿ ಬಿಂಬಿತವಾಗಿರುವುದು ಗೋಚರಿಸುತ್ತದೆ. ಪ್ರತಿಭಾವಂತ ಉದಯೋನ್ಮುಖ ಲೇಖಕರ ಕಥೆಗಳೂ ಪ್ರಸಿದ್ಧರೊಂದಿಗೆ ಸೇರ್ಪಡೆಯಾಗಿವೆ.

ಈ ಬೆರಳ ಗುರುತು



(ಕಥಾ ಸಂಕಲನ)

ಸಂಪಾದಕರು: ಗೋಪಾಲಕೃಷ್ಣ ಪೈ

ಪುಟ : 80 **ಬೆಲೆ : ರೂ. 50**

ಲಿಪಿ ಪ್ರಕಾಶನ, ಬಸವನಗುಡಿ, ಬೆಂಗಳೂರು - 560 004

[illegible]

[illegible]


ಮೂರು ಗ್ರಹಣಗಳ ವಿಶೇಷ ಮಾಸ


ಡಾ॥ ಬಿ. ಎಸ್. ಶೈಲಜಾ

ಜುಲೈ ತಿಂಗಳು ಮಳೆ, ಮೋಡ, ಗಾಳಿಗಳ ಆರ್ಭಟಕ್ಕೆ ಹೆಸರುವಾಸಿ. ಆದರೂ ಆಗೊಮ್ಮೆ ಈಗೊಮ್ಮೆ ಮೋಡಗಳ ಸುಳಿಯ ನಡುವಿನಲ್ಲಿ ಶುಭ್ರ ಆಕಾಶ ಕಾಣುವ ಸಾಧ್ಯತೆಯೂ ಇಲ್ಲದಿಲ್ಲ. ದಕ್ಷಿಣದಲ್ಲಿ ಒಂದು ನಕ್ಷತ್ರ ಪುಂಜ ಇಂದು ಕಂಡರೆ ಉತ್ತರದಲ್ಲೊಂದು ನಾಳೆ ಕಾಣಬಹುದು.

ಅದಕ್ಕಿಂತ ಮುಖ್ಯವಾದ ಆಕರ್ಷಣೆ ಈ ತಿಂಗಳ ಗ್ರಹಣಗಳದ್ದು. ಜುಲೈ ಒಂದರಂದು ಹಾಗೂ ಮೂವತ್ತರಂದು ಪಾರ್ಶ್ವ ಸೂರ್ಯಗ್ರಹಣಗಳಿವೆ. ಮೊದಲನೆಯದು ಭೂಗೋಳದ ದಕ್ಷಿಣತುದಿಗೆ ಚಂದ್ರನ ನೆರಳನ್ನು ಹಾಯಿಸಿದರೆ ಎರಡನೆಯದು ಗೋಳದ ಉತ್ತರ ತುದಿಗೆ ಹಾಯಿಸುತ್ತದೆ. ಒಟ್ಟಿನಲ್ಲಿ ಭಾರತಕ್ಕೆ ಎರಡೂ ನಿಲುಕುವುದಿಲ್ಲ. ದೊರಕುವುದು ಅಪೂರ್ವವಾದ ಚಂದ್ರಗ್ರಹಣ ಮಾತ್ರ. ಸಾಧಾರಣವಾಗಿ ಚಂದ್ರ ಗ್ರಹಣಗಳೆಲ್ಲಾ ಮಧ್ಯರಾತ್ರಿಯ ನಂತರ ನಡೆಯುತ್ತವೆ. ಆದ್ದರಿಂದ ಅದರ ಸೌಂದರ್ಯ ಜನಸಾಮಾನ್ಯರ ಕಣ್ತಪ್ಪಿ ಹೋಗುತ್ತದೆ. ಈ ಬಾರಿ ಚಂದ್ರೋದಯ ಆಗುವಾಗಲೇ ಗ್ರಹಣ. ಆದ್ದರಿಂದ ಉದಯಿಸುವುದು ಕಂದು ಬಣ್ಣದ ಚಂದ್ರ! ಈ ಅಪೂರ್ವ ದೃಶ್ಯ ಯಾವಾಗಲೂ ಸಿಗುವಂತಹುದಲ್ಲ. ಉದಯದಿಂದ ರಾತ್ರಿ ೮ ಗಂಟೆ ೧೯ ನಿಮಿಷದವರೆಗೂ ಕಾಣುವ ಈ ಕಂದು ಚಂದ್ರ ಮೋಡದ ಮಧ್ಯೆ ಸ್ವಲ್ಪ ಹೊತ್ತಾದರೂ ಕಾಣುವ ಸಾಧ್ಯತೆ ಇದೆ. ಚಂದ್ರನ ಸಮೀಪ ಕಾಣುವ ಕ್ಷೀಣ ನಕ್ಷತ್ರವೇ ಉತ್ತರ ಆಷಾಢ. ಆದ್ದರಿಂದ ಈ ಮಾಸದ ಹೆಸರೂ ಆಷಾಢ.

ತೆಳುವಾದ ಮೋಡ ಮುಸುಕಿದ್ದರೂ ಸುಲಭವಾಗಿ ಗುರುತಿಸಬಹುದಾದ ಪ್ರಕಾಶಮಾನವಾದ ನಕ್ಷತ್ರಪುಂಜಗಳಲ್ಲೊಂದು ಪೂರ್ವ ಮತ್ತು ದಕ್ಷಿಣದ ನಡುವಿನ ವೃಶ್ಚಿಕ. ಚೇಳಿನ ಆಕಾರವನ್ನೇ ಹೋಲುವ ಇದರ ಬಾಲದ ಭಾಗದಲ್ಲಿ ದಟ್ಟವಾದ ನಕ್ಷತ್ರ ಸಮೂಹಗಳು ಹರಡಿವೆ. ನಮ್ಮ ಗೆಲಾಕ್ಸಿ ಆಕಾಶಗಂಗೆಯ ಅತಿದಟ್ಟವಾದ ಭಾಗದ ನೋಟ ಇಲ್ಲಿ ಸಿಗುತ್ತದೆ. ಉತ್ತರದಲ್ಲಿ ಸಪ್ತರ್ಷಿಮಂಡಲದ ಆಕಾರ ಸ್ಫುಟವಾಗಿ ಕಾಣುತ್ತದೆ. ಪಶ್ಚಿಮದ ಅಂಚಿನಲ್ಲಿ ಸಿಂಹ ಕಾಣುತ್ತದೆ. ಇತರ ಕ್ಷೀಣನಕ್ಷತ್ರ ಪುಂಜಗಳಿಗೆ ನಕ್ಷೆಯ ಸಹಾಯ ಬೇಕೇ ಬೇಕು. ದಕ್ಷಿಣದ ಅಂಚಿನಲ್ಲಿ ಕಾಣುವ ಪ್ರಖರ ನಕ್ಷತ್ರವೇ ಆಲ್ಫಾ ಸೆಂಟಾರಿ. ಇದರ ಪಕ್ಕದಲ್ಲಿ ಕಾಣುವ ಇನ್ನೊಂದು ಪ್ರಖರ ನಕ್ಷತ್ರ ಬೀಟಾ ಸೆಂಟಾರಿ. ಇವುಗಳ ಪಕ್ಕದಲ್ಲಿ ವಿರಾಜಿಸುವ ನಾಲ್ಕು ನಕ್ಷತ್ರಗಳು ಶಿಲುಬೆಯಾಕಾರದಲ್ಲಿವೆ. ಇದಕ್ಕೆ ದಕ್ಷಿಣದ ಶಿಲುಬೆ ತ್ರಿಶಂಕು ಎಂಬ





ಹೆಸರಿದೆ. ಆಕಾಶ ಶುಭ್ರವಾಗಿದ್ದಾಗ ಇವುಗಳ ಮೂಲಕ ಹಾದುಹೋಗುವ ಆಕಾಶಗಂಗೆಯ ಭಾಗವನ್ನು ನೋಡಬಹುದು. ನೆತ್ತಿಯ ಮೇಲೆ ಕಾಣುವ ಏಕಾಂಗಿ ಕೆಂಪುನಕ್ಷತ್ರ ಸ್ವಾತಿ, ಬೂಟಿಸ್ (ಸಹದೇವ) ನಕ್ಷತ್ರ ಪುಂಜಕ್ಕೆ ಸೇರಿದೆ.

ಗ್ರಹಗಳಲ್ಲಿ ಮೂರು ಬೆಳಗಿನ ಝಾವ ಕಾಣುತ್ತವೆ. ಶುಕ್ರ ಗ್ರಹ ಮತ್ತು ಮಂಗಳ ಗ್ರಹ ಸೂರ್ಯನಿಗೆ ಸಮೀಪವಾಗಿರುವುದರಿಂದ ಕಾಣುವ ಸಾಧ್ಯತೆ ಇಲ್ಲ. ಇಲ್ಲಿ 'ಸಮೀಪ' ಎಂಬುದು ದೂರವನ್ನು ಸೂಚಿಸುತ್ತಿಲ್ಲ. ಕೋನವನ್ನು ಸೂಚಿಸುತ್ತದೆ. ಅಂದರೆ ಸೂರ್ಯ ಮತ್ತು ಗ್ರಹಗಳ ನಡುವಿನ ಕೋನ ಭೂಮಿಯಿಂದ ಕಂಡಂತೆ ಅತಿಕಡಿಮೆ ಎಂದರ್ಥ. ಚಂದ್ರ ಆಷಾಢ ನಕ್ಷತ್ರದ 'ಸಮೀಪ' ಇದೆ ಎಂಬುದೂ ಇದೇ ಅರ್ಥದಲ್ಲಿದೆ. ಚಂದ್ರ ದಿನದಿನಕ್ಕೆ ಸ್ಥಳ ಬದಲಿಸಿದಂತೆ, ನಕ್ಷತ್ರಗಳೊಡನೆ ಅದು ಉಂಟುಮಾಡುವ ಕೋನ ವ್ಯತ್ಯಾಸವಾಗುತ್ತದೆ. ಹುಣ್ಣಿಮೆಯ ಹಿಂದಿನ ದಿನ ಅದು ಆಷಾಢ ನಕ್ಷತ್ರದಿಂದ ಹದಿನೈದು ಡಿಗ್ರಿಗಳಷ್ಟು 'ದೂರ'ದಲ್ಲಿರುತ್ತದೆ. ಹುಣ್ಣಿಮೆಯ ಮರುದಿನವೂ ಅಷ್ಟೇ. ಆದರೆ ಇನ್ನೊಂದು ದಿಕ್ಕಿಗೆ ಸರಿದಿರುತ್ತದೆ.

ಚಂದ್ರನನ್ನು ಜುಲೈ ೪ರಂದು ಸಂಜೆ ಮಘ ನಕ್ಷತ್ರದ 'ಸಮೀಪ' ನೋಡಬಹುದು. ಜುಲೈ ೨೬ರ ಬೆಳಿಗ್ಗೆ ಶನಿಗ್ರಹದ ಬಳಿ ಕಾಣಬಹುದು. ಸ್ವಲ್ಪ ದಕ್ಷಿಣಕ್ಕೆ ಕಾಣುವುದು ಗುರುಗ್ರಹ. ಜುಲೈ ೨೭ರಂದು ಚಂದ್ರ ಈ ಎರಡೂ ಗ್ರಹಗಳನ್ನು ದಾಟಿ ಕೆಂಪು ನಕ್ಷತ್ರ ರೋಹಿಣಿಯ 'ಸಮೀಪ' ಕಾಣುತ್ತದೆ. ಜುಲೈ ೨೯ರ ಬೆಳಿಗ್ಗೆ (ಅಮವಾಸ್ಯೆಯ ಹಿಂದಿನ ದಿನ) ಚಂದ್ರನನ್ನು ಸಂಧ್ಯಾ ಪ್ರಕಾಶದಲ್ಲಿ ಹುಡುಕುವುದು ದೊಡ್ಡ ಸಾಹಸ. ಅದು ಯಶಸ್ವಿಯಾದರೆ ಪಕ್ಕದ ಬುಧಗ್ರಹವನ್ನೂ ನೋಡಬಹುದು.

ಭೂಮಿಯ ದೂರ ಸೂರ್ಯನಿಂದ ೧೫೦,೦೦೦,೦೦೦ ಕಿ.ಮೀ. ಎಂದು ಹೇಳುತ್ತೇವಲ್ಲವೇ ? ಇದು ಸರಾಸರಿ ದೂರ. ದೀರ್ಘವೃತ್ತಾಕಾರದ (ಅಂದರೆ ಕೋಳಿಮೊಟ್ಟೆ ಆಕಾರದ) ಕಕ್ಷೆಯಲ್ಲಿ ಭೂಮಿ ಸೂರ್ಯನನ್ನು ಸುತ್ತುವುದರಿಂದ ಈ ದೂರ ವರ್ಷವಿಡೀ ವ್ಯತ್ಯಾಸವಾಗುತ್ತದೆ. ಜುಲೈ ೪ರಂದು ಈ ದೂರ ಗರಿಷ್ಠವನ್ನು ಮುಟ್ಟುತ್ತದೆ (೧೫೨,೧೦೨,೩೦೨ ಕಿ.ಮೀ.).

ಜುಲೈ ಕೊನೆ ವಾರದಲ್ಲಿ ಹೊಸ ಧೂಮಕೇತು ಲೀನಿಯರ್ ಕಾಣುವ ಸಾಧ್ಯತೆ ಇದೆ.

- ಡಾ॥ ಬಿ. ಎಸ್. ಶೈಲಜಾ

ರಾತ್ರಿ ಇಡೀ ಕಾಣುವ ಧೂಮಕೇತು

ಜನಸಾಮಾನ್ಯರ ಕುತೂಹಲವನ್ನು ಕೆರಳಿಸುವ ಧೂಮಕೇತುಗಳು ಸೌರಮಂಡಲಕ್ಕೆ ಸೇರಿದ ಸಣ್ಣ ಕಾಯಗಳು. ಸರಾಸರಿ ಗಾತ್ರ ಕೇವಲ ನಾಲ್ಕಾರು ಕಿ.ಮೀ.ಗಳಷ್ಟೇ. ಆದರೆ ಉದ್ದನೆಯ ಬಾಲ ಬೆಳೆಸಿಕೊಂಡು ಇವು ಆಕಾಶದಲ್ಲಿ ರಾರಾಜಿಸಿದಾಗ ವಿಸ್ಮಯ ಉಂಟಾಗುವುದು ಸಹಜವೇ.


ಕಳೆದ ನಾಲ್ಕು ವರ್ಷಗಳಲ್ಲಿ ಬರಿಗಣ್ಣಿಗೆ ಕಾಣುವಷ್ಟು ಪ್ರಕಾಶವಾದ ಎರಡು ಧೂಮಕೇತುಗಳು ಬಂದುಹೋದವು. ೧೯೯೬ರ ಹಯಾಕುಟಾಕೆ ಎಂಬ ಧೂಮಕೇತು ಧ್ರುವನಕ್ಷತ್ರದ ಸಮೀಪಕ್ಕೆ ಸರಿಯಿತು. ಮಾರ್ಚ್ ತಿಂಗಳ ಶುಭ್ರ ಆಕಾಶದಲ್ಲಿ ರಾತ್ರಿ ಇಡೀ ದರ್ಶನ ನೀಡಿತು. ೯೬ - ೯೭ರಲ್ಲಿ ಕಂಡ ಇನ್ನೊಂದು ಧೂಮಕೇತು ಹೇಲ್-ಬಾಪ್ ಎಂಟು ತಿಂಗಳ ಕಾಲ ಬರಿಗಣ್ಣಿಗೆ ಕಂಡಿತ್ತು. ಇವನ್ನು ನಗರವಾಸಿಗಳು ಗುರುತಿಸಲು ಕಷ್ಟಪಟ್ಟಿದ್ದು ಎರಡು ಕಾರಣಗಳಿಂದ-ಆಕಾಶಜ್ಞಾನದ ಕೊರತೆ ಒಂದಾದರೆ ನಗರದ ವಿದ್ಯುದ್ದೀಪಗಳ ಪ್ರಕಾಶಮಾಲಿನ್ಯ ಇನ್ನೊಂದು.

ಬರಿಗಣ್ಣಿನ ನೋಟಕ್ಕೆ ನಿಲುಕುವಷ್ಟು ಪ್ರಕಾಶಮಾನವಾಗುತ್ತಿರುವ ಇನ್ನೊಂದು ಧೂಮಕೇತು ಜುಲೈ ತಿಂಗಳಿನ ಆಕಾಶವನ್ನು ಬೆಳಗಲಿದೆ. ೧೯೯೯ S೪ ಎಂಬುದು ಇದರ 'ಹೆಸರು' - ೧೯೯೯ರ ಸೆಪ್ಟೆಂಬರ್ ತಿಂಗಳಲ್ಲಿ ಇದನ್ನು ಕಂಡುಹಿಡಿಯಲಾಯಿತು ಎಂಬುದನ್ನು ಈ ಸಂಖ್ಯೆ ಸೂಚಿಸುತ್ತದೆ. ಇದನ್ನು ಕಂಡುಹಿಡಿದದ್ದು ಒಂದು ಯಂತ್ರ-ಲೀನಿಯರ್ ಎಂಬ ಹೆಸರಿನದು. ಲೀನಿಯರ್ (LINEAR) ಎಂಬುದು ಲಿಂಕನ್ ಲ್ಯಾಬೋರೇಟರಿ ಫಾರ್ ನಿಯರ್ ಅರ್ಥ್ ಆಸ್ಟೆರ್ಯಾಡ್ ರಿಸರ್ಚ್ ಎಂಬುದರ ಸಂಕ್ಷಿಪ್ತ ರೂಪ. ಭೂಮಿಯನ್ನು ಸಮೀಪಿಸುವ ಕ್ಷುದ್ರಗ್ರಹಗಳ ಅಧ್ಯಯನಕ್ಕಾಗಿ ಮೀಸಲಾದ ಈ ವ್ಯವಸ್ಥೆ ಅನೇಕ ಧೂಮಕೇತುಗಳನ್ನು ಕಂಡುಹಿಡಿದಿದೆ. ಆದರೆ ಅವೆಲ್ಲವೂ ಬರಿಗಣ್ಣಿಗೆ ಕಾಣವಷ್ಟು ಪ್ರಕಾಶಮಾನವಾಗಿಲ್ಲ.

ಲೀನಿಯರ್ S೪ ಎಂಬ ಈ ಧೂಮಕೇತು ಕಳೆದ ಸೆಪ್ಟೆಂಬರ್‌ನಲ್ಲಿ ಪತ್ತೆಯಾದಾಗ ಗುರುಗ್ರಹಕ್ಕಿಂತಲೂ ಹೆಚ್ಚು ದೂರದಲ್ಲಿತ್ತು. ಈ ಕಾರಣದಿಂದ ಅದು ಬರಿಗಣ್ಣಿಗೆ ಕಾಣುವಷ್ಟು ಪ್ರಕಾಶ ಪಡೆಯಬಹುದೆಂಬುದನ್ನು ಊಹಿಸಬಹುದಾಗಿತ್ತು.

ಲೀನಿಯರ್ ಹೊಸ ಧೂಮಕೇತುವಾಗಿದ್ದರೆ ಅದರ ಪ್ರಕಾಶ ಹೆಚ್ಚುವುದರಲ್ಲಿ ಸಂದೇಹವೇ ಇಲ್ಲ. ಆದರೆ ಅದು ಹಳೆಯ ಧೂಮಕೇತುವಾಗಿದ್ದು ಹಿಂದಿನ ಬಾರಿ ಬಂದಾಗಲೆಲ್ಲಾ ಸಾಕಷ್ಟು ಅನಿಲವನ್ನು ಕಳೆದುಕೊಂಡಿದ್ದರೆ ಈ ಬಗೆಯ ಚಟುವಟಿಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಿರೀಕ್ಷಿತ ಪ್ರಕಾಶವನ್ನು ಮುಟ್ಟದೇ ನಿರಾಶೆಯನ್ನುಂಟು ಮಾಡಬಹುದು.

ಜುಲೈ ತಿಂಗಳ ಮೊದಲ ವಾರದಲ್ಲಿ ಬೆಳಗಿನ ಝಾವ ಇದು ಪೂರ್ವಕ್ಕೂ ಉತ್ತರಕ್ಕೂ ನಡುವೆ ಕಾಣುತ್ತದೆ. ಪರ್ಸಿಯುಸ್ ನಕ್ಷತ್ರ ಪುಂಜದಲ್ಲಿ ಹತ್ತಿಯ ಉಂಡೆಯಂತೆ ಕಾಣಬಹುದು. ಜುಲೈ ಎರಡನೆಯ ವಾರದ ಹೊತ್ತಿಗೆ ಕೆಮೆಲೊಪಾರ್ಡಲಿಸ್ ಪುಂಜದಲ್ಲಿ ಕಾಣುತ್ತದೆ. ಆದರೆ ಆಗ ಚಂದ್ರನ ಪ್ರಕಾಶ ಹೆಚ್ಚಿರುವುದರಿಂದ ಇದನ್ನು ಗುರುತಿಸುವುದು ಕಷ್ಟ. ಜುಲೈ ೨೧ರ ಹೊತ್ತಿಗೆ ಸಪ್ತರ್ಷಿಮಂಡಲದಲ್ಲಿ ಕಾಣುವಾಗ ರಾತ್ರಿ ಇಡೀ ಪ್ರಕಾಶಿಸುತ್ತದೆ. ೨೭ರ ಹೊತ್ತಿಗೆ ಕನ್ಯಾರಾಶಿಯ ಅಸಂಖ್ಯಾತ ಗೆಲಾಕ್ಸಿಗಳ ಜೊತೆ ಕೂಡಿಕೊಂಡು ಗುರುತಿಸುವುದು ಕಷ್ಟವಾಗುತ್ತದೆ.



ಜುಲೈ ಕೊನೆಯವಾರದ ಸಂಜೆ ಇದನ್ನು ಪಶ್ಚಿಮದಲ್ಲಿ ಹುಡುಕಲು ಪ್ರಯತ್ನಿಸಬಹುದು. ಚಂದ್ರನ ಬೆಳಕೂ ಇಲ್ಲದಿರುವುದರಿಂದ ಇದು ಸುಲಭವಾಗಬಹುದು.

ಈ ಎಲ್ಲ 'ಬಹುದು'ಗಳಿಗೆ ಮುಖ್ಯ ಆತಂಕ ಮಳೆ, ಮೋಡ, ಅಲ್ಲವೇ ?

ಡಾ|| ಬಿ. ಎಸ್. ಶೈಲಜಾ
ಜವಹರಲಾಲ್ ನೆಹರು ತಾರಾಲಯ, ಹೈಗ್ರೌಂಡ್ಸ್, ಶ್ರೀ ಟಿ. ಚೌಡಯ್ಯ ರಸ್ತೆ,
ಬೆಂಗಳೂರು- ೫೬೦ ೦೦೧

ಉಗ್ಗು-ಒಂದು ವಿಷಮ ವರ್ತುಲ

ಡಾ|| ಜಿ. ಪುರುಷೋತ್ತಮ

ಮನುಷ್ಯನ ವರ್ತನೆ ಸಾಹಿತಿಗಳಿಗೆ ಅಂತೆಯೇ ಮನಶ್ಶಾಸ್ತ್ರಜ್ಞರಿಗೆ ಆಸಕ್ತಿ ಮತ್ತು ಅಧ್ಯಯನದ ವಿಚಾರ. ಕೆಲವು ವರ್ತನೆಗಳನ್ನು ನಾವು ಸಾಮಾನ್ಯವೆಂದರೆ, ಕೆಲವನ್ನು ಅಸಾಮಾನ್ಯವೆಂದು ಪರಿಗಣಿಸುತ್ತೇವೆ. ಮನುಷ್ಯನ ಎಲ್ಲ ಕಾಯಕ, ಎಲ್ಲ ಚಟುವಟಿಕೆಗಳೂ ವರ್ತನೆಯೇ ಸರಿ. ಮಾತು ಕೂಡ ವರ್ತನೆಯ ಒಂದು ಭಾಗವೆಂದೇ ಲೆಕ್ಕ. ಕೆಲವು ಭಿನ್ನ ದೃಷ್ಟಿಗಳಿದ್ದರೂ ಮಾತನ್ನು ಮಗು ಕಲಿಯುತ್ತದೆಂದೇ ವಿಜ್ಞಾನಿಗಳ ಅಭಿಮತ.

ಮನುಷ್ಯನ ಹಲವು ತೊಂದರೆಗಳ ಕಾರಣ ಮತ್ತು ರೂಪ ಒಂದೇ ಆಗಿರುವಂತೆ ತೋರುತ್ತದೆ. ವರ್ತನೆಯೇ ಅವನ ತೊಂದರೆಗೆ ಕಾರಣ. ಈ ವಿಶೇಷವಾದ ಮಾತಿನ ಹಾಗೂ ವರ್ತನೆಯ ತೊಂದರೆಯಂತೆ ಇರುವ ಇನ್ನೊಂದು ಸ್ಥಿತಿಯಾದ ಬಡತನವನ್ನು ಗಮನಿಸಿ. ವಿಜ್ಞಾನದ ದೃಷ್ಟಿಯಲ್ಲಿ ಬಡತನ ಕೂಡ ಒಂದು ವಿಷವರ್ತುಲ, ಅಂದರೆ 'ಅದಕ್ಕೆ ಅದೇ ಕಾರಣ'. ಬಡತನದ ಸ್ಥಿತಿಯಲ್ಲಿರುವ ವ್ಯಕ್ತಿಯ ಅನಿಸಿಕೆ ಮತ್ತು ಸ್ಥಿತಿ ಹೇಗೆ ಇರುತ್ತದೆ ಅಂದರೆ ಅವುಗಳಿಂದ ಅವನು ಸ್ಥಿತ್ಯಂತರಗೊಳ್ಳಲು ಅವಕಾಶವಾಗದೆ ಹೋಗುತ್ತದೆ. ಅವನ ಅನಿಸಿಕೆಗಳಲ್ಲೂ ಅವನು ತನ್ನ ಸ್ಥಿತಿಯನ್ನು ಬದಲಾಯಿಸಿ ಕೊಳ್ಳಲು ತಯಾರಿಲ್ಲದೆ ಇರುವುದರಿಂದ ಬೇರೆಯವರು (ಬಂಧುಗಳು, ಸರ್ಕಾರ) ಅವನಿಗೆ ಕೊಡಬಹುದಾದ ಸಹಾಯಹಸ್ತ ಅವನಿಗೆ ದೊರಕದೆ ಹೋಗುತ್ತದೆ. ಅವನ ಯೋಚನೆಯಲ್ಲಿ ಅವನ ಮಟ್ಟಿಗೆ ಸಹಾಯ ಹಸ್ತವೆಂದರೆ ಅವನ ಅತ್ಯವಶ್ಯ ಕುಂದುಕೊರತೆಗಳನ್ನು ಭರಿಸುವುದು ಮಾತ್ರ. ಅವನ ಅಭಿವೃದ್ಧಿಗಾಗಿ ಅಲ್ಲ. (ಒಬ್ಬ ಮಂತ್ರಿವರ್ಯರು ಒಂದು ಹಳ್ಳಿಯ ಜನರಿಗೆ ಪರಿಶಿಷ್ಟರಿಗೆ ಕೇಳಿದರಂತೆ, ನಿಮಗೆ ಅವಶ್ಯವಾದ ಒಂದು ಕೆಲಸ ಮಾಡಿಕೊಡಲು ಬಯಸುವೆ, ಏನು ಬೇಕು ಹೇಳಿ. ಅವರು ಕೇಳಿದ್ದು ನೀರು, ನೆರಳು ಅಲ್ಲ, ಒಂದು ಸ್ಮಶಾನಕ್ಕಾಗಿ ಜಾಗ!) ಅವನ ಮೂಲ ತೊಂದರೆಯನ್ನು ಬದಲಾಯಿಸಿಕೊಳ್ಳಲು ಸಾಧ್ಯವಾಗದಿರುವುದು ಇಲ್ಲಿಯ ದುರವಸ್ಥೆ. ಇಲ್ಲಿಯ ಇನ್ನೊಂದು ವಿಶೇಷವೆಂದರೆ ಈ ರೀತಿಯ ತೊಂದರೆಗಳ ಒಂದು ಪಾಲು ವ್ಯಕ್ತಿಯದೇ ಆದರೆ ಇನ್ನೊಂದು ಪಾಲು ಅವನು ಪ್ರಭಾವಿಸುವ ಮತ್ತು ಪ್ರಭಾವಿಸಲ್ಪಡುವ ಸುತ್ತಲಿನ ಜನ ಮತ್ತು ಇನ್ನೂ ಹೆಚ್ಚಾಗಿ ಸಮಾಜದ್ದು. ಹೀಗಾಗಿ ಅವನು ಬದಲಾಯಿಸಬೇಕಾದ್ದು ಬರಿಯ ಅವನ ವೈಯಕ್ತಿಕ ಪ್ರಪಂಚಕ್ಕಾಗಿ ಮಾತ್ರವೇ ಅಲ್ಲದೆ ಅವನಿಗೆ ಸಂಬಂಧಿತ ಸಮಾಜಕ್ಕಾಗಿ ಕೂಡ. ಇಲ್ಲಿ ವರ್ತನೆಯ ಮತ್ತು ಅದರ ಸ್ವರೂಪದ ಬದಲಾವಣೆಗೆ ವ್ಯಕ್ತಿಯಷ್ಟೇ ಅವನಿಗೆ ನಿಷ್ಠ ಸಮಾಜವೂ ಪ್ರಯತ್ನಿಸಬೇಕಾಗುತ್ತದೆ.

ಮಾತು ಮನುಷ್ಯನ ಸಂಕೀರ್ಣ ಕಾರ್ಯಗಳಲ್ಲಿ ಮೊದಲನೆಯದು. ದೈಹಿಕವಾಗಿ ಮೈಯ, ಕತ್ತಿನ, ಮುಖದ ಸುಮಾರು ಎಲ್ಲ ಮಾಂಸಖಂಡಗಳೂ ಈ ಚಟುವಟಿಕೆಯಲ್ಲಿ ಭಾಗವಹಿಸುತ್ತವೆ. ಹಾಗೂ ಈ ಎಲ್ಲ ಭಾಗಗಳು ಒಂದಕ್ಕೊಂದು ಹೊಂದಿಕೊಂಡೂ ಸಹ ಕೆಲಸ ಮಾಡಬೇಕು. ಈ ಹೊಂದಾಣಿಕೆಯಲ್ಲಿ ಏರುಪೇರಾದರೆ ಮಾತಿನಲ್ಲಿ ತೊಂದರೆ ಕಂಡುಬರುತ್ತದೆ. ಮಾತಿನ ಸಮಯದಲ್ಲಿ ಬರಿಯ ಚಲನೆಯೇ ಅಲ್ಲದೆ, ಮಾತಿನ ವಿಷಯ, ನೆನಪು ಹೀಗೆ ಹಲವು ವಿಚಾರಗಳಿದ್ದು ಇಡೀ ಮಿದುಳೇ ಕಾರ್ಯಮುಖವಾಗಿರುತ್ತದೆ. ಮಾತಿನ ಕಾಯಕ ಹರಿಯುವ ನೀರಿನಂತೆ ಉದ್ದಕ್ಕೂ ಸಾಗುತ್ತದೆ. ಈ ಮೂಲ ಕಾರ್ಯಕ್ಕೆ ಆಗುವ ಬಹಳ ದೊಡ್ಡ ತೊಂದರೆಗಳೆಂದರೆ ಕಿವುಡು, ಬುದ್ಧಿಶಕ್ತಿಯ ಕೊರತೆ ಮತ್ತು ನರಗಳಿಗೆ ಆಗುವ ಪೆಟ್ಟು. ಆದರೆ ಉಗ್ಗು ಇವಾವೂ ಇಲ್ಲದೆ ಆಗಿರುವಂತಹ ವಿಶೇಷ ತೊಂದರೆ. ಅದರ ರೂಪವನ್ನು ನೋಡೋಣ.

ಕಣ್ಣುಗಳ ಮುಚ್ಚಿ ತೆರೆಯುವುದು ಬಹಳ ಸಾಮಾನ್ಯ ನೋಟ. ಅದು ನೋಟದ ಕಾಯಕವನ್ನು ಜೀವಂತಗೊಳಿಸುತ್ತದೆ. ಮುಚ್ಚದಿರುವ ಬಿಟ್ಟಗಣ್ಣು ಅಥವಾ ಮಿಸುಗುವ ಕಣ್ಣು ಇವೆರಡೂ ಅಸಹಜವಾಗುತ್ತವೆ. ಇದನ್ನು ಮಾತಿಗೆ ಹೋಲಿಸಿದರೆ ಮಾತಿನ ಮಧ್ಯೆ ನಿಲ್ಲುವಿಕೆ, ಅನುಸ್ವರ, ತಪ್ಪನ್ನು ಕೂಡಲೆ ತಿದ್ದುವುದು, ನೆನಪಿಸಿಕೊಂಡು ಹೇಳುವುದು, ಸಹಜ ಅಥವಾ ಅಸಹಜ ಕೆಮ್ಮು, ಇತ್ಯಾದಿಗಳನ್ನು ಅಡೆತಡೆಗಳೆಂದು ಪರಿಗಣಿಸದೆ ಸಹಜವೆಂದೇ ತಿಳಿಯುತ್ತೇವೆ. ಆದರೆ ಇದೇ ರೀತಿ ತಡೆಯೊಡ್ಡುವ ತೊಂದರೆಯಾದ ಉಗ್ಗಿನ ರೂಪವೇ ಬೇರೆ ಮತ್ತು ನಾವದನ್ನು ಗ್ರಹಿಸುವ ರೀತಿಯೇ ಬೇರೆ. ಮಾತಿನ ಸ್ವಚ್ಛತೆಗೆ ಯಾವಾಗ ಹೆಚ್ಚಿನ ಬೇಡಿಕೆ ಬರುತ್ತದೋ ಆಗಲೇ ಅದು ಕೈಕೊಡುವುದು ಸಾಮಾನ್ಯ! ಉದಾಹರಣೆಗೆ, ಅಭ್ಯಾಸವಿಲ್ಲದವರು ಹೆಚ್ಚು ಜನರ ಮುಂದೆ ಮಾತು ಆಡಬೇಕಾಗುವುದು, ವೃತ್ತಿಗಾಗಿ ಸಂದರ್ಶನ, ನಲ್ಲ ನಲ್ಲೆಯ ಮರು ಭೇಟಿಯ ಸಮಯ, ಇತ್ಯಾದಿ. ಇದಕ್ಕೆ ಕಾರಣ ದೇಹದ ಉದ್ರೇಕ ಸ್ಥಿತಿ. ಅವ್ಯಕ್ತ ಭಯ, ಸಂಕೋಚ ಇವು ನರಮಂಡಲವನ್ನು ಉದ್ದೀಪಿಸುತ್ತವೆ. ದೇಹದ ಈ ಸ್ಥಿತಿಯಲ್ಲಿ ಉಸಿರಾಟ, ಹೃದಯದ ಬಡಿತ, ಮನಸ್ಸಿನ ಅವಗಾಹನೆಯ ಸ್ಥಿತಿ ಇವೆಲ್ಲ ಏರುಪೇರಾಗುತ್ತವೆ. ಈ ಸ್ಥಿತಿಯಲ್ಲಿ ಮಾತಿನ ಹರಿಯುವಿಕೆಯು ತೊಂದರೆಗೀಡಾಗುತ್ತದೆ.

ಮಾತಿನ ಹರಿಯುವಿಕೆಗೆ ತೊಂದರೆಯುಂಟಾಗುವ ಈ ರೀತಿಯೂ ವೃತ್ತಿಪರರನ್ನು (ರಾಜಕಾರಣಿಗಳು, ಮೇಷ್ಟ್ರುಗಳು, ಮುಂತಾದವರು) ಬಿಟ್ಟರೆ ಎಲ್ಲರಿಗೂ ಸಾಮಾನ್ಯ. ಇದು ತೊದಲುವವರಿಗೂ ಕೂಡ ಹಾಗೆಯೇ ಸರಿ. ಮಾತು ಹೊರಡದೇ ಇರುವುದು, ದನಿ ಶುರುವಾಗದೆ ಕಟ್ಟಿದಂತಾಗುವುದು, ಅನುಸ್ವರದ ಜೊತೆ ಮಾತು ಶುರುವಾಗುವುದು, ಶಬ್ದ ಮತ್ತೆ ಮತ್ತೆ ಬರುವುದು, ಪದಗಳು ಅಥವಾ ಅದರ ಭಾಗಗಳು ಮರಾ ಮರಾ ಬರುವುದು, ಬಾಯಲ್ಲಿ 'ಲೊಚ್' ಶಬ್ದ ಇತ್ಯಾದಿ ಕೇಳಿ ಬರುವುದು ಈ ತೊಂದರೆಯ ಲಕ್ಷಣ. ಉಗ್ಗುವವರಲ್ಲಿಯ ವಿಶೇಷವೆಂದರೆ ಇದು ಸ್ಪಷ್ಟಮಾತಿನ ಅವಶ್ಯಕತೆ ಇಲ್ಲದಾಗಲೂ ಕೂಡ ಕಂಡುಬರುತ್ತದೆ. ಬಹಳವೇ ಸಾಮಾನ್ಯ ಅನ್ನುವ ಸ್ಥಿತಿಗಳಲ್ಲಿ ಅಂದರೆ ಬಸ್ಸಲ್ಲಿ ಟಿಕೇಟಿಗಾಗಿ, ಹೋಟಲು ಅಥವಾ ಅಂಗಡಿಗಳಲ್ಲಿ ಮಾತನಾಡುವಾಗ ಸಹ ಕಂಡುಬರುತ್ತವೆ. ಹೀಗಾಗಿ ಈ ತೊಂದರೆ [illegible] ಗೊಂದಲದ ಸಮಸ್ಯೆಯಾಗಿಬಿಡುತ್ತದೆ.

ಇದು ಬಹು ಸಾಮಾನ್ಯವಾದ, ನೂರರಲ್ಲಿ ಒಬ್ಬರಿಗೆ ಕಂಡುಬರುವ ತೊಂದರೆ. ಪ್ರಾಚೀನ ಕಾಲದಿಂದಲೂ [illegible] ಈ ತೊಂದರೆಯಿಂದ ಬಳಲುವುದನ್ನು ದಾಖಲಿಸಿದ್ದಾರೆ. ಇಂದಿಗೂ ಈ ತೊಂದರೆಯ ಕಾರಣ ರಹಸ್ಯವೇನೋ ಎಂಬಂತೆ ಕಾಣುತ್ತದೆ. ಇದು ಮಾನಸಿಕ ತೊಂದರೆಯಲ್ಲ. ಮಾನಸಿಕ ಚಿಕಿತ್ಸೆಯ ಹಲವು ದಾರಿಗಳಲ್ಲಿ ಇದಕ್ಕೆ ಅನುಕೂಲವಿಲ್ಲ. ಆದರೆ ಈ ತೊಂದರೆಯ ವ್ಯಕ್ತಿ ಮಾನಸಿಕವಾಗಿ ಖಿನ್ನನಾಗಲು ಸಾಧ್ಯ. ಇದು ಭಾಷೆಗೆ ಸಂಬಂಧಿಸಿದ ತೊಂದರೆ. ಹೀಗಾಗಿ ಇದರ ಮೂಲ ಮಗು ಮಾತು ಕಲಿಯುತ್ತಿರುವ ಸಮಯದಲ್ಲಿ ತೋರಿಬರುತ್ತದೆ. ಮಗು ಮಾತು ಕಲಿಯುವ ೨ ರಿಂದ ೫ ವರ್ಷಗಳ ವಯಸ್ಸಿನ ಸಮಯ ಬಹಳ ಸೂಕ್ಷ್ಮ ಸಮಯ. ಈ ಸಮಯದಲ್ಲಿ ಬಹಳಷ್ಟು ಮಕ್ಕಳ ಮಾತು ತೊದಲ ಮಾತು (ಕನ್ನಡದಲ್ಲಿ ಈ ಪದವನ್ನು ಉಗ್ಗಿಗೆ ಪರ್ಯಾಯವಾಗಿ ಬಳಸುತ್ತೇವೆ. ಅದು ತಪ್ಪಲ್ಲ). ಈ ಮೊದಲ ತೊದಲು ಮಗುವಿಗೆ ದೃಷ್ಟಿ ಬೊಟ್ಟಿನಂತೆ ಆಗಿ, ಮಗುವಿನ ತೊದಲಿನ ಕಡೆ ಮನೆಯವರ ಗಮನ ಅನವಶ್ಯಕವಾಗಿ ಹರಿದು ಅದು ಅವನಿಗೆ ಲಾಭದಾಯಕವಾಗಿ ಪರಿಣಮಿಸಲು ಸಾಧ್ಯ. ಅಥವಾ ತಂದೆ ತಾಯಿಯರ ಅತಿಯಾದ ಕಳವಳ ಮಗುವಿಗೂ ಹರಿದು ತನ್ನ ಮಾತಿನ ಬಗ್ಗೆ ಸಲ್ಲದ ಕಾಳಜಿ ಬರುವಂತೆ, ಹೆದರುವಂತೆ ಆಗಿ ಬರಲೂ ಸಾಧ್ಯವೆಂದು ಒಂದು ಮತ.

ಮಗು ಬರಿಯ ಮನೆಯ ಕೂಸಲ್ಲದೆ ಸಮಾಜದ ಕೂಸು. ಅವನ ಸಂಪರ್ಕದ ತೊಂದರೆ ಅವನ ವ್ಯಕ್ತಿತ್ವದ ಮೇಲೆ ಛಾಪು ಒತ್ತುತ್ತದೆ. ಸಂಕೋಚ, ಬೇಸರ, ದಿಗಿಲು, ಅಸಹಾಯಕತೆ ಮೂಡಿಬರುತ್ತದೆ. ಶಾಲೆಗೆ ಹೋಗುವ ಮಗುವಾದರೆ ಅವನ ಸಮಾಜ ದೊಡ್ಡದಾಗಿ, ತೊಂದರೆಯೂ ಬಲವಾಗಲು, ಬೇರುಬಿಡಲು ಸಾಧ್ಯ. ಚಿಕಿತ್ಸೆಗೆ ಸರಿಯಾದ ಸಮಯವೆಂದರೆ ಈ ಸಮಯ ಅಥವಾ ಇದಕ್ಕಿಂತ ಮೊದಲೇ ಅಂದರೂ ಸರಿ. ಹರೆಯದಲ್ಲೂ ಈ ತೊಂದರೆ ನಿಂತರೆ ಅದರ ಉಪಶಮನ ನಂತರ ಅಷ್ಟೇ ಕಷ್ಟ.

ತನ್ನ ಬಗ್ಗೆಯೇ ಹೆಚ್ಚಿನ ಕಳಕಳಿ ಬೆಳೆಯುವಂತಹ ಸಮಯ ಹರೆಯ. ಆಗಿನ ತೊಂದರೆ ಸಂಕೋಚಕ್ಕೆ ಸಂಕೋಚ ಬೆರೆತಂತೆ. ವ್ಯಕ್ತಿತ್ವವನ್ನು ಬಲಪಡಿಸುವ ಸಮಯ ಅದನ್ನು ಬಲಹೀನ ಮಾಡಲೂ ಸಾಧ್ಯ. ಈ ತೊಂದರೆಯುಳ್ಳವರು ಮಾತಿನ ಸಂದರ್ಭವನ್ನೇ ತಪ್ಪಿಸಲು ಶುರುಮಾಡಿ ಅದರಲ್ಲಿ ಯಶಸ್ವಿಯಾಗುವವರೇ ಹೆಚ್ಚು. ಹೀಗಾಗಿ ಹಲವಾರು ರೀತಿಯ ಒಡನಾಟದಿಂದ ಬರುವ ಖುಷಿ ಕಲಿಕೆಗಳು ಇಲ್ಲವಾಗುತ್ತವೆ. ಜತೆಗೆ ಕೆಲವರಲ್ಲಿ ನಾರ್ಸಿಸಸ್‌ನ ರೀತಿ ತನ್ನ ವರ್ತನೆಯೇ ಚೆನ್ನ (ಸರಿ) ಅನ್ನುವ ಭಾವವೂ ಬೆಳೆಯುತ್ತದೆ. ಇದು ಚಿಕಿತ್ಸೆಯ ದಾರಿಯಲ್ಲಿ ಹೆಚ್ಚಿನ ತಡೆಯೊಡ್ಡುತ್ತವೆ.

ನಾವು ಆಲಿಸುವ ಉಗ್ಗಿನ ತೊಂದರೆ ಸಂಪರ್ಕಕ್ಕೆ, ಮಾತಿನ ಹರಿಯುವಿಕೆಗೆ ಒಂದು ರೀತಿಯ [illegible] ನಿಜ. ಆದರೆ ಇದು ಈ ಕತೆಯ ಅರ್ಧ [illegible]

ಇನ್ನರ್ಧ ಅಥವಾ ಇನ್ನೂ ಹೆಚ್ಚಿನ ಭಾಗವೆಂದರೆ ಅದನ್ನು ಆ ವ್ಯಕ್ತಿ ತಡೆಯುವ ಪ್ರಯತ್ನ. ಬಹಳ ಸಲ ಈ ಪ್ರಯತ್ನವೇ ಉಗ್ಗಿನ ಮುಖ್ಯ ಭಾಗವಾಗುವುದು. ಆತನನ್ನು ಬಳಲಿಸುವುದು ಈ ವಿಷಮ ವರ್ತುಲದ ವಿಪರ್ಯಾಸ.

ತೊದಲುವ ಮಗುವಿಗೆ ಮನೆಯ ಜನ ಹೇಳಿಯೋ ಹೇಳದೆಯೋ ಅವನ 'ಮಾತಿನ ಆಡುವಿಕೆಯ' ಬಗೆಗೆ ಗಮನ ಸೆಳೆಯುತ್ತಾರೆ. ಹೊರಗೆ ಆಡುವ ಮಗು ಅಥವಾ ಶಾಲೆಯ ಮಗುವಾದರಂತೂ ಇದು ಸ್ಪಷ್ಟವಾಗಿ ಆಗುತ್ತದೆ. ಇತರರ ಅಣಕದಿಂದಲೂ ಮಗು ಬಳಲಬಹುದು. ಇದು ವರ್ಷಗಟ್ಟಲೇ ಆಗುತ್ತದೆ; ದಿನದಿನವೂ, ಯಾವಾಗಲಾದರೂ ಆಗುತ್ತದೆ ಅನ್ನುವುದನ್ನು ಮನನ ಮಾಡಿ. ಆದ್ದರಿಂದ ಈ ಬಳಲಿಕೆಯಿಂದ ತಪ್ಪಿಸಿಕೊಳ್ಳಲು ಸುಲಭ ಮಾರ್ಗ ಮಾತಿನ ಸಂದರ್ಭಗಳನ್ನು ಕಡಿಮೆ ಮಾಡಿಕೊಳ್ಳುವುದು. ಬಹಳವಾಗಿ ಈ ಪ್ರಯತ್ನದಲ್ಲಿ ಮಕ್ಕಳು ಯಶಸ್ವಿಯಾಗುತ್ತವೆ.

ಸುಮಾರು ಈ ಸಮಯಕ್ಕೆ, ಈ ತೊಂದರೆಯ ಗಿಡಕ್ಕೆ ಹೊಸ ರೆಂಬೆ ಮೂಡಿ ತೊಂದರೆಯ ಭಾರವನ್ನು ಹೆಚ್ಚಿಸುತ್ತದೆ. ಹೊಸ ತೊಂದರೆಗಳು ಹುಟ್ಟಿಕೊಳ್ಳುತ್ತವೆ. ಬರಿಯ ಕೇಳಿಸುತ್ತಿದ್ದ ತೊಂದರೆ ಈಗ ಕಾಣಿಸಲು ಶುರುವಾಗುತ್ತದೆ. ಶಬ್ದದ ಶುರು ಕಟ್ಟಿದಂತೆ ಅಥವಾ ಹಿಡಿಹಿಡಿದು ಬರುತ್ತಿರುವಾಗ, ಕಣ್ಣು ಮುಚ್ಚಿದರೆ, ತಲೆ ಬಗ್ಗಿಸಿದರೆ, ತುಟಿ ಬಿಗಿಹಿಡಿದರೆ, ತಲೆಯಾಡಿಸಿದರೆ, ಮೂಗರಳಿಸಿದರೆ, ಕಾಲು ಕುಟ್ಟಿದರೆ ಈ ತೊಂದರೆ ಬಿಟ್ಟು ಹೋಗುತ್ತದೆ, ಕೊನೆಯಾಗುತ್ತದೆಂದು ಆ ವ್ಯಕ್ತಿಗೆ ಅನ್ನಿಸಲು ಶುರುವಾಗುತ್ತದೆ. ನಿಜದಲ್ಲಿ ಇವು ಕೊಸರಾಗಿ ಸೇರುತ್ತವೆಯೇ ಹೊರತು ಮಾತಿನ ತೊಂದರೆ ಕಡಿಮೆಯಾಗುವುದಿಲ್ಲ. ಹಾಗೆ ನೋಡಿದರೆ ಇವು 'ಮಾತಿನ' ತೊಂದರೆಯೇ ಅಲ್ಲ. ಹೀಗಾಗಿ ಇವನ್ನು ಬಿಡಿಸುವುದು ಚಿಕಿತ್ಸೆಯ ಬಹಳ ಸುಲಭದ ಭಾಗ. ಈ ತೊಂದರೆ ಈ ವಿಷಮವರ್ತುಲವನ್ನು ಬಿಗಿಯಾಗಿಸುತ್ತದೆ.

ಪ್ರಪಂಚದಲ್ಲಿ ಎಲ್ಲ ಸಂಸ್ಕೃತಿಗಳಲ್ಲೂ ಹಾಗೆಯೇ, ಇನ್ನೊಬ್ಬರ ಕಡೆ ಬೊಟ್ಟು ಮಾಡಿ ತೋರಿಸುವುದು ನಿಷಿದ್ಧ. (ಯಾವುದೇ ಕಾರಣಕ್ಕೆ ಆಗಲಿ) ಇನ್ನೊಬ್ಬರ ಮಾತಿನ ಮುಖದ ದೋಷವನ್ನು ಆಡುವುದೂ, ಆತನಿಗೇ ಹೇಳುವುದೂ ಇದೇ ರೀತಿಯ ಟ್ಯಾಬೂ. ಮಾತಿನಲ್ಲಿ ಉಗ್ಗು ಕಂಡುಬಂದರೆ, ಕೇಳಿಬಂದರೆ ಆ ಹುಡುಗನಲ್ಲಿ ಏನೋ ಐಬು ಇದೆಯೆಂದು, ಮುಖದ ದೋಷವೇನೋ ಎಂಬಂತೆ ಅದನ್ನು ನೋಡಿ ಗಮನಿಸುವುದು ಮನುಷ್ಯನ ಸಹಜ ವರ್ತನೆ. ಆದರೆ ಇದು ಆ ಹುಡುಗನಲ್ಲಿ ಸಂಕೋಚ ಮೂಡಿಸುತ್ತದೆ (ಒಂದು ವರದಿಯಂತೆ ಈ ತೊಂದರೆಯನ್ನು ಲಕ್ವವೇನೋ ಎಂಬಂತೆ ಜನ ಪರಿಗಣಿಸಬಹುದೆಂಬ ಅನುಮಾನ). ಬೇರೆಯವರು (ಸುತ್ತಲಿನವರೆಲ್ಲ) ಗಮನಿಸಿದರು ಅನ್ನುವ ಅರಿವು ಫಕ್ಕನೆ ಆಗುತ್ತದೆ. ಈ ಪ್ರತಿಯೊಂದು ಸಂದರ್ಭವೂ ಮಾತಿನ ಸಂದರ್ಭಗಳನ್ನು ಸಂಕೋಚ ದುಗುಡಗಳಿಂದ ಎದುರು ನೋಡುವಂತೆ ಮಾಡಲು ಸಾಧ್ಯ. ಸಂಕೋಚ ದುಗುಡಗಳು ಸಾಮಾನ್ಯ ಮಾತಿನ ತಡೆಗೆ ಕಾರಣವಾಗಲು ಸಾಧ್ಯವೆಂದು ಆಗಲೆ ಹೇಳಿದೆ. ಮಾತಿನ ನಿಜವಾದ ತೊಂದರೆಗಿಂತ ಈ ರೀತಿ ಮಾತಿನ ತೊಂದರೆಯಾಗಬಹುದು ಅನ್ನುವ ಅನಿಸಿಕೆ ದುಗುಡ ಕಾರಣವಾದ ಭಾವನೆಯನ್ನು ಹುಟ್ಟು ಹಾಕಿ ಜೀವನದುದ್ದಕ್ಕೂ ಕಾಡಿಸಲೂ ಸಾಧ್ಯ. ಈ ಭಾವನೆಯನ್ನು ಒಡೆಯುವುದು ಚಿಕಿತ್ಸೆಯ ಮುಖ್ಯಭಾಗ. ಇದರ ಸಾಮಾನ್ಯ ಮಾತು ಹೊರಡಿಸಿದಾಗಲೇ ಈ ಒಡೆಯುವಿಕೆ ಸಾಧ್ಯ. ಇದು ಈ ವಿಷಮ ವರ್ತುಲದ ಇನ್ನೊಂದು ಸುತ್ತು. ನೀರಿಗಿಳಿಯುವುದು ಮತ್ತು ಈಜು ಕಲಿಯುವುದು ಒಟ್ಟಿಗೇ ಆಗ ಬೇಕಾದ ರೀತಿ ಇವು ಒಟ್ಟಿಗೇ ಆಗಬೇಕು.

ಅಂಗವಿಕಲರನ್ನು ಆ ವಿಕಲತೆಯಿಂದ ಗುರುತಿಸುವುದು ಬಹುಶಃ ನಮ್ಮ ಸಂಸ್ಕೃತಿಯ ಸಣ್ಣತನ. ಉಗ್ಗುವವರನ್ನು ಅದರಿಂದಲೇ ಗುರುತಿಸುವುದು ಸಾಮಾನ್ಯ. ಅದು ಅಭ್ಯಾಸವೂ ಆಗಿಬಿಡುತ್ತದೆ. ಬೇರೆಯವರು ಈ ವ್ಯಕ್ತಿ ತೊದಲುವುದೇ ಸಾಮಾನ್ಯವೆಂದು ಬಗೆಯುತ್ತಾರೆ. ಈ ವ್ಯಕ್ತಿ ಇದ್ದಕ್ಕಿದ್ದಂತೆ ಸ್ಪಷ್ಟವಾಗಿ ಮಾತಾಡಿದರೂ ಆಗ ಅವರ ಗಮನ ಅವನ ಕಡೆ ವಿಶೇಷವಾಗಿ ಹರಿಯಲು ಸಾಧ್ಯ. ಆತ ಸ್ಪಷ್ಟವಾಗಿ ಮಾತಾಡಲು ಮಾಡುವ ಪ್ರಯತ್ನ ಇದೇ ರೀತಿಯ ಪ್ರತಿಕ್ರಿಯೆಯನ್ನು ತರುತ್ತವೆ. ಹೀಗಾಗಿ ಚಿಕಿತ್ಸೆಯ ಈ ಭಾಗ ಕಹಿ ಔಷಧವಾಗುತ್ತದೆ. ಈತನ ಮಾತಿನ ರೀತಿ ಬೇರೆಯದಾದರೂ ಹಳೆಯ ಒಡನಾಡಿಗಳು ಹುಬ್ಬೇರಿಸಬಹುದು. ಮೊಂಡಾದ ಮೂಗನ್ನು ಸರಿ ಮಾಡಿಕೊಂಡವರ ಸ್ಥಿತಿಯಂತೆ ಆಗುತ್ತದೆ. ಆದ್ದರಿಂದ ಇವರು ತಮ್ಮ ಉತ್ಕಟೇಚ್ಛೆಯ ಜೊತೆ ಪ್ರಯೋಗಶಾಲಿಗಳಾಗುವುದಂತೂ ಬಹಳ ಮುಖ್ಯ.

ಮಾತನಾಡಿದಾಗಲೆಲ್ಲ ಅದು ಮಾತಿನ ಅಭ್ಯಾಸವೇ ಸರಿ. ಉಗ್ಗಿನ ಚಿಕಿತ್ಸೆಯಲ್ಲಿ ಮುಖ್ಯವಾಗಿ ಆ ವ್ಯಕ್ತಿ ತನ್ನ ಮಾತಿನ ಉಗ್ಗನ್ನು ಮಾತ್ರ ಡಾಕ್ಟರು ಕಿತ್ತೊಗೆಯಲಿ ಎಂದು ಬಯಸುತ್ತಾನೆ. ಆದರೆ ಅದು ಆಗದ ವಿಷಯ. ಆತ ಬೇರೆಯದೇ ಆದ ರೀತಿಯಲ್ಲಿ, ಅಂದರೆ ಸಾಮಾನ್ಯ ರೀತಿಯಲ್ಲಿ ಮಾತಾಡಲು ಕಲಿಯಬೇಕಾಗುತ್ತದೆ. ಆದರೆ ಈ ರೀತಿಯ ಸತತ ಪ್ರಯತ್ನ ಮನಃಪೂರ್ವಕವಾಗಿ ಆಗಬೇಕಾದ್ದು ಅವನಿಗೆ ಕಷ್ಟಕರ. ಆದರೆ ಈ ಕೆಲಸವನ್ನು ಆತನೇ ಮಾಡಬೇಕಲ್ಲದೆ ಬೇರೆ ದಾರಿಯಿಲ್ಲ. ಬಹಳ ಸಲ ಮಾತನ್ನು ಸ್ಪಷ್ಟವಾಗಿ ಆಡಬೇಕೆಂದು ಬಯಸುವ ವ್ಯಕ್ತಿ ಅದು ರಹಸ್ಯವಾಗಿ ಆಗಿಬಿಡಬೇಕು, ಬೇರೆಯವರೆದುರು ಒಂದೇ ಸಲ ಸರಿಯಾಗಿ ಮಾತಾಡುವಂತೆ ಆಗಿಬಿಡಬೇಕೆಂದು ಬಯಸುತ್ತಾನೆ. (ಚಿಕ್ಕಂದಿನಲ್ಲಾದರೆ ಮಾತಿನ ಚಿಕಿತ್ಸೆಗೆ ಈ ರೀತಿಯ ಅನಿಸಿಕೆಗಳು ಅಡ್ಡಿ ಮಾಡದೆ ಅನುಕೂಲವಿರುತ್ತದೆ). ಚಿಕಿತ್ಸೆಯ ಪ್ರಯೋಗಕ್ಕೆ ಇದು ಮೊದಲ ಅಡ್ಡಿ. "ನಿಮ್ಮ ಮನೆಯಲ್ಲಿ, ನೀವು ಕೆಲಸ ಮಾಡುವ ಜಾಗದ ಒಡನಾಡಿಗಳಿಗೆ 'ನಾನು ಮಾತಿನ ಚಿಕಿತ್ಸೆಗಾಗಿ ಹೋಗಲು ಶುರುಮಾಡಿದ್ದೇನೆಂದು ತಿಳಿಸಿ. ನಿಮ್ಮ ಪ್ರಯೋಗ ಹೆಚ್ಚು ಸುಲಭವಾಗುತ್ತದೆ" ಎಂದು ನನ್ನಿಂದ ಕೇಳಿದ ಕೆಲವರು ಇನ್ನೂ ಕ್ಲಿನಿಕ್ಕಿಗೆ ಬರಬೇಕಾಗಿದೆ. ಈ ರೀತಿಯ ಹಿಂಜರಿಕೆ ಗೊಂದಲ ಇವರಲ್ಲಿ ಸಾಮಾನ್ಯ.

ತಮ್ಮ ತೊಂದರೆ ಬಾಸ್ ಜೊತೆ ಮಾತಾಡುವಲ್ಲಿ ಮಾತ್ರ, ಸಂದರ್ಶನದಲ್ಲಿ ಹೆಚ್ಚು, ಅನ್ನುವವರಿದ್ದರೂ ಇವರು ಎಲ್ಲಾ ಸಂದರ್ಭಗಳಲ್ಲೂ ಹೆಚ್ಚು ಕಡಿಮೆ ತೊಂದರೆಗೀಡಾಗುತ್ತಿರುತ್ತಾರೆ. ಒಬ್ಬರೇ ಇದ್ದಾಗ ಚೆನ್ನಾಗಿ ಮಾತು ಬರುತ್ತದೆ ಅನ್ನುವವರೂ ಇದ್ದಾರೆ. ಆದರೆ ನಿಜದಲ್ಲಿ ಆ ಮಾತು ಮಾತೇ ಅಲ್ಲ, ಅಲ್ಲವೆ? ಮಾತಾಡುವುದನ್ನು ತಡೆಯುವ, ನಿವಾರಿಸಿಕೊಳ್ಳುವ ಪ್ರಯತ್ನವೇ ಉಗ್ಗು ಅಂದಾಗ ಆ ವ್ಯಕ್ತಿಯನ್ನು ಮಾತಿನ ಕಡೆ ದಬ್ಬುವುದು ಸುಲಭದ ಕಾರ್ಯವಲ್ಲ. ಹೇಳಿಕೊಟ್ಟ ಮಾತಿನ ವಿಧಾನವನ್ನು ಅನುಸರಿಸಿ, ಮಾತನ್ನು ಮೊದಮೊದಲು ಪ್ರಾಯೋಗಿಕವಾಗಿಯಾದರೂ, ಆ ರೀತಿ ನಿಜ ಸಂದರ್ಭಗಳಲ್ಲಿ ಆಡುವುದಕ್ಕೆ ಆತ ಅಚಲ ನಿರ್ಧಾರ ಮಾಡಬೇಕಾಗುತ್ತದೆ. ಸಂಕೋಚ ದುಗುಡಗಳನ್ನು ಮೆಟ್ಟಿ ನಿಲ್ಲಬೇಕಾಗುತ್ತದೆ. ಈ ಸಂಕೋಚ ದುಗುಡಗಳು ಬಹಳ ಕಲಿತ ವಿಷಯಗಳಾದ್ದರಿಂದ ಅವನ್ನು ಸುಲಭವಾಗಿ ಬಿಟ್ಟು ಕೊಡಲು ಆಗುವುದಿಲ್ಲವೆನ್ನುವುದಂತೂ ನಿಜ. ಆದರೆ ಅದು ಸಾಧ್ಯ. ಅದು ತನ್ನ ಸ್ವಂತಿಕೆಯನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿಕೊಂಡಂತೆಯೇ ಆಗುತ್ತದೆ.

ವಯಸ್ಸು ಹೆಚ್ಚುತ್ತಾ ನಡೆದಂತೆ ಮನುಷ್ಯನ ಸಂಕೋಚ ಭಾವ ಕಡಿಮೆಯಾಗುತ್ತಾ ಸಾಗುತ್ತದೆ. ಮಧ್ಯವಯಸ್ಸು ಕಳೆದಂತೆ ಬಹಳಷ್ಟು ರೀತಿಯ ಕಳವಳಗಳು ಕಡಿಮೆಯಾಗುತ್ತವೆ. ವಿಶೇಷವೆಂದರೆ ಮಧ್ಯವಯಸ್ಸಿನ ನಂತರ ಉಗ್ಗು ಕೂಡ ತಾನೇ ಕಡಿಮೆಯಾಗುತ್ತದೆ. ಇದು ಒಳ್ಳೆಯದೇ ಅಂದರೂ ಆ ವೇಳೆಗೆ ಜೀವನದ ಅರ್ಧಭಾಗ ದುಗುಡದಿಂದ ಕಳೆದದ್ದು ನಷ್ಟದ ವಿಚಾರವೇ ಸರಿ.

ತಮ್ಮ ಜೀವನಕ್ಕೇ ಕುತ್ತು ಒದಗಿದ ಕೆಲವರು ತಮ್ಮ ಉಗ್ಗನ್ನು ಆ ಕ್ಷಣದಿಂದಲೇ ಕಳೆದುಕೊಂಡು ಮಾತು ಸರಿ ಹೊಂದಿದ ಪ್ರಕರಣ ಕೆಲವು ಇವೆ. ವಯಸ್ಸಾದವರಲ್ಲಿ ಕಳೆದು ಹೋಗುವ ಸಂಕೋಚ ದುಗುಡಗಳ ರೀತಿ ಬಹುಶಃ ಇವರಿಗೆ ಇದ್ದಕ್ಕಿದ್ದಂತೆ ಜೀವನ ಸುಂದರವಾಗಿ ಕಾಣಲು ಶುರುವಾಗಿ ದುಗುಡದ ಭಾವನೆ ಪೂರ್ಣವಾಗಿ ಅಳಿಸಿಹೋಗಿರುವ ಸಾಧ್ಯತೆಗಳು ಹೆಚ್ಚು. ಮಾತನ್ನು ಸರಿಯಾಗಿ ಆಡುವ ರೀತಿಯನ್ನು ಕಲಿಯುವುದೇ ಚಿಕಿತ್ಸೆಯ ಮುಖ್ಯಭಾಗ. ಅದನ್ನು ಕಲಿಯಲು ತರಬೇತಿ ಬೇಕು. ಮಾತಿನ ಧಾಟಿಯನ್ನು ಬದಲಾಯಿಸಲು ಹಲವು ರೀತಿಗಳಿವೆ. ಈ ಹೊಸತನವನ್ನು ಕಲಿಯುವುದೇ ಸರಿಯಾದ ದಾರಿ. ನಿರ್ಧಾರವೇ ಇದಕ್ಕೆ ತಳಹದಿ. ಸುಮಾರು ಜನ ಕ್ಲಿನಿಕ್ಕಿಗೆ ಬಂದಾಗಲೇ ಸಾಕಷ್ಟು ಸ್ಪಷ್ಟವಾಗಿ ಮಾತಾಡಲು ಆರಂಭಿಸಿರುತ್ತಾರೆ. ಈಜನ್ನು ಈಜಿಯೇ ಕಲಿಯಬೇಕು.

(ಉಗ್ಗಿನ ರೂಪ ಅತಿ ಅಲ್ಪವೂ ಅತೀ ಹೆಚ್ಚೂ ಇರಲು ಸಾಧ್ಯ, ಆ ಎರಡೂ ವಿಪರೀತ ರೂಪಗಳ ಬಗ್ಗೆ ಇಲ್ಲಿ ಬರೆದಿಲ್ಲ.)

ಡಾ|| ಜಿ. ಪುರುಷೋತ್ತಮ
ನಂ. ೧೦೩೦/೧೩, ಮಹಡಿ, ೨೫ನೇ ಮೇನ್, ೩೯ನೇ ಕ್ರಾಸ್
೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು - ೫೬೦ ೦೪೧

ಕೀಳರಿಮೆ ಸಲ್ಲ

ಉಗ್ಗಿನಿಂದಾಗಿ ಮಾತಿನಲ್ಲಿ ಬಹಳ ತಡವರಿಸುತ್ತಿದ್ದ ಶ್ರೀ ಇ. ಎಂ. ಎಸ್. ನಂಬೂದಿರಿಪಾದ್ ಅವರು ಹರಿತದ ಪ್ರಭಾವಿ ಭಾಷಣಕಾರರಾಗಿದ್ದರು. ಕಮ್ಯುನಿಸ್ಟ್ ಚಳುವಳಿಯಲ್ಲಿ ಏಳು ದಶಕಗಳ ಕಾಲ ದುಡಿದ ಇ. ಎಂ. ಎಸ್. ಅನೇಕ ವಿದ್ವತ್ಸಭೆಗಳಲ್ಲಿ, ವಿಚಾರಗೋಷ್ಠಿಗಳಲ್ಲಿ, ಅಂತರರಾಷ್ಟ್ರೀಯ ಸಮಾವೇಶಗಳಲ್ಲಿ, ಹಿರಿಯ ರಾಜಕೀಯ ಧುರೀಣರೊಡನೆ ಸಂವಾದ-ಸಂಧಾನಗಳಲ್ಲಿ ಯಶಸ್ವಿಯಾಗಿ ಭಾಗವಹಿಸುತ್ತಿದ್ದರು. ಉಗ್ಗು ಅವರಲ್ಲಿ ಯಾವ ಕೀಳರಿಮೆಯನ್ನೂ ಉಂಟುಮಾಡಲಿಲ್ಲ. ಪತ್ರಿಕಾ ವರದಿಗಾರನೊಬ್ಬ ಅವರನ್ನೊಮ್ಮೆ ಕೇಳಿದ: "ನೀವು ಯಾವಾಗಲೂ ಉಗ್ಗುತ್ತೀರಾ ?" ಹಾಸ್ಯದ ಹೊನಲು ಹರಿಸಿ ಇ. ಎಂ. ಎಸ್. ಉತ್ತರಿಸಿದರು: "ಇಲ್ಲ, ಕೇವಲ ಮಾತನಾಡುವಾಗ ಮಾತ್ರ."

ಅಂಡಮಾನಿನ ಕಡಲ ಗರ್ಭದೊಳಗೆ

ಅಪರಂಪಾರವೀ ಲೋಕ

ದಿನದ ೨೪ ಗಂಟೆಯೂ ಕುದಿಯುವ ಕಡಲ ಮೇಲೆ ಪಯಣಿಸುವಾಗ, 'ಯಾವಾಗ ನೆಲ ಕಂಡೇವಪ್ಪಾ' ಎನಿಸುವಷ್ಟು ಕಡಲು ಜಡವಾಗತೊಡಗುತ್ತದೆ. ಆದರೆ ಸಾವಿರಾರು ನದಿಗಳನ್ನು ತನ್ನ ತೆಕ್ಕೆಯಲ್ಲಿ ಸೆಳೆದುಕೊಂಡು ನಿರಾಳವಾಗಿ ಇರಬಲ್ಲ ಈ 'ಜಡಧಿ'ಯ ಗಾಂಭೀರ್ಯ, ಅಸಂಖ್ಯ ಜೀವರಾಶಿಗಳನ್ನೂ, ಅವುಗಳ ರುದ್ರಗಂಭೀರ ವರ್ಣರಂಜಿತ ಬದುಕನ್ನೂ ತನ್ನ ಒಡಲೊಳಗೆ ಇಟ್ಟು ನಡೆಯಗೊಟ್ಟಿರುವ ಅದರ ಔದಾರ್ಯ ಅಭಿಮಾನ ಬರಿಸುತ್ತದೆ. ಅಮೀಬಾದಿಂದ ಹಿಡಿದು ಜಗತ್ತಿನ ಅತಿದೊಡ್ಡ ಜೀವಿ ಎನಿಸಿರುವ ವೇಲ್‌ವರೆಗೆ ಸಾವಿರಾರು ಬಗೆಯ ಜೀವಜಂತುಗಳ ನೆಲೆಮನೆಯಾಗಿರುವ ಕಡಲು, ಒಂದು ನಿಗೂಢ ಲೋಕ. ಅಂಡಮಾನ್ ಕಡಲಲ್ಲಿ ನಾವು ಕಂಡ ಕೆಲವೇ ಕಡಲ ಜೀವಿಗಳು – ಬಾಣದಂತೆ ಚಿಮಿ ಹೋಗುವ ಹಾರುವ ಮೀನುಗಳು, ಅಷ್ಟಾವಕ್ರರಾದ ಏಡಿಗಳು, ಹೆಣದಂತೆ ಬಿದ್ದುಕೊಂಡಿರುವ ಕಡಲಸೌತೆ, ಮುಳ್ಳಿನ ಚೆಂಡಿನಂತಹ ಅರ್ಚಿನ್‌ಗಳು, ಜೂಲು ಜೂಲಾದ ಬಟ್ಟೆತೊಟ್ಟ ಹಳೇ ಸಿನಿಮಾಗಳ ಕ್ಲಬ್‌ಡಾನ್ಸರಿಯರಂತೆಯೋ ಸಿಂಗಾರ ಸಿಕ್ಕಿಸಿಕೊಂಡ ಕರಾವಳಿಯ ಭೂತಗಳಂತೆಯೋ ತೋರುವ ಮೀನುಗಳು, ಸರ್ಕಸ್ಸು ಮಾಡಿದ ಡಾಲ್ಫಿನ್‌ಗಳು, ಹೊರಲಾರದ ಹೊರೆಹೊತ್ತ ಹಮಾಲಿಗಳಾದ ಶಂಖುಹುಳು– ನಮ್ಮನ್ನು ಮೂಕವಿಸ್ಮಿತ ಮಾಡಿದವು.

ಕಡಲೊಳಗಿನ ಜೀವರಾಶಿಯು ಭೂಮಿ ಮೇಲಿರುವುದಕ್ಕಿಂತಲೂ ಹೆಚ್ಚು ವೈವಿಧ್ಯವಾಗಿದೆ. ದಿನನಿತ್ಯ ಟನ್ನುಗಟ್ಟಲೆ ಆಹಾರವನ್ನು ಮನುಷ್ಯರ ಉದರಕ್ಕೆ ಒದಗಿಸುತ್ತಿರುವ ಕಡಲು ತಾಯಿಯಂತೆ. ಸಮುದ್ರವನ್ನು ರಾಜಗೀಜ ಎಂದು ಬಣ್ಣಿಸಿದ ಕವಿಗಳು, ಬಹುಶಃ ಮೀನು ಹಿಡಿದವರೂ ಅಲ್ಲ ತಿಂದವರೂ ಅಲ್ಲ; ಬೆಸ್ತರಿಗೆ ಕಡಲು ಅದು ಕಡಲಮ್ಮ! ಮಲ್ಪೆಯ ಮೀನುಗಾರರ ದೋಣಿಗಳನ್ನು ಕಂಡಮೇಲೆಯೇ, ಘಟ್ಟದ ಮೇಲಿನ ನನ್ನಂತಹವರಿಗೆ, ನಮ್ಮ ರೈತರಿಗೆ ಭೂಮಿಯಷ್ಟೆ ಮುಖ್ಯವಾದ ಇನ್ನೊಂದು ವಸ್ತು ಇದೆ ಎಂದು ತಿಳಿದಿದ್ದು; ಅಡಿಗೆ ಮನೆಯ ಕತ್ತಲ ಕೋಣೆಯಲ್ಲಿ ಉಪ್ಪಾಗಿ ಅಡಗಿರುವ ಸಮುದ್ರ, ವಾಸ್ತವದಲ್ಲಿ ಇಡೀ ಭೂಮಿಯನ್ನು ಆವರಿಸಿ ಹರಡಿರುವ ಮಹಾನೀಲ ಚಾಪೆ. ಅದು ಎಷ್ಟು ಸಾಹಸಿಗಳನ್ನು ತನ್ನ ಆಡುಂಬೊಲಕ್ಕೆ ಆಹ್ವಾನಿಸಿದೆ, ಎಷ್ಟೆಷ್ಟು ಹಡಗುಗಳ ಸೊಕ್ಕಡಗಿಸಿ ತನ್ನ ಹೊಟ್ಟೆಗೆ ಹಾಕಿಕೊಂಡಿದೆ. ಬೇಂದ್ರೆ, ತಮ್ಮ ಒಂದು ಕವಿತೆಯಲ್ಲಿ ಭೂಮಿತಾಯನ್ನು ''ಮೊದಲತ್ತಿಯಂತೆ ಮೆರೆಯುತಿಹೆ ತಾಯೀ'' ಎಂದು ಬಣ್ಣಿಸುತ್ತಾರೆ. ಈ ಬಣ್ಣನೆ ನಿಜವಾಗಿ ಲಗತ್ತಾಗುವುದು ಕಡಲಿಗೆಯೇ.



ಭಾರೀ ಗಾತ್ರದ ಮೀನುಗಳು

ಬಣ್ಣಾಡಿ ಬಂದವರಂತೆ...

ಅಂಡಮಾನಿನ ಕಡಲ ಜೀವಿಗಳಲ್ಲಿ ನನಗೆ ತಟ್ಟನೆ ನೆನಪಾಗುವುದು ಅವುಗಳ ಚಿತ್ರವಿಚಿತ್ರ ರೂಪಕ್ಕಿಂತ, ಅವುಗಳ ವರ್ಣವೈವಿಧ್ಯ. ಯಾವನೋ ಕಲಾವಿದ, ಈ ಮೀನುಗಳನ್ನೆಲ್ಲ ಹಿಡಿದು ಕೂರಿಸಿಕೊಂಡು, ತನ್ನ ಹುಚ್ಚು ಕಲ್ಪನೆ ಬಳಸಿ ಬಣ್ಣ ಬಳಿದು, ''ಹೋಗಿ ಆಟವಾಡಿ ಬನ್ನಿ'' ಎಂದು ಕಳಿಸುತ್ತಿರಬಹುದು ಅನ್ನಿಸುವಷ್ಟು ಬಣ್ಣಬಣ್ಣದ ಮೀನುಗಳು. ಹೋಳಿಯಲ್ಲಿ ಬಣ್ಣವಾಡಿ ಬಂದವರಂತೆ ಅವಿದ್ದವು. ಕಾಮನಬಿಲ್ಲಿನ ತುಂಡುಗಳಂತಹ ಪುಟ್ಟ ಮೀನುಗಳಂತೂ, ತಮಗೆ ಚೆಲುವು ಇರುವ ಅರಿವೇ ಇಲ್ಲದ ಬುಡಕಟ್ಟು ಹುಡುಗಿಯರಂತೆ ಅಡ್ಡಾಡುತ್ತಿದ್ದವು. ಅಂಡಮಾನಿನ ಕಡಲಿನಲ್ಲಿ ಸಾಮಾನ್ಯವಾಗಿ ಕಾಣುವ ಮೀನೆಂದರೆ, ಸಾರ್ಜೆಂಟ್ ಮೇಜರ್. ಹಳದಿ ಕಪ್ಪು ಬಣ್ಣಗಳ ಪಟ್ಟೆಗಳಿರುವ ಈ ಮೀನಿನ ಹೆಸರಿಗೂ ಈ ದ್ವೀಪಗಳಲ್ಲಿ ಬೀಡುಬಿಟ್ಟಿದ್ದ ಸೈನಿಕರ ಸಂಸ್ಕೃತಿಗೂ ಸಂಬಂಧ ವಿರಬೇಕು. ಬಹುಶಃ ಮೇಜರಾದವನಿಗೆ ಪದಕ ಹಾಕುವಂತೆ ಅವಕ್ಕೆ ೪ ಕಪ್ಪು ಚುಕ್ಕೆಗಳಿರುವುದು ಕಾರಣವಿರಬೇಕು. ಸಾರ್ಜೆಂಟ್ (ಸಾರ್ಜನ್?) ಮೀನುಗಳು ಗುಂಪಾಗಿ ಸೈನಿಕ ಪಥ ಸಂಚಲನೆಯ ಶಿಸ್ತಿನಲ್ಲಿ ಚಲಿಸುತ್ತ, ಚಕ್ಕನೆ ಕರಾರುವಾಕ್ಕಾಗಿ ಮೈ ಹೊರಳಿಸಿ ದಿಕ್ಕುಬದಲಿಸುತ್ತ, ಮಿನುಗುತ್ತ ಇದ್ದವು.

ವಾಸ್ತವವಾಗಿ ನಾವು ತುಂಬ ಚೆಲುವಾದ ಮೀನುಗಳನ್ನು ಕಂಡಿದ್ದು ರೆಡ್‌ಸ್ಕಿನ್ ದ್ವೀಪದಲ್ಲಿ (ಈ ಹೆಸರು ಯಾಕೆ ಬಂತೋ ತಿಳಿಯದು) ವಂಡೂರು ರಾಷ್ಟ್ರೀಯ ಉದ್ಯಾನ ದಲ್ಲಿ ರೆಡ್‌ಸ್ಕಿನ್ ಜಾಲಿಬಾಯ್ ಮುಂತಾದ ಹವಳ ದ್ವೀಪಗಳು ಸೇರುತ್ತವೆ. ರೆಡ್‌ಸ್ಕಿನ್, ಅದೊಂದು ಪುಟ್ಟ ದ್ವೀಪ. ಅಂಡಮಾನಿನ ಅದ್ಭುತ ಹವಳದ ಪೊದೆಗಳಿರುವ ಜಾಗ. ಗಾಜಿನ ತಳವಿರುವ ದೋಣಿಯಲ್ಲಿ ಹವಳಬಳ್ಳಿಗಳನ್ನು ತೋರಿಸುತ್ತಾರೆ. ನಿಜವಾದ ಸಂತೋಷ ಸಿಗಬೇಕಾದರೆ, ಸ್ಕೂಬಾ ಡೈವಿಂಗ್ ಮಾಡಬೇಕು. ಇದನ್ನು ಮಾಡಲು ಸ್ವಲ್ಪ ತರಬೇತಿ ಬೇಕು. ನಮಗದು ಸಾಧ್ಯವಾಗಲಿಲ್ಲ. ಆದರೆ ಮುಳುಗು ಮುಖವಾಡ (ಸ್ನೋರ್ಕಲ್) ಧರಿಸಿಕೊಂಡು ನೀರಿನಲ್ಲಿ ತಲೆಮುಳು ಗಿಸಿ ಕಡಲು ಬೆಳೆದ ಹವಳದ ಬೆಳೆಯನ್ನು ನೋಡಿ ದೆವು. ಇದರಲ್ಲಿ ಮೈಯನ್ನು ಈಜು ಬುರುಡೆಯ ಒಳಗೆ ತೂರಿಸಿ, ತೇಲುತ್ತ ತೇಲುತ್ತ ನೀರೊಳಗಿನ ಹವಳದ ಪೊದೆಗಳನ್ನು ನೋಡ ಬಹುದು. ತೇಲುವ ಹೆಣಗಳನ್ನು ಹಗುರವಾಗಿ ಎಳೆದುಕೊಂಡು ಹೋಗುವಂತೆ, ಒಬ್ಬ ಪರಿಣತ ಈಜುಗಾರ ಈಜುಬುರುಡೆಯ ಮೇಲೆ ಪವಡಿಸಿದ ನಮ್ಮ ದೇಹವನ್ನು ಎಳೆದುಕೊಂಡು ಈಜುತ್ತ, ಹವಳದ ಬಳ್ಳಿಗಳಿರುವ ಕಡೆಯಲ್ಲೆಲ್ಲ ಕರೆದು ಕೊಂಡು ಹೋಗುತ್ತಿದ್ದ. ನಾನು ಬೆಳ್ಳಗೆ ಸುಣ್ಣದಿಂದ ಮಾಡಿದಂತಿದ್ದ ಹವಳಗಳನ್ನು ಅನೇಕ ಕಡೆ ನೋಡಿದ್ದೆ. ಆದರೆ ನೀರಿನ ಒಳಗೆ ಅವುಗಳನ್ನು ನೋಡಿರಲಿಲ್ಲ; ನಿಜವಾಗಿಯೂ ಅದೊಂದು ಮಾಯಾಲೋಕ. ನಿಸರ್ಗದಲ್ಲಿರುವ ಎಲ್ಲ ಬಣ್ಣಗಳನ್ನು ಎಲ್ಲ ಆಕಾರಗಳನ್ನು ಬಳಸಿಕೊಂಡು ಹವಳದ ಲೋಕ ಸೃಷ್ಟಿಯಾಗಿತ್ತು. ಹವಳವನ್ನು ಪೊದೆ-ಬಳ್ಳಿ ಎಂದೆಲ್ಲ ಕರೆದರೂ ವಾಸ್ತವವಾಗಿ ಅದು ನೀರಿನೊಳಗೆ ಹುಟ್ಟಿ ಬೆಳೆಯುವ ಒಂದು ಜೀವಿ. ಇದನ್ನಂತೂ ನಂಬುವುದಕ್ಕೇ ಆಗುತ್ತಿರಲಿಲ್ಲ. ಚೆಂದದಲ್ಲಿ ಒಂದಕ್ಕೊಂದು ಸ್ಪರ್ಧಿಸುವಂತೆ ಅವು ಸೃಷ್ಟಿಯಾಗಿದ್ದವು. ಹಬ್ಬಕ್ಕೆ ಸಿಂಗರಿಸಿದ ಮಂಟಪದಂತಿರುವ, ಮಕ್ಕಳು ಬರೆದ ಚಿತ್ರ [illegible] ಬಗೆಬಗೆಯ ಆಕಾರಗಳು. ನಾವು ಚೆಲುವಾದ ಬಣ್ಣದ ಮೀನುಗಳನ್ನು ನೋಡಿದ್ದು ಅಲ್ಲಿಯೇ. ಅದರಲ್ಲೂ ಕಲ್ಲು ಪೊಟರೆ ಮತ್ತು ಸಮುದ್ರ [illegible] ಮೀನುಗಳು ಅಲ್ಲಿದ್ದವು. ಸೀಮೂನ್ ಪೊದೆಗಳೇ ಅವುಗಳ ಮನೆ. ಸೀಮೂನ್ ಎಂದರೆ ಶ್ಯಾವಿಗೆಯಂತಹ ಜೀವಿ. ಇದು ಹುಲ್ಲಿನಾಕಾರದಲ್ಲಿ ಬೆಳೆದಿದ್ದು, [illegible] ಮಾಯಾಬಜಾರು ಸಿನಿಮಾಗಳಲ್ಲಿರುವಂತೆ [illegible] ಇವುಗಳೊಳಗೆ [illegible] ಮೀನುಗಳು ಅಡಗಿ ಜೂಟಾಟ ಆಡುತ್ತಿದ್ದವು. [illegible] ಹತ್ತಿರ ಹೋಗುತ್ತಿದ್ದ ನಮ್ಮನ್ನು ಕಚ್ಚುತ್ತಿದ್ದವು. [illegible] ಅದರಲ್ಲೂ ಒಂದು ಮೀನು [illegible]

ಡಾ|| ರಹಮತ್ ತರೀಕೆರೆ

ಕಡಲ ಸೌತೆ

ನಾವು ಉಳಿದುಕೊಂಡಿದ್ದ ಮುನಿಸಿಪಲ್ ಗೆಸ್ಟ್‌ಹೌಸು ದಂಡೆಗೇ ಇತ್ತು. ಭರತವಿದ್ದಾಗ ನೀರು ಬಂದು ತುಂಬಿಕೊಳ್ಳುವಂತೆ ಒಂದು ದೊಡ್ಡ ಕೊಳವನ್ನು ಕಡಲೊಳಗೆ ಕಟ್ಟಿ ಅದರಲ್ಲಿ ಅಂಡಮಾನಿನ ಎಲ್ಲ ಬಗೆಯ ಕಡಲಜಂತು ಗಳನ್ನು ಬಿಟ್ಟಿದ್ದರು. ಕಡಲಿಗೂ ಈ ಕೊಳಕ್ಕೂ ನಡುವೆ ಸಣ್ಣ ನಡೆಸೇತುವೆ. ಬೆಳಕು ಹರಿಯುವುದೇ ತಡ ಈ ಕಡಲಕೊಳಕ್ಕೆ ಹಾಜರಿ ಹಾಕುವುದು ನಮ್ಮ ದಿನಚರಿ ಯಾಯಿತು. ಅಲ್ಲಿ ನಾವು ಕಂಡ ವಿಚಿತ್ರ ಸೋಮಾರಿಯೆಂದರೆ, ಕಡಲ ಸೌತೆ ಎಂದು ಕರೆಯಲಾಗುವ ಜೀವಿ. ಇದರ ಆಕಾರ ಕೊಳೆತ ಸೌತೆಕಾಯಿಯಂತೆ ಇರುವುದರಿಂದ ಈ ಹೆಸರು ಬಂದಿರಬಹುದು. ಆದರೆ ನನಗೆ ಅದು ಸೌತೆಯಂತಲ್ಲ, ಬಹುಕಾಲದಿಂದ ನೀರಿನಲ್ಲಿ ಪಾಚಿ ಹಿಡಿದು ಬಿದ್ದ ಹಳೇ ಬೂಟಿನಂತೆ ತೋರಿದ್ದು ಕಡಲ ಸೌತೆ. ಅದರ ಬಾಯೆಲ್ಲೋ ಕಣ್ಣೆಲ್ಲೋ ತಿಳಿಯುತ್ತಿರಲಿಲ್ಲ. ನಾವು ನೋಡಿದಷ್ಟೂ ದಿನ ಅದು ತನ್ನ ಜಾಗ ಕೂಡ ಕದಲಿಸಲಿಲ್ಲ; ಆಹಾರಕ್ಕಾಗಿ ಬೇಟೆಯಾಡಲಿಲ್ಲ. 'ನನ್ನನ್ನು ಯಾಕೆ ಇಲ್ಲಿ ತಂದಿರಿ' ಎಂದು ಸತ್ಯಾಗ್ರಹ ಮಾಡುತ್ತಿತ್ತೋ ಏನೋ? ಉಳಿದವರು ಕೂಡ ಅದರ ತಂಟೆಗೆ ಹೋಗುತ್ತಿರಲಿಲ್ಲ. ಥೇಟ್ 'ಒಡಲಾಳ' ಕಾದಂಬರಿಯ ದುಫ್ಟಿಕಮೀಶನರು! ಈ ಜಡಭರತ ನೋಡಲು ವಿಕಾರವಾಗಿದ್ದರೂ, ವಾಸ್ತವದಲ್ಲಿ ಅತ್ಯಂತ ಬೆಲೆ ಬಾಳುವ ಕಡಲ ಜೀವಿಯಾಗಿತ್ತು. ಅದನ್ನು ಹಿಡಿಯುವುದಾಗಲೀ ಮಾರುವುದಾಗಲೀ ನಿಷಿದ್ಧವಾಗಿತ್ತು. ಜಪಾನಿನಲ್ಲಿ ಇದನ್ನು ಇಡಿಯಾಗಿ ಬೇಯಿಸಿ ಡಬ್ಬಕ್ಕೆ ತುಂಬಿ ಪ್ಯಾಕು ಮಾಡಲಾಗುತ್ತದೆಯಂತೆ. ಡಬ್ಬದ ಮುಚ್ಚಳ ತೆಗೆದು ಚಮಚದಿಂದ ಜಾಂ ತಿಂದಂತೆ ತಿನ್ನುತ್ತಾರಂತೆ. ತನ್ನ ಅಮೂಲ್ಯ ಬೆಲೆಯ ಬಗ್ಗೆ ಇಷ್ಟೆಲ್ಲ ಅರಿವಿದ್ದೇ ಕಡಲ ಸೌತೆ ಆಪಾಟ ಘನಗಂಭೀರತೆ ಕಾಯ್ದುಕೊಂಡಿತ್ತೋ ಏನೋ?



ಬಣ್ಣದಲ್ಲಿ ಅದ್ದಿ ತೆಗೆದಂತಿರುವ ಗೋಬ್ರಾ ಮೀನು

ಅಕರಾಳ ನರ್ತಕಿ

ಒಂದು ದಿನ ಬೆಳಬೆಳಿಗ್ಗೆ ನಮ್ಮ ವಸತಿಯ ಹತ್ತಿರವಿದ್ದ ಒಂದು ಜೆಟ್ಟಿಯ (ದೋಣಿಯ ಬಂದರು) ಚಾಚು ಸೇತುವೆ ಮೇಲೆ ನಿಂತು, ಕಂಬಿಗಳ [illegible] ಮೇಲೆ [illegible] ಬಾಗಿ, [illegible] ಸಾರ್ಜೆಂಟ್ ಮೀನುಗಳನ್ನು ಗಮನಿಸುತ್ತ ಇದ್ದೆ; ಜೆಟ್ಟಿಯ ಜಾಗದಲ್ಲಿ ಸಾಮಾನ್ಯವಾಗಿ ನೀರು ಆಳವಿರುತ್ತದೆ; ಆಳವಿದ್ದರೂ [illegible] ಒಳಗಿನದೆಲ್ಲ ಸ್ಪಷ್ಟವಾಗಿ ತೋರುತ್ತಿತ್ತು. ನೀರಿನಲ್ಲಿ ಏನೋ ಚಲನೆ ಕಂಡುಬಂತು. ಬೂದು ಬಣ್ಣದ ಅಕರಾಳ ವಿಕರಾಳ ಜೀವಿಯೊಂದು ಐದಾರು ಕಾಲುಗಳನ್ನು ಆಡಿಸುತ್ತ, ಕಡಲ ತಳದಲ್ಲಿ ಅಲ್ಲಲ್ಲಿ ನಿಲ್ಲುತ್ತ, ವೈಯಾರದಲ್ಲಿ ನೀಲಾಂಜನೆ ನೃತ್ಯ ಮಾಡುತ್ತ ಬಂದಂತಾಯಿತು. ಅದರ ಬಾಹುಗಳ ಮೇಲೂ ಹತ್ತಾರು ಚಿಕ್ಕೆಗಳು, ಮೈತುಂಬ ಕಣ್ಣು. ಯಾವುದೋ ಗ್ರಹದಿಂದ ಭೂಮಿಗಿಳಿದ ನೌಕೆಯಂತೆ ಬಂದು ಕುಳಿತಿತು. ನೋಡಲಾಗಿ ಅದರ ಕೈಕಾಲುಗಳಿಗೆ ಕೇಂದ್ರದಂತಿದ್ದ ಬನ್ನಿನಾಕಾರದ ತಲೆಯಲ್ಲಿ ಕಣ್ಣುಗಳಿದ್ದವು. ಮೈ ಜುಂ [illegible]ದಿತು. ಕತೆಗಳಲ್ಲಿ ಓದಿ ರೋಮಾಂಚನಗೊಂಡಿದ್ದ ಆಕ್ಟೋಪಸ್ ಅದು! ಅದು ನಿಲ್ಲುತ್ತಿದ್ದ ಜಾಗದ ಸುತ್ತಮುತ್ತ ಯಾವ ಮೀನುಗಳೂ [illegible]ಸುಳಿಯುತ್ತಿರಲಿಲ್ಲ. ದೂರದಲ್ಲಿ ಮೀನು ನೋಡುತ್ತಾ ನಿಂತಿದ್ದ ಬಾಸು ಅರುಣ, ಜಯ್ ಗಣ ಅವರಿಗೆ ಕೂಗಿ ಕರೆದೆ. 'ಚಿಕ್ಕ ಪುಟ್ಟದ್ದಕ್ಕೆಲ್ಲ ಕಿರುಚುತ್ತಾನೆ' ಎಂಬ ಉದಾಸೀನತೆಯಲ್ಲಿ ಅವರು 'ಏನು' ಎಂದು ಸಪ್ಪೆಯಲ್ಲೇ ಕೇಳಿದರು. ಹುಚ್ಚನಂತೆ ಗಾಳಿಯಲ್ಲಿ ತೋಳುಗಳನ್ನು ರೆಕ್ಕೆ ಬಡಿವಂತೆ ಬಡಿಯುತ್ತ, 'ಆಕ್ಟೋಪಸ್ ಆಕ್ಟೋಪಸ್' ಎಂದು ಸೂಚಿಸಿದೆ. ಅಲೆಗಳ ಸದ್ದಿನಲ್ಲಿ ಅವರಿಗೆ ಕೇಳಿಸಲಿಲ್ಲ. [illegible] ಅಂತೂ ಬಂದರು. ಅಷ್ಟರಲ್ಲಿ ಆಕ್ಟೋಪಸ್ ಚಲಿಸಲಾರಂಭಿಸಿತು. ಅವರು ಬಂದು [illegible] ಎನ್ನುವಷ್ಟರಲ್ಲಿ ಅದು ಚಂಗ್‌ಚಂಗ್ ಕುಪ್ಪಳಿಸುತ್ತ ತನ್ನ ಬಾಹುಗಳನ್ನು [illegible] ನೀರಿನೊಳಗೆ ಮಾಯವಾಯಿತು.

ಅರ್ಚಿನ್

ನನಗೆ ವಿಚಿತ್ರ ಕಂಡಿದ್ದು ಅರ್ಚಿನ್‌ಗಳು. ಇವನ್ನು ಮಾಯಾಬಜಾರಿನ ಕಡಲಲ್ಲಿ ಕಂಡೆವು. [illegible] ಅಪ್ಪಳಿಸುವಂತಹ ತೆರೆದ ಕಡಲ ದಂಡೆಯಲ್ಲಿ ಇರುವುದಿಲ್ಲ. [illegible] ನೀರು ನಿಂತುಕೊಳ್ಳುವ ಕೊಲ್ಲಿಗಳಲ್ಲಿ ಇರುತ್ತವೆ. ಮಾಯಾಬಂದರಿನ [illegible] ಈ ಬಂಡೆಗಳ ಮೇಲೆ ಕೆತ್ತಿದ ಪ್ರಾಣಿಗಳೋ ಎಂಬಂತೆ ಅರ್ಚಿನ್‌ಗಳ ಶೆಲ್ಲುಗಳೂ ಇವೆ. ಅರ್ಚಿನ್‌ಗಳ ರೂಪ ನೀರಲ್ಲಿ ಮೈ ತುಂಬ ಕೊಳೆತ ಮುಳ್ಳು ಸಿಕ್ಕಿಸಿದಂತೆ ದುಂಡಗೆ ಇರುತ್ತದೆ. ಅಮೆರಿಕಾದ ಸ್ವಾತಂತ್ರ್ಯ ದೇವಿಯ ಪ್ರತಿಮೆಯ ಕಿರೀಟದಂತಿರುವ ಇವು ಕಲ್ಲಿಗೆ ಅಂಟಿಕೊಂಡಿರುತ್ತವೆ. ಇವುಗಳ ಮೇಲೆ ಎಚ್ಚರತಪ್ಪಿ ಕಾಲಿಟ್ಟರೆ ಪ್ರಾಣ ಹೋದಂತಾಗುತ್ತದೆ. ಇವುಗಳ ಜತೆಗೆ ಇರುವ ಸಂಗಾತಿಗಳೆಂದರೆ, ಕಿಶೆಲ್ಲುಗಳು. ಅಂಗೈ ಅಗಲದಿಂದ ಇವುಗಳ ಗಾತ್ರ ಶುರುವಾದರೆ ದೊಡ್ಡ ಬಾನಿಯಗಲದ ವರೆಗೂ ಇರುತ್ತದೆ (ಪೋರ್ಟ್ ಬ್ಲೇರಿನ ಸಮುದ್ರದ ಮ್ಯೂಸಿಯಮ್ಮಿನ ಹೊರಗೆ ಇಟ್ಟಿರುವ ಒಂದು ಸಿಂಪಿಯು ದೊಡ್ಡ ಪಲ್ಲಕ್ಕಿಯಂತಿತ್ತು). ನೀಲಿ ಕೆಂಪು ಬಣ್ಣದ ಮಕಮಲ್ಲನ್ನು ಬಂಡೆಗೆ ಸಿಕ್ಕಿಸಿದೆ ಎಂಬಂತೆ ಗಟ್ಟಿಯಾಗಿ ತಗುಲಿಕೊಂಡಿರುವ ಈ ಚಿಪ್ಪುಗಳನ್ನು ಜೀವಿಗಳು ಎಂದು ಕರೆಯುವುದೇ ಕಷ್ಟ. ಕಡ್ಡಿಯಿಂದ ಮುಟ್ಟಿದಾಗ ಅವು ಪಿಚಕ್ಕನೆ ನೀರು ಚಿಮ್ಮಿಸಿ ಮುಚ್ಚಿಕೊಂಡಾಗಲೆ ಇವಕ್ಕೆ ಜೀವವಿದೆ ಎಂದು ಗೊತ್ತಾಗುವುದು. ಇವಕ್ಕೆ ಊಟ ಏನು? ಎಂದು ಗಣ ಅವರಿಗೆ (ಗಣ ನಮ್ಮ ಗುಂಪಿನಲ್ಲಿ ವಿಜ್ಞಾನಿಯಿದ್ದಂತೆ) ಕೇಳಿದೆ. ನೀರಿನೊಳಗಿನ ಅತಿ ಸೂಕ್ಷ್ಮ ಜೀವಿಗಳನ್ನು ತಮ್ಮ ಸ್ವಂಜಿನಂತಹ ದೇಹದಿಂದ ಹಿಡಿದು ತಿನ್ನುತ್ತವೆ ಎಂದು ಹೇಳಿದರು. ಹೊಟ್ಟೆಹೊರೆಯಲು ಎಷ್ಟೊಂದು ವೇಷ? ಏನೆಲ್ಲ ಸಂಚು! ಒಂದು ಜೀವವನ್ನು ಹಿಡಿಯಲು ಮತ್ತೊಂದು ಜೀವ ತೋರಿಸುವ ಈ ಜಾಣ್ಮೆಯೇ ಕಡಲ ಜೀವಿಗಳ ಲೋಕವನ್ನು ಕೋಲಾಹಲಕರ ಮಾಡಿರುವುದು.

ಮತ್ಸ್ಯಮಿಥುನ

ಮಾಯಾಬಂದರಿನಲ್ಲಿ ಇರುವಾಗ ಕಡಲನ್ನು ಅದರ ದಡದಲ್ಲೇ ಬಹಳ ಕಾಲ ನೋಡುವ ಅವಕಾಶ ಸಿಕ್ಕಿತು. ಸಣ್ಣ ಬೆಟ್ಟದ ಮೇಲಿರುವ ಅಲ್ಲಿನ ಗೆಸ್ಟ್‌ಹೌಸಿನ ಹಿಂದೆ, ದಂಡೆಗೆ ಇಳಿವಂತೆ ಮೆಟ್ಟಿಲು ಮಾಡಿ, ಕಡಲ ವೀಕ್ಷಣೆ ಮಾಡಲು ಗಾರೆಯ ಅಟ್ಟಣೆ ಕಟ್ಟಲಾಗಿದೆ. ಕಡಲ ದಂಡೆಯೆಂದರೆ ಅದೇನು ಇಳಿದು ಚೆಲ್ಲಾಟವಾಡುವಂತಹ ಮರಳ ಬೀಚಲ್ಲ, ಬಾವಿಯಂತೆ ಆಳನೀರಿನ ಕಡಿದಾದ ತೀರ. ನೀರೋ ಗಾಜು ಕರಗಿಸಿ ಎರಕ ಹೊಯ್ದಂತೆ, ತನ್ನ ಕೆಳಗಿನ ಯಾವುದನ್ನೂ ಮರೆ ಮಾಚದೆ ಅಂಗೈ ಯಲ್ಲಿರಿಸಿ ತೋರುವಂತೆ ಸ್ಪಟಿಕ ಶುಭ್ರ. ಸುತ್ತಮುತ್ತ ಕೈ ಕೈ ಹಿಡಿದು ನಿಂತಂತಿರುವ ಬೆಟ್ಟಗಳ ನಡುವಣ ಕೊಲ್ಲಿಯಿಂದಾಗಿರುವುದರಿಂದ, ಅಲೆಗಳ ಅಬ್ಬರವೂ ಇಲ್ಲ. ಅಲೆಗಳು ದಣಿದು [illegible]ಸೋತು ಆರಾಮು ಪಡೆಯಲು ಬಂದವೇನೋ ಎಂಬಂತೆ ಚುಳುಕ್ ಪುಳುಕ್ ಲಯದಲ್ಲಿ ಆಡುತ್ತವೆ. ಇಲ್ಲಿನ ಜಲಮಂಟಪದಲ್ಲಿ ನಿಂತುಬಿಟ್ಟರೆ, ಅಂಡಮಾನಿನ ಕಡಲೊಳಗೆ ಇರುವ ತರಾವರಿ ಮೀನುಗಳು ಬಂದು ಮುಖ ತೋರಿಸಿ ಹೋಗುತ್ತವೆ. ನಾವು ಮಾಯಾಬಂದರಿನಲ್ಲಿ ಇದ್ದಷ್ಟು ದಿನವೂ ಇಲ್ಲಿ ಗಂಟೆಗಟ್ಟಲೆ ನಿಂತು ಮೀನುಗಳ ಆಟವನ್ನು ಕಂಡೆವು. ಅದೊಂದು ಹವಳದ ಪೊದೆಗಳು ತುಂಬಿದ ಕಡಲಮಡು. ಅದರಲ್ಲೂ ರಾತ್ರಿಯ ಹೊತ್ತಲ್ಲಿ ದೀಪದ ಬೆಳಕಲ್ಲಿ ನೂರಾರು ಜಾತಿಯ ಮೀನುಗಳು ಆ ಮಡುವಿನಲ್ಲಿ ಆಡಲು ಬರುತ್ತಿದ್ದವು. ಇದರಲ್ಲಿ ಮೀನುಗಳು ಮರೆಹುಡುಕಿ ಕೊಂಡು ಹೋಗುವ ಪ್ರೇಮಿಗಳಂತೆ ಬರುತ್ತಿದ್ದವು. ಎಷ್ಟೊಂದು ತರಹದ ಮೀನುಗಳು! ನನಗೆ ನಮ್ಮ ಊರಿನ ಮೊಹರಮ್ಮಿನಲ್ಲಿ ಹುಲಿವೇಷ ಹಾಕಿಕೊಂಡು ಚಂಗಚಂಗನೆ ಕುಣಿಯುತ್ತ ಬರುವ ಹುಡುಗರು ನೆನಪಾದರು.

ಒಮ್ಮೆ ಹೀಗೆಯೇ ನೀರನ್ನು ದಿಟ್ಟಿಸುತ್ತ ಇದ್ದೆವು. ರಾತ್ರಿ ಬಹಳ ಸರಿದಿತ್ತು. ಅಲೆಗಳ ಲುಟುಪುಟು ದನಿ ಬಿಟ್ಟರೆ ಬೇರೆ ಶಬ್ದವಿರಲಿಲ್ಲ. ತಟ್ಟನೆ ಭಾರೀ ಗಾತ್ರದ ಎರಡು ಮೀನುಗಳು ಕಾಣಿಸಿಕೊಂಡವು. ಹೆಣ್ಣು ಮೀನು ಹೋದ ಕಡೆಯಲ್ಲೆಲ್ಲ ಗಂಡು ಹಿಂಬಾಲಿಸಿ ಹೋಗುತ್ತಿತ್ತು. 'ನಿನ್ನ ಕೈಗೆ ಸಿಗಲಾರೆ' ಎಂಬಂತೆ ಹೆಣ್ಣು, 'ಸಿಗದೆ ಎಲ್ಲಿ ಹೋದೀಯಾ' ಎಂಬಂತೆ ಗಂಡು ಚಕ್ಕಂದವಾಡಲಾರಂಭಿಸಿದವು. ಅವು ಮಡುವಿನ ತುಂಬ ಬೇಕಾದಷ್ಟು ಹರಿದಾಡಿದವು. ಅವುಗಳ ಆಟ 'ಮತ್ತೊಂದು ಜನ್ಮವಿದ್ದರೆ ರತಿಯಾಟಕ್ಕೆ ಮೀನಾಗಿ ಹುಟ್ಟಬೇಕು' ಎಂಬ ಆಸೆ ಮೊಳೆಸುವಷ್ಟು ಉತ್ಕಟವಾಗಿತ್ತು, ಮಧುರವಾಗಿತ್ತು. ಅಷ್ಟು ಹೊತ್ತಿಗೆ ನಮ್ಮ ಪ್ರವಾಸಿ ಮಂದಿರದಲ್ಲಿ ತಂಗಿದ್ದ, ಹೊಸತಾಗಿ ಮದುವೆಯಾಗಿದ್ದ ಒಂದು ಜೋಡಿ ಕೆಳಗೆ ಇಳಿದು ಬಂತು. ಇದು ಕಲ್ಕತ್ತೆಯಿಂದ ಅವತ್ತೇ ಬಂದಿತ್ತು. ನೀರಾಟದಲ್ಲಿದ್ದ ಜೋಡಿಮೀನನ್ನು ಕಂಡೊಡನೆ ಮದುಮಗಳು ಉದ್ವೇಗ ಸಂತೋಷಗಳಿಂದ 'ಆ ಮೀನನ್ನು ಹಿಡಿಹಿಡಿ' ಎಂದು ಬಂಗಾಳಿಯಲ್ಲಿ

ತನ್ನ ಗಂಡನಿಗೆ ಕಿರುಚಿಕೊಂಡಳು. ಪಾಪ, ಮದುಮಗ ಇನ್ನೂ ಹೊಸಬ. ತನ್ನ ಮನದನ್ನೆಯ ಆಸೆಯನ್ನು ಪೂರೈಸಲು ಪ್ಯಾಂಟನ್ನು ಮೇಲಕ್ಕೆ ಮಡಚಿಕೊಂಡು ನೀರಿಗಿಳಿದ. ಇಳಿದನೋ ಇಲ್ಲವೋ ಬಂಡೆಮೇಲಿದ್ದ ಪಾಚಿಗೆ ಕಾಲುಜಾರಿ, ದೊಪ್ಪನೆ ಬಿದ್ದ. ಸಣ್ಣಗೆ ಪೆಟ್ಟಾಗಿರಬೇಕು. ತೋರಿಸಿಕೊಳ್ಳದೆ ಮೇಲಕ್ಕೆ ಎದ್ದ. ಗಂಡ ಬಿದ್ದನಲ್ಲ ಎಂಬ ಯಾವ ಕಳವಳವೂ ತೋರಿಸದ ಅವಳಲ್ಲಿ 'ತನ್ನ ಇಷ್ಟದ ಮೀನು ಹಿಡಿಯಲಿಲ್ಲವಲ್ಲ' ಎಂಬ ಮುನಿಸೇ ಇದ್ದಂತಿತ್ತು. ಇಬ್ಬರೂ ಗೊಣಗಿಕೊಂಡು ಮೇಲಕ್ಕೆ ಹೋದರು. ಇವರ ರಂಪಾಟಕ್ಕೆ ಬೆಚ್ಚಿದ ಮತ್ಸ್ಯ ದಂಪತಿ ಕಡಲ ಆಳಕ್ಕೆ ಹೋಗಿ ಮರೆಯಾದವು.

ನಿಶಾಚರರು

ಒಮ್ಮೆ ರಾತ್ರಿ ಪೋರ್ಟ್ ಬ್ಲೇರಿನ ಕಡಲ ದಂಡೆಗುಂಟ ಹೋಗಿರುವ ಬೀದಿಯಲ್ಲಿ ತಿರುಗಾಟಕ್ಕೆ ಹೊರಟೆವು. ಕಡಲ ಕಡೆಯಿಂದ ನೂರಾರು ಏಡಿಗಳು ರಸ್ತೆಗೆ ಏರಿ ಊರ ಕಡೆ ಹೊರಟಿದ್ದವು. ಹಗಲು ಹೊತ್ತು ಅವು ಎಲ್ಲಿ ಅಡಗಿರುತ್ತಿದ್ದವೋ, ರಾತ್ರಿಯಾದೊಡನೆ ಊರ ಕಾವಲು ಕಾಯುವ ಕೊತ್ವಾಲರಂತೆ ರಸ್ತೆಗೆ ಬರುತ್ತಿದ್ದವು. ಗುಜರಿ ತಗಡು ಚೂರುಗಳಿಂದ ಮಾಡಿದಂತಿರುವ ಕಪ್ಪನೆಯ ದೇಹದ ಇವು, ತಮ್ಮ ಚೇಳುಕೊಂಡಿಯಂತಹ ಕಾಲುಗಳನ್ನು ಬಾವುಟದಂತೆ ಗಾಳಿಯಲ್ಲಿ ಮೆರೆಸುತ್ತ, ಆರುಕಾಲುಗಳಲ್ಲಿ ಅವು ಅಡ್ಡಾದಿಡ್ಡಿಯಾಗಿ ಬರುತ್ತಿದ್ದವು. ಅವುಗಳ ನಿಶಾವಲಸೆ ಹೆದರಿಕೆ ಹುಟ್ಟಿಸುವಂತೆ ಇತ್ತು. ಕಡಲಲ್ಲಿ ಗಂಭೀರವಾಗಿ ಇರುವುದು ಬಿಟ್ಟು ನಾಯಿಗಳಂತೆ ಬೀದಿ ಬೀದಿ ಅಲೆಯುತ್ತಿರುವ ಏಡಿಗಳ ಬಗ್ಗೆ ಗೌರವ ಮೂಡಲಿಲ್ಲ. ಇವು ಎಲ್ಲಿಗೆ ಹೊರಟಿವೆ ಎಂದು ನೋಡಲಾಗಿ, ಹೆಚ್ಚಿನವು ನೀರು ಹರಿಯುವ ಚರಂಡಿಗಳ ಒಳಗೆ ಹೋಗಿ ಏನನ್ನೋ ಅರಸುತ್ತಿದ್ದವು. ಅಲ್ಲಿ ಅವಕ್ಕೆ ಯಾವ ಆಹಾರವಿತ್ತೋ ತಿಳಿಯದು. ಕಡಲಲ್ಲಿದ್ದರೂ ಅವು ದಂಡೆಯ ಮೇಲೆ ಅವುಗಳ ವರ್ತನೆ ಕೋತಿಗಳಂತೆ; ಯಾರಾದರೂ ಹತ್ತಿರ ಬಂದರೆ ಮರಳ ಬಿಲದೊಳಗೆ ಕಲ್ಲುಪೊಟರೆಗಳೊಳಗೆ ಪುಸಕ್ಕನೆ ಬಚ್ಚಿಟ್ಟುಕೊಳ್ಳುವುದು; 'ಶತ್ರು' ದೂರವಾದ ಮೇಲೆ ಮತ್ತೆ ಹೊರಬರುವುದು– ಇದೇ ಕಣ್ಣುಮುಚ್ಚಾಲೆ. ನಾವು ಕಾರ್ಬೈನ್ಸ್ ಕೋವ್ ಎಂಬ ಕೊಲ್ಲಿಯಲ್ಲಿ (೧೯ನೇ ಶತಮಾನದ ಕಾರ್ಬೈನ್ ಎಂಬ ಪಾದ್ರಿಯ ಹೆಸರಿದು; ಈತ ಇಲ್ಲಿನ ಆದಿವಾಸಿಗಳಿಗೆ ನಾಗರಿಕತೆ ಕಲಿಸಲು ತುಂಬ ಪ್ರಯತ್ನಿಸಿದನು) ಕಂಡ ಪುಟಾಣಿ ಏಡಿಗಳ ಆಟ ಇನ್ನೂ ವಿಚಿತ್ರವಾಗಿತ್ತು. ಬೂಂದಿಕಾಳು ಗಾತ್ರದ ಸಾವಿರಾರು ಏಡಿಗಳು ತಮ್ಮ ಮನೆಗಳಿಂದ ಹೊರಬಂದು, ಮರಳ ಉಂಡೆ ಮಾಡುವ ಸಾಮೂಹಿಕ ಕಾಯಕದಲ್ಲಿ ತೊಡಗಿದ್ದವು. ಇಕ್ಕಳದಂತಹ ತಮ್ಮ ಎರಡೂ ಕೊಂಡಿಗಳಿಂದ ಚಿಟಿಕೆಯಷ್ಟು ಹಸಿಮರಳನ್ನು ತೆಗೆದುಕೊಳ್ಳುವುದು, ಉಳಿದ ಕಾಲುಗಳಿಂದ ಅದನ್ನು ಕ್ಷಣಾರ್ಧದಲ್ಲಿ ಉಂಡೆಮಾಡಿ ರಪ್ಪನೆ ಪಕ್ಕಕ್ಕೆ ಇಟ್ಟು, ಮತ್ತೊಂದು ಉಂಡೆಗೆ ಮರಳನ್ನು ಎತ್ತಿಕೊಳ್ಳುವುದು ಮಾಡುತ್ತಿದ್ದವು. ಅವು ಎಷ್ಟು ವೇಗದಲ್ಲಿ ಈ ಕೆಲಸವನ್ನು ಮಾಡುತ್ತಿದ್ದವು ಎಂದರೆ, ಮರಳ ಉಂಡೆ ಮಾಡುವ ಸ್ಪರ್ಧೆ ಏನಾದರೂ ಏರ್ಪಟ್ಟಿದೆಯೋ ಏನೋ ಎಂಬಂತೆ ಇತ್ತು. ಇಡೀ ತೀರವು ಲಕ್ಷಾಂತರ ಹೆಸರುಕಾಳು ಗಾತ್ರದ ಮರಳು ಉಂಡೆಗಳಿಂದ ತುಂಬಿಹೋಗಿತ್ತು. ತಿರುಪತಿ ದೇವಸ್ಥಾನದವರು ಇವನ್ನು ಕಂಡರೆ ಲಾಡು ಮಾಡಲು ಎಳೆದುಕೊಂಡು ಹೋಗುವುದು ಖಂಡಿತ ಎಂದು ಜಯ್ ಹೇಳಿದರು. ಈ ಉಂಡೆಗಳನ್ನು ಮಾಡುವ ಉದ್ದೇಶ ಮಾತ್ರ ನಿಗೂಢವಾಗಿ ಉಳಿಯಿತು. ಆದರೆ ಅವು ಅಷ್ಟು ಶ್ರದ್ಧೆಯಿಂದ ಮಾಡಿಡುತ್ತಿದ್ದ ಮರಳಲಾಡುಗಳನ್ನು, ಯಾವಾಗಲೋ ಒಮ್ಮೆ ನುಗ್ಗಿಬರುತ್ತಿದ್ದ ಹೆದ್ದೆರೆಯೊಂದು ನಿಷ್ಕರುಣೆಯಿಂದ ಸವರಿ ಹಾಕುತ್ತಿತ್ತು. ಛಲ ಬಿಡದ ತ್ರಿವಿಕ್ರಮನಂತೆ ಅವು ಅಲೆ ಹೋದ ಮೇಲೆ ಮತ್ತೆ ಉಂಡೆಕಟ್ಟಲು ತೊಡಗುತ್ತಿದ್ದವು. ಸಿಸಿಫಸನಿಗೆ ಬೆಟ್ಟದ ತುದಿಗೆ ಬಂಡೆ ನೂಕಿಕೊಂಡು ಹೋಗಿ ಇಡುವ ಕೆಲಸವನ್ನು ಜ್ಯೂಸ್ ದೇವತೆ ವಿಧಿಸಿದ್ದ ಒಂದು ಕತೆ ಗ್ರೀಕ್ ಪುರಾಣದಲ್ಲಿ ಬರುತ್ತದೆ. ಬಂಡೆಯನ್ನು ಬೆಟ್ಟದ ತುದಿಗೆ ಒಯ್ದು ನಿಲ್ಲಿಸಿದ ಕೂಡಲೇ ಅದು ಜಾರಿ ಕೆಳಗೆ ಬರುತ್ತಿತ್ತು. ಮತ್ತೆ ಮತ್ತೆ ಸಿಸಿಫಸ್ ಉರುಳಿಸಿಕೊಂಡು ಹೋಗುತ್ತಿದ್ದ. ಜೀವನದಲ್ಲಿ ನಮ್ಮ ಯಾವ ಚಟುವಟಿಕೆಗಳಿಗೂ ಅರ್ಥವಿಲ್ಲ ಎಂದು ಮನವರಿಕೆ ಮಾಡುವುದು ಜ್ಯೂಸನ ಉದ್ದೇಶವಾಗಿತ್ತು. (ಈ ಶಿಕ್ಷೆ ವಿಧಿಸಲು ಕಾರಣ, ಮೃತ್ಯುದೇವತೆಯನ್ನು ವಂಚಿಸಿ ಭೂಮಿಯ ಮೇಲೆ ಹೆಚ್ಚುಕಾಲ ಬದುಕಲು ಸಿಸಿಫಸ್ ಪ್ರಯತ್ನ ಮಾಡಿದ್ದನು). ಸಿಸಿಫಸನ ಮಕ್ಕಳಂತಿದ್ದ ಈ ಏಡಿಗಳಿಗೆ ಉಂಡೆಮಾಡುವಲ್ಲಿ ಬೇಸರವಾಗಲಿ ದಣಿವಾಗಲಿ ಇದ್ದಂತಿರಲಿಲ್ಲ.

ಅಂಡಮಾನಿನ ಕಡಲದಂಡೆಗಳಲ್ಲಿ ಲೆಕ್ಕವಿಲ್ಲದಷ್ಟು ಜಾತಿಯ ಏಡಿಗಳಿವೆ. ಅವು ಅಲೆಗಳ ಜತೆ ಆಟವಾಡುತ್ತ, ಕುಡುಕರಂತೆ ತಮ್ಮ ಇಕ್ಕಳಗಾಲುಗಳಲ್ಲಿ ವಕ್ರವಕ್ರವಾಗಿ ನಡೆದಾಡುತ್ತ, ಬಂಡೆಗಳ ಮೇಲೆ ಮುದುಕರು ಬಿಸಿಲು ಕಾಯಿಸುತ್ತ ಕುಳಿತಂತೆ ಇರುತ್ತಿದ್ದವು. ಅಂಡಮಾನಿನ ಮೀನು ಮಾರುಕಟ್ಟೆಗಳಲ್ಲಿ ಬಣ್ಣ ಬಣ್ಣದ ಏಡಿಗಳನ್ನು, ಹಿಂದೆ ಅರಬ್ - ಯುರೋಪು ಮಾರುಕಟ್ಟೆಗಳಲ್ಲಿ ಆಫ್ರಿಕಾದ ನೀಗ್ರೋಗಳನ್ನು ಕೈಕಾಲು ಕಟ್ಟಿ ಮಾರಾಟ ಮಾಡುತ್ತಿದ್ದಂತೆ, ಮಾರುತ್ತಿದ್ದರು. ಇಷ್ಟಾದರೂ ತಿನ್ನುವ ಏಡಿಗಳು, ತಿನ್ನಬಾರದ ಏಡಿಗಳು ಯಾವುವು ಗೊತ್ತಾಗುತ್ತಿರಲಿಲ್ಲ. ನಮ್ಮ ಗುಂಪಿನಲ್ಲಿ ಜಯ್ ಒಬ್ಬ ಭಯಂಕರ ಏಡಿ ಅಭಿಮಾನಿ. ಅವರು ಅಂಡಮಾನ್ ಬಿಡುವವರೆಗೆ ಎಲ್ಲಿಯಾದರೂ ಏಡಿಸಾರನ್ನು ತಿಂದೇ ಹಡಗು ಹತ್ತಬೇಕು ಎಂಬ ಬಸುರಿಬಯಕೆ ಇಟ್ಟುಕೊಂಡಿದ್ದರು. ಯಾವ ಹೋಟೆಲಿಗೆ ನುಗ್ಗಿದರೂ 'ಏಡಿ ಊಟ ಸಿಗುತ್ತಾ' ಎಂದು ಕೇಳುವುದು ಅಭ್ಯಾಸವಾಗಿತ್ತು. ಒಮ್ಮೆ ರಂಗತ್ ಎಂಬ ಪುಟ್ಟ ಪಟ್ಟಣಕ್ಕೆ ಹೋದಾಗ ಹೋಟೆಲೊಂದಕ್ಕೆ ಊಟಕ್ಕೆ ನುಗ್ಗಿದೆವು. 'ಇಲ್ಲಿ ಏಡಿ ಸಾರು ಸಿಗುತ್ತಾ ಕೇಳಬೇಕಾಗಿತ್ತಪ್ಪಾ' ಎಂದು ಜಯ್ ಗೊಣಗಿದರು. ಕೂಡಲೇ, ಅಚ್ಚಗನ್ನಡದಲ್ಲಿ 'ಸಿಗುತ್ತೆ ಸ್ವಾಮಿ ಬನ್ನಿ ಬನ್ನಿ' ಎಂಬ ಜವಾಬು ಬಂತು. ಚಕಿತರಾಗಿ ''ಅರೆ! ಇಲ್ಯಾರಪ್ಪಾ ಕನ್ನಡದವರು!'' ಎಂದು ನೋಡಿದರೆ ಅಡಿಗೆ ಬಡಿಸುತ್ತಿದ್ದ ಹೋಟೆಲ್ ಮಾಲೀಕ! 'ಯಾರು, ಯಾವಾಗ ಬಂದಿರಿ?' ವಿಚಾರಣೆ ಶುರು ಮಾಡಿದೆವು. ನಮ್ಮಂತಹ ಎಷ್ಟೋ ಜನರಿಗೆ ಉತ್ತರಕೊಟ್ಟು ಸಾಕಾಗಿದ್ದಂತಿದ್ದ ಆತ ''ಮೊದಲು ಊಟ ಮಾಡಿ, ಆಮೇಲೆ ಹೇಳುತ್ತೇನೆ'' ಎಂದು ಒಂದು ತಟ್ಟೆಯಲ್ಲಿ ತುಂಬ ಸಾರಿನಲ್ಲಿ ದೊಡ್ಡ ಏಡಿಯನ್ನು ಇಟ್ಟುಕೊಂಡು ತಂದ. ಆ ಏಡಿಯು ಕಡಲ ನಡುವೆ ಕೆಟ್ಟುನಿಂತ ಹಡಗಿನಂತೆ ಸಾರಲ್ಲಿ ಕುಳಿತಿತ್ತು. ನಾವೆಲ್ಲ ಮೀನು ತಿನ್ನುವವರೇ ಆದರೂ, ಯಾಕೋ ಏನೋ ಆ ಏಡಿಯ ವಾಸನೆ ಮಾತ್ರ ಕಟುವಾಗಿತ್ತು. ಜಯ್ ಮಡದಿಯಾದ ಅರುಣ 'ಇಂತಹ ಕ್ರಿಮಿಕೀಟಾದಿಗಳ ಭಕ್ಷಕ ನನ್ನು ಕಟ್ಟಿಕೊಂಡೆನಲ್ಲಾ? (ಅವರದು ಮನೆಯವರನ್ನೆಲ್ಲಾ ಎದುರು ಹಾಕಿಕೊಂಡು ಆದ ಪ್ರೇಮವಿವಾಹ) ಎಂಬ ದುಮ್ಮಾನದಿಂದ ಊಟಬಿಟ್ಟು ಹೊರಹೋದರು. ಆದರೆ ಜಯ್ ಮಾತ್ರ ಇದ್ಯಾವ ಪರಿವೆ ಇಲ್ಲದೆ, ಸುರ್ ಸುರ್ ಸೊರ ಸೊರ ಸದ್ದು ಮಾಡುತ್ತ, ಚಪ್ಪರಿಸಿಕೊಂಡು ತಿಂದು ತಮ್ಮ ಬಯಕೆ ಈಡೇರಿಸಿಕೊಂಡರು.

ಶಂಖಜೀವಿ

ಅಂಡಮಾನಿನಲ್ಲಿ ಶಂಖಗಳನ್ನು ಜಾತ್ರೆಯಲ್ಲಿ ತೆಂಗಿನಕಾಯಿ ಮಾರುವಂತೆ ಮಾರಿಕೊಂಡು ಕೂತಿರುತ್ತಾರೆ. ಹಿಮಬಿಳುಪಿನ ಈ ಏಳುಸುತ್ತಿನ ಕೋಟೆಯನ್ನು ಕಟ್ಟಿಕೊಂಡು ವಾಸಿಸುವ ಜೀವಿ ಹೇಗಿರಬಹುದು ಎಂಬ ಕುತೂಹಲ ನನಗಿತ್ತು. ಚಿಡಿಯಾಟಾಪಿನ ಕಡಲ ತೀರದಲ್ಲಿ ಅಡ್ಡಾಡುವಾಗ ಇವುಗಳ ಭೇಟಿಯಾಯಿತು. ಟಿಬೆಟ್ಟಿನ ಸ್ವೆಟರ್ ಮಾರಾಟಗಾರರು ಬೆನ್ನಮೇಲೆ ಮೂಟೆಯನ್ನು ಹೊರಲಾರದೆ ಹೊತ್ತು ನಡೆದಂತೆ ಅಥವಾ ಮೂಟೆಗೇ ಕೈಕಾಲು ಬಂದವು ಎಂಬಂತೆ ಶಂಖಜೀವಿಗಳು ನಡೆದಾಡುತ್ತಿದ್ದವು. ಕೆಲವು ನೆಲದಲ್ಲಿ ಬಿಲ ಕೊರೆಯುತ್ತಿದ್ದವು. ಅವುಗಳ ದೇಹದರ್ಶನ ಮಾಡುವುದು ಕಷ್ಟವಾಗಿತ್ತು. ಶಂಖವನ್ನು ಹೊರಳಿಸಿ ನೋಡಿದರೆ ನಾಚಿ ಮೈಯನ್ನೆಲ್ಲ ಒಳಗೆ ಎಳೆದುಕೊಂಡವು. ಹೊರಗೆ ಕಂಡಿದ್ದ ಏಡಿಯನ್ನು ಹೋಲುವ ಕಡ್ಡಿ ಕೈಕಾಲು, ಇಷ್ಟೊಂದು ಗಟ್ಟಿಯಾದ ಭಾರವಾದ ಸುಂದರವಾದ ಕವಚವನ್ನು ಇವು ಹೇಗಾದರೂ ಮತ್ತು ಯಾಕಾದರೂ ರಚಿಸಿಕೊಳ್ಳುತ್ತವೆ? ಒಳಗಿನ ಜೀವಿ ಸತ್ತು ಖಾಲಿಯಾಗಿರುವ ಶಂಖಗಳನ್ನು ನಾವು ಆಯ್ದುಕೊಂಡೆವು. ಆದರೆ ಅವು ಹೊಳಪಿನ ಶಂಖುಗಳಾಗಿರಲಿಲ್ಲ. ನಮ್ಮ ದಾಸಯ್ಯಗಳು ಬಳಸುವ ಶಂಖಗಳಿಗೆ ದಂತದ ಹೊಳಪಿರುತ್ತದೆ. ಶಂಖದ ಜೀವಿಗಳನ್ನು ಸಾಯಿಸಿ ಇವನ್ನು ಸಂಗ್ರಹಿಸಲಾಗುತ್ತದೆಯಂತೆ. ಯಾವ ಕವಚವನ್ನು ಸಮುದ್ರದಲ್ಲಿ ತಮ್ಮ ರಕ್ಷಣೆಗೆ ಅವು ಮಾಡಿಕೊಂಡವೋ, ಅದೇ ಅವುಗಳ ಸಾವಿಗೆ ಕಾರಣವಾಗಿರುವುದು ಒಂದು ವ್ಯಂಗ್ಯ.

ಶಂಖಗಳು ನಮ್ಮ ಧಾರ್ಮಿಕ ಆಚರಣೆಗಳಲ್ಲಿ ಸೇರಿಹೋಗಿರುವುದಂತೂ ಇನ್ನೂ ವಿಸ್ಮಯ. ಕಡಲ ತೀರದಲ್ಲಿರುವ ಬಂಗಾಳಿಯಂತಹ ಜನ, ತಮ್ಮ ಆಚರಣೆಗಳಲ್ಲಿ ಶಂಖ ಬಳಸುವುದು ಅಸಹಜವಲ್ಲ. ಕಡಲತಡಿಯ ದ್ವಾರಕೆಯಲ್ಲಿದ್ದ ಕೃಷ್ಣನು ಪಾಂಚಜನ್ಯ ಊದಿದನೆಂದರೆ ಅರ್ಥಮಾಡಿಕೊಳ್ಳಬಹುದು. ಆದರೆ ನಮ್ಮ ಹಾಸನ ಮಂಡ್ಯಗಳಂತಹ ಬಯಲು ಸೀಮೆಯ ತಿಮ್ಮಪ್ಪನ ಒಕ್ಕಲುಗಳು ಇದನ್ನು ಬಳಸುವುದು ಅರ್ಥವಾಗುವುದಿಲ್ಲ. ದಾಸಪ್ಪ ಸಂಪ್ರದಾಯದಲ್ಲಿ ಶಂಖ, ಎಲ್ಲಮ್ಮನ ಸಂಪ್ರದಾಯದಲ್ಲಿ ಕವಡೆ, ಜೋಗಪ್ಪ ಸಂಪ್ರದಾಯದಲ್ಲಿ ಕೃಷ್ಣಮೃಗದ ಕೊಂಬು (ಸಿಂಗನಾದ)- ಎತ್ತಣ ಸಂಬಂಧ? ಕವಡೆ ಸಿಂಗನಾದಗಳಿಗೆ ಹೋಲಿಸಿದರೆ, ಶಂಖ ಊದುವುದಕ್ಕೆ ಗೌರವಾನ್ವಿತ ಅರ್ಥವೂ ಇಲ್ಲ. ಅಧ್ಯಾಪಕರಿಗೆ ವರ್ಗವಾದಾಗ ಒಳಗೆ ದುಃಖವಾಗಿದ್ದರೂ, ''ಅಯ್ಯೋ! ಬಿಡ್ರಿ, ಊದೋ ಶಂಖ ಅಲ್ಲಾದರೇನು ಇಲ್ಲಾದರೇನು' ಎಂದು ಫಿಲಾಸಫಿ ಮಾತಾಡುವರು. ಶಂಖದ ಜೀವಿಗೆ ತನ್ನ ಕರ್ಣಕವಚದಿಂದ ಮನುಷ್ಯರು ನಾದ ಹೊರಡಿಸುತ್ತಾರೆ ಎಂಬುದು ತಿಳಿದಿದೆಯೋ ಇಲ್ಲವೋ. ಆದರೆ ಆ ನಾದಕ್ಕೆ ಹೀನಾರ್ಥಗಳು ಬಂದಿರುವುದು ಮಾತ್ರ ತಿಳಿದಿಲ್ಲ. ಶಂಖವು ಅನೇಕ ಸಂಗತಿಗಳಿಗೆ ಸಂಕೇತವಂತೆ. ನನಗೆ ಗೊತ್ತಿರುವ ಒಬ್ಬ ಅಧ್ಯಾಪಕರಿಗೆ - ಅವರು ಯುವಕರಾಗಿದ್ದಾಗ - ಒಬ್ಬ ಹುಡುಗಿ ಶಂಖವನ್ನು ನೆನಪಿಗೆ ಇರಿಸಿಕೊಳ್ಳಲು ಕೊಟ್ಟಿದ್ದಳು. ಅವರು ಅದನ್ನು ತಮ್ಮ ಯೌವನ ತೀರುವವರೆಗೂ ಜತನದಿಂದ ಇಟ್ಟುಕೊಂಡಿದ್ದರು. ತಿರುಪೆ ದಾಸಯ್ಯನಿಂದ ಹಿಡಿದು ಪ್ರೇಮಯಾಚನೆ ಮಾಡುವ ಹುಡುಗಿಯವರೆಗೆ ಮಾನವ ಲೋಕದ ಏನೆಲ್ಲ ಭಾವನೆಗಳಿಗೆ

ಶಂಖ ಸಂಕೇತವಾಗಿದೆ. ಆದರೆ ಇಂತಹ ಅಮೃತ ಶಿಲೆಯ ತಾಜಮಹಲನ್ನು ಕಟ್ಟಬಲ್ಲ ಶಂಖದ ಒಡೆಯನು ಮಾತ್ರ, ಇಲಿಯಂತೆ ಬಿಲ ತೋಡುತ್ತಿರುವುದು ಕಂಡು ಕನಿಕರವಾಯಿತು.

ಹಾರುವ ಮೀನುಗಳು


ನಾವು ಮದರಾಸಿನಿಂದ ಹಡಗಲ್ಲಿ ಬರುವಾಗ ಮೊದಲ ದಿನ ಸಮುದ್ರ ತನಗೆ ತಾನೆ ಸುಂದರವಾಗಿತ್ತು. ಒಮ್ಮೆ ಕಂಡ ಹಾಗೆ ಮತ್ತೊಮ್ಮೆ ಇಲ್ಲ. ಎಷ್ಟು ಕಂಡರೂ ಮನಸ್ಸಿಗೆ ದಣಿವು ಎಂಬುದು ಇರಲಿಲ್ಲ. ಆದರೆ ಎರಡನೇ ದಿನ ಕಡಲು ಬರೀ ನೀರಾಗಿ ಕಾಣುತ್ತಿತ್ತು. ಮೇಲೆಯೋ ಹಕ್ಕಿಗಳ ಹಾರಾಟವಿಲ್ಲದ ಖಾಲಿ ಆಗಸ. ಈ ಏಕತಾನದ ಲಯವನ್ನು ಮುರಿಯುವ ಮತ್ತೊಂದು ಚಲನೆ ಬೇಕೆನಿಸುತ್ತಿತ್ತು. ಕಡಲೊಳಗಿಂದ ಧುತ್ತನೆ ಯಾವುದಾದರೂ ದೊಡ್ಡ ಮೀನು ತಲೆ ಎತ್ತಿ ದರ್ಶನ ಕೊಡಬಾರದೇ, ಕೊನೆ ಪಕ್ಷ ಯಾವುದಾದರೂ ಬಿರುಗಾಳಿಯಾದರೂ ಬೀಸಲಿ ಅನ್ನಿಸುತ್ತಿತ್ತು. ಆಗ ನೀರಿನ ಜಡತೆಯನ್ನು ಮುರಿಯುತ್ತಿದ್ದ ಏಕೈಕ ಜೀವಿಗಳೆಂದರೆ ಹಾರುವ ಮೀನುಗಳು. ಹಡಗು ನೀರನ್ನು ಸೀಳಿ ನುಗ್ಗಿದೊಡನೆ ಗೇಣುದ್ದದ ನೂರಾರು ಮೀನುಗಳು, ಬೆದರಿದಂತೆ ಚಿಲ್ಲನೆ ನೀರಿನಿಂದ ಮೇಲಕ್ಕೆ ಜಿಗಿದು, ನೂರು ಅಡಿಗಳಷ್ಟು ದೂರ ಚಿಮ್ಮಿ ಹಾರಿ, ಹೊಯ್ದಾಡುವ ಅಲೆಗಳಲ್ಲಿ ಬಿದ್ದು ಲೀನವಾಗುತ್ತಿದ್ದವು. ಅವಕ್ಕೆ ಹಕ್ಕಿಯಂತೆ ರೆಕ್ಕೆಗಳಿರಲಿಲ್ಲ. ಆದರೆ ತಮ್ಮ ಕಿವುರುಗಳನ್ನೆ ರೆಕ್ಕೆಯಂತೆ ಬಳಸಿ ಹಾರಿ ಪಾರಾಗುತ್ತಿದ್ದವು. ಭೂಮಿಗೆ ಸಮೀಪದ ಕಡಲಲ್ಲಿ ಇರದೇ ಸಾವಿರಾರು ಅಡಿ ಆಳದ ನಡುಗಡಲಿನಲ್ಲಿ ಮಾತ್ರ ಕಂಡ ಈ ಪುಟ್ಟ ಹಾರು ಮೀನುಗಳು ಸೋಜಿಗವುಂಟುಮಾಡಿದವು. ಇದಕ್ಕೆ ವಿರುದ್ಧವಾಗಿ ಭೂಮಿ ಸಮೀಪದ ಕಡಲಲ್ಲಿ ಬೃಹದಾಕಾರದ ಡಾಲ್ಫಿನ್ನುಗಳು ಇದ್ದವು. ಅಂಡಮಾನಿನಲ್ಲಿ ಇರುವಷ್ಟು ದಿನವೂ ಅವು ನಮಗೆ ಭೇಟಿಕೊಡಲಿಲ್ಲ. ನಮ್ಮ ಹಡಗು ಬಂಗಾಳ ಕೊಲ್ಲಿಯ ವಿಶಾಲ ಕಡಲಿಗೆ ಪ್ರವೇಶಿಸುವ ಮುನ್ನ, ಅನೇಕ ದ್ವೀಪಗಳನ್ನು ಬಳಸಿಕೊಂಡು, ಕೆಲವೊಮ್ಮೆ ದ್ವೀಪಗಳ ನಡುವಿನ ಗಲ್ಲಿಯಲ್ಲಿ ನುಸುಳಿಕೊಂಡು ಬರುತ್ತದೆ. ಅದು ಮೊದಲು ರಾಸ್ ದ್ವೀಪವನ್ನು ಬಳಸುತ್ತದೆ. ನಮ್ಮ ಹಡಗು ಎಬ್ಬಿಸುವ ಅಲೆಗಳ ಹೊಡೆತದಿಂದ ತಮ್ಮ ದೋಣಿಗಳನ್ನು ಉಳಿಸಿಕೊಳ್ಳಲು ಮೀನುಗಾರರು ದೂರ ಸರಿದಿದ್ದರೂ ಅವರ ನಾವೆಗಳು ಕಾಣುತ್ತಿದ್ದವು. ಪೋರ್ಟ್ ಬ್ಲೇರ್ ಊರಿನ ಮನೆ ಬಂದರು ಹಡಗುಗಳು ದೂರವಾಗುತ್ತ, ಹ್ಯಾರಿಯಟ್ ಪರ್ವತ ಮಸುಕಾಗುತ್ತ ಇದ್ದವು. ಇನ್ನೂ ತಂತಮ್ಮ ಕೋಣೆಗಳಿಗೆ ಹೋಗದೆ ಹೆಚ್ಚಿನ ಪ್ರಯಾಣಿಕರು ಡೆಕ್ಕಿನ ಮೇಲೆಯೆ ಇದ್ದರು. ಅವನ್ನು ಕೊನೆಯ ಬಾರಿ ಕಣ್ಣೊಳಗೆ ತುಂಬಿಕೊಳ್ಳುತ್ತ ಇರುವಾಗ ಇದ್ದಕ್ಕಿದ್ದಂತೆ ಯಾರೋ 'ಡಾಲ್ಫಿನ್ ಡಾಲ್ಫಿನ್' ಎಂದು ಕೂಗಿದಂತಾಯಿತು. ನೋಡಿದರೆ ನೀಲಕಡಲೊಳಗಿಂದ ಐದಾರು ಕಪ್ಪು ಮೂತಿಗಳು ಚಕ್ಕನೆ ಕಾಣಿಸಿಕೊಂಡವು. ಕವಾಯತು ಮಾಡುವವರಂತೆ ನೀರಿನಿಂದ ತಲೆಯೆತ್ತಿ ಮುಳುಗಿ, ಹಡಗಿನ ಸಮಾನಾಂತರವಾಗಿ ಅವು ಕೊಂಚದೂರ ಬಂದವು. ಯಾವ ರೋಮಾಂಚನವೂ ಇಲ್ಲದಂತೆ ಹಡಗು ತನ್ನ ಪಾಡಿಗೆ ತಾನು, ಸಾಗಬೇಕಾದ ದೂರದಾರಿಯನ್ನು ನೆನೆದು, ನಡೆಯತೊಡಗಿದ್ದನ್ನು ಕಂಡೋ ಏನೋ, ಅವು ಹಡಗಿನಿಂದ ದೂರವಾಗುತ್ತ ನೀರಲ್ಲಿ ಮರೆಯಾದವು. ಡಾಲ್ಫಿನ್ನುಗಳು ಮಿಂಚಿನಂತೆ ತೋರಿ ಮಾಯವಾದರೂ, ಅದು ಅಂಡಮಾನನ್ನು ಬಿಟ್ಟು ಬರುತ್ತಿರುವ ನಮಗೆ ಹೇಳಿದ ವಿದಾಯ ಎಂದು ಭಾವಿಸಿ ಖುಶಿಯಾಯಿತು.

ತಿನ್ನು ಪ್ರಜ್ಞೆಯ ಅವಾಂತರ

ಅಂಡಮಾನಿನಲ್ಲಿ ದ್ವೀಪಗಳ ನಡುವೆ ಸಂಚರಿಸುವ ಚಿಕ್ಕಪುಟ್ಟ ಹಡಗುಗಳಿಗೆ ಅಲ್ಲಿನ ಬುಡಕಟ್ಟುಗಳ ದ್ವೀಪಗಳ ಹಾಗೂ ಮೀನುಗಳ ಹೆಸರನ್ನು ಇಟ್ಟು ಪರಿಸರ ಪ್ರಜ್ಞೆಯನ್ನು ತೋರಿದ್ದಾರೆ. ನಮ್ಮ ಹಡಗಿನ ಹೆಸರು -ನಾನ್‌ಕೌರಿ - ಒಂದು ದ್ವೀಪದ ಹೆಸರು. ಅನೇಕ ಸಣ್ಣ ಹಡಗುಗಳಿಗೆ ಜರವಾ ಎಂಬ ಹೆಸರಿತ್ತು. ಗೋಬ್ರಾ ಎಂದು ಹೆಸರಿತ್ತು. ಗೋಬ್ರಾ ಎಂಬುದು ಅಂಡಮಾನ್ ಕಡಲಲ್ಲಿ ಯಥೇಚ್ಛವಾಗಿ ಸಿಗುವ ಒಂದು ಜಾತಿಯ ಮೀನಿನ ಹೆಸರು. ಗೋಬ್ರಾ ಮೀನನ್ನು ನಾವು ಪಾನಿಘಾಟಿನಲ್ಲಿ ನೋಡಿದೆವು. ಇಡೀ ದೇಹವನ್ನು ಕೇಸರಿ ಬಣ್ಣದಲ್ಲಿ ಮುಳುಗಿಸಿ ತೆಗೆದಂತೆ ಕಣ್ಣಿಗೆ ಹೊಡೆಯುವ ಬಣ್ಣಗಳನ್ನು ಹೊಂದಿರುವ ಅವು ಬುಟ್ಟಿಯಲ್ಲಿ ಮಲಗಿದ್ದವು. ಹಿರಿದ ಕತ್ತಿಯಂತಿದ್ದ ಸುರ್ಮಾಯಿ, ಅಲ್ಲಿನ ರುಚಿಕರವಾದ ಮೀನು. ನಾವು ಒಳ್ಳೊಳ್ಳೆ ಮೀನುಗಳನ್ನು ತಿಂದಿದ್ದು ಮಾಯಾಬಂದರಿನಲ್ಲಿ. ಅಲ್ಲಿನ ಗೆಸ್ಟ್‌ಹೌಸಿನಲ್ಲಿ ಅಡಿಗೆ ಮಾಡುತ್ತಿದ್ದ ತಮಿಳು ದಂಪತಿಗಳು ತಮ್ಮ ಅದ್ಭುತ ಅಡಿಗೆಯಿಂದ ಅದರ ಕೀರ್ತಿ ದಶದಿಕ್ಕಿಗೆ ಹರಡಲು ಕಾರಣರಾಗಿದ್ದರು. ಎಷ್ಟೆಂದರೆ, ಮಾಯಾಬಂದರಿನ ಕಚೇರಿಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳು, ಅಲ್ಲಿ ಕೋಣೆ ಹಿಡಿದು ಖಾಯಮ್ಮಾಗಿ ತಳವೂರಿದ್ದರು. ತಮ್ಮ ಊರುಗಳಿಂದ ಬಹು ದೂರ ಬಂದಿರುವ ಅವರೆಲ್ಲ ಇಲ್ಲಿ ಊಟದಿಂದಲೇ ಜೀವ ಹಿಡಿದಿದ್ದಾರೆ ಅನಿಸಿತು. ನಮಗೆ ಈ ನಳದಂಪತಿಗಳು ಆತ್ಮೀಯವಾಗಿ ಬಿಟ್ಟರು. ಅದರಲ್ಲೂ ಕರ್ನಾಟಕದವರು ವಿಶ್ವವಿದ್ಯಾಲಯಗಳಲ್ಲಿ ಮೇಷ್ಟರು ಎಂಬ ಕಾರಣಕ್ಕೆ ನಮಗೆ ವಿಶೇಷವಾಗಿ ಮೀನು ತುಂಡುಗಳು ಬಿದ್ದವು. ಕಾರಣ, ಆ ವರುಷ ತಾನೇ ಬಿ.ಕಾಂ., ಮುಗಿಸಿದ್ದ ಅವರ ಒಬ್ಬ ಮಗಳಿಗೆ ಬೆಂಗಳೂರು

(62ನೇ ಪುಟ ನೋಡಿ)

ಉತ್ತರವನ್ನು ಚಿತ್ರದಲ್ಲಿ ಸೂಚಿಸಲಾಗಿದೆ. ಹಿಂದೆ ಹೇಳಿದಂತೆ ಕೆಂಪು ರತ್ನದ ಹರಳನ್ನು ಕೂರಿಸಿರುವ ಸ್ಥಾನವನ್ನು ಅಂಕೆ '೧'ರಿಂದಲೂ, ಬಿಳಿ ಹರಳನ್ನು ಕೂರಿಸಿರುವ ಸ್ಥಾನವನ್ನು ಅಂಕೆ '೦' ಇಂದಲೂ ಸೂಚಿಸಲಾಗಿದೆ.



ಈ ರೀತಿ ರಚಿಸಲಾಗಿರುವ ಬಳೆಯು ಪ್ರಶ್ನೆಗೆ ಸರಿಯಾದ ಉತ್ತರ ಎಂದು ಸ್ಪಷ್ಟಪಡಿಸಲು ಉದಾಹರಣೆಯಾಗಿ ಗಮನಿಸಿ: ಚಿತ್ರದಲ್ಲಿರುವ ಬಾಣದ ಗುರುತಿನಿಂದ ನಿರ್ದೇಶಿಸಲ್ಪಟ್ಟಿರುವ ಬಿಳಿ ಹರಳಿನಿಂದ ಆರಂಭಿಸಿ ಪ್ರದಕ್ಷಿಣೆ ಮಾಡುತ್ತಾ ಸಿಗುವ ಎಲ್ಲ ಅಕ್ಕಪಕ್ಕದ ಮೂರು ಹರಳುಗಳನ್ನು ವೀಕ್ಷಿಸಿದಾಗ ಮೂರು ಹರಳುಗಳು ಎಂಟು ವಿಭಿನ್ನ ಪದಕಗಳನ್ನು ಅನುಕ್ರಮವಾಗಿ ಕೆಳಕಂಡಂತೆ ಪಡೆಯಬಹುದು :

(೦೦೧), (೧೧೧), (೧೧೦), (೧೦೧),
(೦೧೦), (೧೦೦), (೦೦೦), (೦೦೧).

ಈ ವಿನ್ಯಾಸದಲ್ಲಿ ಬಳೆಯು ಎಲ್ಲ ಎಂಟು ಪದಕಗಳನ್ನು ಒಳಗೊಂಡಿರುವುದಲ್ಲದೆ ಯಾವ ಪದಕವೂ ಪುನರಾವರ್ತನೆಯಾಗಿಲ್ಲ. ಎಂಟು ಹರಳಿಗಿಂತ ಕಡಿಮೆ ಹರಳುಗಳಿರುವ ಯಾವ ಬಳೆಯೂ ಎಲ್ಲ ಎಂಟು ಪದಕಗಳನ್ನು ಹೊಂದಿರಲು ಸಾಧ್ಯವಿಲ್ಲ. ಅಲ್ಲದೆ ಎಂಟಕ್ಕಿಂತ ಹೆಚ್ಚಿನ ಹರಳುಗಳಿರುವ ಪ್ರತಿ ಬಳೆಯಲ್ಲೂ ಯಾವುದಾದರೊಂದು ಪದಕ ಒಮ್ಮೆಯಾದರೂ ಪುನರಾವರ್ತನೆಗೊಳ್ಳಲೇಬೇಕು. ಹೀಗಾಗಿ ಚಿತ್ರದಲ್ಲಿರುವ ಬಳೆಯ ವಿನ್ಯಾಸ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ! ಚಿತ್ರದಲ್ಲಿರುವ ಎಲ್ಲ ಬಿಳಿ ಹರಳುಗಳನ್ನು ಕೆಂಪು ಹರಳುಗಳಿಂದಲೂ ಎಲ್ಲ ಕೆಂಪು ಹರಳುಗಳನ್ನು ಬಿಳಿ ಹರಳುಗಳಿಂದಲೂ ಅದಲು ಬದಲು ಮಾಡಿದರೆ ಸಿಗುವ ಬಳೆಯೂ ಜೂನ್ ತಿಂಗಳ ಪ್ರಶ್ನೆಗೆ ಸರಿಯಾದ ಉತ್ತರವಾಗಿದೆ. ಹೀಗೆ ರಚಿಸಿದ ಎರಡನೆಯ ಬಳೆಯ ವಿನ್ಯಾಸ ಮೊದಲನೆಯ ಬಳೆಗಿಂತ ವಿಭಿನ್ನ! ಈ ಎರಡು ಬಳೆಗಳಲ್ಲಿ ಒಂದನ್ನು 'ಎಡಮುರಿ' ಎನ್ನಬಹುದಾದರೆ ಇನ್ನೊಂದು ಅದರ 'ಬಲಮುರಿ'. ಅಷ್ಟೇ ಅಲ್ಲದೆ ಯಾವ ಪದಕವೂ ಪುನರಾವರ್ತನೆಗೊಳ್ಳದಂತೆ ಎಲ್ಲ ಎಂಟು ಪದಕಗಳನ್ನು ಒಳಗೊಂಡಿರುವ ವಿಭಿನ್ನ ವಿನ್ಯಾಸಗಳು ಇವೆರಡಲ್ಲದೆ ಬೇರೆ ಯಾವುವೂ ಇಲ್ಲ!

ಹೀಗಾಗಿ ಸರಳವಾದರೂ 'ಅದ್ವಿತೀಯ' ಎನ್ನಬಹುದಾದ 'ಬಂಧ'ವನ್ನು ಹೊಂದಿರುವ ಈ ಎರಡು ಬಳೆಗಳ ವಿನ್ಯಾಸ ನಮ್ಮ ಸೌಂದರ್ಯ ಪ್ರಜ್ಞೆಗೆ ಆಪ್ಯಾಯಮಾನವಾಗಿರಬಲ್ಲುದು. ಆದರೆ, ಈ ಅದ್ವಿತೀಯ 'ಬಂಧ' ಅಥವಾ 'ವಾಸ್ತು'ವಿನಲ್ಲಿ ಅಲೌಕಿಕ ಶಕ್ತಿ ಇದೆ ಎಂದು ನಂಬಿ ಪೀಡಾ ಪರಿಹಾರಾರ್ಥವಾಗಿ ಅಂತಹ ಆಭರಣಗಳನ್ನು ಧರಿಸುವ ಅಂಧವಿಶ್ವಾಸಿಗಳೂ ಇರಬಹುದು. ಭಕ್ತರು ಮಾಡಿದ ಸೇವೆಯಿಂದ ಪ್ರಸನ್ನರಾಗಿ, ಬಳೆ, ಉಂಗುರ ಅಥವಾ ಮಾಲೆಯನ್ನು 'ಬಾಬಾ' ಅನುಗ್ರಹಮಾಡಿ, 'ಧರಿಸಿಕೋ ಎಲ್ಲ ಪೀಡೆ ಪರಿಹಾರವಾಗಬಹುದು' ಎಂದು ಆಜ್ಞಾಪಿಸಿದರೆ, ಒಮ್ಮೆ ಅಂತಹ ಆಭರಣಗಳ ವಿನ್ಯಾಸದ ಕಡೆಗೆ ಗಮನ ಕೊಟ್ಟರೆ 'ವಿನೋದ' ಗಣಿತದ ಒಂದು ಒಳ್ಳೆಯ ಉದಾಹರಣೆ ದೊರಕುವ ಸಾಧ್ಯತೆಗಳು ಇವೆ !

ಅದು ಹೇಗಾದರೂ ಇರಲಿ, ಸೋಜಿಗದ ಸಂಗತಿ ಎಂದರೆ, ಚಿತ್ರದಲ್ಲಿರುವ ಬಳೆಯಲ್ಲಿ ಕಂಡುಬರುವ 'ಬಂಧ'ದ ಗುರುತಿಸುವಿಕೆಯನ್ನು ಬೇರೊಂದು ರೂಪದಲ್ಲಿ ನಮ್ಮ ಛಂದಃಶಾಸ್ತ್ರಜ್ಞರು ಬಹಳ ಹಿಂದೆಯೇ ಮಾಡಿದ್ದಾರೆ ! (ಇದು ಏನೆಂದು ತಿಳಿಯಲು ಛಂದಃಶಾಸ್ತ್ರದ ಮೊದಲನೆ ಪಾಠ ಸ್ವಲ್ಪ ಅರಿತಿರಬೇಕು. ಉದಾ : ಅ.ರಾ. ಮಿತ್ರರವರು ರಚಿಸಿದ 'ಛಂದೋಮಿತ್ರ' ಎಂಬ ಮನೋರಂಜನಾ ಶೈಲಿಯಲ್ಲಿ ರಚಿಸಿದ ಪುಸ್ತಕದ ೧೭, ೧೮ ಮತ್ತು ೧೯ನೇ ಪುಟಗಳನ್ನು ನೋಡಿ).

ಛಂದಃಶಾಸ್ತ್ರದಲ್ಲಿ ಬರುವ ಮೂರಕ್ಷರದ ಎಂಟು 'ಗಣ'ಗಳ ಜ್ಞಾಪನ ಸಾಧನವಾಗಿ ರಚಿಸಲ್ಪಟ್ಟ 'ಯಮಾತಾರಾಜಭಾನ ಸಲಗಂ' ಎಂಬ ಸೂತ್ರದಲ್ಲಿ ಚಿತ್ರದಲ್ಲಿ ತೋರಿಸಿರುವ 'ಬಂಧ'ದ ಒಂದು ರೂಪ ಪ್ರಕಟವಾಗಿದೆ. ಈ ಸೂತ್ರದ ಅಕ್ಷರಗಳ ಉಚ್ಚಾರಣೆಗೆ ಅನುಗುಣವಾಗಿ ಹಾಕಿದ ಪ್ರಸ್ತಾರಗಳನ್ನು ಅನುಕ್ರಮವಾಗಿ ಬರೆದಾಗ 'ಗುರು' ಮತ್ತು 'ಲಘು'ಗಳ ಕೆಳಗಿನ ಶ್ರೇಣಿಯು ದೊರಕುತ್ತದೆ.

U – – – U – U U U –

ಈ ಶ್ರೇಣಿಯ ಎಡಬದಿಯಿಂದ ಆರಂಭಿಸಿ ಅಕ್ಕಪಕ್ಕದ ಎಲ್ಲ ಮೂರು ಚಿನ್ಹೆಗಳನ್ನು ಅವಲೋಕಿಸಿದಾಗ ಯ,ಮ,ತ,ರ,ಜ,ಭ,ನ,ಸ ಎಂಬ ಹೆಸರಿನ ಎಂಟು ಗಣಗಳು ಅದೇ ಅನುಕ್ರಮದಲ್ಲಿ ದೊರೆಯುತ್ತವೆ. ಇದೇ ಆ ಸೂತ್ರದ ಉಪಯೋಗ. ಚಿನ್ಹೆಯ ವ್ಯತ್ಯಾಸಗಳನ್ನು ಬಿಟ್ಟರೆ (ಚಿನ್ಹೆ U ನ್ನು '೦' ಯಿಂದಲೂ ಚಿನ್ಹೆ – ಅನ್ನು '೧'

> **ಅಭಿಮಾನಿ** : ಅಲ್ಲ ಸಾರ್, ನೀವು ಲಂಚ ತಗೊಂಡದ್ದು ರುಜುವಾತಾಗಿದೆ. ನಿಮ್ಮ ಭ್ರಷ್ಟಾಚಾರದ ಬಗ್ಗೆ ಎಲ್ಲ ಪೇಪರ್‌ಗಳು ಛೀಮಾರಿ ಹಾಕಿವೆ. ಆದ್ರೂ ನೀವು ಇಷ್ಟು ಧೈರ್ಯವಾಗಿದ್ದೀರಲ್ಲ! ಇದರ ರಹಸ್ಯ ಏನು?
>
> **ನಾಯಕ** : ನಾನು ಯಾವಾಗಲೂ ದೇಸಿ ರಸಯಾನ ತಗೋತೀನಿ. ಅದಕ್ಕೇ ಇಷ್ಟು ಧೈರ್ಯವಾಗಿದ್ದೀನಿ.

ಬಂಟ್ವಾಳದ ವಾಮದಪದವು ಎಂಬಲ್ಲಿ ಪಶುವೈದ್ಯಕೀಯ ಪರೀಕ್ಷಕರಾಗಿರುವ ಶ್ರೀ ಕೆ. ಶ್ರೀಧರ ಶೆಟ್ಟಿಯವರು ಜೂನ್ ತಿಂಗಳ ಪ್ರಶ್ನೆಗೆ ಉತ್ತರ ಕಳಿಸಿದ್ದಾರೆ. ಅವರಿಗೆ ಅಭಿನಂದನೆಗಳು.

ರಿಂದಲೂ ಅದಲು ಬದಲು ಮಾಡಿದರೆ ಸಾಕು) ಈ ಎಂಟು ಗಣಗಳು ಅದೇ ಕ್ರಮದಲ್ಲಿ ಈ ಹಿಂದೆ ನಾವು ಬರೆದ ಎಂಟು ಪದಕಗಳನ್ನು ಅನುಕ್ರಮವಾಗಿ ಕೊಡುತ್ತವೆ !

ಆದರೆ ಒಂದು ವ್ಯತ್ಯಾಸವಿದೆ. ಸೂತ್ರದಿಂದ, ಎಂಟು ಪದಕ (ಗಣ)ಗಳನ್ನು ಪಡೆಯಲು ಹತ್ತು ಚಿನ್ಹೆಗಳ ಒಂದು ಶ್ರೇಣಿಯನ್ನು ಉಪಯೋಗಿಸುತ್ತಿದ್ದೇವೆ. ಹಿಂದಿನ ವಿಧಾನದಲ್ಲಿ ಕೇವಲ ಎಂಟು ಚಿನ್ಹೆಗಳೇ ಸಾಕು. ಆದರೆ ಇಲ್ಲಿ ಮೂಲಭೂತವಾದ ವ್ಯತ್ಯಾಸವೇನೂ ಇಲ್ಲ. ಇದನ್ನು ತಿಳಿಯಲು ಸೂತ್ರದಲ್ಲಿರುವ ಹತ್ತು ಚಿನ್ಹೆಗಳ ಶ್ರೇಣಿಯನ್ನು ಗಮನಿಸಿ. ಅದರ ಮೊದಲೆರಡು ಚಿನ್ಹೆಗಳು ಕೊನೆ ಎರಡು ಚಿನ್ಹೆಗಳೂ ಒಂದೇ ಆಗಿವೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡರೆ ಸೂತ್ರದ ಕೊನೆಯ ಎರಡು ಚಿನ್ಹೆಗಳನ್ನು ತೆಗೆಯುವುದರಿಂದ ಆ ಸೂತ್ರದ ಜ್ಞಾಪನ ಶಕ್ತಿ ಸಾಮರ್ಥ್ಯವು ಕುಗ್ಗುವುದಿಲ್ಲ! ಇನ್ನೂ ಸ್ಪಷ್ಟಪಡಿಸಬೇಕೆಂದರೆ ಸೂತ್ರದ ಕೊನೆಯ ಎರಡು ಚಿನ್ಹೆಗಳನ್ನು ತೆಗೆದುಹಾಕಿದಾಗ ಬರುವ ಶ್ರೇಣಿಯಲ್ಲಿರುವ ಎಂಟು ಚಿನ್ಹೆಗಳನ್ನು ಎಡದಿಂದ ಆರಂಭಿಸಿ ಪ್ರದಕ್ಷಿಣಾಕಾರವಾಗಿ ಸುತ್ತುತ್ತಾ ಒಂದು ವೃತ್ತದ ಮೇಲೆ ಪ್ರತಿಷ್ಠೆ ಮಾಡಿದಾಗ ನಾವು ಮೊಟ್ಟಮೊದಲು ಬಳೆಯಲ್ಲಿ ನಿರೂಪಿಸಿದ 'ಬಂಧ'ವೇ ಮತ್ತೊಮ್ಮೆ ದೊರಕುತ್ತದೆ !

ತಿಂಗಳಿನ ಹೊಸ ಪ್ರಶ್ನೆ

ಕೆಂಪು ಮತ್ತು ಬಿಳಿ ರತ್ನಗಳನ್ನುಪಯೋಗಿಸಿ ನಾಲ್ಕು ಹರಳುಗಳ ಹದಿನಾರು ವಿಭಿನ್ನ ಪದಕಗಳನ್ನು ಮಾಡಬಹುದು. ಅವುಗಳೆಲ್ಲವನ್ನೂ ಬರೆಯಿರಿ. ಹದಿನಾರು ಹರಳುಗಳಿರುವ ಒಂದು ಬಳೆಯಲ್ಲಿ ಈ ಎಲ್ಲ ಹದಿನಾರು ಪದಕಗಳೂ ವ್ಯಕ್ತವಾಗುವಂತೆ (ಇದು ಯಾವ ಅರ್ಥದಲ್ಲಿ ಎನ್ನುವುದನ್ನು ತಿಳಿಯಲು ಜೂನ್ ತಿಂಗಳ ಪ್ರಶ್ನೆ ಮತ್ತು ಅದರ ಉತ್ತರವನ್ನು ಪರಾಮರ್ಶಿಸಿ) ಬಳೆಯೊಂದನ್ನು ರಚಿಸಿ.

ಸೂಚನೆ : ಹಿಂದಿನಂತೆ ಬಿಳಿ ಹರಳುಗಳನ್ನು '೦' ಇಂದಲೂ ಕೆಂಪು ಹರಳುಗಳನ್ನು ಅಂಕೆ '೧' ರಿಂದಲೂ ಸೂಚಿಸಬಹುದು. ಅಲ್ಲದೆ ಉತ್ತರವನ್ನು ಬಳೆಯ ಚಿತ್ರ ಬಿಡಿಸಿ ಹೇಳುವುದರ ಬದಲು ಬಳೆಯ ಒಂದು ನಿರ್ದಿಷ್ಟ ಸ್ಥಾನದಿಂದ ಆರಂಭಿಸಿ ಪ್ರದಕ್ಷಿಣಾಕಾರವಾಗಿ [illegible] [illegible] ಹರಳಿನ [illegible] '೦' ಮತ್ತು '೧' [illegible] [illegible] [illegible] ಶ್ರೇಣಿ[illegible] [illegible]ವಾಗಿ [illegible] [illegible] [illegible] ತಿಂಗಳ ಪ್ರಶ್ನೆಗೆ ಉತ್ತರ : [illegible]

[illegible]

ವಸಾಹತುಶಾಹಿಗಳು ಬಿಟ್ಟು ಹೋಗಿರುವ ಬಳುವಳಿ

ಜನಾಂಗ, ಬುಡಕಟ್ಟು, ಮತಧರ್ಮ ಮೊದಲಾದುವುಗಳ ಆಧಾರದ ಮೇಲೆ ಜನರನ್ನು ಎತ್ತಿ ಕಟ್ಟಿ ವಿಭಜಿಸಿ ಆಳ್ವಿಕೆ ನಡೆಸುವುದು ಸಾಮ್ರಾಜ್ಯಶಾಹಿಗಳು ಅನುಸರಿಸುತ್ತ ಬಂದಿರುವ ನೀತಿ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಇದರಲ್ಲಿ ನಿಷ್ಣಾತರು. ನೂರಾರು ವರ್ಷಗಳ ಕಾಲ ಜನರನ್ನು ವಿಭಜಿಸಿ ಆಳುವ ನೀತಿ ಪಾಲಿಸಿಕೊಂಡೇ ತಮ್ಮ ವಸಾಹತುಗಳನ್ನು ಅವರು ಅಂಕೆಯಲ್ಲಿರಿಸಿಕೊಂಡಿದ್ದರು. ವಸಾಹತುಶಾಹಿ ಇಂದು ಅದೃಶ್ಯಗೊಂಡಿದ್ದರೂ ಅವರು ಅನುಸರಿಸಿದ ನೀತಿಗಳ ದುಷ್ಪರಿಣಾಮಗಳು ಮಾಜಿ ವಸಾಹತುಗಳನ್ನು ಇನ್ನೂ ಕಾಡುತ್ತಿವೆ. ಪ್ರಧಾನವಾಗಿ ಸ್ಥಳೀಯ ನಾಗರಿಕರನ್ನು ಮೂಲೆಗೊತ್ತಿ, ಅವರನ್ನು ನೈಸರ್ಗಿಕ ತೀವ್ರ ಶೋಷಣೆಗೆ, ದಬ್ಬಾಳಿಕೆಗೆ ಗುರಿಪಡಿಸಿ ಆ ನಾಡಿನ ಸಂಪತ್ತನ್ನು ಸೂರೆ ಮಾಡಲು ಹೊರಗಿನಿಂದ ಜನರನ್ನು ನೆಲೆಗೊಳಿಸಿ ವಸಾಹತುಗಳನ್ನು ದೋಚಿದ್ದು ಈಗ ಇತಿಹಾಸ. ಆದರೆ ವಸಾಹತುಶಾಹಿಗಳು ಅಲ್ಲಿಂದ ಕಾಲ್ತೆಗೆದಾಗ ಅವರು ಬಿಟ್ಟು ಹೋಗಿರುವ, ಸೃಷ್ಟಿಸಿರುವ ಸಮಸ್ಯೆಗಳು ಮಾತ್ರ ಇನ್ನೂ ಜೀವಂತ.

ಮತಧರ್ಮಗಳ ಆಧಾರದ ಮೇಲೆ ಭಾರತವನ್ನು ತುಂಡರಿಸಿ ಪ್ರತ್ಯೇಕ ರಾಷ್ಟ್ರ ನಿರ್ಮಾಣ ಮಾಡಿದ ಬ್ರಿಟಿಷರ ಕ್ರಮದ ಉಗ್ರ ಪರಿಣಾಮ ಸರ್ವವಿದಿತ. ಅದರಿಂದಾದ ಅನಾಹುತ ಇನ್ನೂ ಮಾಸಿಲ್ಲ. ಭಾರತ ಉಪಖಂಡದಲ್ಲಿ ಅಭದ್ರತೆ ಮತ್ತು ಶಾಂತಿಗೆ ಆತಂಕಕ್ಕೆ ಅದೇ ಮೂಲ ಇಂದು ಕೂಡ. ಹಾಗೆಯೇ ಎರಡನೇ ಮಹಾಯುದ್ಧಾನಂತರ ಮಧ್ಯಪ್ರಾಚ್ಯದಲ್ಲಿ ಯೆಹೂದ್ಯರಿಗಾಗಿ ಇಸ್ರೇಲಿನ ಸೃಷ್ಟಿ ಆ ಇಡೀ ಪ್ರದೇಶಕ್ಕೆ ತಂದ ದುರಂತ ಮರೆಯಲಾಗದು. ಒಂದು ಸಮಯದಲ್ಲಿ ಇಸ್ರೇಲ್ ಮೂರನೇ ಮಹಾ ಯುದ್ಧದ ಸರ್ವನಾಶಕ್ಕೂ ಕಾರಣವಾಗುವ ಸಂಭವವಿತ್ತು. ಇಸ್ರೇಲಿನ ನಿರ್ಮಾಣದ ಜೊತೆಗೇ ಪ್ಯಾಲೆಸ್ಟೈನ್ ಅರಬ್ಬರ ಸ್ವಾತಂತ್ರ್ಯ ಪ್ರಶ್ನೆ ಇನ್ನೂ ಬಗೆಹರಿಯದೆ ಇದೆ. ಅರಬ್ ರಾಷ್ಟ್ರಗಳ ತೈಲ ಸಂಪತ್ತಿನ ಮೇಲೆ ತಮ್ಮ ನಿಯಂತ್ರಣವನ್ನಿರಿಸಿಕೊಳ್ಳಲು ಸಾಮ್ರಾಜ್ಯ ಶಾಹಿಗಳ ಕುತಂತ್ರದ ಪರಿಣಾಮ ಇದು. ಮತಧರ್ಮವನ್ನು ಪ್ರಚೋದಿಸಿ ತಮ್ಮ ಹಿಡಿತ ಮುಂದುವರಿಸುವ ಬ್ರಿಟಿಷರ ಸಂಚಿಗೆ ಇನ್ನೊಂದು ಉದಾಹರಣೆ ಉತ್ತರ ಐರ್ಲೆಂಡ್.

ಇನ್ನು ಸಾಮ್ರಾಜ್ಯಶಾಹಿ ವಸಾಹತುಗಳಲ್ಲಿ ಬೇರೆ ಕಡೆಗಳಿಂದ ದುಡಿಮೆಗಾಗಿ ತಂದಿರಿಸಿದ ಜನರ ಪರಿಸ್ಥಿತಿಯನ್ನು ಗಮನಿಸೋಣ. ಅವರು ಹೆಚ್ಚಾಗಿ ಭಾರತೀಯರು ಮತ್ತು ಆಫ್ರಿಕಾದಿಂದ ಗುಲಾಮರಾಗಿ ತಂದು ನೆಲೆಗೊಳಿಸಿದವರು. ಬ್ರಿಟಿಷ್ ಸಾಮ್ರಾಜ್ಯ ಅತ್ಯಂತ ಪ್ರಬಲವಾಗಿದ್ದು ಏಷ್ಯಾ, ಆಫ್ರಿಕಾ ಖಂಡಗಳಲ್ಲಿ, ಅಮೆರಿಕಾದಲ್ಲಿ ವಸಾಹತುಗಳು ಹರಡಿಕೊಂಡಿದ್ದಾಗ ನೂರಾರು ವರ್ಷಗಳ ಹಿಂದೆ ತಮ್ಮ ಪ್ಲಾಂಟೇಷನ್ನುಗಳಲ್ಲಿ, ಗಣಿಗಳಲ್ಲಿ, ಕಾರ್ಖಾನೆಗಳಲ್ಲಿ ದುಡಿಯಲು ಭಾರತದಿಂದ ಜನಗಳನ್ನು ಕರೆತಂದು ನೆಲೆಗೊಳಿಸಿದರು. ಅಮೆರಿಕದಲ್ಲಿ ವಲಸೆಬಂದ ಐರೋಪ್ಯರು ಆಫ್ರಿಕಾದಿಂದ ಗುಲಾಮರನ್ನಾಗಿ ತಂದು ನೆಲೆಗೊಳಿಸಿದ ಕರಿಯ ಜನರೇ ಇಂದು ಅಮೆರಿಕದಲ್ಲಿರುವ ಆಫ್ರಿಕನ್ ಅಮೆರಿಕನ್‌ರೆಂದು ಕರೆಸಿಕೊಳ್ಳುತ್ತಿರುವ ಜನ. ಗುಲಾಮ ಪದ್ಧತಿಯಂಥ ಹೀನಾಯ ಸ್ಥಿತಿ ಅಂತ್ಯಗೊಂಡು ಶತಮಾನಕ್ಕೂ ಮೇಲಾದರೂ ಅವರ ಸಂತತಿಯ ಪರಿಸ್ಥಿತಿ ಅಮೆರಿಕದಲ್ಲಿ ಇವತ್ತಿಗೂ ಗಣನೀಯವಾಗೇನೂ ಸುಧಾರಿಸಿಲ್ಲ. ಬಿಳಿಯರೊಂದಿಗೆ ಸಮಾನಾವಕಾಶಗಳಿಂದ ಈಗಲೂ ಅವರು ವಂಚಿತರೆ. ನೂರಾರು ವರ್ಷಗಳಿಂದ ಅಲ್ಲಿಯೇ ನೆಲೆಸಿರುವ ಈ ಕಪ್ಪು ಜನ ಎರಡನೇ ದರ್ಜೆ ನಾಗರಿಕರಾಗೇ ಉಳಿದಿದ್ದಾರೆ.

ಏಷ್ಯಾ, ಆಫ್ರಿಕಾ ಖಂಡದ ದೇಶಗಳಲ್ಲಿ ದುಡಿಯಲು ನೆಲೆಗೊಂಡ ಭಾರತೀಯರು ಶತಮಾನಗಳಿಂದ ಅಲ್ಲೇ ಇದ್ದರೂ ಬಹ್ವಂಶ ವಿದೇಶಿಯರಾಗಿಯೇ ಇದ್ದಾರೆ. ಗಯಾನ, ದಕ್ಷಿಣ ಆಫ್ರಿಕ, ಉಗಾಂಡ, ಫಿಜಿ, ನೈಜೀರಿಯ, ಶ್ರೀಲಂಕ ಹೀಗೆ ಹಲವು ದೇಶಗಳಲ್ಲಿ ನೆಲೆಗೊಂಡಿದ್ದ ಭಾರತೀಯರಲ್ಲಿ ಸ್ಥಿತಿವಂತರು ಬ್ರಿಟಿಷ್ ಪ್ರಜೆಗಳಾಗಿದ್ದರೆ, ಉಳಿದವರು ಭಾರತದ ಪ್ರಜೆಗಳಾಗೇ ಇದ್ದರು. ಬ್ರಿಟಿಷರು ವಸಾಹತುಗಳಿಂದ ಕಾಲ್ತೆಗೆದು ಆದೇಶಗಳು ಸ್ವತಂತ್ರಗೊಂಡಾಗ, ಅಲ್ಲಿ ತಾವು ತಂದು ನೆಲೆಗೊಳಿಸಿದ ಜನರ ಸಮಸ್ಯೆಯನ್ನು ಇತ್ಯರ್ಥಗೊಳಿಸದೇಹೋದರು. ಐವತ್ತರ ದಶಕದಲ್ಲಿ ಅತಂತ್ರ ಸ್ಥಿತಿ ಉಳ್ಳವರು ಇಂಗ್ಲೆಂಡ್‌ನಲ್ಲಿ ಇತರ ಶ್ರೀಮಂತ ರಾಷ್ಟ್ರಗಳಲ್ಲಿ ಆಶ್ರಯ ಪಡೆದರೆ, ಇಲ್ಲದವರು ಅಲ್ಲೇ ಉಳಿದರು. ಭಾರತೀಯರು ಸಾಕಷ್ಟು ಸಂಖ್ಯೆಯಲ್ಲಿದ್ದ ದಕ್ಷಿಣ ಆಫ್ರಿಕ, ಗಯಾನ, ಶ್ರೀಲಂಕ, ಫಿಜಿ ಮೊದಲಾದ ದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರೂ, ಹಲವಾರು ಪೀಳಿಗೆಗಳಿಂದ ಅಲ್ಲೇ ಬಾಳಿ ಬದುಕಿದ್ದರೂ, ಸ್ಥಳೀಯ ನಾಗರಿಕರ ದೃಷ್ಟಿಯಲ್ಲಿ ಅವರು ಪರಕೀಯರಾಗೇ ಉಳಿದಿದ್ದಾರೆ. ಇದು ನಿಜಕ್ಕೂ ಆರೋಗ್ಯಕರವಲ್ಲ. ಗಯಾನಾದ ರಾಜಕೀಯ ಬೆಳವಣಿಗೆಗಳಲ್ಲಿ, ಫಿಜಿಯ ಇತ್ತೀಚಿನ ಹಾಗೂ ೧೯೮೭ರ ಘಟನೆಗಳಲ್ಲಿ ಇದನ್ನು ಕಾಣಬಹುದು.

ಹಲವು ರಾಷ್ಟ್ರಗಳಲ್ಲಿ ಜನಾಂಗ ಮತ್ತು ವಿವಿಧ ಬುಡಕಟ್ಟುಗಳ ನಡುವೆ ಸಾಮರಸ್ಯವಿಲ್ಲದೆ, ಘರ್ಷಣೆಗಳು ಮತ್ತು ಪ್ರತ್ಯೇಕತೆಗೆ ಎಡೆಕೊಡುತ್ತಿರುವುದು ಅಪಾಯಕಾರಿ ಬೆಳವಣಿಗೆ. ಇದಕ್ಕೆ ಮುಖ್ಯಕಾರಣ ವಿವಿಧ ಪ್ರದೇಶಗಳ ಅಸಮಾನ ಬೆಳವಣಿಗೆಯೆಂದೇ ಹೇಳಬೇಕು. ಜನಾಂಗ ಪ್ರಶ್ನೆ ಅತ್ಯಂತ ಜಟಿಲ ಎನ್ನುವುದರಲ್ಲಿ ಸಂಶಯವಿಲ್ಲ. ಸೋವಿಯತ್ ರಷ್ಯದಲ್ಲಿ ಕ್ರಾಂತಿಯ ನಂತರದ ವರ್ಷಗಳಲ್ಲಿ ಅದಕ್ಕೆ ಪರಿಹಾರ ಕಾಣಲಾಯಿತು ಎಂದು ಪ್ರತೀತಿ. ಅದು ಬಹುಜನಾಂಗೀಯ ಒಕ್ಕೂಟವಾಗಿದ್ದು ಎಪ್ಪತ್ತು ವರ್ಷಗಳ ಕಾಲ ಇತರ ಬಹುಜನಾಂಗೀಯ ದೇಶಗಳಿಗೆ ಮಾದರಿಯಾಗಿತ್ತು. ಆದರೆ ದುರದೃಷ್ಟವಶಾತ್ ೧೯೯೨ ರಲ್ಲಿ ಸೋವಿಯತ್ ಒಕ್ಕೂಟದ ವಿಸರ್ಜನೆಯ ನಂತರ ರಾಷ್ಟ್ರ ಮತ್ತೆ ಛಿದ್ರಗೊಂಡಿತು. ರಷ್ಯದಲ್ಲಿ ಚಚನ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಘರ್ಷಣೆಗಳು ಪ್ರತ್ಯೇಕವಾದದ ತೀಕ್ಷ್ಣತೆಗೆ ಸಂಕೇತ. ಪೂರ್ವ ಯುರೋಪಿನ ರಾಷ್ಟ್ರ ಚೆಕೊಸ್ಲೋವಾಕಿಯದ ವಿಭಜನೆ ಚೆಕ್ಕರು ಮತ್ತು ಸ್ಲೋವಾಕರ ಮಧ್ಯೆ ಸಮ್ಮತಿಯಿಂದ ಶಾಂತಿಯುತವಾಗಿ ನಡೆದಿದ್ದರೂ ಅದು ಆರೋಗ್ಯಕರ ಬೆಳವಣಿಗೆಯೇನಲ್ಲ. ಅದೇ ಯುಗೋಸ್ಲಾವಿಯದ ಛಿದ್ರೀಕರಣ ತೀವ್ರ ಹಿಂಸಾಚಾರಗಳಿಂದ ಕೂಡಿದ್ದು ಅಮೆರಿಕದ ನೇತೃತ್ವದಲ್ಲಿ ನ್ಯಾಟೋದ ಮಧ್ಯಪ್ರವೇಶಕ್ಕೂ ಕಾರಣವಾದ್ದು ಶೋಚನೀಯ. ಈ ಎಲ್ಲ ಘಟನೆಗಳಲ್ಲಿ ಹೊರಗಿನ ಹಸ್ತಕ್ಷೇಪವೂ ಇಲ್ಲದಿಲ್ಲ. ಪ್ರತ್ಯೇಕವಾದಿಗಳನ್ನು ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ಹಿತಕ್ಕಾಗಿ ಬಳಸಿಕೊಂಡಿರುವುದನ್ನು ಕಾಣಬಹುದು. ಉದಾಹರಣೆಗೆ ಇರಾಕಿನಲ್ಲಿ ಕುರ್ದಿಷ್ ಪ್ರತ್ಯೇಕವಾದಿಗಳಿಗೆ ಅಮೆರಿಕ ನೀಡುತ್ತಿರುವ ಬೆಂಬಲ ಅಂಥದ್ದು. ಸಮಾನವಾದ ಆರ್ಥಿಕ ಬೆಳವಣಿಗೆಯ ಕೊರತೆ, ವಿವಿಧ ವಿಭಾಗದ ಜನಗಳಿಗೆ ಸಮಾನಾವಕಾಶ ಇಲ್ಲದಿರುವುದು ಪ್ರತ್ಯೇಕವಾದ ಬೆಳೆಯಲು ಪ್ರಶಸ್ತವಾದ ಅವಕಾಶ ಕಲ್ಪಿಸುವುದೆಂಬುದರಲ್ಲಿ ಅನುಮಾನವಿಲ್ಲ. ಇದರ ಮೇಲೆ ಸಂಕುಚಿತ ರಾಷ್ಟ್ರೀಯ ದುರಭಿಮಾನ ಮತ್ತಷ್ಟು ಪ್ರಚೋದನೆಗೆಡೆಕೊಡುತ್ತದೆ. ಶ್ರೀಲಂಕಾದಲ್ಲಿನ ತಮಿಳರ ಸಮಸ್ಯೆ ಇದಕ್ಕೆ ಉತ್ತಮ ನಿದರ್ಶನ.

ಇಂಥ ಎಲ್ಲ ಬೆಳವಣಿಗೆಗಳೂ ಹಲವಾರು ವರ್ಷಗಳಿಂದ ಪರಿಹಾರ ಕಾಣದೆ ನೆನೆಗುದಿಗೆ ಬಿದ್ದಂಥ ಸಮಸ್ಯೆಗಳಿಂದಾಗಿ ಅವು ಅತ್ಯಂತ ಸೂಕ್ಷ್ಮವಾದ ಪ್ರಶ್ನೆಗಳಾದ್ದರಿಂದ ಜನರನ್ನು ಪ್ರಚೋದಿಸುವುದು ಕಷ್ಟವೇನಲ್ಲ. ಭಾರತದಂಥ ಬಹುಜನಾಂಗೀಯ ರಾಷ್ಟ್ರ ಸುತ್ತಲಿನ ಈ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಂಡು ಅದರಿಂದ ಪಾಠ ಕಲಿಯಬೇಕಾದ್ದು ಅವಶ್ಯಕ. ಏಕೆಂದರೆ ಜನಾಂಗದ ಪ್ರಶ್ನೆಗೆ ಸೂಕ್ತ ಸಕಾಲಿಕ ಪರಿಹಾರ ಕಾಣದಿದ್ದಲ್ಲಿ ಅಪಾಯ ಖಂಡಿತ.

- ಸೀಯಾರ್ಕೆ

'ಅನುಗ್ರಹ'ದ ವಾಸ್ತು ವಿನ್ಯಾಸ

ಹೊಸತು ಓದುಗರಿಗೆ ಮಾಹಿತಿ ಒದಗಿಸುವ ಉದ್ದೇಶದಿಂದ, ನಮ್ಮ ಮುಖ್ಯಮಂತ್ರಿಗಳು ಸರಕಾರಿ ವಾಸಗೃಹ 'ಅನುಗ್ರಹ'ದ ದುರಸ್ತಿಗಾಗಿ ಮಾಡಿದ ವೆಚ್ಚದ ಬಗ್ಗೆ ವಿವರ ಒದಗಿಸುವಂತೆ ಪತ್ರ ಬರೆದಿದ್ದೆವು. ಮುಖ್ಯಮಂತ್ರಿಗಳ ಕಚೇರಿಯಿಂದ ಉತ್ತರ ಬರಲಿಲ್ಲ. ಅದನ್ನು ನೆನಪಿಸಿ ಲೋಕೋಪಯೋಗಿ ಮಂತ್ರಿಗಳಿಗೂ ಮುಖ್ಯ ಕಾರ್ಯದರ್ಶಿಯವರಿಗೂ ಪತ್ರ ಬರೆದಿದ್ದೆವು. ಮೇ ಸಂಚಿಕೆಯ 'ಈತಿಂಗಳು' ಅಂಕಣದಲ್ಲಿ ಸಂಪಾದಕರೂ ಈ ಬಗ್ಗೆ ಬರೆದಿದ್ದರು. ಇದಕ್ಕೂ ಮೌನ. ಹಾಗಾಗಿ, ನ್ಯಾಯಾಲಯಕ್ಕೆ ಮೊರೆ ಹೋಗಬೇಕಾಯಿತು. ಪ್ರಜೆಗಳಿಗಿರುವ ತಿಳಿಯುವ ಹಕ್ಕನ್ನು ಎತ್ತಿ ಹಿಡಿಯುವುದಕ್ಕಾಗಿ ಹೊಸತು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಯನ್ನು ಕರ್ನಾಟಕ ಉಚ್ಚನ್ಯಾಯಾಲಯ ವಿಚಾರಣೆ ತೆಗೆದುಕೊಂಡಿದೆ. ಮುಖ್ಯನ್ಯಾಯ ಮೂರ್ತಿ ವೈ. ಭಾಸ್ಕರರಾವ್ ಮತ್ತು ನ್ಯಾಯಮೂರ್ತಿ ವಿ. ಗೋಪಾಲಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಂದಿದ್ದು, ಇದನ್ನು ಮುಂದೂಡಲಾಗಿದೆ.

ದೇಗುಲ ಸಂಸ್ಕೃತಿ

ನಮ್ಮ ಸಾಂಸ್ಕೃತಿಕ ಇತಿಹಾಸದಲ್ಲಿ ದೇವಾಲಯಗಳ ಪಾತ್ರ ಬಹಳ ದೊಡ್ಡದು. ನಮ್ಮ ಶಾಸನಾಧಾರಿತ ಸಾಂಸ್ಕೃತಿಕ ಇತಿಹಾಸವು ಬಹುಪಾಲು ದೇಗುಲಗಳಿಂದಲೇ ನಿಯಂತ್ರಿತವಾಗಿದೆ. ಶಿಲ್ಪ, ಸಾಹಿತ್ಯ, ಸಂಗೀತ, ಚಿತ್ರ, ನೃತ್ಯ, ಹಬ್ಬ, ಜಾತ್ರೆಗಳಿಗೂ ದೇಗುಲಗಳಿಗೂ ಒಂದು ಅನ್ಯೋನ್ಯ ಸಂಬಂಧವಿದೆ. ಇಲ್ಲೂ ಶಿಷ್ಟ-ಜನಪದ ಭೇದವಿದ್ದು ಶಿಷ್ಟವು ವೈಭವೀಕರಣಕ್ಕೂ ಜನಪದವು ಉಪೇಕ್ಷೆಗೂ ಒಳಗಾಗಿವೆ.

ನಮ್ಮಲ್ಲಿ ದೇವರು ಹುಟ್ಟಿದ ಅನೇಕ ವರ್ಷಗಳ ನಂತರ ದೇಗುಲಗಳು ಹುಟ್ಟಿವೆ. ಕಟ್ಟಡ ನಿರ್ಮಾಣ ಕಲೆಯನ್ನು ಮಾನವ ರೂಢಿಸಿಕೊಳ್ಳುವುದಕ್ಕೂ ಮೊದಲೇ ದೇವರು ಹುಟ್ಟಿದ್ದಾನೆ. ನಮ್ಮ ದೇಗುಲ ಸಂಸ್ಕೃತಿಯ ಆದಿಮ ರೂಪದ ಕುರುಹುಗಳನ್ನು ಸಿಂಧೂ ನಾಗರಿಕತೆಯಲ್ಲೇ ಕಾಣ ಬಹುದು. ದೈವಗಳ ಮೂರ್ತೀಕರಣ ದ್ರಾವಿಡರಿಂದಲೇ ಆಗಿದೆ. ಮೊದಲು ದೇಗುಲಗಳನ್ನು ನಿರ್ಮಿಸಿದವರು ದ್ರಾವಿಡರೇ (ಸಿಂಧೂಜನ) ಎನ್ನುವುದಕ್ಕೆ ಹಲವು ಕಾರಣಗಳಿವೆ: (ಅ) ಸಿಂಧೂ ಕಣಿವೆಯ ಹಲವು ಉತ್ಖನನಗಳಲ್ಲಿ ಪಶುಪತಿ, ವೃಷಭ, ಮಾತೃದೇವತೆಗಳ ವಿಗ್ರಹಗಳು ದೊರಕಿವೆ. ಈ ಮೂರ್ತಿಗಳಿಗೆ ದೇಗುಲಗಳಿದ್ದು ಅವು ನಮಗಿಂದು ದೊರಕದೇ ಹೋಗಿರ ಬಹುದು; (ಆ) ಆರ್ಯರು ಅಲೆಮಾರಿ ಪಶುಪಾಲಕರಾಗಿದ್ದು ಇವರು ಕೃಷಿಯನ್ನು ದ್ರಾವಿಡರಿಂದ ಕಲಿತರು. ಹಾಗಾಗಿ ಇವರು ದೇಗಲ ಸಂಸ್ಕೃತಿಯ ಪ್ರವರ್ತಕರೆನ್ನಲು ಬರುವುದಿಲ್ಲ; (ಇ) ಸಿಂಧೂ ಸಂಸ್ಕೃತಿ ಕೃಷಿ ಸಂಸ್ಕೃತಿ ಯಾಗಿತ್ತು. ದೈವದ ಸ್ಥಾವರೀಕರಣ ಕೃಷಿ ಸಂಸ್ಕೃತಿಯ ಒಂದು ಪ್ರಧಾನ ಅಂಗ; (ಈ) ಸಿಂಧೂ ಸಂಸ್ಕೃತಿಯಲ್ಲಿ ದೊರೆತಿರುವ ಕೆಲವು ಕಟ್ಟಡಗಳು ದೇವಾಲಯ ಕಟ್ಟಡಗಳಾಗಿರಬಹುದು ಎಂದು ಕೆಲವರು ಊಹಿಸಿದ್ದಾರೆ; ಮತ್ತು (ಉ) ಪೂಜೆ ಎಂಬ ಪದವು ಪೂಜೆಯ್ ಎಂಬ ದ್ರಾವಿಡ ಮೂಲದ, ಹೂವಿನಿಂದ ಮಾಡುವ ಕ್ರಿಯೆ ಎಂಬ ಅರ್ಥದ ಪದವಾಗಿದ್ದು, ದೇಗುಲ ಸಂಸ್ಕೃತಿಯ (ಆರಾಧನಾ) ದ್ರಾವಿಡ ಮೂಲಕ್ಕೆ ಇದು ಇಂಬು ನೀಡುತ್ತದೆ.

ಆದರೂ ದೇಗುಲ ನಿರ್ಮಿತಿಗಳು ನಮಗೆ ಸಿಗುವುದು ಗುಪ್ತರ ಕಾಲದಿಂದ ಮಾತ್ರ. ಅದಕ್ಕೆ ಮುನ್ನ ನಿರ್ಮಿತವಾದ ಶಿಲಾದೇಗುಲಗಳು (ಬೌದ್ಧ) ಇಂದು ಅವಶೇಷ ಮಾತ್ರವಾಗಿವೆ. ಇವರಿಗೆ ಪೂರ್ವದಲ್ಲಿ ಕಟ್ಟಿಗೆ, ಮಣ್ಣು, ಇಟ್ಟಿಗೆಗಳಿಂದ ದೇಗುಲ ನಿರ್ಮಿಸುತ್ತಿದ್ದುದರಿಂದ ಅವಿಂದು ಉಳಿದಿಲ್ಲ. ದೇಗುಲಗಳ ಸುಸ್ಥಿತಿಯ ರಚನೆಗಳು ನಮಗೆ ದೊರಕುವುದು ಕ್ರಿ. ಶ. ೮ನೇ ಶತಮಾನದ ನಂತರವೇ.

ನಮ್ಮಲ್ಲಿ ದೇಗುಲಗಳು ವಿದ್ಯಾಕೇಂದ್ರಗಳಾಗಿ, ನ್ಯಾಯಾಲಯಗಳಾಗಿ, ಗುಪ್ತ ರಾಜಕೀಯ ಸಮಾಲೋಚನಾ ಕೇಂದ್ರಗಳಾಗಿ, ಸಾಮಾಜಿಕ ಅನಿಷ್ಟಗಳ ಕಾರಸ್ಥಾನಗಳಾಗಿ, ಸ್ಥಳೀಯ ಸರ್ಕಾರಗಳಾಗಿ, ಸಂಪತ್ತನ್ನು ಬಚ್ಚಿಡುವ ಸಂಗ್ರಹಿಸುವ ಕೇಂದ್ರಗಳಾಗಿ, ಪ್ರಭು-ಪುರೋಹಿತರ ದಾಳಗಳಾಗಿ, ಬಡ್ಡಿ ಲೇವಾದೇವಿ ನಡೆಸುವ ಆರ್ಥಿಕ ಕೇಂದ್ರಗಳಾಗಿ, ಅಸಾಧಾರಣ ಸಾಂಸ್ಕೃತಿಕ ರಾಜಕಾರಣದ ಕೇಂದ್ರಗಳಾಗಿ, – ಹೀಗೆ ನೂರಾರು ಪಾತ್ರಗಳಲ್ಲಿ ಬದುಕಿ ಬಾಳಿವೆ.

ಎಲ್ಲ ದೇಗುಲಗಳೂ ಏಕಕಾಲಕ್ಕೆ ಅಸಮಾನತೆಯ ಮೂಲ ಕಾರಣವಾಗಿಯೂ ಸಮಾನತೆಯ ಸಾಧನ ವಾಗಿಯೂ ವರ್ತಿಸಿವೆ. ಜನರನ್ನು ಒಂದೆಡೆ ಸಂಘಟಿಸುವ,



ಮೈಲಾರಲಿಂಗನ ಶಿವಬಾರಗಟ್ಟೆ

ಒಗ್ಗಟ್ಟು ಮೂಡಿಸುವ ಹಾಗೇ ವಿಘಟಿಸಿ ಭೇದ ಮೂಡಿಸುವ ಕೆಲಸವನ್ನೂ ಮಾಡಿವೆ. ಸ್ತ್ರೀ, ಪುರುಷ - ಶಿಷ್ಟ, ಕ್ಷುದ್ರ- ಪ್ರಧಾನ, ಅಧೀನ, – ಹೀಗೆ ದೇಗುಲಗಳಲ್ಲೂ ಸ್ತರವಿನ್ಯಾಸವಿದೆ. ದೇವರಿಗೂ ರಕ್ತಸಂಬಂಧಗಳು, ಕಷ್ಟಸುಖ, ಸಂಸಾರ ತಾಪತ್ರಯ, ಪುನರ್ಜನ್ಮಗಳಿವೆ. ಈ ಎಲ್ಲವೂ ಮಾನವ ಸಮಾಜದ ಪ್ರತಿಬಿಂಬವೇ ಆಗಿದೆ. ಉಳ್ಳವರ ಶಕ್ತಿಗೆ ತಕ್ಕಂತೆ ದೇಗುಲಗಳು ನಿರ್ಮಾಣವಾಗಿವೆ.

ದೇಗುಲ ಸಂಸ್ಕೃತಿಯಲ್ಲಿ ಉಚ್ಚ, ನೀಚ ಕಲ್ಪನೆ ಬಂದಿರುವುದು ಅರ್ಥಮೂಲದಿಂದಲೇ ವಿನಾ ಆಚರಣಾ ಮೂಲದಿಂದಲ್ಲ. ಶ್ರೀಮಂತರ ಆಚರಣೆಗಳು ಶ್ರೇಷ್ಠವೂ, ಬಡವರ ಆಚರಣೆಗಳು ಕನಿಷ್ಠವೂ ಆಗಿ ನಿರ್ವಚಿಸಲ್ಪಟ್ಟಿರುವುದು, ಮಡಿ-ಮೈಲಿಗೆ, ಪವಿತ್ರ-ಅಪವಿತ್ರ ಕಲ್ಪನೆಗಳು ಹುಟ್ಟಿರುವುದು ಪುರೋಹಿತ ರಾಜಕಾರಣದ ಫಲ. ಜಾತಿ, ವರ್ಣ ಮೂಲದಿಂದಲೇ ಇದನ್ನು ನೋಡಬೇಕು. ಜಾತಿ, ವರ್ಣ, ಪಂಗಡಗಳಿಗೆ ಇರುವ ಸಾಮಾಜಿಕ ಅಂತಸ್ತು ಅವರವರ ದೇಗುಲಗಳಿಗೂ ಅಂಟಿಕೊಂಡಿವೆ.

ಮೇಲ್ವರ್ಣದ ದೇವರ ಹೆಸರನ್ನು ಇಟ್ಟುಕೊಂಡು, ಆ ದೇವರಿಗೆ ನಡಕೊಂಡು, ಆಚರಣೆಗಳನ್ನು ಅನುಸರಿಸುವುದು ಆ ವರ್ಣದ ಸಾಮಾಜಿಕ ಅಂತಸ್ತನ್ನು ಪಡೆಯುವ ಯತ್ನವಾಗಿದೆ. ಇದಕ್ಕೆ ತದ್ವಿರುದ್ಧವಾದ ದೇಗುಲಗಳನ್ನು ವಿರೋಧಿಸುವ ಕ್ರಿಯೆಗಳೂ ನಡೆದಿವೆ. ಇದು ಆ ದೇಗುಲ ಮೂಲದ ಜಾತಿ, ಕಟ್ಟುಪಾಡು ಶೋಷಣೆಗಳನ್ನು ಧಿಕ್ಕರಿಸುವ ಪ್ರಯತ್ನವೇ ಆಗಿದೆ.

ಅಸಮಾನ ಶ್ರೇಣೀಕರಣವನ್ನೇ ಮೂಲೋದ್ದೇಶವನ್ನಾಗಿ ಪೋಷಿಸುತ್ತ ಬಂದ ದೇಗುಲ ಸಂಸ್ಕೃತಿಯ ವಿರುದ್ಧ ಚರಿತ್ರೆಯಲ್ಲಿ ನಾಲ್ಕು ರೀತಿಯ ದಾಳಿಗಳಾಗಿವೆ:

(೧) ನಿರಾಕಾರ, ನಿರ್ಗುಣ, -ನಿರೀಶ್ವರ, ಚಾರ್ವಾಕವಾದಿ ದಾಳಿ;

(೨) ನಿಮ್ನ ವರ್ಗದ ಎದುರೇಟು, ಅಂದರೆ ಸತ್ನಾಮಿ, ಮಹಿಮಾ ಪಂಥದಂಥ ದಾಳಿ;

(೩) ರಾಜಕೀಯ ಆಕ್ರಾಮಕ ಮಿಗ ಅಥವಾ ವಿಗ್ರಹ ಭಂಜಕ ದಾಳಿ; ಮತ್ತು

(೪) ಏಕದೇವೋಪಾಸಕ ದಾಳಿ.

ಈ ಎಲ್ಲ ದಾಳಿಗಳೂ ನಮ್ಮ ದೇಗುಲ ಸಂಸ್ಕೃತಿಯ ಬಹುಮುಖಿ, ಸಂಕೀರ್ಣತೆ, ಬಳುಕು, ಬಹುಸಂಖ್ಯಾತತೆಗಳ ಎದುರು ಸೋತು ಸುಣ್ಣವಾಗಿವೆ.

ನಿರಾಕಾರ ನಿರ್ಗುಣ ಸಿದ್ಧಾಂತ ದೈವದ ಮೂರ್ತೀಕರಣ ಮತ್ತು ದೇಗುಲ ನಿರ್ಮಾಣವನ್ನು ನಿರಾಕರಿಸುತ್ತದೆ. ಆದರೆ ದೇವರ ಅಸ್ತಿತ್ವವನ್ನಲ್ಲ. ಆದರೆ ಚಾರ್ವಾಕಾದಿ ನಿರೀಶ್ವರವಾದಗಳು ದೇವರ ಅಸ್ತಿತ್ವವನ್ನೇ ನಿರಾಕರಿಸುತ್ತವೆ. ಇವೆರಡೂ ದೇಗುಲ ಮೂಲದ ತಾತ್ವಿಕ ಸಿದ್ಧಾಂತಗಳನ್ನು ಮತ್ತು ಮಾನವ ಸಮಾಜದ [illegible] ವಿರೋಧಿಸುವ ಸಿದ್ಧಾಂತಗಳೇ ಆಗಿವೆ.

ದೇಗುಲ ಮೂಲದ [illegible] ಅಂತಸ್ತುಗಳಲ್ಲಿ ನಿಮ್ನ ವರ್ಗ [illegible] ಮತ್ತು [illegible] ಸಂಸ್ಕೃತಿಗೆ ಎದುರು [illegible] ಪಾವಿತ್ರ್ಯ ನಾಶದ ಎರಡೂ ಕ್ರಿಯೆಗಳು ಇಲ್ಲಿ [illegible]

ರಾಮಲಿಂಗಪ್ಪ ಟಿ. ಬೇಗೂರು

ಪ್ರತಿಸ್ಮೃತಿಯೊಂದರ ನಿರ್ಮಾಣ ಕೈಗೊಂಡು ತನ್ನ ಎದುರಾಳಿಗಳಿಗೆ ಹೊಡೆತ ನೀಡುತ್ತದೆ. ಸತ್ನಾಮಿಪಂಥ, ಮಹಿಮಾ ಪಂಥದಂಥ ನೂರಾರು ಎದುರೇಟುಗಳು ನಮಗೆ ದಾಖಲೆಯಾಗದೇ ಹೋಗಿರಬಹುದು.

ಭಾರತದ ರಾಜಕೀಯ ಅನ್ಯಾಕ್ರಮಣಗಳು ದೇಗುಲ ಭಂಜಕ (ವಿಗ್ರಹಭಂಜಕ) ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ನಮ್ಮ ದೇಗುಲಗಳು ಸಂಪತ್ತಿನ ಕೇಂದ್ರಗಳಾಗಿದ್ದದ್ದೊಂದೇ ಕಾರಣವಲ್ಲ, ಇದರ ಜೊತೆಗೆ ಇವು ಪ್ರಭುಶಕ್ತಿ ನಿರ್ಮಾಣದ ಹಾಗೂ ನಿರ್ನಾಮದ ಸಾಮರ್ಥ್ಯ ಹೊಂದಿದ್ದದ್ದು, ಜನರ ಭಾವನಾತ್ಮಕ ಒಗ್ಗಟ್ಟಿನ ಮೂಲ ಕೇಂದ್ರವಾಗಿದ್ದದ್ದು ಕೂಡ ಕಾರಣ.

ವಿಗ್ರಹ ಭಂಜನೆ ಕೇವಲ ಧರ್ಮದ ಅವಹೇಳನವಲ್ಲ. ಇದು ಜನರ ಪ್ರತಿಷ್ಠೆ, ಅಭಿಮಾನ, ಭವ್ಯತೆಯ ಭಂಜನೆ; ಜನರನ್ನು ಅವಮಾನಿಸುವ ಬಗೆ, ಅವರ ನಂಬಿಕೆ, ಸಂಪ್ರದಾಯಗಳ ಮೇಲಿನ ದಾಳಿ; ನಿಮ್ಮ ದೈವಕ್ಕಿಂತ ನಮ್ಮ ದೊರೆತನವೇ ಶ್ರೇಷ್ಠವೆಂದು ಸಾಬೀತು ಮಾಡುವ ಪರಿ ಹಾಗೂ ಪ್ರಭು-ಪುರೋಹಿತ-ಸಾಮಾನ್ಯರನ್ನ ವಿಘಟಿಸುವ ವಿಧಾನ. ಆದರೂ ಯಾವ ವಿಗ್ರಹಭಂಜಕ ದಾಳಿಗಳಿಂದಲೂ ನಮ್ಮ ದೇಗುಲ ಸಂಬಂಧಿ ಶ್ರೇಣೀಕೃತ ಮಾನವ ಸಂಬಂಧಗಳನ್ನು - ನಂಬಿಕೆಗಳನ್ನು ಅಲ್ಲಾಡಿಸಲು ಆಗಲಿಲ್ಲ. ನಮ್ಮವರು ಮೊದಲ ದಾಳಿಯಿಂದ ಎರಡನೇ ದಾಳಿಗೆ, ಎರಡನೆಯದರಿಂದಲಾದರೂ ಮೂರನೇ ದಾಳಿಗೆ ಪಾಠ ಕಲಿಯಬೇಕಿತ್ತು. ಆದರೆ ಕಲಿಯಲಿಲ್ಲ. ನಮ್ಮ ದೇಗುಲ ನಂಬಿಕೆಗಳು ಹುಸಿ ಎಂಬುದನ್ನ ವಿಗ್ರಹಭಂಜಕ ದಾಳಿ ಪ್ರತ್ಯಕ್ಷ ತೋರಿದರೂ ನಮ್ಮ ಜನ ನಂಬಲಿಲ್ಲ. ಅಷ್ಟರ ಮಟ್ಟಿಗೆ ದೇಗುಲ ಸಂಸ್ಕೃತಿ ರಾಕ್ಷಸ ಶಕ್ತಿಯ ಪ್ರತೀಕವಾಗಿದೆ.

ಚರಿತ್ರೆಯಲ್ಲಿ ಸಾಮಾನ್ಯ ಜನರು ರಾಜಕೀಯ ಪಲ್ಲಟಗಳನ್ನು ಲಕ್ಷಿಸುತ್ತಿರಲಿಲ್ಲ. ಯಾವ ರಾಜ ಬಂದರೂ ಯಾವ ರಾಜ ಹೋದರೂ ಅವರ ಸ್ಥಿತಿ ಏನೂ ಭಿನ್ನವಾಗುತ್ತಿರಲಿಲ್ಲ. (ಈಗಿನ ಪ್ರಜಾಪ್ರಭುತ್ವದಂತೆ) ಅಲ್ಲದೆ ಇಂದಿನ ಭವ್ಯ ದೇಗುಲಗಳೆಲ್ಲವೂ ಪ್ರಭು-ಪುರೋಹಿತ-ವಿದೇಶಿಯರಿಗೆ ಮಾತ್ರ ಮೀಸಲಾಗಿರುತ್ತಿದ್ದವು. ಇವುಗಳಿಂದ ಐಹಿಕಲಾಭಗಳೇನೂ ಸಾಮಾನ್ಯರಿಗೆ ಇರಲಿಲ್ಲ. ಹಾಗಾಗಿ ಸಾಮಾನ್ಯ ಜನ ವಿಗ್ರಹ ಭಂಜಕ ದಾಳಿಯ ವಿರುದ್ಧ ಕ್ರಾಂತಿಕಾರಿ ಪ್ರತಿಭಟನೆಯನ್ನು ನಡೆಸಲಿಲ್ಲ ಎಂಬುದು ಕೂಡ ನಿಜ.

ನಮ್ಮಲ್ಲಿ ಏಕದೇವೋಪಾಸನೆ ವ್ಯಕ್ತಿ ಮತ್ತು ಧಾರ್ಮಿಕ ಈ ಎರಡೂ ಹಂತಗಳಲ್ಲಿ ಚಳುವಳಿಯೋಪಾದಿಯಲ್ಲಿ ಪ್ರತಿಪಾದಿತವಾಗಿದೆ. ಬಹುದೇವೋಪಾಸನೆಯ ವಿರುದ್ಧ ಕೆಲವು ಸೈದ್ಧಾಂತಿಕ ನಿಲುವುಗಳನ್ನು ಸ್ಥಾಪಿಸಲು ಇದಕ್ಕೆ ಸಾಧ್ಯವಾಯಿತೇ ವಿನಾ ಬಹು ದೇವಾರಾಧನೆಯನ್ನು ಹೊಡೆದೋಡಿಸಲು ಆಗಲಿಲ್ಲ. ದುರಂತವೆಂದರೆ ಕ್ರೈಸ್ತ, ಇಸ್ಲಾಂ, ವೀರಶೈವ ಮುಂತಾದ ಏಕದೇವಾರಾಧಕ ಚಳುವಳಿಗಳು ಕಾಲಕ್ರಮದಲ್ಲಿ ಬಹುದೇವಾರಾಧಕ ಧರ್ಮಗಳಾಗಿ ಮಾರ್ಪಟ್ಟಿವೆ. ಇವುಗಳ ಧರ್ಮ ಗುರುಗಳಿಗೂ ದೇವರಿಗೂ ವ್ಯತ್ಯಾಸ ಇಲ್ಲವಾಗಿದೆ.

ಬಹುದೇವಾರಾಧನೆ ಇಂದು ನಮ್ಮ ದೇಗುಲ ಸಂಸ್ಕೃತಿಯ ಪ್ರಧಾನ ಲಕ್ಷಣವಾಗಿದೆ. ಇದು ಹಿಂದೂ ಧರ್ಮದ ಲಕ್ಷಣವೂ ಹೌದು. ಇದನ್ನು ಎರಡು ರೀತಿ ಅರ್ಥೈಸಿಕೊಳ್ಳಬಹುದು: ಭಾರತದ ಸಾಂಸ್ಕೃತಿಕ ವೈವಿಧ್ಯತೆಯ ಕುರುಹಾಗಿ ಮತ್ತು ಭಾರತೀಯ ಸಾಮಾಜಿಕ ಅಸಮಾನತೆಯ ಕುರುಹಾಗಿ. ಏಕದೇವಾರಾಧನೆ ಯಾವಾಗಲೂ ತನ್ನ ಒಡಲಲ್ಲಿ ಸಾಮಾಜಿಕ ಸಮಾನತೆಯನ್ನು ಇಟ್ಟುಕೊಂಡಿದ್ದರೆ, ಬಹುದೇವಾರಾಧನೆಯು ಸಾಮಾಜಿಕ ಅಸಮಾನತೆಯ ಸಹಜ ವಿನ್ಯಾಸವನ್ನು ಒಪ್ಪಿಕೊಳ್ಳುವುದಾಗಿದೆ. ಆದ್ದರಿಂದ ದೈವದ ನಿರಾಕರಣೆ ಯೆಂದರೆ ಜಾತಿ, ಧರ್ಮ, ಸಂಪ್ರದಾಯ, ಆಚರಣೆಗಳೆಲ್ಲದರ ನಿರಾಕರಣೆ ಆಗಿರುತ್ತದೆ. ವಿಚಿತ್ರವೆಂದರೆ ಇಂದು ಧರ್ಮ, ಜಾತಿ, ಪಂಗಡಗಳ ಹಂತದಲ್ಲಷ್ಟೇ ಅಲ್ಲ ಕುಟುಂಬ, ವ್ಯಕ್ತಿಗಳ ಹಂತದಲ್ಲೂ ಏಕದೇವೋಪಾಸನೆ ಉಳಿದಿಲ್ಲ.

ಬಸವಣ್ಣನ ಇಷ್ಟಲಿಂಗ ಕಲ್ಪನೆ ಮತ್ತು ಉಳ್ಳವರು ಶಿವಾಲಯವ ಮಾಡುವರು, ದೇಹವೇ ದೇಗುಲ, ಮಣ್ಣು ದೈವ ಮೊರದೈವ ದೈವ ದೈವವೆಂದು ಕಾಲಿಡಲಿಂಬಿಲ್ಲ, ಲಾಂಛನಕೆ ಶರಣೆಂಬೆ ಇತ್ಯಾದಿ ಮಾತುಗಳನ್ನ ಇಮ್ಮೊನೆಯ ಖಡ್ಗದ ಮೊದಲ ಮುಖವಾಗಿಯೇ ನೋಡಬೇಕು. ಈ ಮಾತುಗಳು ಇನ್ನೊಬ್ಬರ ಸಾಂಸ್ಕೃತಿಕ ಸ್ವಾತಂತ್ರ್ಯದ ನಿರಾಕರಣೆಯ ಮಾತುಗಳಲ್ಲ, ತಮ್ಮ ಶ್ರೇಷ್ಠತೆಯ ಪ್ರತಿಪಾದನೆಯ ಮಾತುಗಳೂ ಅಲ್ಲ. ದೇಗುಲ ಸಂಸ್ಕೃತಿ ಮೂಲದ ಅಸಮಾನತೆ, ಶೋಷಣೆ, ಕುನಂಬಿಕೆ, ಜಾತೀಯ ಕಟ್ಟುಪಾಡು, ಅನರ್ಥ ಆಚರಣೆಗಳ ನಿರಾಕರಣೆಯ ಮಾತುಗಳು. ಈ ಮಾತುಗಳ ಹಿಂದೆ ಗೇಲಿಯಿಲ್ಲ, ತಿರಸ್ಕಾರವಿಲ್ಲ, ಸದಾಶಯವಿದೆ. ಏನಾದರೂ ಬಸವಣ್ಣ ತನ್ನವರಿಂದಲೇ ಭವಿಷ್ಯದಲ್ಲಿ ಸೋತ. ಇದು ಒಬ್ಬ ವ್ಯಕ್ತಿಯ ಸೋಲಲ್ಲ, ಸಾಮಾಜಿಕ ವಾಸ್ತವದೆದುರಿಗೆ ಒಂದು ಆದರ್ಶಕ್ಕಾದ ಸೋಲು. ಗಾಂಧಿಯ ಸಾವು ಮತ್ತು ಅಂಬೇಡ್ಕರ್ ಪ್ರತಿಮೆಗೆ ಇಂದೂ ಆಗುತ್ತಿರುವ ಅವಮಾನಗಳನ್ನು ನಾವು ಈ ಹಿನ್ನೆಲೆಯಲ್ಲೇ ನೋಡಬೇಕಿದೆ. ಸಾಮಾಜಿಕ ಅಸಮಾನತೆಯನ್ನು ಹೊಡೆದೋಡಿಸುವ, ಅಸಮಾನ ಶ್ರೇಣೀಕರಣವನ್ನು ಕದಲಿಸುವ, ಇದೆಲ್ಲದರ ಮೂಲ ಬಹುದೇವಾರಾಧಕ ಸಂಸ್ಕೃತಿಯನ್ನು ಛಿದ್ರಿಸುವ ಪ್ರಯತ್ನಕ್ಕೆ ನಮ್ಮ ವ್ಯವಸ್ಥೆ ಮಾಡಿದ, ಮಾಡುತ್ತಿರುವ ಮುಖಭಂಗ ಇದು.



ತಂಜಾವೂರಿನ ಬೃಹದೀಶ್ವರ ದೇವಾಲಯ

ನಮ್ಮಲ್ಲಿ ಎಂದೂ ದೇಗುಲ ಸಂಸ್ಕೃತಿ ಏಕರೂಪಿಯಾಗಿರಲಿಲ್ಲ. ಸೂತ್ರೀಕರಣಗಳನ್ನು ಮೀರಿದಂತೆ ಇದು ಬೆಳವಣಿಗೆಯಾಗಿದೆ. ಆದರೂ ಶಿಷ್ಟ ದೇಗುಲ-ಮೇಲ್ವರ್ಣದ ದೇಗುಲ ಸಂಸ್ಕೃತಿಯೇ ಭಾರತೀಯ ದೇಗುಲ ಸಂಸ್ಕೃತಿ ಎಂಬಷ್ಟರ ಮಟ್ಟಿಗೆ ಪ್ರಚಾರವಾಗಿದೆ. ಆದ್ದರಿಂದ ನಮ್ಮ ನಿಮ್ಮ ವರ್ಗದ ಸಾಂಸ್ಕೃತಿಕ ಇತಿಹಾಸದ ತಿಳುವಳಿಕೆಗಾಗಿ ನಾವಿಂದು ನಮ್ಮ ಜನಪದ ದೇಗುಲ ಸಂಸ್ಕೃತಿಯ ಅಧ್ಯಯನವನ್ನು ಕೈಗೊಳ್ಳಲೇಬೇಕಾಗಿದೆ. ಬುಡಕಟ್ಟು ದೇವರ, ಜಾತ್ರೆ, ಹಬ್ಬ, ಆಚರಣೆ ಮತ್ತು ವೀರರ ಅಧ್ಯಯನವು ಶಿಷ್ಟ ದೇಗುಲ ಸಂಸ್ಕೃತಿಯ ಅವಾಂತರಗಳಿಗಿಂತ ಭಿನ್ನವಾದ ಮಾನವೀಯ ಸಂಬಂಧಗಳ ಇತಿಹಾಸವನ್ನು ತಿಳಿಸಬಲ್ಲುದು.

ನಮ್ಮ ಕೆಳವರ್ಗ ಬುಡಕಟ್ಟು ಜನರ ಅವರದೇ ದೇಗುಲಗಳು ಇಂದು ಅಷ್ಟಾಗಿ ಉಳಿದಿಲ್ಲ. ಉಳಿದಿರುವವುಗಳ ಕಡೆ ನಮ್ಮ ಗಮನವಿಲ್ಲ. ಜಾಗತೀಕರಣದ ಮೊದಲ ಹಂತವಾದ ಸಂಸ್ಕೃತಾನುಕರಣದಿಂದ ಮತ್ತು ಶಿಷ್ಟರ ದೊಡ್ಡಣ್ಣತನದಿಂದ ಬುಡಕಟ್ಟು ದೇಗುಲ ಸಂಸ್ಕೃತಿ ಸ್ವಜನರಿಂದಲೇ ನಿರ್ಲಕ್ಷಿತವಾಗಿದೆ. ಇಂದು ಎಷ್ಟೋ ಜನಪದ ದೈವಗಳಿಗೆ ದೇಗುಲಗಳೇ ಇಲ್ಲ. ದೇಗುಲ ರಾಹಿತ್ಯವೇ ಅವುಗಳ ಲಕ್ಷಣವಾಗಿದೆ. ಹೊಳೆ ಚೌಡಿ,

ಚ್ಯೋತೆಮ್ಮ, ಮುನಿಯಪ್ಪ. ಇಂಥ ದೇಗುಲ ರಹಿತ ಅನೇಕ ದೈವಗಳು ರಾಜಕೀಯ ಮತ್ತು ಆರ್ಥಿಕ ಸ್ತರಕ್ಕೆ ನೆಗೆತವನ್ನು ಪಡೆಯದೆ ಆಚರಣೆಯ ಹಂತದಲ್ಲೇ ಉಳಿದುಬಿಡುತ್ತವೆ. ಶಿಷ್ಟ ದೇಗುಲಗಳು ಸಮಾಜದಲ್ಲಿ ಅನೇಕ ಅಲ್ಲೋಲ ಕಲ್ಲೋಲಗಳಿಗೆ ಕಾರಣವಾದರೆ ಇವು ಸಮಾಜದ ಆಂತರಿಕ ಸಾಮರಸ್ಯಕ್ಕೆ ದುಡಿದಿವೆ.

ನಮ್ಮ ಇತಿಹಾಸದ ಅನೇಕ ರಾಜಕೀಯ ಪಲ್ಲಟಗಳು ಪ್ರಭು ಮತ್ತು ಪುರೋಹಿತರ ಸ್ನೇಹ ಮತ್ತು ವೈಷಮ್ಯಗಳಿಂದಾಗಿ ಘಟಿಸಿವೆ. ಪ್ರಭು-ಪುರೋಹಿತರನ್ನು ಬೆಸೆಯುವ ಮಾಧ್ಯಮಗಳಾಗಿ ದೇಗುಲಗಳು ವರ್ತಿಸಿವೆ. ದೇಗುಲ ಮತ್ತು ಪ್ರಭುತ್ವಗಳ ನಡುವೆ ಒಂದು ನಿಯಂತ್ರಕ ಸಂಬಂಧ ಇದ್ದದ್ದನ್ನು ಕಾಣಬಹುದು. ಅಂದಿನ ಕೌಟಿಲ್ಯ-ಚಂದ್ರಗುಪ್ತ, ಪತಂಜಲಿ-ಪುಷ್ಯಮಿತ್ರಶುಂಗ, ನಾಗಸೇನ-ಮಿನಾಂಡರ್, ಅಷ್ಟೇ ಯಾಕೆ ಇಂದಿರಾ ಮತ್ತು ಗುರುದ್ವಾರದ ಬ್ಲೂ ಸ್ಟಾರ್ ಆಪರೇಶನ್, ಬಾಬ್ರಿ ಮಸೀದಿ, ರಾಮ ಮಂದಿರ ಮತ್ತು ಬಿ.ಜೆ.ಪಿ. ಮುಂತಾದ ಇತ್ತೀಚಿನ ಸಂಬಂಧಗಳು ದೇಗುಲ ಮತ್ತು ರಾಜಕೀಯ ಪಲ್ಲಟಗಳಿಗೆ ಉದಾಹರಣೆಗಳು. ಮುಂದಿನ ಮಾಹಿತಿ ತಂತ್ರಜ್ಞಾನದ ಯುಗದಲ್ಲೂ ಕೂಡ ಈ ಸಂಬಂಧ ಮುಂದುವರಿಯಬಹುದು. (ಇಂಟರ್‌ನೆಟ್ ದೇವರನ್ನಾಗಿ ಗಣೇಶನನ್ನು ಇತ್ತೀಚೆಗೆ ಸ್ವೀಕರಿಸಲಾಗಿದೆ).

ಮಧ್ಯಕಾಲೀನ ಇತಿಹಾಸದಲ್ಲಂತೂ ದೇಗುಲಗಳು ಮತ್ತು ಪುರೋಹಿತರು (ಬ್ರಾಹ್ಮಣರು) ರಾಜ ಶಾಹಿಯೊಂದಿಗೆ ಪ್ರಬಲ ಸಂಬಂಧ ಇಟ್ಟುಕೊಂಡಿದ್ದಿದೆ. ''ಗುಜರಾತಿನ ಸೋಮನಾಥ ದೇವಾಲಯಕ್ಕೆ ಸಾವಿರ ಗ್ರಾಮಗಳನ್ನು ದತ್ತಿ ಬಿಡಲಾಗಿತ್ತು. ಇಲ್ಲಿ ಒಂದು ಸಾವಿರ ಬ್ರಾಹ್ಮಣ ಪೂಜಾರಿಗಳಿದ್ದರು. ಗೆಜ್ಜೆಗಳನ್ನು ಕಟ್ಟಿದ ೨೦೦ ಮಣ ತೂಕದ ಚಿನ್ನದ ಸರ ಈ ದೇಗುಲದ ಒಂದು ಮೂಲೆಯಲ್ಲಿ ತೂಗಾಡುತ್ತಿತ್ತು. ಇದರಲ್ಲಿ ೫೦೦ ಮಂದಿ ದೇವದಾಸಿಯರೂ ೨೦೦ ಮಂದಿ ಸಂಗೀತಗಾರರೂ ಇದ್ದರು. ಈ ದೇವಾಲಯದಿಂದ ೧೦೨೦ರಲ್ಲಿ ಘಜ್ನಿ ಮಹಮ್ಮದನು ಲೂಟಿ ಮಾಡಿದ ಸಂಪತ್ತಿನ ನೂರನೇ ಒಂದು ಭಾಗ ಕೂಡ ಹಿಂದೂಸ್ತಾನದ ಯಾವುದೇ ಮಹಾರಾಜನ ಖಜಾನೆಯಲ್ಲೂ ಇರಲಿಲ್ಲ'', ಎನ್ನುತ್ತಾರೆ ಸ್ವಾಮಿ ಧರ್ಮತೀರ್ಥ. ತಂಜಾವೂರಿನ ದೇಗುಲದ ಕತೆ ಕೂಡ ಇಷ್ಟೇ ರೋಚಕವಾದದ್ದು. ''ಇದು ಚೋಳರ ಕಾಲದಲ್ಲಿ ಇಡೀ ದಕ್ಷಿಣ ಭಾರತಕ್ಕೇ ಶ್ರೀಮಂತ ದೇಗುಲವಾಗಿತ್ತು. ಇದು ವ್ಯಾಪಾರಿ ಸಂಘಗಳಿಗೆ ಬಡ್ಡಿಗೆ ಹಣ ನೀಡುವ ಲೇವಾದೇವಿ ಕೆಲಸವನ್ನು ಮಾಡುತ್ತಿತ್ತು. ಇದರ ಆದಾಯವು ೫೦೦ ಚಿನ್ನದ ನಾಣ್ಯ, ೨೫೦ ಮುತ್ತುಗಳೂ, ೬೦೦ ಬೆಳ್ಳಿನಾಣ್ಯ ಆಗಿತ್ತು, ಮತ್ತು ನೂರಾರು ಹಳ್ಳಿಗಳಿಂದ ವಿವಿಧ ರೂಪದ ದೇಣಿಗೆಗಳೂ ಬರುತ್ತಿದ್ದವು. ಇಲ್ಲಿ ೪೦೦ ದೇವದಾಸಿಯರೂ, ೨೧೨ ಸೇವಕರೂ, ೫೭ ಜನ ಸಂಗೀತಗಾರರೂ ಮತ್ತು ಗಮಕಿಗಳೂ, ನೂರಾರು ಪೂಜಾರಿಗಳೂ ಸೇವೆ ಸಲ್ಲಿಸುತ್ತಾ ಇದರ ಆಧಾರದಲ್ಲಿಯೇ ಬದುಕಿದ್ದರು'' (ರೊಮಿಲಾ ಥಾಪರ್). ದೇಗುಲಗಳ ಎಲ್ಲ ಸೇವೆ, ಸೇವಕರು, ಸಂಪತ್ತುಗಳ ಯಜಮಾನ್ಯ ದಲ್ಲಾಳಿಗಳಾದ ಪುರೋಹಿತರದ್ದೇ ಆಗಿತ್ತು. ಇಂದು ನಮ್ಮಲ್ಲಿ ಎಲ್ಲ ಉದ್ಯಮಗಳಲ್ಲೂ ದಲ್ಲಾಳಿಗಳು ಅತಿ ಹೆಚ್ಚು ಲಾಭ ಪಡೆಯುತ್ತಿರುವಂತೆ ಹಿಂದೆ ಕೂಡ ದೈವ ಮತ್ತು ಭಕ್ತರ ನಡುವೆ ದಲ್ಲಾಳಿಗಳಾದ ಪುರೋಹಿತರೇ ಅತ್ಯಂತ ಹೆಚ್ಚಿನ ಲಾಭ ಪಡೆಯುತ್ತಿದ್ದರು. ಇದು ವೈಯಕ್ತಿಕ ಲಾಭವಾಗಿರಲಿಲ್ಲ, ಪಾರಂಪರಿಕ ಲಾಭವಾಗಿತ್ತು.

ದೇಗುಲ ಸಂಸ್ಕೃತಿಯ ಚರಿತ್ರೆಯಲ್ಲಿ ಪುರೋಹಿತರು ಭಕ್ತ ಮತ್ತು ದೇವರ ನಡುವೆ ಮಾತ್ರ ದಲ್ಲಾಳಿಗಳಾಗಿ ವರ್ತಿಸಿಲ್ಲ. ಪ್ರಜೆ ಮತ್ತು ಪ್ರಭುಗಳ ನಡುವೆಯೂ ದಲ್ಲಾಳಿಗಳಾಗಿ ವರ್ತಿಸಿದ್ದಾರೆ. ಹೀಗೆ ವರ್ತಿಸಲು ದೇಗುಲ ಮತ್ತು ಅಕ್ಷರಜ್ಞಾನ ಇವರಿಗೆ ಕುಮ್ಮಕ್ಕು ನೀಡಿವೆ. ಕೆಲವು ಅಗ್ರಹಾರಗಳ, ಬ್ರಹ್ಮಪುರಿಗಳ ಮಹಾಜನರು ವೇದ-ವೇದಾಂಗ



ಪಾರಂಗತರಾಗಿದ್ದು ಇವರ ಆಸುಪಾಸು ದೇಗುಲಗಳಿಗಾಗಲೀ ಇತರರಿಗಾಗಲೀ ಯಾರೇ ದಾನ ದತ್ತಿ ನೀಡಬೇಕಾದರೂ ಇವರ ಒಪ್ಪಿಗೆ ಪಡೆದು ಕಾಲನ್ನು ಕರ್ಚಿ (ತೊಳೆದು) ನೀಡಬೇಕಾಗಿತ್ತು (ಶಾಸನ ಸಂಪುಟ ೨, ಪು. ೪೫; ಕನ್ನಡ ವಿ.ವಿ.). ಇಂದೂ ಕೂಡ ರಾಜಕಾರಣಿ ಮತ್ತು ಮಠಾಧೀಶರ ಸಂಬಂಧ ಇದಕ್ಕಿಂತ ಭಿನ್ನವಾಗೇನೂ ಇಲ್ಲ.

ದೇಗುಲಗಳಿಗೆ-ಪುರೋಹಿತರಿಗೆ ಹಳ್ಳಿ, ಹಳ್ಳಿಗಳನ್ನೇ ದತ್ತಿ ನೀಡಿದ, ಕರವಿನಾಯಿತಿ ನೀಡಿದ ಅನೇಕ ಶಾಸನಗಳು ನಮ್ಮಲ್ಲಿವೆ. ಹೀಗೆ ದಾನ ದತ್ತಿ ನೀಡುವಾಗ ಆ ಹಳ್ಳಿಯ ಜನ, ಅವರ ಅಭಿಲಾಷೆ, ಆ ಭೂಗೋಳದೊಂದಿಗಿನ ಅವರ ಭಾವನಾತ್ಮಕ ಸಂಬಂಧ, ಇತ್ಯಾದಿಗಳೆಲ್ಲಾ ಧಿಕ್ಕರಿಸಲ್ಪಡುತ್ತಿದ್ದವು. ಆದರೂ ಇವು ಪುಣ್ಯಕಾರ್ಯಗಳೆನಿಸಿಕೊಂಡಿವೆ. ಎಲ್ಲ ಶಾಸನಗಳಲ್ಲೂ ಈ ದಾನ ನೇಮಗಳನ್ನು ಮೀರಿದವರಿಗೆ ನಾರಕ ಪ್ರಾಪ್ತಿ. [illegible] ಕಪಿಲೆಗಳನ್ನು ಕೊಂದ ಪಾಪ. [illegible] ವಧಿಸಿದ ದೋಷ ಪ್ರಾಪ್ತಿ [illegible] ಬೆದರಿಕೆಗಳನ್ನು ಹಾಕಲಾಗಿದೆ. ಕಾಲಕ್ರಮೇಣ ಜನ ಶಾಸನ ನೇಮಗಳನ್ನು ಮೀರುತ್ತಿದ್ದರೆಂದೇ [illegible] ಬೆದರಿಕೆಗಳು ಹೇಳುತ್ತವೆ.

ನಮ್ಮ ದೇಗುಲ ಸಂಬಂಧಿ [illegible], ಪುರೋಹಿತ-ಪ್ರಭು ಪರ ಆಗಿವೆ. ದೇವತೆಗಳ ಚಿನ್ನದ ವಿಗ್ರಹಗಳನ್ನು ಮಾಡಿಸಿ, ಪೂಜಿಸಿದ ನಂತರ ಅವುಗಳನ್ನು ಬ್ರಾಹ್ಮಣರಿಗೆ ದಾನ ಮಾಡುವುದರಿಂದ ಸಾಧಿಸಲಾಗದಂಥ ಒಳ್ಳೆಯ ಫಲ ಯಾವುದೂ ಇಲ್ಲ. ''ಅಂಥ ದಾನಗಳಿಂದ ಪಾಪ ಪರಿಹಾರವಾಗುತ್ತದೆ ಗುಣವಾಗದ ಖಾಯಿಲೆ ಗುಣವಾಗುತ್ತದೆ. ವಿಪತ್ತು ನಿವಾರಣೆಯಾಗುತ್ತದೆ. ಆಸ್ತಿಪಾಸ್ತಿಗೆ ಆಗುವ ನಷ್ಟ ಅಥವಾ ಹಾನಿ ತಪ್ಪುತ್ತದೆ''. ಜನ್ಮ ಜನ್ಮಾಂತರಗಳಿಗೂ ಪುಣ್ಯ ಹರಿದು ಬರುತ್ತದೆ. ಪಿತೃ ಪಿತಾಮಹರೆಲ್ಲ ಸ್ವರ್ಗ ಸೇರುತ್ತಾರೆ. ಪುತ್ರ ಪೌತ್ರಾದಿ ಸುಖಗಳು ಒದಗುತ್ತವೆ. ಇಂಥ ಅನೇಕ ನಂಬಿಕೆ-ಆಚರಣೆಗಳು ಸರಿ ಸುಮಾರು ಎಲ್ಲಕಡೆಯೂ ಇವೆ.

ದೇಗುಲಗಳ ಮೂಲಕ ಬಿಟ್ಟಿ ಸಂಪತ್ತಿನ ಜೊತೆ ಬಿಟ್ಟಿ ಸೇವೆಯನ್ನು ಪಡೆಯಲು ಪುರೋಹಿತ ವರ್ಗ ಹಿಂದೆ ಬಿದ್ದಿಲ್ಲ. ಕಂಚುಗಾರ, ಅಕ್ಕಸಾಲಿ, ಚಕ್ರಸಾಲಿ, ಚಮ್ಮಾರ, ಭಜಂತ್ರಿ, ಮಡಿವಾಳ, ದರ್ಜಿ, ಹೂಗಾರ, ಪಂಜುಗಾರ, ಬೋಯಿ, ದಾಸಯ್ಯ, ಬಡಗಿ, ಗಾಣಿಗ, ನೀರಗಂಟಿ, ತೋಟಿ, ದೇವದಾಸಿ, ಶಿಲ್ಪಿ, ಗಾಯಕ, ನರ್ತಕರು ಮೊದಲಾದ ಕಸುಬುದಾರರು ತಮ್ಮ ಸೇವೆಗಳನ್ನ ಬಿಟ್ಟಿಯಾಗಿ ದೇಗುಲಕ್ಕೆ ಸಲ್ಲಿಸಬೇಕಿತ್ತು. ಹಾಗೆ ಬಿಟ್ಟಿಯಾಗಿ ಸೇವೆ (ಸರಕು) ಸಲ್ಲಿಸುವುದು ಪುಣ್ಯಕಾರ್ಯವೆಂದು ನಂಬಿಸಲಾಗಿತ್ತು.

ರಾಜದೇಣಿಗೆ, ದಕ್ಷಿಣೆ, ಹುಂಡಿ ಸಂಗ್ರಹಣೆ, ದಾನ, ದತ್ತಿ ಇತ್ಯಾದಿಗಳಿಂದ ಬರುವ ಆದಾಯ, ದೇವದಾಸಿ ನರ್ತಕಿ, ವಾದಕರ ಆದಾಯಗಳು, ಕೃಷಿಕ ಕಸುಬುದಾರರ ವಾರ್ಷಿಕ ಸಂದಾಯಗಳು, ಚಿನ್ನ ವಜ್ರ ಬೆಳ್ಳಿಯಾದಿ ಆಭರಣ ಸೇವೆ, ಹೀಗೆ ನೂರಾರು ಮೂಲಗಳಿಂದ ದೇಗುಲಕ್ಕೆ ಸಂಪತ್ತು ಹರಿದು ಬರುತ್ತಿತ್ತು. [illegible] ಲೇವಾದೇವಿ, ಅನ್ನ ಸತ್ರ ನಿರ್ವಹಣೆ, ವಿದ್ಯಾ ದಾನ [illegible] ಒಂದೆರಡು ಕೆಲಸಗಳನ್ನು ಬಿಟ್ಟರೆ [illegible] ವಾದ ಸಂಪತ್ತೆಲ್ಲ ಮತ್ತೆಲ್ಲೂ ಹೂಡಿಕೆಯಾಗದೇ ಸುಮ್ಮನೆ ಕೊಳೆಯುತ್ತಿತ್ತು. ಇದಲ್ಲದೆ ಅಪರಾಧಿಗಳ ತಪ್ಪು ದಂಡ, ಅಪುತ್ರರ ಆಸ್ತಿ, ಸಂಪತ್ತುಗಳೂ ದೇಗುಲಕ್ಕೇ ಸೇರುತ್ತಿದ್ದವು. ಹೀಗೆ ದೇಗುಲಗಳು ಸಂಪತ್ತಿನ ಉಗ್ರಾಣಗಳಾಗಿ ಆರ್ಥಿಕ ಹರಿವಿನ ಅಡ್ಡಗೋಡೆಗಳಾಗಿ ವರ್ತಿಸಿರುವುದು ಇತಿಹಾಸವೂ ಹೌದು, ವರ್ತಮಾನವೂ ಹೌದು.

([illegible])

[illegible]
[illegible]

ವ್ಯಾಸರಾಯ ಬಲ್ಲಾಳರಿಗೆ ಅನಕೃ ಪ್ರಶಸ್ತಿ

ಅನಕೃ ಪ್ರತಿಷ್ಠಾನ ಮತ್ತು ನಿರ್ಮಾಣ ಶೆಲ್ಟರ್ಸ್ ಸಹಯೋಗದಿಂದ ನೀಡುವ ಅನಕೃ ಪ್ರಶಸ್ತಿಯನ್ನು ಕನ್ನಡದ ಹಿರಿಯ ಲೇಖಕರಾದ ಶ್ರೀ ವ್ಯಾಸರಾಯ ಬಲ್ಲಾಳರಿಗೆ ನೀಡಲಾಯಿತು. ಜೂನ್ ೪ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ವಾರ್ತಾ ಸಚಿವರಾದ ಪ್ರೊ|| ಬಿ. ಕೆ. ಚಂದ್ರಶೇಖರ್ ಅವರು ಶ್ರೀ ಬಲ್ಲಾಳರಿಗೆ ಪ್ರಶಸ್ತಿ ಪ್ರದಾನ ಮಾಡಿದರು.



ಪ್ರೊ|| ಎ. ಎನ್. ಮೂರ್ತಿರಾವ್ ಅವರ ೧೦೧ ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ 'ಹೊಸತು' ಪರವಾಗಿ ಅವರಿಗೆ ಶುಭಕೋರಿ ಗೌರವಿಸಲು ಸಂಪಾದಕ ಡಾ|| ಜಿ. ರಾಮಕೃಷ್ಣ ಹಾಗೂ ಸಂಪಾದಕ ಮಂಡಲಿಯ ಡಾ|| ಎಸ್. ಗಾಯತ್ರಿ ಅವರ ಮನೆಗೆ ತೆರಳಿದ್ದರು. ಪ್ರೊ|| ಮೂರ್ತಿರಾಯರ ಮಗ ಶ್ರೀ. ಸುಬ್ಬರಾಮಯ್ಯನವರೂ ಚಿತ್ರದಲ್ಲಿದ್ದಾರೆ.



ನವಕರ್ನಾಟಕ ಪುಸ್ತಕಗಳ ಬಿಡುಗಡೆ

ಮೈಸೂರಿನಲ್ಲಿ ದಿನಾಂಕ ೧೦-೬-೨೦೦೦ದಂದು ನಡೆದ ಸಮಾರಂಭದಲ್ಲಿ, ಸುತ್ತೂರು ಸಿಂಹಾಸನ ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ನವಕರ್ನಾಟಕ ಪ್ರಕಾಶನದ ಇತ್ತೀಚಿನ ಪ್ರಕಟಣೆಗಳಾದ **ದೇಶ ವಿದೇಶಗಳ ಪರಿಚಯ, ಗಡಿಯಾರದ ಕಥೆ, ವಿಸ್ಮಯಗಳ ನಾಡಿನಲ್ಲಿ, ನೀವು ಬಳಸುವ ಔಷಧಗಳು, ಸ್ವಾಸ್ಥ್ಯ ಸಂಗಾತಿ** ಮತ್ತು **ಕಳವು ಕಲಿಸುವ ದೇವರು** – ಈ ಆರು ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಸಾಹಿತಿ ಶ್ರೀ ಲಿಂಗದೇವರು ಹಳೆಮನೆ ಅಧ್ಯಕ್ಷತೆ ವಹಿಸಿದ್ದರು, ಲೇಖಕಿ ಶ್ರೀಮತಿ ಆರ್ಯಾಂಬ ಪಟ್ಟಾಭಿ ಕೃತಿಗಳ ಪರಿಚಯ ಮಾಡಿಸಿದರು. ಪ್ರಾಧ್ಯಾಪಕ ಡಾ|| ಎಸ್. ಶಿವರಾಜಪ್ಪ ಪ್ರಾಸ್ತಾವಿಕ ಭಾಷಣ ಮಾಡಿದರು. **ಗಡಿಯಾರದ ಕಥೆ**ಯ ಲೇಖಕರಾದ ಶ್ರೀ ಎಂ. ಎಸ್. ಚಂದ್ರಶೇಖರ ಅಯ್ಯರ್ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

(೫೧ನೇ ಪುಟದಿಂದ)

ಮ್ಯೂಸಿಯಂಗಳಲ್ಲಿ ಓದಿಸಬೇಕು ಎಂಬುದು ದಂಪತಿಗಳ ಬಯಕೆಯಾಗಿತ್ತು. ನಾವು ಯಾವ ಯಾವ ವಿಶ್ವವಿದ್ಯಾಲಯಗಳಲ್ಲಿ ಯಾವ್ಯಾವ ಪದವಿ ಇದೆ, ಸಲಕರಣೆ ಇವೆ ಎಂದು ವಿವರಿಸುತ್ತಿದ್ದೆವು.

ನಾವು ಕಡಲ ಜೀವಿಗಳ ಸೌಂದರ್ಯವನ್ನು ಅನುಭವಿಸಿದೆವು, ಅವುಗಳ ಬದುಕಿಗೆ ವಿಸ್ಮಯಗೊಂಡೆವು. ನಿಜ. ಅವರ ಇಷ್ಟಕ್ಕೇ ನಾವು ಹೋದವರಲ್ಲ. ಸಾಧ್ಯವಾದಷ್ಟು ಅಲ್ಲಿನ ರುಚಿಕರವಾದ ಮೀನುಗಳನ್ನು ತಿನ್ನಬೇಕು ಎಂಬ ಬಾಯಿ ಚಪಲವೂ ನಮಗಿತ್ತು. ವಿಸ್ಮಯಗೊಳಿಸುವ ಸೌಂದರ್ಯಗಳು, ಅರಿಯುವ ಕುತೂಹಲ, ತಿನ್ನುವ ಆಸೆ ಇವುಗಳ ನಡುವೆ ನಮಗೆ ದ್ವಂದ್ವಗಳೇನಿರಲಿಲ್ಲ. ಆದರೆ ಮೀನನ್ನು ತಿನ್ನುವ ಚಪಲದಿಂದ ನಾವು ಆತ್ಮೀಯ ಮಿತ್ರನೊಬ್ಬನನ್ನು ಕಳೆದುಕೊಳ್ಳುವ ಸಂದರ್ಭ ಎದುರಾಗಿತ್ತು. ಒಮ್ಮೆ ಮಿತ್ರನ ತೋಟದಲ್ಲಿ [illegible] ತೋಟದ ಕಾಲುವೆಯಲ್ಲಿ ಬಗ್ಗಿ ನೋಡಿದೆ. ನೀರು ಕನ್ನಡಿಯಂತಿತ್ತು. ಕುಚ್ಚು ಮೀನುಗಳು ತಮ್ಮ ಬೆಟ್ಟದ ಏಣಿನಂತಹ ಕಪ್ಪು ಬೆನ್ನನ್ನು ತೋರಿಸುತ್ತ ಆಡುತ್ತಿದ್ದವು. ನನಗೆ ಜೀವ ತಡೆಯದೆ ''ಲೋ! ಒಂದು ಮೀನು ಹಿಡಿದರೆ ಫ್ರೈ ಮಾಡಬಹುದು ಕಣೋ'' ಎಂದು ಕೇಳಿದೆ. ಮಿತ್ರನಿಗೆ ಇದು ಇಷ್ಟವಾಗಲಿಲ್ಲ. ಅವನು ಕಟುವಾಗಿ ''ಥೂ ನಿನ್ನ, ಜಾತಿ ಬುದ್ಧಿ ಎಲ್ಲಿ ಬಿಡ್ತೀರಿ'' ಎಂದು ಛೀಮಾರಿ ಹಾಕಿದ. ಸಸ್ಯಾಹಾರಿಯಾದರೂ ಅವನು ಮೀನನ್ನು ಪ್ರೀತಿಯಿಂದ ಸಾಕಿದ್ದ. ಅವನಿಗೆ ನನ್ನ ಬೇಡಿಕೆ ಸಹಜವಾಗಿ ಕಲಕಿತ್ತು. ನನಗೂ ಪಿತ್ತ ಕೆರಳಿ ''ನೀನು ಮೀನು ಕೊಡದಿದ್ದರೆ ಕತ್ತೆಬಾಲ ಹೋಯಿತು. ಅದನ್ನು ತಿಂದೇ ಸಾಯಬೇಕು ಅಂತಿಲ್ಲ'' ಎಂದು ಖಾರವಾಗಿ ಮಾತಾಡಿ ಬಂದೆ. ಮೀನುಗಳಿಂದ ಹಾಳಾದ ಸಂಬಂಧ ಸುಧಾರಿಸಲು ಕೆಲವು ದಿನಗಳೇ ಹಿಡಿದವು. ಅವನ ಭಾವನೆಗೆ ನೋವು ಉಂಟು ಮಾಡಬೇಕು ಎಂದು ನಾನು ಕೇಳಿದ್ದಲ್ಲ. ನಮ್ಮ ಕಡೆ ಕುಚ್ಚು ಮೀನಿನ ಸಾರು, ರಾಗಿ ಮುದ್ದೆ ಎಂದರೆ ಪರಮ ಸುಖ. ಅದನ್ನು ಕಂಡಾಗ 'ತಿನ್ನಬೇಕು' ಎಂದಲ್ಲದೆ ಬೇರೆ ಅನಿಸುವುದಿಲ್ಲ. ಮೀನು, ಮಾಂಸ ತಿನ್ನುವವರು ಯಾವುದೇ ಪ್ರಾಣಿ ಅಥವಾ ಪಕ್ಷಿಯನ್ನು ಕಂಡಾಗ, 'ಇದನ್ನು ಹೇಗೆ ಕತ್ತರಿಸಿ ತಿನ್ನಲಿ' ಎಂದೇ ಯೋಚಿಸುತ್ತಾರೆ ಎಂದು ಕೆಲವರು ತಿಳಿದಂತೆ ಕಾಣುತ್ತದೆ. ಅದು ನಿಜವಲ್ಲ. ಯಾವುದನ್ನು ತಿನ್ನಬೇಕು ಮತ್ತು ಸೌಂದರ್ಯವಾಗಿ ಸವಿಯಬೇಕು ಎಂಬುದನ್ನು ನಿಯಂತ್ರಿಸುವುದು ವೈಯಕ್ತಿಕ ಅಭಿರುಚಿಯೋ ಸಂಸ್ಕೃತಿಯೋ? 'ಕಾನೂರು ಹೆಗ್ಗಡಿತಿ' ಕಾದಂಬರಿಯ ಓಬಯ್ಯನಿಗೆ ತುಂಗಾ ನದಿಯಲ್ಲಿ ಚುಳುಗುಡುವ ದೊಡ್ಡ ಮೀನುಗಳನ್ನು ಕಂಡಾಗ 'ಇವು ದೇವರ ಮೀನುಗಳು' ಎಂಬ ಭಯವನ್ನು ಹತ್ತಿಕ್ಕಿ ಮೀನು ಕದ್ದು ಹಿಡಿಯುತ್ತಾನೆ. ಅಂಡಮಾನಿನ ಫುಟಾಣಿ ಸಾರ್ಜೆಂಟ್ ಮೀನುಗಳನ್ನು, ಕಾಮನಬಿಲ್ಲಿನ ತುಂಡುಗಳಂತಹ ಚೆಲುವು ಮೀನುಗಳನ್ನು ಕಂಡಾಗ 'ಇದರ ಫ್ರೈ ಮಾಡಿದರೆ ಹೇಗಿರಬಹುದು' ಅನಿಸಲಿಲ್ಲ. ತಿನ್ನುವ ಮೀನುಗಳನ್ನು ಮಾರುಕಟ್ಟೆಯಲ್ಲಿ ನೋಡುವಾಗ ಅಯ್ಯೋ ಪಾಪ ಸತ್ತು ಬಿದ್ದಿವೆಯಲ್ಲಾ ಎಂಬ ಖೇದವಾಗಲಿ, ಅವನ್ನು ತಿನ್ನುವಾಗ ಪ್ರಾಣಹಿಂಸೆ ಮಾಡುತ್ತಿದ್ದೇವೆ ಎಂಬ ಧರ್ಮಸಂಕಟವಾಗಲೀ ಎಂದೂ ಬರಲಿಲ್ಲ. ಹೀಗಾಗಿ ಅಂಡಮಾನಿನ ಸವಿನೆನಪು ನಮ್ಮ ಕಣ್ಣುಗಳಲ್ಲಿ ಮಾತ್ರವಲ್ಲ, ನಾಲಿಗೆಗಳಲ್ಲೂ ಉಳಿಯಿತು.

ಡಾ|| ರಹಮತ್ ತರೀಕೆರೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬

ಯೋಗ ಪ್ರಯೋಗ-೧೨

ಜಿ. ರಾಮಕೃಷ್ಣ

ಈ ಹಿಂದೆ ತಿಳಿದಂತೆ ಶವಾಸನವು ನರ, ಸ್ನಾಯು ಮತ್ತು ಮಿದುಳಿಗೆ ಅತ್ಯಂತ ಹೆಚ್ಚಿನ ಸಡಿಲತೆ ನೀಡುವಂತಹ 'ವ್ಯಾಯಾಮ'. ಕಾಠಿಣ್ಯವನ್ನು ಕುಗ್ಗಿಸುವ ಸಾಧನವಾಗಿ ಇದಕ್ಕೆ ಮಹತ್ವವಿದೆ. ಶವಾಸನದಲ್ಲಿ ಒಂದು ರೀತಿಯ ಧ್ಯಾನದ ಛಾಯೆ ಇರುತ್ತದೆ. ಏಕೆಂದರೆ ಇಲ್ಲಿ ಮನಸ್ಸಿನ ಏಕಾಗ್ರತೆ, ಚಲನರಾಹಿತ್ಯ ಅಥವಾ ಸ್ಥಿರೀಕರಣಕ್ಕೆ ಆದ್ಯತೆಯುಂಟು. ಉಸಿರಾಟದ ಏಕಪ್ರಕಾರತೆಯೂ ಇದಕ್ಕೆ ಪೂರಕವಾಗಿರುತ್ತದೆ.

ಧ್ಯಾನ ಮತ್ತು ಶವಾಸನಗಳ ಅಭ್ಯಾಸ ಮಾಡಿಸುವಾಗ ಯೋಗ ತರಬೇತಿ ನೀಡುವ ಎಷ್ಟೋ ಸಂಸ್ಥೆಗಳಲ್ಲಿ ಮನಸ್ಸನ್ನು ಹಿಡಿದಿಟ್ಟು ಸಡಿಲತೆ ಸಿದ್ಧಿಸಿಕೊಳ್ಳಲು ಕೆಲವು ಆದೇಶ ಅಥವಾ ಸೂಚನೆಗಳನ್ನು ಕೊಡುವ ಪದ್ಧತಿ ಇದೆ. ಹಿಂದೆಲ್ಲಾ ಇದು ಇದ್ದಿತ್ತೋ ಇಲ್ಲವೋ ಪ್ರಸ್ತುತ ಲೇಖಕನಿಗೆ ಅಷ್ಟಾಗಿ ತಿಳಿಯದು. ಆದರೆ ಈಗ ಅದು ಹೆಚ್ಚಾಗಿದೆ. ಬಹುಶಃ ಪಾಶ್ಚಾತ್ಯರಿಗೆ ಯೋಗಸಾಧನೆ ಮಾಡಿಸುವ ಹಿನ್ನೆಲೆಯಲ್ಲಿ ಬೆಳೆದು ಬಂದಿರಬಹುದು. ಹಾಗೆ ಹೇಳಲು ಒಂದು ಕಾರಣವಿದೆ. ಅದೇನೆಂದರೆ, ಪಾಶ್ಚಾತ್ಯರು ಅದನ್ನು ನಿಯಮವೆಂಬಂತೆ ಅನುಸರಿಸುತ್ತಾರೆ. ಆದೇಶವು ತೀರಾ ಹೊಸದೇನೂ ಅಲ್ಲ. ಉದಾಹರಣೆಗೆ, ಶವಾಸನ ಮಾಡುತ್ತಿರುವವರಿಗೆ ಬೋಧಕರು ಹೇಳುತ್ತಾರೆ: ವಿಶಾಲವಾದ ನೀಲಿ ಆಕಾಶದಲ್ಲಿ ನೀನು ತೇಲುತ್ತಿದ್ದೀಯೇನೋ ಎಂಬಂತೆ ಭಾವನೆ ಬೆಳೆಸಿಕೊ; ಗಂಭೀರವಾದ ಸಮುದ್ರವು ನಿಶ್ಚಲವಾಗಿರುವಾಗ ನೀನು ಅದರ ಮೇಲೆ ತೇಲುತ್ತಿದ್ದೀಯೆ ಎಂದು ಭಾವಿಸಿಕೊ, ಇತ್ಯಾದಿ. ಅಂದರೆ, ಆ ಭಾವನೆಯೊಂದಿಗೆ ಏಕೀಭವಿಸಿಕೊಂಡರೆ ಶಾಂತತೆ, ಸ್ಥಿರತೆ, ಸಡಿಲತೆ ಸಿದ್ಧಿಸುತ್ತವೆ ಎಂಬುದು ಇಲ್ಲಿನ ಆಶಯ. ನನಗೆ ತಿಳಿದಂತೆ ಮಾನ್ಯ ಕೃಷ್ಣಮಾಚಾರ್ ಅವರಾಗಲಿ ಸ್ವಾಮಿ ಕುವಲಯಾನಂದರಾಗಲಿ ಶವಾಸನದ ಬಗ್ಗೆ ತಿಳಿವಳಿಕೆ ನೀಡುವಾಗ ಹೀಗೆ ಹೇಳಿಕೊಡುತ್ತಿರಲಿಲ್ಲ. ಅದು ಈಚಿನ ಪರಂಪರೆಯ ಒಂದು ಭಾಗ.

ಪಾಶ್ಚಾತ್ಯರಲ್ಲಿ ಮಾತ್ರವೇ ಏಕೆ, ನಮ್ಮಲ್ಲೂ ಕೆಲವರು ಸಡಿಲತೆಯನ್ನು ಪಡೆಯಲು ಬೇರೆ ಪದ್ಧತಿಗಳನ್ನು ಅನುಸರಿಸುವುದುಂಟು. ಯೋಗಾಚಾರ್ಯರಾಗಿದ್ದುಕೊಂಡು ಮದ್ದು-ಗುಂಡಿನ ವ್ಯವಹಾರಗಳಲ್ಲಿ ತೊಡಗಿರುತ್ತಿದ್ದ ಧೀರೇಂದ್ರ ಬ್ರಹ್ಮಚಾರಿಯವರು ಶರೀರವು ಸಡಿಲಗೊಳ್ಳಲು ಕೆಲವು ವಿಚಿತ್ರ ಪ್ರಕ್ರಿಯೆಗಳನ್ನು ಹೇಳಿಕೊಡುತ್ತಿದ್ದರು. ಉದಾಹರಣೆಗೆ, ಹೇಗೆ ಬೇಕೋ ಹಾಗೆ ಕುಳಿತು ಕಣ್ಣು, ಬಾಯಿ, ಕತ್ತುಗಳನ್ನು ಚಿತ್ರವಿಚಿತ್ರವಾಗಿ ಆಡಿಸುವುದು; ಅದರೊಟ್ಟಿಗೆ ಕೈ ಬೆರಳುಗಳನ್ನು ಹೇಗೇಗೋ ಮಡಿಸಿಕೊಳ್ಳುವುದು, ಇತ್ಯಾದಿ. ಇದರಿಂದ ಮಾಂಸಖಂಡಗಳು ಸಡಿಲಗೊಂಡು ಮನಸ್ಸಿಗೆ ಪ್ರಫುಲ್ಲತೆ ಉಂಟಾಗುತ್ತದೆಂದು ಅವರು ಹೇಳುತ್ತಿದ್ದರು. ಅವರ ಜೀವನದ ಕಡೆಯ ವರ್ಷಗಳಲ್ಲಿ ಅವರಲ್ಲಿ ಸಡಿಲತೆಯೂ ಇರಲಿಲ್ಲ, ಪ್ರಫುಲ್ಲತೆಯೂ ಇರಲಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ.

ಇದಕ್ಕೆ ಸಂವಾದಿಯಾದ ಇನ್ನೊಂದು ಪದ್ಧತಿಯ ಪರಿಚಯವನ್ನು ನಾನು ನೇರವಾಗಿ ಪಡೆದದ್ದು ಅಮೆರಿಕಾದ ಫಿಲಡೆಲ್ಫಿಯಾದಿಂದ ಸುಮಾರು ೫೦ಮೈಲಿ ದೂರದಲ್ಲಿರುವ ಒಂದು ಕೃಷಿ ಕ್ಷೇತ್ರದಲ್ಲಿ. ಸಂಜೆ ಸುಮಾರು ಐದು ಗಂಟೆಗೆ ಅಲ್ಲಿ ಹೆಚ್ಚು ಕಡಿಮೆ ಮೂವತ್ತು ಮಂದಿ ಜಮಾಯಿಸಿದ್ದರು. ಆಮೇಲೆ ಅದು ಅರವತ್ತರವರೆಗೆ ಏರುತ್ತಾ ಹೋಯಿತು. ಆ ದೊಡ್ಡ ಕ್ಷೇತ್ರದ ಮಾಲಕರಾದ ಕೃಷಿಕ ದಂಪತಿಗಳು ಪ್ರತಿವಾರವೂ ಸಾಮಾನ್ಯವಾಗಿ ಇಂತಹ ಕಾರ್ಯಕ್ರಮ ಆಯೋಜಿಸುತ್ತಿರುತ್ತಾರಂತೆ. ಆ ಬಿಳಿಯ ಅಭ್ಯಾಸಿಗಳ ಮಧ್ಯೆ ಒಬ್ಬರಾದರೂ ಕರಿಯರು ಇರುತ್ತಿರಲಿಲ್ಲವೆಂಬುದು ಒಂದು ವಿಶೇಷ. ನಾಲ್ಕೈದು ಮಂದಿ ಚೀನಾ ಸಂಜಾತರು ಸೇರಿಕೊಳ್ಳುತ್ತಿದ್ದರೆಂದು ತೋರುತ್ತದೆ. ಪುರುಷರು, ಮಹಿಳೆಯರು, ಹುಡುಗರು, ಮುದುಕರು, ಎಲ್ಲಾ ಒಟ್ಟಿಗೆ ಸೇರಿ ಅಭ್ಯಾಸ ಮಾಡುತ್ತಿದ್ದರು. ಇಡೀ ಕಾರ್ಯಕ್ರಮ ಸುಮಾರು ನಾಲ್ಕು ಗಂಟೆಗಳ ಕಾಲ ಜರುಗುತ್ತಿತ್ತು.

ಮೊದಲಿಗೆ ಸಾಂಪ್ರದಾಯಿಕ ಯೋಗಾಭ್ಯಾಸ : ಅಂದರೆ, ಕೆಲವು ಆಸನಗಳು, ಉಜ್ಜಾಯೀ, ಧ್ಯಾನ ಮತ್ತು ಶವಾಸನ. (ಶವಾಸನದಲ್ಲಿ ಸಮುದ್ರ, ಆಕಾಶ ಮತ್ತು ಮೆಲ್ಲಗೆ ಸದ್ದು ಮಾಡುವ ಒಂದು ಗಂಟೆ ಎಲ್ಲಾ ಸೇರಿದ್ದವು). ಎರಡನೆಯ ಭಾಗ ಸಡಿಲಿಕೆಗಾಗಿ; ವಿಶ್ವಾಯತನ ಆಶ್ರಮದ ಧೀರೇಂದ್ರ ಬ್ರಹ್ಮಚಾರಿಗಳಿಗಿಂತ ಇಪ್ಪತ್ತು ಹೆಜ್ಜೆ ಮುಂದೆ. ಎಂಥದೋ ವಾದ್ಯ ಸಂಗೀತ.



ಅತಿ ನವಿರಾದ್ದೂ ಅಲ್ಲ, ಕರ್ಕಶವಾದ್ದೂ ಅಲ್ಲ. ಅದಕ್ಕೆ ತಕ್ಕಂತೆ ಕುಣಿಯುವುದು, ಕೂಡುವುದು, ಏಳುವುದು, ಮಲಗುವುದು, ಹೊರಳುವುದು, ಕೈ ಎತ್ತುವುದು, ಕಾಲೆತ್ತುವುದು, ಸೊಂಟ ನುಲಿಯುವುದು, ಕತ್ತು ಕುಣಿಸುವುದು, ಓಹೋಹೋ ಎನ್ನುವುದು ಇತ್ಯಾದಿ. ಎಲ್ಲರೂ ಒಂದೇ ರೀತಿ ಮಾಡಬೇಕೆಂದೇನೂ ಇಲ್ಲ. ಅಥವಾ, ಹೀಗೇ ಮಾಡಬೇಕೆಂದು ಹೇಳಿಕೊಟ್ಟದ್ದೂ ಇಲ್ಲ. ಒಬ್ಬೊಬ್ಬರಿಗೂ ಇಷ್ಟಬಂದಂತೆ ಮಾಡುವುದು. ಒಟ್ಟಿನಲ್ಲಿ ಛಳಿ ಬಿಟ್ಟು, ಬಿಗುಮಾನವಿಲ್ಲದೆ ಒಂದು ಗಂಟೆ ನಲಿಯುವುದು. ಒಬ್ಬಿಬ್ಬರಂತೂ ಕುಣಿಯುತ್ತಾ ಅರ್ಧ ಬಟ್ಟೆ ತೆಗೆದುಹಾಕುವುದು, ಮತ್ತೆ ತೊಡುವುದು, ಹೀಗೆ ಮಾಡುತ್ತಿದ್ದುದೂ ಉಂಟು. ಇಂತಹ 'ಸಡಿಲಿಕೆ'ಯ ಕಸರತ್ತಿನಲ್ಲಿ ತೊಡಗಲು ಮಾನಸಿಕ ಸಿದ್ಧತೆ ಇಲ್ಲದ ನನ್ನಂತಹವರು ಇತರರ ಹಾವ-ಭಾವ-ವಿಲಾಸಗಳನ್ನು ನೋಡುತ್ತಾ ಕಾಠಿಣ್ಯತೆ ಕಡಿಮೆ ಮಾಡಿಕೊಳ್ಳುವುದಿತ್ತು. [illegible] ನಂತರ ಕಡೆಯ ಭಾಗ ನಮ್ಮ ಮನಸ್ಸು ಎಷ್ಟು ಸಡಿಲಗೊಂಡಿದೆ, ಮಾರ್ದವತೆ ಬೆಳೆಸಿಕೊಂಡಿದೆ, [illegible] ಬಂದಿದೆ, ಆತಂಕವನ್ನು ದೂರಮಾಡಿಕೊಂಡಿದೆ, [illegible] [illegible] ಎಂಬುದರ ಸ್ಥೂಲ ಪರೀಕ್ಷೆ. [illegible] ಒಂದೊಂದು ಬಾರಿ ಒಂದೊಂದು ವಿಧಾನವಂತೆ. [illegible] ಮುಂಚೆ ಕೃಷಕ-ಯೋಗಿ[illegible] [illegible]. [illegible] ಕುರಿತ ಮಾತುಗಳು. [illegible] ಕೊಂಡ ಹಾಯುವ ಕ್ರಿಯೆಗೆ ಸಿದ್ಧತೆ [illegible].

ದೈಹಿಕವಾಗಿ ನೋಡಿದರೆ ಹೇಳಿಕೊಳ್ಳ[illegible] [illegible] ಘಾಸಿಯೂ ಉಂಟಾಗುವುದಿಲ್ಲವೆಂದು [illegible] ಕೊಂಡ ಹಾಯಲು ಮನಸು [illegible] ಎಂದಷ್ಟೇ ಪ್ರಾಯೋಗಿಕವಾ[illegible] ಹಾಯುವುದರ ಉದ್ದೇಶ. ದೈವದ[illegible] ವನು ಕೊಂಡ ಹಾಯಬಲ್ಲ ಎಂಬುದನ್ನು [illegible] ನಮ್ಮಲ್ಲಿ ಕೊಂಡ ಹಾಯುವ ಮತಧಾರ್ಮಿಕ ಕ್ರಿಯೆ [illegible]ವಾಗಿದೆ. ಬೆಳಗಿನ ಜಾವ ಐದು ಗಂಟೆಗೆ ಕೊಂಡ ಹಾಯಲು ಹಿಂದಿನ ದಿನವೆಲ್ಲಾ ಉಪವಾಸ, ದೇವರ ಪೂಜೆ, ಇತ್ಯಾದಿ ನಡೆದಿರುತ್ತದೆ. ಆ ವೇಳೆಗೆ ಕೆಂಡವೂ ಸ್ವಲ್ಪ [illegible] ಸಲೀಸಾಗಿ ಅದರ ಮೇಲೆ ಓಡಬಹುದು ಅಥವಾ ಓಡಾಡಬಹುದು. ಕಾಲು ತೇವವಿಲ್ಲದಿದ್ದರೆ ಕೆಂಡವು ಪಾದಕ್ಕೆ ಅಂಟಿಕೊಳ್ಳುವ ಭಯವೂ ಇಲ್ಲ. ಇಡೀ ರಾತ್ರಿ ಮರದ ಕೊರಡುಗಳನ್ನು ಉರಿಸಿ ಬೆಂಕಿ ಮಾಡಿದ್ದರೂ ಕೊಂಡ ಹಾಯುವ ವೇಳೆಗೆ ಅದು ಒಂದು ರೀತಿಯ ಶೀತಲ ಬೆಂಕಿಯಾಗಿರುತ್ತದೆ. ಹುಡುಗನಾಗಿದ್ದಾಗ ಮಾಗಡಿ ಬಳಿಯ ಕೆಂಪಸಾಗರದಲ್ಲಿ ಹತ್ತಾರು ವರ್ಷಗಳ ಕಾಲ ಇದನ್ನು ನೋಡಿದ್ದೇನೆ. ಅಲ್ಲಿ ಮಾನ್ಯ ಕೆಂಪಲಿಂಗಯ್ಯನವರು ಮೊದಲು ಕೆಂಡ ತುಳಿಯುತ್ತಾ ಕೊಂಡ ಹಾಯುತ್ತಿದ್ದರು. ದೇವರ ಕೆಲಸವೆಂಬ ಭಕ್ತಿ ಭಾವ ಅವರದು. ಅವರ ನಂತರ ಹೆಚ್ಚು ಕಡಿಮೆ ಊರಿನ ಮಂದಿಯೆಲ್ಲಾ ಕೊಂಡ ಹಾಯುತ್ತಿದ್ದೆವು. ಯಾರಿಗೂ ದೊಡ್ಡ ಗಾಯಗಳಾಗಿದ್ದು ನೆನಪಿಲ್ಲ. ಆದರೆ ನಮ್ಮ ಅಮೆರಿಕದ ಕೃಷಿಕ-ಯೋಗಾಚಾರ್ಯ ಇದೇನೋ ದೊಡ್ಡ [illegible]. ಮನಸ್ಸಿಗೆ ಒಂದು ಸವಾಲು, ಕೊಂಡ ಹಾಯದಿದ್ದರೆ [illegible] ಎಂಬ ಭಾವನೆ ಸಲ್ಲದು, ಹಾಯ್ದವರು ಬೇರೆಯವರಿಗಿಂತ ಧೀರರೇನೂ ಅಲ್ಲ, ಎಂಬಂತೆ ದೀರ್ಘವಾಗಿ ಉಪದೇಶ ನೀಡಿದ. ಆಸನ, ಧ್ಯಾನ, ಕುಣಿತ, ಇತ್ಯಾದಿಗಳಿಂದ ಮನಸ್ಸನ್ನು ಸಡಿಲಗೊಳಿಸಿಕೊಂಡಿದ್ದವರಿಗೆ ಕೊಂಡ ಹಾಯಲು ಉತ್ಸಾಹ. ಆದರೆ ಹಾಯಬಹುದೇ ಎಂಬ ಸೂಕ್ಷ್ಮ ಆತಂಕ. ಕುಣಿದು ದಣಿಯದೇ ಕೇವಲ ಪ್ರೇಕ್ಷಕನಾಗಿದ್ದ ನಾನು ಶ್ರೀ ಕೆಂಪಲಿಂಗಯ್ಯನವರನ್ನು ನೆನಪಿಸಿಕೊಂಡು ಲೀಲೆಯೋ ಎಂಬಂತೆ ಕೊಂಡ ಹಾಯುವವರಲ್ಲಿ ಮೊದಲಿಗನಾದಾಗ ಕೆಲವರಿಗೆ ಆಶ್ಚರ್ಯ. ಇನ್ನು ಕೆಲವರಿಗೆ ಇವನು ನಿಜಕ್ಕೂ ಒಳ್ಳೆಯ ಯೋಗಾಭ್ಯಾಸಿ ಎಂಬ [illegible].

ಇದನ್ನು ಪ್ರಸ್ತಾಪಿಸಲು ಒಂದೇ ಕಾರಣವೆಂದರೆ ಶವಾಸನ ಪ್ರಕ್ರಿಯೆಗೂ ಬೇರೆ 'ಸಡಿಲಿಕೆಯ ವಿಧಾನ'ಗಳಿಗೂ [illegible] ವ್ಯತ್ಯಾಸವಿದೆ ಎಂಬುದನ್ನು ಒತ್ತಿ ಹೇಳುವುದು. ಈ ಸಡಿಲಿಕೆಗೂ ಕೊಂಡ ಹಾಯುವಂತಹ ಧೀರ ಕಾರ್ಯಗಳಿಗೂ [illegible] ಸಂಬಂಧವೂ ಇರಲಾರದು. ಸಡಿಲಿಕೆಗಾಗಿ [illegible] [illegible]ವುದು [illegible] [illegible]. [illegible] [illegible]ಶಾಸ್ತ್ರವ [illegible] [illegible] ಕ್ರಿಯೆಯಲ್ಲಿ [illegible] ಬೇಕು. [illegible]

ಕನಸು-ಆತ್ಮ

ನಾವು ವಾಸಿಸುವ ಜಗತ್ತು, ಸೂರ್ಯ ಮಂಡಲ, ಹತ್ತಿರದ ಗ್ರಹಗಳು, ದೂರದ ನಕ್ಷತ್ರಗಳು ಇವೆಲ್ಲವನ್ನೂ ಹಿಡಿದಿಡುವ ಗುರುತ್ವಾಕರ್ಷ ಸ್ಥಾಪಕತ್ವ ಇವುಗಳ ಬಗ್ಗೆ ವೈಜ್ಞಾನಿಕ ವಿವರಣೆ ನಮಗಿಂದು ತಿಳಿದಿದೆ. ಬೆಳಕಿನ ವೇಗ, ಧೂಳಿನ ಕಣದ ಭಾರ ಇತ್ಯಾದಿಗಳ ವಿವರಗಳನ್ನು ವಿಜ್ಞಾನದ ಬೆಳವಣಿಗೆಯಿಂದಾಗಿ ವಿಜ್ಞಾನ ಸಜ್ಜುಗೊಳ್ಳುತ್ತಿದೆ. ನಮ್ಮ ಬ್ರಹ್ಮಾಂಡದ ಒಳಗಿರದ ಸ್ವರ್ಗ-ನರಕಗಳು ಎಲ್ಲಿವೆ? ಸ್ವರ್ಗ-ನರಕಗಳ ಕಲ್ಪನೆ ನಮ್ಮನ್ನು ಆವರಿಸಿಕೊಂಡು ಇಂದೂ ಕಾಡುತ್ತಿವೆ. ಇವುಗಳೊಂದಿಗೆ ಮರಣಾನಂತರ ಸ್ವರ್ಗ ಸೇರುವ ಆತ್ಮದ ಕಲ್ಪನೆಯ ಸುತ್ತ ಹೆಣೆದಿರುವ ಧರ್ಮಾಚರಣೆಗಳು ನಮ್ಮಲ್ಲಿ ರೂಢಿಯಲ್ಲಿವೆ.

ಪ್ರಾಕೃತ ಮಾನವನಲ್ಲಿ ಆತ್ಮದ ಕಲ್ಪನೆ ಮೂಡಿಬರಲು ಕನಸುಗಳೇ ಕಾರಣವೆಂಬುದನ್ನು ನಿದ್ರೆಯ ಕನಸಿನ ಕುರಿತ ನಮ್ಮ ಆಚರಣೆಗಳು ತೋರಿಸಿಕೊಡುತ್ತವೆ. ಅಂಗಾತ ಮಲಗಿ ನಿದ್ರಿಸಿದಾಗ ಬೀಳುವ ಕನಸುಗಳು ಜೀವನದಲ್ಲಿ ಅನುಭವಿಸಿದ ಘಟನೆಗಳೇ. ಸುಖ, ದುಃಖ, ಸಂತೋಷ, ಭಯ ಇವುಗಳ ಅನುಭವಗಳನ್ನು ಧ್ವನಿ, ಸ್ಪರ್ಶ, ರುಚಿಗಳೊಂದಿಗೆ ಕನಸಿನಲ್ಲಿ ಕಾಣುತ್ತೇವೆ. ನಮ್ಮ ನಡುವಿನ ವ್ಯಕ್ತಿಗಳೊಂದಿಗೆ, ಪರಿಸರದೊಂದಿಗೆ ಬೆರೆತು ಸ್ಪಂದಿಸುತ್ತೇವೆ. ದಿಗಿಲುಗೊಂಡಾಗ ಕಿಟಾರನೆ ಕಿರುಚಿ ಎದ್ದು ಮೈ ಬೆವರನ್ನು ಒರೆಸಿಕೊಳ್ಳುತ್ತೇವೆ. ದುಃಖದ ಪ್ರಸಂಗಗಳಲ್ಲಿ ಕಣ್ಣೀರು ಸುರಿಸುತ್ತೇವೆ. ದೃಶ್ಯಗಳ ಸರಮಾಲೆಯನ್ನೇ ಕನಸಿನಲ್ಲಿ ಸವಿಯುತ್ತೇವೆ. ಹಾಗೆಯೇ ಯಾವ ಕ್ರಮಕ್ಕೂ ಸಿಗದೆ ಚೂರು-ಪಾರು ಚಿತ್ರ-ವಿಚಿತ್ರ ಕನಸುಗಳಿಗೆ ಅರ್ಥ ಹುಡುಕುತ್ತೇವೆ.

ಶರೀರ ಶಾಸ್ತ್ರದ ಕುರಿತು ತಿಳಿದಿರುವ ಪ್ರಾಕೃತ ಮಾನವ ನಿದ್ರಾವಸ್ಥೆಯಲ್ಲಿನ ತನ್ನ ಕನಸಿನ ಪ್ರತಿರೂಪಕ್ಕೆ ಆತ್ಮವೆಂಬ ಹೆಸರಿಟ್ಟ ಅದು ನಿದ್ರಾ ಸಮಯದಲ್ಲಿ ತನ್ನ ದೇಹ ಬಿಟ್ಟು ಕಾರ್ಯ ಚಟುವಟಿಕೆಗಳನ್ನು ಆರಂಭಿಸಲು ಕನಸಿನ ರೂಪ ತಾಳುತ್ತದೆಯೆಂದೂ ನಂಬಿದ. ಅಂಗಾತ ಮಲಗಿದ ವ್ಯಕ್ತಿಯನ್ನು ತೊರೆದ ಆತ್ಮ ತನ್ನಂಥ ಇತರ ಆತ್ಮಗಳೊಡನೆ ಕನಸಿನಲ್ಲಿ ಬೆರೆತು ನಿಜ ಘಟನೆಗಳಲ್ಲಿ ಪಾಲ್ಗೊಳ್ಳುವಂತೆ ವ್ಯವಹರಿಸಿದಾಗ ಆತ್ಮಕ್ಕೆ ಎರಡು ಸ್ಥಾನಗಳಿರಬಹುದೆಂದು ತರ್ಕಿಸಿದ. ಶರೀರವನ್ನು ಆವರಿಸಿಕೊಂಡು ಇಹಲೋಕದಲ್ಲೂ, ಶರೀರವನ್ನು ತೊರೆದ ನಂತರ ಪರಲೋಕದಲ್ಲೂ ಅದು ಇರಬಹುದೆಂದು ಭಾವಿಸಿದ. ಸ್ವಪ್ನಾವಸ್ಥೆಯನ್ನು ಈ ಎರಡರ ಮಧ್ಯದ ಮೂರನೇ ತಾತ್ಕಾಲಿಕ ಸ್ಥಾನವೆಂದು ನಿರ್ಣಯಿಸಿದ. ವ್ಯಕ್ತಿಯ ಶರೀರ ಮತ್ತು ಮನಸ್ಸು ಗಳಿಂದ ಪ್ರತ್ಯೇಕವಾದ ಒಂದು ಆತ್ಮ ಅವನಲ್ಲಿದೆ. ಅದೇ ನಿಜವಾದ ಚಾಲಕ ಶಕ್ತಿ ; ಅದಕ್ಕೆ ಸಾವಿಲ್ಲ, ಎಂದು ಭಾವಿಸಿದ. ಸಾವನ್ನಪ್ಪುವ ವ್ಯಕ್ತಿ ಅಂಗಾತ ಮಲಗಿ ಉಸಿರಾಟ ನಿಲ್ಲಿಸುವುದಕ್ಕೂ, ಅಂಗಾತ ಮಲಗಿ ನಿದ್ರಿಸಿದ ವ್ಯಕ್ತಿ ಕನಸು ಕಾಣುವುದಕ್ಕೂ, ಸಾಮ್ಯ ಕಲ್ಪಿಸಿ, ಉಸಿರಾಟವೇ ಆತ್ಮವೆಂದೂ, ಹೃದಯ ಮಧ್ಯದಲ್ಲಿ ಅದು ವಾಸಿಸುತ್ತದೆಯೆಂದೂ, ಹೃದಯ ಕ್ರಿಯೆ ನಿಂತಾಗ ಅದು ಹಾರಿ ಹೋಗುತ್ತದೆಯೆಂದೂ ಭಾವಿಸಿದ.

ಮನೋವಿಜ್ಞಾನಿಗಳಾದ ಸಿಗ್ಮಂಡ್ ಫ್ರಾಯ್ಡ್, ಸಿ. ಜಿ. ಯುಂಗ್ ಕನಸುಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಅರ್ಥೈಸಿದ್ದಾರೆ. ಜಾಗೃತ ಮನಸ್ಸಿನ ಪಥ್ಯವಾಗದ ಪ್ರಸಂಗಗಳನ್ನು ಸುಪ್ತ ಮನಸ್ಸಿನೊಳಕ್ಕೆ ನಾವು ತಳ್ಳಿಬಿಡುತ್ತೇವೆ. ಒತ್ತಡಕ್ಕೆ ಒಳಗಾದ ಈ ವಿಷಯಗಳು ಮತ್ತೆ ಮೇಲೇರಿ ಬರಲು ಪ್ರಯತ್ನಿಸುತ್ತವೆ. ಈ ಪ್ರಯತ್ನಗಳು ಕನಸಿನಲ್ಲಿ ಸಾಕಾರಗೊಳ್ಳುತ್ತವೆ. ಈ ಪ್ರಕ್ರಿಯೆಯಿಂದ ಒಳ ಒತ್ತಡಗಳು ಕಡಿಮೆಯಾಗುತ್ತವೆ. ಹೀಗೆ ಕನಸುಗಳು ನಮ್ಮ ಮಾನಸಿಕ ಸಮತೋಲನವನ್ನು ಕಾಪಾಡಲು ಅವಶ್ಯ ಎನ್ನುತ್ತಾರೆ, ಈ ಮನೋವಿಜ್ಞಾನಿಗಳು. ಈ ಬಗ್ಗೆ ಇನ್ನೂ ಸಂಶೋಧನೆಗಳು ನಡೆಯುತ್ತಲೇ ಇವೆ.

ದೇಹ ಬಿಟ್ಟು ಕನಸಿನ ರೂಪ ತಾಳಿದ ಆತ್ಮವು ದೇಹ ಎಚ್ಚರಗೊಳ್ಳುವ ಮೊದಲು ಬಾರದೆ ಹೋದರೆ ವ್ಯಕ್ತಿ ಸಾವನ್ನಪ್ಪಬಹುದು ಎಂಬ ನಂಬಿಕೆಯಿಂದಾಗಿ, ಗಾಢ ನಿದ್ರೆಯಲ್ಲಿರುವ ವ್ಯಕ್ತಿಯನ್ನು ತಟ್ಟಿ ಎಬ್ಬಿಸಬಾರದೆಂಬ ನಿಯಮವನ್ನು ಜಗತ್ತಿನ ಬಹುಪಾಲು ಜನಾಂಗಗಳು ಅನುಸರಿಸುತ್ತವೆ.

ನಾವೂ ಪ್ರಾಕೃತಿಕ ಮಾನವನ ಪೀಳಿಗೆಯವರೇ ಅಲ್ಲವೇ? ಆತನ ನಂಬಿಕೆಯ ಕಣವಾದರೂ ನಮ್ಮಲ್ಲಿರಬೇಡವೆ ? ಆದರೆ ಇದು ಇನ್ನೂ ಮುಂದುವರೆಯಬೇಕೆ ಎನ್ನುವುದಷ್ಟೆ ಪ್ರಶ್ನೆ.

ಆರ್. ಎಸ್. ರಾಜಾರಾಮ್ (ಕೃಪೆ : ಆಕಾಶವಾಣಿ)

ಸಾಮಾಜಿಕ ಸೇವೆ - ಒಂದು ನೋಟ

ಜನತೆ ವಿಚಿತ್ರವಾದ ಭ್ರಮೆಗಳಲ್ಲಿ ವಿಜೃಂಭಿಸುತ್ತಿರುತ್ತಾರೆ! ತಮ್ಮ ಅರ್ಹತೆ, ವ್ಯಕ್ತಿತ್ವ ಇತ್ಯಾದಿ ಮಟ್ಟಕ್ಕಿಂತ ಅತ್ಯಧಿಕವಾದ ಗೌರವವನ್ನು ಅಪೇಕ್ಷಿಸುತ್ತಾರೆ. ಅಷ್ಟೇಕೆ, ಮಾಡಬೇಕಾದ ಕರ್ತವ್ಯಗಳನ್ನು ಮಾಡಿ, ಅದಕ್ಕೆ 'ಸಮಾಜಸೇವೆ', 'ತ್ಯಾಗ', 'ಸಾಮಾಜಿಕ ಕಳಕಳಿ', 'ಹೋರಾಟ' ಇತ್ಯಾದಿಯಾದ ಸ್ವಯಂಘೋಷಿತ ಮೌಲ್ಯಗಳಲ್ಲಿ ಸಂಭ್ರಮಿಸುತ್ತಲೂ ಇರುತ್ತಾರೆ! ಓರ್ವ ಪೊಲೀಸ್ ಇನ್ಸ್‌ಪೆಕ್ಟರ್ ಅಕಸ್ಮಾತ್ತಾಗಿ ನಡೆಯಬಹುದಾದ ಭಾರೀ ದರೋಡೆಯನ್ನು ತಪ್ಪಿಸಿದ ಎಂದಿಟ್ಟುಕೊಳ್ಳಿ; ಹಾಗೆ ಮಾಡಿದ್ದರಲ್ಲಿ ಹೆಗ್ಗಳಿಕೆಯೇನೂ ಇಲ್ಲ. ಆದರೆ ಆತನೇ ''ಬಂದು ನೋಡಿ, ನಾವ್ಹೇಗೆ 'ಸಾಮಾಜಿಕ ಸೇವೆ' ಸಲ್ಲಿಸುತ್ತಿದ್ದೇವೆ, ಪ್ರಾಣದ ಹಂಗು ಹರಿದು ಹೋರಾಡುತ್ತಿದ್ದೇವೆ,'' ಎಂದೆಲ್ಲಾ ಬಡಾಯಿ ಕೊಚ್ಚಿಕೊಳ್ಳಲು ಶುರುವಿಡುತ್ತಾನೆ. ವಸ್ತುನಿಷ್ಠವಾಗಿಯೇ ಹೇಳುವುದಾದರೆ ಖಂಡಿತವಾಗಿಯೂ ಅದು ಸಾಮಾಜಿಕ ಸೇವೆಯೇನೂ ಅಲ್ಲ, ಕರ್ತವ್ಯ ಅಷ್ಟೇ.

ಕರ್ತವ್ಯ ಬೇರೆ, ಸಾಮಾಜಿಕ ಸೇವೆ ಬೇರೆ. ಒಂದೊಮ್ಮೆ, ಪೊಲೀಸ್ ಇನ್ಸ್‌ಪೆಕ್ಟರ್‌ನ ಆ ಸಕಾಲಿಕ ಕ್ರಮವನ್ನು ಸಾಮಾಜಿಕ ಸೇವೆಯೆನ್ನುವುದಾದರೆ, ಯಾವ ಸ್ವಾರ್ಥವೂ ಇಲ್ಲದೆ ದೇಶದ ಸ್ವಾತಂತ್ರ್ಯಕ್ಕೋಸುಗ ಪ್ರಾಣದ ಹಂಗು ತೊರೆದು ಹೋರಾಡಿದ ವೀರರ ಸಾಹಸವನ್ನು ಅಥವಾ ಈ ಹಿಂದೆ ಕಳ್ಳಕಾಕರರು ಹೆಣ್ಣನ್ನು ಅಪಹರಿಸಲೆಂದೋ, ಊರನ್ನು ಕೊಳ್ಳೆ ಹೊಡೆಯಲೆಂದೋ ಬಂದಾಗ ಅವರ ವಿರುದ್ಧ ಪ್ರಾಣವನ್ನೇ ಪಣವಿಟ್ಟು ಹೋರಾಡಿಯೋ, ಕೊನೆಗೆ ಮಡಿದ ನಿಸ್ಪೃಹ ವೀರರ ಅಸಾಮಾನ್ಯ ಸಾಹಸಗಾಥೆಯನ್ನು ಏನೆಂದು ಕರೆಯಬೇಕು? ನಿಜ, ಪರಿಸರ ವಾದಿಗಳ ಹೋರಾಟ, ಸ್ವಾತಂತ್ರ್ಯಕ್ಕೋಸ್ಕರ ಹುತಾತ್ಮರಾದವರ ಹೋರಾಟ, ಹೆಣ್ಣಿನ ಮಾನ - ಊರಿನ ಮಾನ ಕಾಪಾಡಲೆಂದು ಹೋರಾಡಿದ ವೀರರ ಸಾಹಸವನ್ನು ಸಾಮಾಜಿಕ ಸೇವೆಯೆಂದೇ ಕರೆಯಬೇಕಾಗುತ್ತದೆ.

ಹಾಗೆ ನೋಡಿದರೆ ಊರಿನ ಅಥವಾ ಹೆಣ್ಣಿನ ಮಾನ ರಕ್ಷಣೆಯೇನೂ ಯಾವುದೇ ಒಬ್ಬ ವ್ಯಕ್ತಿಯ ಮೂಲಭೂತ ಕರ್ತವ್ಯವೇನೂ ಅಲ್ಲ. ಒಂದು ಪಕ್ಷ, ಆತ ಅದನ್ನು ಮಾಡದಿದ್ದರೆ [illegible] ಆ ವ್ಯಕ್ತಿಗೆ ಭಾರೀ ಶಿಕ್ಷೆಯನ್ನೇನೂ ವಿಧಿಸುವಂತಿಲ್ಲ. ಏಕೆಂದರೆ ಅದು ಅವನ ಜೀವ-ಉಳಿವಿನ ಪ್ರಶ್ನೆ; ಹೋರಾಟದ ಸಂದರ್ಭದಲ್ಲಿ ಬದುಕುಳಿಯದೇ ಇರಬಹುದಾದ ಸಾಧ್ಯತೆಯೂ ಇಲ್ಲದಿಲ್ಲ. ಆದ್ದರಿಂದ ಸಮಾಜಕ್ಕೆ ರಕ್ಷಣೆ ಕೊಡುವುದು ಆತನಿಗೇ ಬಿಟ್ಟ ವಿಷಯ. [illegible], ಆತನೇನೂ ರಕ್ಷಣಾ ಕೆಲಸಕ್ಕೆಂದೇ ನಿಯುಕ್ತಿಗೊಂಡವನೂ ಅಲ್ಲ; ಮಾತ್ರವಲ್ಲ, [illegible] ಸರ್ಕಾರಿ ಸಂಬಳವನ್ನು ಪಡೆಯುವ ವ್ಯಕ್ತಿಯೂ ಅಲ್ಲ. ಅಂದಮೇಲೆ ನಾವೇಕೆ [illegible] ರಕ್ಷಣೆಯನ್ನು ಅಪೇಕ್ಷಿಸಬೇಕು? ಆದ್ದರಿಂದ ಸರಕಾರದ ಸಂಬಳ ಪಡೆದು, ರಕ್ಷಣಾ ಕೆಲಸಕ್ಕೆಂದೇ ನಿಯುಕ್ತಿಗೊಂಡು, ಸಂದರ್ಭ ಬಂದರೆ ಪ್ರಾಣಕೊಡಲೂ ಸಿದ್ಧ ಎಂದು ಬದ್ಧನಾದವನೋರ್ವನು ಜೀವದ ಹಂಗು ತೊರೆದು ಹೋರಾಡುತ್ತಿದ್ದೇನೆ, ತನ್ಮೂಲಕ ಸಮಾಜಕ್ಕೆ ರಕ್ಷಣೆ ಕೊಡುತ್ತಿದ್ದೇನೆ ಎಂದು ಹೇಳಿಕೊಳ್ಳುವುದರಲ್ಲಿ ಹೆಗ್ಗಳಿಕೆಯ ಅಂಶವೇನಿದೆ?

ಓರ್ವ ಸರ್ಕಾರಿ ವೈದ್ಯನನ್ನೇ ತೆಗೆದುಕೊಳ್ಳಿ. ಆತನೂ ಹೀಗೆಯೇ ಬಡಾಯಿ ಕೊಚ್ಚಿಕೊಳ್ಳಬಹುದು; ಮಾತ್ರವಲ್ಲ, ಆತ ಹೀಗೂ ಹೇಳಬಹುದು: ನೋಡಿ, ನಾವು ಜನರ ಪ್ರಾಣವನ್ನು ರಕ್ಷಿಸುತ್ತೇವೆ, ಎಷ್ಟೋ ವೇಳೆ ಅಸಹನೀಯವಾದ ವಾಸನೆ ಇತ್ಯಾದಿಗಳನ್ನು ಲೆಕ್ಕಿಸದೆಯೂ ಶುಶ್ರೂಷೆ ಮಾಡುತ್ತೇವೆ, ಎಂದೆಲ್ಲಾ ತನ್ನ ದೊಡ್ಡಸ್ತಿಕೆಯನ್ನು ಸಾರಲು ಆರಂಭಿಸಿ ತಮ್ಮದೇ ದೇಶಸೇವೆ, ತಮ್ಮದು ಮಾತ್ರ ಪವಿತ್ರ ಕೆಲಸ ! ಎಂದೂ ಬೀಗಬಹುದು.


ಎಂದೂ ರೋಗಿಗಳ ಶುಶ್ರೂಷೆ ಮಾಡುತ್ತೇವೆಂದು ಹೇಳಿಕೊಳ್ಳದ, ಅಷ್ಟೇ ಅಲ್ಲ, ಹಾಗೆಂದು ಕನಸು ಮನಸಿನಲ್ಲಿಯೂ ಆಲೋಚಿಸದ ಗಾಂಧೀಜಿ, ಮದರ್ ತೆರೇಸಾರಂಥವರ ಉಪಚಾರವನ್ನು, ಶುಶ್ರೂಷಾ ಕ್ರಮವನ್ನು ನಾವೇನೆಂದು ಕರೆಯಬೇಕು? ಎಂದಾದರೂ ಸರಕಾರ ಅವರನ್ನು ಅದೇ ಕೆಲಸಕ್ಕೆಂದೇ ನಿಯುಕ್ತಿಗೊಳಿಸಿತ್ತೇ? ಅದು ಹೋಗಲಿ, ಜನರಿಂದ ಗೌರವ, ಪ್ರಚಾರ ಇತ್ಯಾದಿಗಳನ್ನೇನಾದರೂ ಹಂಬಲಿಸಿದರೇ? ಅಥವಾ ತಾವು ಮಾಡುತ್ತಿರುವುದು ದೇಶ ಸೇವೆ ಎಂದೇನಾದರೂ ಸಾರಿ ಸಾರಿ ಹೇಳಿದರೆ? ಅಂದ ಮೇಲೆ ಶುಶ್ರೂಷೆ ಕೆಲಸಕ್ಕೆಂದೇ ನೇಮಕಗೊಂಡವರು, ಅದನ್ನು ಮಾಡುತ್ತಿರುವುದರಲ್ಲಿ ಅಗ್ಗಳಿಕೆಯ ಅಂಶವೇನಿದೆ? ಅದು, ಅವರು ಮಾಡಲೇಬೇಕಾದ ಕರ್ತವ್ಯ; ಒಂದೋ, ಮಾಡಬೇಕು; ಇಲ್ಲವೆ, ಅಲ್ಲಿಂದ ತೊಲಗಬೇಕು ಅಷ್ಟೇ. ಇಷ್ಟಕ್ಕೂ ಮೀರಿದರೆ ಭಾರಿ ಬೆಲೆ ತೆರಬೇಕಾದೀತು !! ಆದರೆ ಗಾಂಧೀಜಿ, ಮದರ್ ತೆರೇಸಾರವರಿಗೆ ಇಂತಹ ನಿರ್ಬಂಧಗಳೇನಾದರೂ ಇದ್ದುವೇ? ಇಲ್ಲವಲ್ಲ ! ಇಷ್ಟಲ್ಲದೆ, ಅದೇನೂ ಅವರಿಗೆ ಕಡ್ಡಾಯಗೊಳಿಸಲ್ಪಟ್ಟ ಕರ್ತವ್ಯವೂ ಆಗಿರಲಿಲ್ಲ ; ಐಚ್ಛಿಕತೆಗೆ ಸೇರಿದ ವಿಷಯವಾಗಿತ್ತು ಅಷ್ಟೇ. ಮೇಲಾಗಿ, ಅದಕ್ಕೆ ಪ್ರತಿಯಾಗಿ ಪ್ರತಿಫಲವನ್ನೂ ಅಪೇಕ್ಷಿಸಿರಲಿಲ್ಲ.

ಸಾಮಾಜಿಕ ಸೇವೆಯಲ್ಲಿ ಪ್ರತಿಫಲಾಪೇಕ್ಷೆ ಇರುವುದಿಲ್ಲ, ಪ್ರಚಾರ ಇತ್ಯಾದಿಯಾದ ತೆವಲುಗಳಿರುವುದಿಲ್ಲ. ಸಾಮಾಜಿಕ ಕಳಕಳಿ ಮಾತ್ರವೇ ಪ್ರಧಾನ; ಇನ್ನುಳಿದಿದ್ದೆಲ್ಲಾ ಗೌಣ. ಕರ್ತವ್ಯ ಮಾಡುವವರು ಪ್ರಜ್ಞಾವಂತ ನಾಗರಿಕರೆನಿಸಿಕೊಳ್ಳುತ್ತಾರೆ; ಸಾಮಾಜಿಕ ಸೇವೆಗೈಯುವವರು ಮಹಾತ್ಮರೆನಿಸಿಕೊಳ್ಳುತ್ತಾರೆ.

ಬಿ. ಶರಣಪ್ಪ ಸತ್ಯಂಪೇಟೆ
ಮು : ಸತ್ಯಂಪೇಟೆ , ಪೊ : ಲಕ್ಷ್ಮೀಪುರ. ತಾ : ಸುರಪುರ ಜಿ : ಗುಲಬರ್ಗಾ

Registered with the Registrar of News Papers for India under No.11308/99. Postal REGISTERED CPMG/KA/BG-7

ಕಲಾವಿದ ಆರ್. ಎಂ. ಹಡಪದ್‌ರವರ ಕಲಾಕೃತಿಗಳು



೧ (ಪೇಸ್ಟಲ್)

ಬಾದಾಮಿಯಲ್ಲಿ ೧೯೩೭ರಲ್ಲಿ ಜನಿಸಿದ ಶ್ರೀ ಆರ್. ಎಂ. ಹಡಪದ್ ಅವರು ಅಲ್ಲಿನ ನೆಲ, ಜಲ, ಬಂಡೆಗಳು, ಕೋಟೆ, ಮಠ, ಗಿಡ ಮುಂತಾದ ಕಲಾಕೃತಿಗಳನ್ನು ಬೆರಗು ಕಣ್ಣುಗಳಿಂದ ನೋಡುತ್ತ ಬೆಳೆದವರು. ಟಿ. ಪಿ. ಅಕ್ಕಿಯವರ ಕಲಾಶಾಲೆಯಿಂದ ಮುಂಬೈ ಜೆ. ಜೆ. ಕಲಾಶಾಲೆಗೆ. ಅಲ್ಲಿಂದ ಕಲಾಶಾಲೆಯ ಅಧ್ಯಾಪಕರಾಗಿ ಬೆಂಗಳೂರಿಗೆ. ಆ ವೇಳೆಗೆ ಚಿತ್ರ ಕಲೆಯ ಎಲ್ಲ ಮಾಧ್ಯಮಗಳಲ್ಲಿ ಅಭಿರುಚಿ. ಅಧ್ಯಯನ, ಕಲಾರಚನೆ. ಮಿರಾಜಿಗಿಯವರ ಕಲಾಶಾಲೆ ಮುಚ್ಚಿದ ನಂತರ ತಮ್ಮದೇ ಕೆನ್ ಕಲಾಶಾಲೆಯ ಸ್ಥಾಪನೆ. ಅವರ ಶಿಷ್ಯರ ಬೆಂಬಲ. ಪ್ರಾಚೀನ ಗುರುಕುಲ ಪದ್ಧತಿಯ ವೈಯಕ್ತಿಕ, ಆತ್ಮೀಯ ಗುರುಶಿಷ್ಯ ಸಂಬಂಧ ಕೆನ್ ಕಲಾಶಾಲೆಯ ವೈಶಿಷ್ಟ್ಯ. ಚಿತ್ರ ರಚನೆಯ ಜೊತೆಗೆ ಕವಿಗಳ, ಲೇಖಕರ, ಸಂಗೀತಗಾರರ ಉಪನ್ಯಾಸ, ಗೋಷ್ಠಿಗಳ ಮೂಲಕ ವಿದ್ಯಾರ್ಥಿಗಳ ಅರಿವಿನ ಲೋಕದ ವಿಸ್ತರಣೆ. ಆ ಶಾಲೆಯಲ್ಲಿ ಕಲಿತವರು ಆತ್ಮವಿಶ್ವಾಸದಿಂದ ತಮ್ಮದೇ ಸ್ವಂತಿಕೆ ಕಂಡುಕೊಂಡು ರಾಷ್ಟ್ರಾದ್ಯಂತ ಖ್ಯಾತರಾಗಿರುವುದು ಹಡಪದರಿಗೆ ಸಂದ ಗುರು ಕಾಣಿಕೆ. ಸತತ ಪ್ರಯೋಗಶೀಲತೆ. ಪ್ರಾರಂಭದ ಎಲ್ಲ ಪ್ರಭಾವಗಳನ್ನು ಅರಗಿಸಿಕೊಂಡು ತನ್ನದೇ ಶೈಲಿಯ ಛಾಪು. ಹಡಪದರು ದಂತಗೋಪುರದ ಕಲಾವಿದರಲ್ಲ. ತಮ್ಮ ಕಲಾಕೃತಿಗಳ ಮೂಲಕ, ಕೆನ್ ಶಾಲೆಯ ಚಟುವಟಿಕೆಗಳ ಮೂಲಕ ಜನಪರ ಕಾರ್ಯಗಳಿಗೆ ಸದಾ ಮುಂದು. ಭಾರತದ ಹಲವು ನಗರಗಳಲ್ಲದೆ, ಅಮೆರಿಕ ಮತ್ತು ಜರ್ಮನಿಯ ಹಲವು ಕಡೆ ಏಕವ್ಯಕ್ತಿ ಕಲಾ ಪ್ರದರ್ಶನ. ಹಡಪದರ ಕಲಾಕೃತಿಗಳು ಹಲವು ಮ್ಯೂಸಿಯಂಗಳನ್ನು ಅಲಂಕರಿಸಿವೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ಶ್ರೀ ವೆಂಕಟಪ್ಪ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳ ವಿಜೇತ.



೨ (ತೈಲವರ್ಣ)

ನಿಮ್ಮ ಅನಿಸಿಕೆ ಏನು?


ಇಲ್ಲಿ 'ಹೊಸತು' ಓದುಗರಿಗಾಗಿ ಖ್ಯಾತ ಕಲಾವಿದ ಶ್ರೀ ಆರ್. ಎಂ. ಹಡಪದ್ ಅವರ ನಾಲ್ಕು ವರ್ಣ ಚಿತ್ರಗಳನ್ನು ಪ್ರಕಟಿಸುತ್ತಿದ್ದೇವೆ. ಇವನ್ನು ನೋಡಿದಾಗ ನಿಮಗೆ ಏನೆನ್ನಿಸಿತು? ಚಿತ್ರಗಳಿಗೆ ಶೀರ್ಷಿಕೆ ಸೂಚಿಸಿ. ನಿಮ್ಮ ಅನಿಸಿಕೆಗಳನ್ನು ಅಂಚೆ ಕಾರ್ಡಿನಲ್ಲಿ ಬರೆದು ತಿಳಿಸಿ. ಕಲಾವಿಮರ್ಶಕರ ಪರಿಶೀಲನೆಯ ನಂತರ ನಿಮ್ಮ ಉತ್ತಮ ವಿಮರ್ಶೆಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

-ಸಂ



ಆರ್. ಎಂ. ಹಡಪದ್

ಶ್ರೀ ಆರ್. ಎಂ. ಹಡಪದ್ ಅವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಆರ್. ಎಂ. ಹಡಪದ್ ಅವರ ಜೀವನ ಮತ್ತು ಸಾಧನೆಗಳಿಗೆ ಸಂಬಂಧಿಸಿದಂತೆ ಪ್ರೊ|| ಎಂ. ಎಚ್. ಕೃಷ್ಣಯ್ಯನವರು ರಚಿಸಿರುವ ಪುಸ್ತಕವನ್ನು ಲಲಿತಕಲಾ ಅಕಾಡೆಮಿ ಪ್ರಕಟಿಸಿದೆ. ಹೆಚ್ಚಿನ ವಿವರಗಳಿಗೆ ಆ ಪುಸ್ತಕ ಓದಿ.



೩ (ಜಲವರ್ಣ)



RNI Regn. No. 11308/99 HOSATHU Kannada Monthly / July 2000 Rs. 10 REGISTERED CPMG/KA/BG-7/2000

... Navakarnataka Printers, No. 162 & 168, 10th Main, III Phase, Peenya Industrial Area, Bangalore-560 058 and Published ... Crescent Road, P. B. 5159, Bangalore 560 001. Chief Editor : Dr. G. Ramakrishna